₹ 6 @vishwavaninews epaper.vishwavani.news vishwavani.news **ಬೆಂಗಳೂರು** | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ **ಬುಧವಾರ 11.06.2025** **ಸಂಪುಟ:** 10 **ಸಂಚಿಕೆ:** 147 **ಪುಟಗಳು:** 12 **ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್**

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಧೋನಿಗೆ ಐಸಿಸಿ ಹಾಲ್ ಆಫ್ ಫೇಮ್ ಗೌರವ

ಭಾರತ ತಂಡದ ಮಾಜಿ ನಾಯಕ ಎಂ.ಎಸ್. ಧೋನಿ ಸೇರಿ 7 ಮಂದಿ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ಐಸಿಸಿ) ಹಾಲ್ ಆಫ್ ಫೇಮ್ ಗೌರವಕ್ಕೆ ಪಾತ್ರರಾಗಿದ್ದಾರೆ. ಧೋನಿ ಅವರ ಅದ್ಭುತ ನಾಯಕತ್ವ, ಸ್ಮರಣೀಯ ವೃತ್ತಿಜೀವನ ಮತ್ತು ಕ್ರಿಕೆಟ್‌ಗೆ ನೀಡಿದ ಕೊಡುಗೆಗಾಗಿ ಈ ಗೌರವ ನೀಡಲಾಗಿದೆ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು
ಭಾರತ ಸರ್ಕಾರ

ಸತ್ಯಮೇವ ಜಯತೆ

ಇಂಧನ ಇಲಾಖೆ
ಕರ್ನಾಟಕ ಸರ್ಕಾರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಪ್ರಧಾನಮಂತ್ರಿ - ಕಿಸಾನ್ ಉರ್ಜಾ ಸುರಕ್ಷಾ ಏವಂ ಉತ್ಥಾನ್ ಮಹಾಭಿಯಾನ್ (ಪಿಎಂ-ಕುಸುಮ್) ಕಾಂಪೊನೆಂಟ್ - ಸಿ

(ಕೇಂದ್ರ ಸರ್ಕಾರದ ಶೇಕಡ 30ರ ಸಹಾಯಧನದೊಂದಿಗೆ)

ರೈತ ಬಾಂಧವರಿಗೆ ವರದಾನ

ಪ್ರಧಾನ ಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಏವಂ ಉತ್ಥಾನ್ ಮಹಾಭಿಯಾನ್(ಪಿಎಂ ಕುಸುಮ್)- ಕಾಂಪೋನೆಂಟ್- ಸಿ: ರೈತರ ಕೃಷಿ ಪಂಪ್ ಸೆಟ್ ಗಳಿಗೆ ಸುಸ್ಥಿರ ವಿದ್ಯುತ್ ಪೂರೈಕೆ

1) ಈ ಯೋಜನೆಯಡಿಯಲ್ಲಿ ವಿಕೇಂದ್ರಿತ ಸೌರ ಘಟಕಗಳನ್ನು ಸ್ಥಾಪಿಸಿ, ಕೃಷಿ ಫೀಡರ್ ಗಳಿಗೆ ವಿದ್ಯುತ್ ಪೂರೈಸಲಾಗುವುದು ಹಾಗೂ ಈ ಮೂಲಕ ಸಾಂಪ್ರದಾಯಿಕ ಇಂಧನ ಮೂಲಗಳ ಮೇಲಿನ ಅವಲಂಬನೆಯಲ್ಲಿ ಇಳಿಕೆ.
2) ಈ ಯೋಜನೆಯು ಹಗಲಿನ ವೇಳೆಯಲ್ಲಿ ಸುಸ್ಥಿರ ವಿದ್ಯುತ್ತನ್ನು ಕೃಷಿ ಪಂಪ್ ಸೆಟ್ ಗಳಿಗೆ ಪೂರೈಸಲು ಸಹಕಾರಿಯಾಗಿದೆ.
3) ಈ ಯೋಜನೆಯಡಿಯಲ್ಲಿ ಸೋಲಾರ್ ಘಟಕ ಗಳ ಸ್ಥಾಪನೆಯು ಭಾರತದ ಸೋಲಾರ್ ವಿದ್ಯುತ್ ಸಾಮರ್ಥ್ಯವನ್ನು ಹೆಚ್ಚು ಮಾಡುವ ಮತ್ತು ಕಾರ್ಬನ್ ಎಮಿಶನ್ ತಗ್ಗಿಸಲು ಸಹಕಾರಿಯಾಗಿದೆ.

ಇಂಧನ ಇಲಾಖೆಯ ಮಹತ್ವದ ಮೈಲಿಗಲ್ಲು

ಸಾಮರ್ಥ್ಯ	2,400 ಮೆ.ವ್ಯಾ
ಉಪಕೇಂದ್ರಗಳು	389
ಕೃಷಿ ಫೀಡರ್ ಗಳು	1,555
ಕೃಷಿ ಐ.ಪಿ. ಸೆಟ್ ಗಳು	6,32,794

ಪ್ರಧಾನಮಂತ್ರಿ - ಕಿಸಾನ್ ಉರ್ಜಾ ಸುರಕ್ಷಾ ಏವಂ ಉತ್ಥಾನ್ ಮಹಾಭಿಯಾನ್ (ಪಿಎಂ - ಕುಸುಮ್) ಕಾಂಪೊನೆಂಟ್ - ಸಿ ಯೋಜನೆಗೆ ಚಾಲನೆ

11.06.2025 | ಬೆಳಿಗ್ಗೆ 10.30 ಗಂಟೆಗೆ | ನೇತಾಜಿ ತಾಲ್ಲೂಕು ಕ್ರೀಡಾಂಗಣ ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ

: ಉದ್ಘಾಟನೆ :
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

: ಗೌರವಾನ್ವಿತ ಉಪಸ್ಥಿತಿ :
ಶ್ರೀ ಪ್ರಲ್ಹಾದ ಜೋಶಿ
ಮಾನ್ಯ ಕೇಂದ್ರ ಸಚಿವರು, ನವ ಮತ್ತು ನವೀಕರಿಸಬಹುದಾದ ಇಂಧನ ಹಾಗೂ ಗ್ರಾಹಕ ವ್ಯವಹಾರ, ಆಹಾರ ಮತ್ತು ಪಡಿತರ ವಿತರಣೆ, ಭಾರತ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಶ್ರೀಪಾದ್ ಯೇಸೋ ನಾಯಕ್
ಮಾನ್ಯ ರಾಜ್ಯ ಸಚಿವರು, ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ
ಭಾರತ ಸರ್ಕಾರ

: ಲೋಕಾರ್ಪಣೆ :
ಶ್ರೀ ಕೆ.ಜೆ. ಜಾರ್ಜ್
ಮಾನ್ಯ ಇಂಧನ ಸಚಿವರು, ಕರ್ನಾಟಕ ಸರ್ಕಾರ

: ಘನ ಉಪಸ್ಥಿತಿ :
ಶ್ರೀ ಕೃಷ್ಣ ಭೈರೇಗೌಡ
ಮಾನ್ಯ ಕಂದಾಯ ಸಚಿವರು
ಕರ್ನಾಟಕ ಸರ್ಕಾರ

ಡಾ|| ಎಂ.ಸಿ. ಸುಧಾಕರ್
ಮಾನ್ಯ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವರು

: ಅಧ್ಯಕ್ಷತೆ :
ಶ್ರೀ ಕೆ. ಹೆಚ್. ಪುಟ್ಟಸ್ವಾಮಿ ಗೌಡ
ಮಾನ್ಯ ಶಾಸಕರು, ಗೌರಿಬಿದನೂರು ವಿಧಾನಸಭಾ ಕ್ಷೇತ್ರ

ಮಾನ್ಯ ನವ ಮತ್ತು ನವೀಕರಿಸಬಹುದಾದ ಇಂಧನ ಹಾಗೂ ಗ್ರಾಹಕ ವ್ಯವಹಾರ, ಆಹಾರ ಮತ್ತು ಪಡಿತರ ವಿತರಣೆ, ಕೇಂದ್ರ ಸಚಿವರಾದ **ಶ್ರೀ ಪ್ರಲ್ಹಾದ ಜೋಶಿ** ಯವರು ಸೌರ ಘಟಕವನ್ನು ವೀಕ್ಷಿಸುತ್ತಿರುವುದು.

ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ** ರವರೊಂದಿಗೆ ಮಾನ್ಯ ಇಂಧನ ಸಚಿವರಾದ **ಶ್ರೀ ಕೆ.ಜೆ. ಜಾರ್ಜ್** ರವರು ಸೌರ ಘಟಕವನ್ನು ವೀಕ್ಷಿಸುತ್ತಿರುವುದು.

ಸರ್ವರಿಗೂ ಆದರದ ಸ್ವಾಗತ

ಡಾ. ಶಾಲಿನಿ ರಜನೀಶ್, ಭಾ.ಆ.ಸೇ.
ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ

ಶ್ರೀ ಗೌರವ್ ಗುಪ್ತ, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಇಂಧನ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ
ವ್ಯವಸ್ಥಾಪಕ ನಿರ್ದೇಶಕರು, ಕ.ವಿ.ನಿ.ನಿ

ಶ್ರೀ ಪಂಕಜ್ ಕುಮಾರ್ ಪಾಂಡೆ, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ಕ.ವಿ.ಪ್ರ.ನಿ.ನಿ.

ಡಾ. ಎನ್. ಶಿವಶಂಕರ್, ಭಾ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು,
ಬೆ.ವಿ.ಕಂ.

KREDL ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ | BESCOM ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ | C.E.S.C. MYSORE ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | KPTCL ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ | HESCOM ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | GESCOM ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ | MESCOM ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

"ದೇಶದ ಕಾಡು, ವನ್ಯಜೀವಿ, ನದಿಗಳು ಸೇರಿ ಪರಿಸರ ಉಳಿಸುವುದು"
-ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

BESCOM HELPLINE 1912

ಕರ್ನಾಟಕದ ನವ ನಿರ್ಮಾಣಕ್ಕೆ ಗ್ಯಾರಂಟಿ ಸರ್ಕಾರ

ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ | ಗೃಹಜ್ಯೋತಿ ಪ್ರತಿ ಮನೆಗೆ 200 | ಅನ್ನಭಾಗ್ಯ 10 kg | ಗೃಹಲಕ್ಷ್ಮಿ ₹2000 | ಯುವನಿಧಿ ₹3000 ₹1500

ಸಮಾಚಾರ ಸಣ್ಣದಲ್ಲ

ಕರೆಂಟ್ ತಗುಲಿ ಬಾಲಕಿ ಸಾವು

ಆನೇಕಲ್: ಆಟವಾಡುತ್ತಿದ್ದಾಗ ವಿದ್ಯುತ್ ಶಾಕ್ ತಗುಲಿ 11 ವರ್ಷದ ಬಾಲಕಿ ಸಾವನ್ನಪ್ಪಿರುವ ಘಟನೆ ಬೆಂಗಳೂರು ಹೊರ ವಲಯದ ಆನೇಕಲ್ ತಾಲೂಕಿನ ನಾರಾಯಣ ಘಟ್ಟದಲ್ಲಿ ನಡೆದಿದೆ. ನಾರಾಯಣಘಟ್ಟ ಗ್ರಾಮದ ತನಿಷ್ಕಾ(11) ಮೃತ ಬಾಲಕಿ. ಶಾಲೆಗೆ ರಜೆ ಇದ್ದ ಕಾರಣ ತನಿಷ್ಕಾ ಮನೆ ಬಳಿಯೇ ಆಟವಾಡುತ್ತಿದ್ದಳು. ವಿದ್ಯುತ್ ಕಂಬದ ಬಳಿ ಆಟವಾಡುತ್ತಿದ್ದಾಗ ಕರೆಂಟ್ ಶಾಕ್ ತಗುಲಿದೆ. ವಿದ್ಯುತ್ ಶಾಕ್‌ನಿಂದ ಗಾಯಗೊಂಡಿದ್ದ ತನಿಷ್ಕಾಳನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಗಿತ್ತಾದ್ರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾಳೆ. ಇದರಿಂದ ಬೆಸ್ಕಾಂ ಅಧಿಕಾರಿಗಳ ಪೋಷಕರು ಆಕ್ರೋಶ ಹೊರಹಾಕಿದ್ದಾರೆ. ಆಸ್ಪತ್ರೆ ಮುಂಭಾಗ ಪೋಷಕರ ಆಕ್ರಂದನ ಮುಗಿಲು ಮುಟ್ಟಿದೆ. ಸೂರ್ಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಅಮೀನ್‌ಮಟ್ಟು ವಿರುದ್ಧ ದೂರು

ಬೆಂಗಳೂರು: ವಿಧಾನ ಪರಿಷತ್ ನಾಮನಿರ್ದೇಶನಕ್ಕೆ ರಾಜ್ಯ ಕಾಂಗ್ರೆಸ್ ಶಿಫಾರಸು ಮಾಡಿದ್ದ ದಿನೇಶ್ ಅಮೀನ್‌ಮಟ್ಟು ವಿರುದ್ಧ ರಾಜ್ಯಪಾಲರಿಗೆ ದೂರು ನೀಡಲಾಗಿದೆ. ದಿನೇಶ್ ಅಮೀನಮಟ್ಟು ಅವರನ್ನು ಪರಿಷತ್‌ಗೆ ನೇಮಕ ಮಾಡಬಾರದು ಎಂದು ದಲಿತ ಹಿಂದುಳಿದ ಅಲ್ಪಸಂಖ್ಯಾತರ ವೇದಿಕೆ ರಾಜ್ಯಾಧ್ಯಕ್ಷ ಜಿ.ಎಂ.ಗಾಡ್ಕರ್ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಅವರಿಗೆ ಪತ್ರ ಮುಖೇನ ದೂರು ನೀಡಿದ್ದಾರೆ. ದಿನೇಶ್ ಅಮೀನ್‌ಮಟ್ಟು ಸಿಎಂ ಮಾಧ್ಯಮ ಸಲಹೆಗಾರರಾಗಿದ್ದಾಗ ಅಧಿಕಾರ ದುರ್ಬಳಕೆ ಮಾಡಿದ್ದಾರೆ. ಸಮಾಜ, ಸಾರ್ವಜನಿಕರ ಹಿತದೃಷ್ಟಿಯಿಂದ ಪರಿಷತ್‌ಗೆ ಅವರನ್ನು ನೇಮಕ ಮಾಡಬಾರದು ಎಂದು ಮನವಿ ಮಾಡಲಾಗಿದೆ. ಈಗಾಗಲೇ ಪರಿಷತ್‌ಗೆ ನಾಮನಿರ್ದೇಶನ ಕುರಿತು ದಿನೇಶ್ ಅಮಿನ ಮಟ್ಟು ಹೆಸರನ್ನು ಸೂಚಿಸಿ ವರದಿ ಸಲ್ಲಿಸಲಾಗಿದೆ. ಇದರ ಬೆನ್ನಲ್ಲೇ ದೂರು ನೀಡಲಾಗಿದೆ.

ಸಾರ್ವಜನಿಕ ಪ್ರಕಟಣೆ

ನನ್ನ ಮಾಲಿಕತ್ವಕ್ಕೊಳಪಟ್ಟ ಸ್ಥಿರಾಸ್ತಿಗೆ ಸಂಬಂಧಪಟ್ಟಂತೆ ಈ ಹಿಂದೆ ಕರ್ನಾಟಕ ಗೃಹ ಮಂಡಳಿಯಿಂದ ಕೊಡಲ್ಪಟ್ಟ ಮೂಲ ಹಂಚಿಕೆ ಪತ್ರ ಹಾಗೂ ಸದರಿ ಮಂಡಳಿಯಿಂದ ಹಿಂದಿನ ಮಾಲಿಕರಾದ **ಶ್ರೀ. ಬಿ.ಪಿ.ಕಲ್ಯಾಣಮೂರ್ತಿಯವರಿಗೆ** ಬರೆದುಕೊಟ್ಟು ಕೃಷ್ಣರಾಜಪುರ ಉಪನೋಂದಣಾಧಿಕಾರಿಯರ ಕಛೇರಿಯ 1ನೇ ಪುಸ್ತಕದ 1585 ನೇ ಸಂಪುಟದ ಪುಟ ಸಂಖ್ಯೆ 26 ರಿಂದ 35 ರಲ್ಲಿ ದಸ್ತಾವೇಜು ಸಂಖ್ಯೆ 99/2000–01 ಆಗಿ ನೋಂದಣಿಯಾದ 31.03.2000ನೇ ದಿನಾಂಕದ ಮೂಲ ದಾಖಲೆಗಳು ಕಳೆದುಹೋಗಿರುತ್ತವೆ.

ಸದರಿ ಮೂಲ ದಾಖಲೆಗಳು ಯಾರಿಗಾದರು ಸಿಕ್ಕಿದ್ದು, ಈ ಕೆಳಕಂಡವರಿಗೆ ಮಾಹಿತಿ ನೀಡಿದ್ದಲ್ಲಿ ಅಥವಾ ಹಿಂದಿರುಗಿಸಿದ್ದಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ತೆರನಾದ ಹಕ್ಕಿದ್ದಲ್ಲಿ ಸೂಕ್ತ ಪುರಾವೆಯೊಂದಿಗೆ ಲಿಖಿತ ರೂಪದಲ್ಲಿ ಈ ಕೆಳಕಂಡವರಿಗೆ ತಕ್ಷಣ ಸಲ್ಲಿಸುವುದು.

ಎಸ್.ಡಿ. ಶೋಭ
#32182, 18ನೇ ಮಹಡಿ, 3ನೇ ಕಟ್ಟಡ, 2ನೇ ಟವರ್, ಪ್ರೆಸ್ಟೀಜ್ ಫಾಲ್ಕನ್ ಸಿಟಿ, ಕೋಣನಕುಂಟೆ, ಬೆಂಗಳೂರು–560 062.

ಕಾಲ್ತುಳಿತ ಪ್ರಕರಣ: ಜೂ.12ರೊಳಗೆ ಮುಚ್ಚಿದ ಲಕೋಟೆಯಲ್ಲಿ ವರದಿ ಸಲ್ಲಿಸಿ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಗೆದ್ದ ಬಳಿಕ ಹಮ್ಮಿಕೊಂಡಿದ್ದ ವಿಜಯೋತ್ಸವದ ವೇಳೆ ಕಾಲ್ತುಳಿತಕ್ಕೆ ಸಿಲುಕಿ 11 ಮಂದಿ ಸಾವನ್ನಪ್ಪಿ, ಹಲವರು ಗಾಯಗೊಂಡಿದ್ದರು. ಈ ಘಟನೆ ಸಂಬಂಧ ದಾಖಲಿಸಿಕೊಂಡಿದ್ದ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ, ಮೃತಪಟ್ಟವರ ಪರವಾಗಿ ಸೇರಿದಂತೆ ಹಲವು ಮಂದಿ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳ ವರದಿ ಪರಿಗಣಿಸಿರುವ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ.ಕಾಮೇಶ್ವರ ರಾವ್ ಮತ್ತು ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರ ವಿಭಾಗೀಯ ಪೀಠ ಮಂಗಳವಾರ ಕಲಾಪ ಪ್ರಾರಂಭಿಸುತ್ತಿದ್ದಂತೆ, ಮೃತರ ಪರವಾಗಿ ಸೇರಿ ಕೆಲವು ವಕೀಲರು ಮಧ್ಯಂತರ ಅರ್ಜಿ ವಿಚಾರಣೆಗೆ ಪರಿಗಣಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಹಾಜರಿದ್ದ ಅಡ್ವೋಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಅವರನ್ನು ಉದ್ದೇಶಿಸಿದ ಪೀಠ, ಈವರೆಗೂ ವಸ್ತುಸ್ಥಿತಿ ವರದಿ ಏಕೆ ಸಲ್ಲಿಸಿಲ್ಲ ಎಂದು ಪ್ರಶ್ನಿಸಿತು.

ಇದಕ್ಕೆ ಶೆಟ್ಟಿ ಅವರು, ಘಟನೆ ಸಂಬಂಧ ನ್ಯಾಯಾಂಗ ತನಿಖೆ, ಮ್ಯಾಜಿಸ್ಟ್ರೇಟ್ ತನಿಖೆಗೆ ವಹಿಸಲಾಗಿದೆ. ತನಿಖಾ ವರದಿ ಬರಬೇಕಾಗಿದೆ. ವರದಿ ಬರುವುದಕ್ಕೂ ಮುನ್ನ ನ್ಯಾಯಾಲಯಕ್ಕೆ ಸಲ್ಲಿಸಿದಲ್ಲಿ ತನಿಖೆಗೂ ಮುನ್ನ ಸರಕಾರ ತೀರ್ಮಾನ ಮಾಡಿದೆ ಎಂಬ ಆರೋಪ ಬರಲಿದೆ. ಆದ್ದರಿಂದ ಒಂದು ವಾರ ಕಾಲಾವಕಾಶ ನೀಡಬೇಕು ಎಂದು ಕೋರಿದರು. ಇದನ್ನ ಪರಿಗಣಿಸಿದ ಪೀಠ, ನಿಮ್ಮ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಸೂಚನೆ ನೀಡಿತು. ಅಲ್ಲದೆ, ಸರಕಾರ ಸಲ್ಲಿಸುವ ವರದಿ ಪರಿಗಣಿಸಿ ಮಧ್ಯಂತರ ಅರ್ಜಿಗಳ ಕುರಿತಂತೆ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿ ವಿಚಾರಣೆ ಜೂನ್ 12ರಂದು ಮಧ್ಯಾಹ್ನ ವಿಚಾರಣೆ ನಡೆಸುವುದಾಗಿ ತಿಳಿಸಿ ಮುಂದೂಡಿದೆ.

ಸಿಐಡಿಗೆ ಹಿನ್ನಡೆ: ಆರೋಪಿಗಳು ಪರಪ್ಪನ ಅಗ್ರಹಾರಕ್ಕೆ

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ ಹೊರಗೆ ಸಂಭವಿಸಿದ ಕಾಲ್ತುಳಿತದಲ್ಲಿ ಆರ್‌ಸಿಬಿಯ 11 ಅಭಿಮಾನಿಗಳು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ನಾಲ್ವರು ಆರೋಪಿಗಳನ್ನು ಬಂಧಿಸಿದ್ದು, 1ನೇ ಎಸಿಜೆಎಂ ಕೋರ್ಟ್ ಮುಂದೆ ಹಾಜರುಪಡಿಸಿದರು. ಕೋರ್ಟ್‌ನಲ್ಲಿ ಸಿಐಡಿ ಅಧಿಕಾರಿಗಳಿಗೆ ಹಿನ್ನಡೆಯಾಗಿದೆ. ಸಿಐಡಿ ಅಧಿಕಾರಿಗಳು ಮಂಗಳವಾರ ಆರೋಪಿಗಳಾದ ಆರ್‌ಸಿಬಿ ಮಾರ್ಕೆಟಿಂಗ್ ಹೆಡ್ ನಿಖಿಲ್ ಸೋಸಲೆ, ಸುನಿಲ್ ಮ್ಯಾಥ್ಯೂ, ಕಿರಣ್, ಶಮಂತ್ ಅವರನ್ನು 1ನೇ ಎಸಿಜೆಎಂ ಕೋರ್ಟ್ ಮುಂದೆ ಹಾಜರುಪಡಿಸಿ, ಕಸ್ಟಡಿಗೆ ನೀಡುವಂತೆ ಅರ್ಜಿ ಸಲ್ಲಿಸಿದರು. ಈ ವೇಳೆ ಆರೋಪಿಗಳ ಪರ ವಕೀಲರು, ಹೈಕೋರ್ಟ್ ನೀಡಿದ ಆದೇಶದ ಮಾಹಿತಿಯನ್ನು 1ನೇ ಎಸಿಜೆಎಂ ಕೋರ್ಟ್‌ಗೆ ನೀಡಿದರು. ಹೈಕೋರ್ಟ್‌ನಲ್ಲಿ ಬಾಕಿಯಿರುವ ಅರ್ಜಿ ಇತ್ಯರ್ಥವಾಗುವವರೆಗೆ ಸಿಐಡಿ ಕಸ್ಟಡಿಗೆ ಕೇಳದಂತೆ ಹೈಕೋರ್ಟ್ ನಿರ್ದೇಶನ ನೀಡಿದೆ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ಆರೋಪಿಗಳನ್ನು ಕಸ್ಟಡಿಗೆ ನೀಡುವಂತೆ ಸಲ್ಲಿಸಿದ್ದ ಅರ್ಜಿಯನ್ನು ಸಿಐಡಿ ಅಧಿಕಾರಿಗಳು ವಾಪಸ್ ಪಡೆದರು. ಆರೋಪಿಗಳನ್ನು ಸಿಐಡಿ ಪೊಲೀಸರು ಪರಪ್ಪನ ಅಗ್ರಹಾರ ಜೈಲಿಗೆ ಕರೆದುಕೊಂಡು ಹೋದರು.

ವೃದ್ಧ ದಂಪತಿಗೆ ಮೂರು ತಿಂಗಳು ಡಿಜಿಟಲ್ ಅರೆಸ್ಟ್: ಇಬ್ಬರು ಸೆರೆ

ಬೆಂಗಳೂರು: ವೃದ್ಧ ದಂಪತಿಗೆ ಡಿಜಿಟಲ್ ಅರೆಸ್ಟ್ ಮೂಲಕ ವಂಚಿಸಿದ್ದ ಇಬ್ಬರು ಆರೋಪಿಗಳನ್ನು ಬೆಂಗಳೂರು ಆಗ್ನೇಯ ವಿಭಾಗದ ಸಿಇಎನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಾರಾಯಣ್ ಸಿಂಗ್ ಚೌಧರಿ ಹಾಗೂ ಈಶ್ವರ್ ಸಿಂಗ್ ಬಂಧಿತ ಆರೋಪಿಗಳು. ಮಂಜುನಾಥ್ ಎಂಬುವರು ನೀಡಿದ ದೂರಿನನ್ವಯ ತನಿಖೆ ಕೈಗೊಂಡಿದ್ದ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿರುವುದಾಗಿ ತಿಳಿಸಿದ್ದಾರೆ.

ಎಂಜಿನಿಯರ್ ಆಗಿದ್ದ ಮಂಜುನಾಥ್ 31 ವರ್ಷಗಳ ಕಾಲ ನೈಜೀರಿಯಾದಲ್ಲಿ ಕೆಲಸ ನಿರ್ವಹಿಸಿ, ನಿವೃತ್ತಿಯ ಬಳಿಕ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ. ಬ್ಯಾಂಕ್‌ನ ಪ್ರತಿನಿಧಿಗಳ ಸೋಗಿನಲ್ಲಿ ಮಾರ್ಚ್ ತಿಂಗಳಿನಲ್ಲಿ ಮಂಜುನಾಥ್ ಅವರಿಗೆ ಕರೆ ಮಾಡಿದ್ದ ಆರೋಪಿಗಳು, ಕ್ರೆಡಿಟ್ ಕಾರ್ಡ್ ಲಿಮಿಟ್ ಓವರ್ ಡ್ಯೂ ಆಗಿದೆ ಎಂದು ವಿವರಗಳನ್ನು ಪಡೆದುಕೊಂಡಿದ್ದರು. ಬಳಿಕ ನಿಮ್ಮ ಖಾತೆಯ ಮೂಲಕ ಅಕ್ರಮವಾಗಿ ಹಣ ವರ್ಗಾವಣೆಯಾಗಿದೆ, ಆದ್ದರಿಂದ ಇಡಿ, ಸಿಬಿಐನಲ್ಲಿ ಪ್ರಕರಣ ದಾಖಲಾಗಿದೆ ಎಂದಿದ್ದರು.

ನಂತರ ನಕಲಿ ವಾರೆಂಟ್‌ನ ಫೋಟೊ ಕಳಿಸಿ ನಿಮ್ಮನ್ನ ಬಂಧಿಸುತ್ತಿದ್ದು, ತಿಹಾರ್ ಜೈಲಿನಲ್ಲಿರಿಸಲಿದ್ದೇವೆ ಎಂದು ಬೆದರಿಸಿದ್ದರು. ಹೀಗೆ ಮೂರು ತಿಂಗಳ ಕಾಲ ಬೆದರಿಸುತ್ತ ವಿವಿಧ ಹಂತಗಳಲ್ಲಿ 4.79 ಕೋಟಿ ರುಪಾಯಿ ಸುಲಿಗೆಗೈದಿದ್ದ ಆರೋಪಿಗಳು, ಆಸ್ತಿ ಪತ್ರಗಳ ಕಾಪಿಗಳನ್ನು ಸಹ ಪಡೆದುಕೊಂಡಿದ್ದರು. ವಂಚಕರ ಕಿರುಕುಳ ಅತಿಯಾದಾಗ ಅದನ್ನು ತಾಳಲಾರದ ದಂಪತಿ ಆಗ್ನೇಯ ವಿಭಾಗದ ಸಿಇಎನ್ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಶ್ರೀಲಂಕಾದಲ್ಲಿ ಕ್ಯಾಸಿನೋ ಆಡುವುದಕ್ಕಾಗಿ ಕೃತ್ಯ

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ವೃದ್ಧ ದಂಪತಿಯ ಖಾತೆಯಿಂದ ಹಣ ವರ್ಗಾವಣೆ ಮಾಡಿಕೊಂಡಿದ್ದ ನಾರಾಯಣ್ ಸಿಂಗ್ ಚೌಧರಿ ಹಾಗೂ ಈಶ್ವರ್ ಸಿಂಗ್ ಅವರನ್ನು ಬಂಧಿಸಿದ್ದಾರೆ. ವಂಚಿಸಿದ ಹಣವನ್ನು ಆರೋಪಿಗಳು ಶ್ರೀಲಂಕಾದಲ್ಲಿ ಕ್ಯಾಸಿನೋ ಆಡಲು ಬಳಸಿರುವುದು ಸಹ ಗೊತ್ತಾಗಿದೆ. ಸದ್ಯ ಆರೋಪಿತರ ವಿಚಾರಣೆ ನಡೆಸಲಾಗುತ್ತಿದ್ದು, ವಂಚಿಸಿದ ಹಣ ಜಪ್ತಿ ಮಾಡಲಾಗುತ್ತಿದೆ ಎಂದು ಬೆಂಗಳೂರು ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ತಿಳಿಸಿದ್ದಾರೆ.

ಕಾಲ್ತುಳಿತ ಪ್ರಕರಣದಲ್ಲಿ ಯಾರ ತಲೆದಂಡವಾಗಲ್ಲ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿನ ಕಾಲ್ತುಳಿತ ಪ್ರಕರಣದಲ್ಲಿ ಯಾರ ತಲೆದಂಡವೂ ಆಗುವುದಿಲ್ಲ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಲ್ತುಳಿತ ಪ್ರಕರಣವನ್ನು ಕಾಂಗ್ರೆಸ್ ಗಂಭೀರವಾಗಿ ಪರಿಗಣಿಸಿದೆ. ಈಗಾಗಲೇ ಮುಖ್ಯಮಂತ್ರಿಯವರು ಈ ವಿಚಾರವಾಗಿ ಹಲವಾರು ಕಠಿಣ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಇದು ಯಾರೂ ಊಹೆ ಮಾಡದ ಅನಿರೀಕ್ಷಿತ ಘಟನೆ. ಪ್ರವಾಹದ ಮಾದರಿಯಲ್ಲಿ ಜನ ಆಗಮಿಸಿದ್ದರಿಂದಾಗಿ ದುರ್ಘಟನೆಯಾಗಿದೆ. ಉತ್ತರ ಪ್ರದೇಶದಲ್ಲಿ 129 ಮಂದಿ ಜೀವ ಕಳೆದುಕೊಂಡರು. ಇಂತಹ ಘಟನೆಗಳು ನೋವಿನ ಸಂಗತಿ. ಕುಟುಂಬದವರನ್ನು ಕಳೆದುಕೊಂಡ ನೋವಿನಲ್ಲಿ ಸರಕಾರವೂ ಭಾಗಿಯಾಗಿದೆ ಎಂದರು.

ಕಾಲ್ತುಳಿತದಲ್ಲಿ ಲೋಪಗಳಾಗಿವೆ. ಎಲ್ಲಿ ಆಗಿದೆ. ಯಾರು ಹೊಣೆ ಎಂಬ ಬಗ್ಗೆ ಸಿಐಡಿ ಸೇರಿದಂತೆ ಹಲವು ರೀತಿಯ ತನಿಖೆಗಳಾಗುತ್ತಿದೆ. ಈ ಹಂತದಲ್ಲಿ ಯಾವುದೇ ಹೇಳಿಕೆ ನೀಡುವುದು ಸೂಕ್ತವಲ್ಲ. ವಿಧಾನ ಪರಿಷತ್ ಸದಸ್ಯರ ನೇಮಕಾತಿಗೆ ಸಂಬಂಧಪಟ್ಟಂತೆ ಚರ್ಚೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಗೆ ತೆರಳಿದ್ದಾರೆ. ಕಾಂಗ್ರೆಸ್ ಪಕ್ಷ ಸಮುದ್ರವಿದ್ದಂತೆ ಇಲ್ಲಿ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿರುತ್ತದೆ. ಪೈಪೋಟಿಯೂ ಸಹಜ. ಹೀಗಾಗಿ ವಿಧಾನಪರಿಷತ್ ನಾಮನಿರ್ದೇಶನದ ಪಟ್ಟಿ ಬಗ್ಗೆ ಚರ್ಚೆ ಮಾಡಲು ಹೈಕಮಾಂಡ್ ಸಿಎಂ, ಡಿಸಿಎಂ ಅವರನ್ನು ದೆಹಲಿಗೆ ಕರೆಸಿಕೊಂಡಿರಬಹುದು ಎಂದು ನಮಗೆ ಮಾಹಿತಿ ಇಲ್ಲ ಎಂದರು.

ಪಿಯು ಪರೀಕ್ಷೆ: ಉಚಿತ ಪ್ರಯಾಣ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ– 3 ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರವನ್ನು ತೋರಿಸಿ ಉಚಿತವಾಗಿ ಪ್ರಯಾಣಿಸಲು ಅವಕಾಶವನ್ನು ಬಿಎಂಟಿಸಿ ಕಲ್ಪಿಸಿದೆ.

ಪರೀಕ್ಷೆ– 3 ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರಗಳು ಬೇರೆ ಬೇರೆ ಕಾಲೇಜುಗಳಲ್ಲಿ ಇರುವುದರಿಂದ ಬಿಎಂಟಿಸಿಯು ವಿದ್ಯಾರ್ಥಿಗಳ ಹಿತವನ್ನು ಗಮನದಲ್ಲಿಟ್ಟುಕೊಂಡು ಜೂನ್ 9 ರಿಂದ 20 ರವರೆಗೆ ಪರೀಕ್ಷೆಗಳು ನಡೆಯುವ ದಿನಾಂಕಗಳಂದು ಪರೀಕ್ಷೆಗೆ ಹಾಜರಾಗಲು ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರದ ವರೆಗೆ ಹೋಗುವಾಗ ಮತ್ತು ಹಿಂದಿರುಗುವಾಗ ಸಂಸ್ಥೆಯ ಸಾಮಾನ್ಯ ಸೇವೆಗಳಲ್ಲಿ ಪ್ರವೇಶ ಪತ್ರ ತೋರಿಸಿ, ಉಚಿತ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಪರೀಕ್ಷಾ ದಿನಾಂಕಗಳಂದು ಪರೀಕ್ಷಾ ಕೇಂದ್ರಗಳ ಮಾರ್ಗಗಳಲ್ಲಿ ಕಡ್ಡಾಯವಾಗಿ ಎಲ್ಲಾ ಮಾರ್ಗಗಳನ್ನು, ಸುತ್ತುವಳಿಗಳನ್ನು ಕಾರ್ಯಾಚರಣೆಗೊಳಿಸಲಾಗುವುದು ಎಂದು ಬಿಎಂಟಿಸಿ ತಿಳಿಸಿದೆ.

ಕುಟುಂಬಸ್ಥರಿಗೆ ನ್ಯಾಯ ಕೊಡಿಸುವ ಭರವಸೆ | ಆರ್‌ಸಿಬಿ ಸಂಭ್ರಮಾಚರಣೆ ಮುಂದೂಡಬೇಕಾಗಿತ್ತು

ಮೃತ ಭೂಮಿಕ್ ಮನೆಗೆ ಅಶೋಕ ಭೇಟಿ

ಬೆಂಗಳೂರು: ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆಯ ವೇಳೆ ಕಾಲ್ತುಳಿತದಿಂದ ಮೃತಪಟ್ಟ ಹಾಸನ ಜಿಲ್ಲೆಯ ಬೇಲೂರು ತಾಲೂಕಿನ ಭೂಮಿಕ್ ಅವರ ಮನೆಗೆ ಪ್ರತಿಪಕ್ಷ ನಾಯಕರಾದ ಆರ್.ಅಶೋಕ ಹಾಗೂ ಛಲವಾದಿ ನಾರಾಯಣಸ್ವಾಮಿ ಭೇಟಿ ನೀಡಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ಮೃತ ವಿದ್ಯಾರ್ಥಿ ಭೂಮಿಕ್ ಅವರ ತಂದೆ ಡಿ.ಟಿ.ಲಕ್ಷ್ಮಣ ಅವರೊಂದಿಗೆ ಆರ್.ಅಶೋಕ ಮಾತನಾಡಿ, ಹೋದ ಜೀವವನ್ನು ಮರಳಿ ತರಲು ಸಾಧ್ಯವಿಲ್ಲ. ಆದರೆ ಇದಕ್ಕೆ ನ್ಯಾಯ ಕೊಡಿಸುವುದಾಗಿ ಭರವಸೆ ನೀಡಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಆರ್.ಅಶೋಕ, ಎಂಜಿನಿಯರಿಂಗ್ ವಿದ್ಯಾರ್ಥಿ ಭೂಮಿಕ್ ಮೃತಪಟ್ಟಿದ್ದರಿಂದ ಕುಟುಂಬದವರಿಗೆ ಬಹಳ ದುಃಖವಾಗಿದೆ. ಈ ಕುಟುಂಬದವರ ಜಮೀನಿನಲ್ಲಿ 30 ಜನರು ಕೆಲಸ ಮಾಡುತ್ತಿದ್ದಾರೆ. ಇವರ ಆರ್ಥಿಕ ಸ್ಥಿತಿ ಉತ್ತಮವಾಗಿಯೇ ಇದೆ. ಆದರೆ, ಈಗ ಒಬ್ಬನೇ ಮಗ ಮೃತಪಟ್ಟಿದ್ದು, ಆ ಜೀವವನ್ನು ಮರಳಿ ತರಲು ಸಾಧ್ಯವಿಲ್ಲ. ಸಂಭ್ರಮಾಚರಣೆಯನ್ನು ಎರಡು ಮೂರು ದಿನ ಮುಂದೂಡಿದ್ದರೆ ಯಾರಿಗೂ ಸಮಸ್ಯೆಯಾಗುತ್ತಿರಲಿಲ್ಲ ಎಂದು ಈ ಕುಟುಂಬ ಸೇರಿದಂತೆ ಎಲ್ಲರೂ ಹೇಳುತ್ತಿದ್ದಾರೆ. ಕ್ರಿಕೆಟ್‌ನ ಸಂಭ್ರಮಾಚರಣೆ ಜನರಿಗೆ ನೋವು ತಂದಿದೆ. ಈ ಸಾವುಗಳಿಗೆ ನ್ಯಾಯ ಸಿಗಬೇಕು ಎಂದರು.

ಮೃತ ಭೂಮಿಕ್ ತಂದೆ ಲಕ್ಷ್ಮಣ ಮಾತನಾಡಿ, ಇಷ್ಟು ಜನಸಂದಣಿ ಇರುವಾಗ ಇಂತಹ ಕಾರ್ಯಕ್ರಮ ಮಾಡಬಾರದು ಎಂದು ಸರ್ಕಾರಕ್ಕೆ ಯಾಕೆ ಗೊತ್ತಾಗಲಿಲ್ಲ? ನಮ್ಮಂತಹವರ ಮಕ್ಕಳ ಪ್ರಾಣ ಹೋಗಿದೆ. ಸರಕಾರವೇನೋ ಪರಿಹಾರ ನೀಡಿದೆ. ಆದರೆ ಆ ಹಣ ನಮ್ಮನ್ನು ನೋಡಿಕೊಳ್ಳುತ್ತದೆಯೇ ಎಂದು ಪ್ರಶ್ನೆ ಮಾಡಿದರು.

ಮಹಿಳೆಯರಿಗೆ ಮುತ್ತಿಟ್ಟವನ ಬಂಧನ

ಬೆಂಗಳೂರು: ನಗರದ ಕಾಕ್ಸ್ ಟೌನ್‌ನ ಮಿಲ್ಟನ್ ಪಾರ್ಕ್‌ನಲ್ಲಿ ಸಂಜೆ ವಾಕಿಂಗ್ ಮಾಡುತ್ತಿದ್ದ ಇಬ್ಬರು ಮಹಿಳೆಯರನ್ನು ಬಲವಂತವಾಗಿ ತಬ್ಬಿ, ತುಟಿಗೆ ಮುತ್ತಿಟ್ಟಿರುವ ಮದನ್ ಎಂಬುವವನನ್ನು ಪುಲಕೇಶಿ ನಗರ ಪೊಲೀಸರು ಬಂಧಿಸಿದ್ದಾರೆ.

ಈತ ಬೆಂಗಳೂರಿನ ಉದ್ಯಾನವನಗಳು, ಸಣ್ಣ ಪಾರ್ಕ್‌ಗಳು, ಮೈದಾನಗಳು ಮತ್ತು ಮಹಿಳೆಯರು ವಾಯುವಿಹಾರಕ್ಕೆ ತೆರಳುವ ರಸ್ತೆಗಳಲ್ಲಿ ಈ ಕೃತ್ಯ ನಡೆಸುತ್ತಿದ್ದ. ಈ ಘಟನೆ ಜೂನ್ 6 ರ ಸಂಜೆ 7 ಗಂಟೆ ಸುಮಾರಿಗೆ ಕಾಕ್‌ಟೌನ್‌ನ ಮಿಲ್ಟನ್ ಪಾರ್ಕ್ ಬಳಿ ನಡೆದಿದೆ. ಪುಲಕೇಶಿನಗರ ಪೊಲೀಸ್ ಠಾಣಾ ವ್ಯಾಪ್ತಿಯ ಈ ಪ್ರದೇಶದಲ್ಲಿ ಆರೋಪಿಯು ಒಂಟಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ತನ್ನ ಕಾಮಚೇಷ್ಟೆ ಮೆರೆದಿದ್ದಾನೆ. ಬೆಳಗ್ಗೆ ಕುಟುಂಬದೊಂದಿಗೆ ವಾಯುವಿಹಾರಕ್ಕೆ ಬಂದಿದ್ದ ಒಬ್ಬ ಮಹಿಳೆಯ ಬಳಿ ಮುಗ್ಧವಾಗಿ ಹೋಗಿ, ಬಲವಂತವಾಗಿ ತಬ್ಬಿಕೊಂಡು ತುಟಿಗೆ ಮುತ್ತಿಟ್ಟಿದ್ದಾನೆ. ಇದೇ ಪಾರ್ಕ್‌ನಲ್ಲಿ ವಾಕಿಂಗ್ ಮಾಡುತ್ತಿದ್ದ ಇನ್ನೊಬ್ಬ ಮಹಿಳೆಯ ಮೇಲೂ ಇದೇ ರೀತಿಯ ಕೃತ್ಯ ಎಸಗಿದ್ದಾನೆ. ಮಹಿಳೆಯರು ಗಲಾಟೆ ಮಾಡಿ, ಆರೋಪಿಯನ್ನು ಪ್ರಶ್ನಿಸಿದಾಗ, ನೀವು ಯಾರಿಗೆ ಹೇಳಿದರೂ ಏನೂ ಆಗಲ್ಲ ಎಂದು ಬೆದರಿಕೆ ಹಾಕಿ, ಕಾರಿನಲ್ಲಿ ಪರಾರಿಯಾಗಿದ್ದಾನೆ.

ಮಹಿಳೆಯರು ತಡರಾತ್ರಿ ಪುಲಕೇಶಿನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಈ ದೂರಿನ ಆಧಾರದ ಮೇಲೆ ಪೊಲೀಸರು ಆರೋಪಿಯನ್ನು ಪತ್ತೆಹಚ್ಚಿ ವಶಕ್ಕೆ ಪಡೆದಿದ್ದಾರೆ. ಆರೋಪಿಯ ವಿರುದ್ಧ ಪೋಕ್ಸೊ ಕಾಯಿದೆ ಮತ್ತು ಇತರ ಸಂಬಂಧಿತ ಕಾನೂನು ಕಲಂಗಳಡಿ ವಿಚಾರಣೆ ನಡೆಸಲಾಗುತ್ತಿದೆ. ಈ ಘಟನೆಯಿಂದ ಸ್ಥಳೀಯ ನಿವಾಸಿಗಳು, ಮಕ್ಕಳ ಪೋಷಕರು ಮತ್ತು ಮಹಿಳಾ ಹಕ್ಕು ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಗಾಗಿ ಹೆಚ್ಚಿನ ಪೊಲೀಸ್ ಭದ್ರತೆ, ಸಿಸಿಟಿವಿ ಕಣ್ಗಾವಲು ಮತ್ತು ಕಠಿಣ ಕಾನೂನು ಜಾರಿಯನ್ನು ಒತ್ತಾಯಿಸಿದ್ದಾರೆ.

AJAX
MAKES CONCRETE SENSE

ಎಜಾಕ್ಸ್ ಇಂಜಿನಿಯರಿಂಗ್ ಲಿಮಿಟೆಡ್

ಕಾರ್ಪೊರೇಟ್ ಗುರುತಿನ ಸಂಖ್ಯೆ : L28245KA1992PLC013306
ನೋಂದಾಯಿತ ಕಚೇರಿ: #253/1, 11ನೇ ಮುಖ್ಯ, ಹಂತ III, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು – 560 058, ಕರ್ನಾಟಕ, ಭಾರತ.
ದೂರವಾಣಿ: +91 8296336111 **ಇ–ಮೇಲ್:** complianceofficer@ajax-engg.com
ವೆಬ್‌ಸೈಟ್: www.ajax-engg.com

ಅಂಚೆ ಮತಪತ್ರದ ಸೂಚನೆ

ಈ ಮೂಲಕ ತಿಳಿಸುವುದೇನೆಂದರೆ, ಕಂಪನಿಗಳ ಕಾಯಿದೆ, 2013 (ಇನ್ನು ಮುಂದೆ "ಕಾಯಿದೆ" ಎಂದು ಕರೆಯಲಾಗುವುದು) ರ ಸೆಕ್ಷನ್ 108 ಮತ್ತು 110 ಹಾಗೂ ಅನ್ವಯವಾಗುವ ಇತರ ಯಾವುದೇ ನಿಬಂಧನೆಗಳು, ಕಂಪನಿಗಳು (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು") ರ ನಿಯಮ 20 ಮತ್ತು 22 ಹಾಗೂ ಕಾಯಿದೆ, ನಿಯಮಗಳು, ಸುತ್ತೋಲೆಗಳು ಮತ್ತು ಅಧಿಸೂಚನೆಗಳ ಅಡಿಯಲ್ಲಿನ ಇತರ ಅನ್ವಯವಾಗುವ ನಿಬಂಧನೆಗಳ (ಸಮಯದಿಂದ ಸಮಯಕ್ಕೆ ತಿದ್ದುಪಡಿ ಮಾಡಿದಂತೆ ಅಥವಾ ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಮರು-ಅಧಿನಿಯಮಗಳು ಸೇರಿದಂತೆ) ಜೊತೆಗೆ ಓದಿಕೊಂಡು, ಸಾಂಸ್ಥಿಕ ವ್ಯವಹಾರಗಳ ಸಚಿವಾಲಯ ("MCA") ಹೊರಡಿಸಿದ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ದಿನಾಂಕ 8 ಏಪ್ರಿಲ್ 2020, ಸಂಖ್ಯೆ 17/2020 ದಿನಾಂಕ 13 ಏಪ್ರಿಲ್ 2020, ಸಂಖ್ಯೆ 22/2020 ದಿನಾಂಕ 15 ಜೂನ್ 2020, ಸಂಖ್ಯೆ 33/2020 ದಿನಾಂಕ 28 ಸೆಪ್ಟೆಂಬರ್ 2020, ಸಂಖ್ಯೆ 39/2020 ದಿನಾಂಕ 31 ಡಿಸೆಂಬರ್ 2020, ಸಂಖ್ಯೆ 10/2021 ದಿನಾಂಕ 23 ಜೂನ್ 2021, ಸಂಖ್ಯೆ 20/2021 ದಿನಾಂಕ 8 ಡಿಸೆಂಬರ್ 2021, ಸಂಖ್ಯೆ 3/2022 ದಿನಾಂಕ 5 ಮೇ 2022, ಸಂಖ್ಯೆ 11/2022 ದಿನಾಂಕ 28 ಡಿಸೆಂಬರ್ 2022, ಸಂಖ್ಯೆ 09/2023 ದಿನಾಂಕ ಸೆಪ್ಟೆಂಬರ್ 25, 2023 ಮತ್ತು ಸಂಖ್ಯೆ 09/2024 ದಿನಾಂಕ ಸೆಪ್ಟೆಂಬರ್ 19, 2024 ಮತ್ತು ಇತರ ಸಂಬಂಧಿತ ಸುತ್ತೋಲೆಗಳು, ಯಾವುದಾದರೂ ಇದ್ದರೆ ("MCA ಸುತ್ತೋಲೆಗಳು" ಎಂದು ಒಟ್ಟಾಗಿ ಉಲ್ಲೇಖಿಸಲಾಗಿದೆ), ದಿ ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್, ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್ಕ್ಲೋಜರ್ ರಿಕ್ವೈರ್ಮೆಂಟ್ಸ್) ರೆಗ್ಯುಲೇಷನ್ಸ್, 2015, ತಿದ್ದುಪಡಿ ಮಾಡಿದಂತೆ ("ಸೆಬಿ ಲಿಸ್ಟಿಂಗ್ ರೆಗ್ಯುಲೇಷನ್ಸ್") ರ ನಿಯಮಾವಳಿ 44 ಮತ್ತು ಇತರ ಅನ್ವಯವಾಗುವ ನಿಯಮಾವಳಿಗಳು ಹಾಗೂ ಇತರ ಯಾವುದೇ ಅನ್ವಯವಾಗುವ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳ (ಸಮಯದಿಂದ ಸಮಯಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಮರು-ಅಧಿನಿಯಮಗಳು ಸೇರಿದಂತೆ) ಅನುಸಾರವಾಗಿ, ಎಜಾಕ್ಸ್ ಇಂಜಿನಿಯರಿಂಗ್ ಲಿಮಿಟೆಡ್ (ಹಿಂದೆ ಎಜಾಕ್ಸ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) (ಇನ್ನು ಮುಂದೆ **"ಕಂಪನಿ"** ಎಂದು ಕರೆಯಲಾಗುವುದು) ದ ಸದಸ್ಯರ ಅನುಮೋದನೆಯನ್ನು ಈ ಕೆಳಗಿನ ವಿಶೇಷ ನಿರ್ಣಯಗಳಿಗಾಗಿ ಅಂಚೆ ಮತಪತ್ರದ ಮೂಲಕ ರಿಮೋಟ್ ಇ-ಮತದಾನ ("ಇ-ಮತದಾನ") ಪ್ರಕ್ರಿಯೆಯ ಮೂಲಕ ಪಡೆಯಲಾಗುತ್ತಿದೆ:

ಅ.ಸಂ.	ವಿಶೇಷ ನಿರ್ಣಯಗಳ ವಿವರಣೆ
1.	ಎಜಾಕ್ಸ್ ಇಂಜಿನಿಯರಿಂಗ್ ಲಿಮಿಟೆಡ್ (ಹಿಂದೆ ಎಜಾಕ್ಸ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು) ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2024 ಯನ್ನು, ಅದರಲ್ಲಿ ಎಜಾಕ್ಸ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2024 - ಯೋಜನೆ - I ಮತ್ತು ಎಜಾಕ್ಸ್ ಉದ್ಯೋಗಿ ಸ್ಟಾಕ್ ಆಯ್ಕೆ ಯೋಜನೆ 2024 - ಯೋಜನೆ - II ಸೇರಿ, ಅನುಮೋದಿಸುವುದು.

MCA ಸುತ್ತೋಲೆಗಳ ಪ್ರಕಾರ, ಈ ಅಂಚೆ ಮತಪತ್ರ ಸೂಚನೆಯನ್ನು ("ಸೂಚನೆ"), ಇತರೆ ವಿಷಯಗಳ ಜೊತೆಗೆ ರಿಮೋಟ್ ಇ-ಮತದಾನದ ಪ್ರಕ್ರಿಯೆ ಮತ್ತು ವಿಧಾನವನ್ನು ಒಳಗೊಂಡಂತೆ, ಮಂಗಳವಾರ, ಜೂನ್ 10, 2025 ರಂದು, ಠೇವಣಿಗಳಿಂದ ಪಡೆದ ಸದಸ್ಯರ ರಿಜಿಸ್ಟರ್/ಲಾಭದಾಯಕ ಮಾಲೀಕರ ಪಟ್ಟಿಯಲ್ಲಿ ಶುಕ್ರವಾರ, ಜೂನ್ 6, 2025 ರಂದು ("ಕಟ್-ಆಫ್ ದಿನಾಂಕ") ಹೆಸರುಗಳು ಕಾಣಿಸಿಕೊಂಡಿರುವ ಮತ್ತು ಕಂಪನಿ/ಠೇವಣಿಗಳೊಂದಿಗೆ ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸಿಕೊಂಡಿರುವ ಸದಸ್ಯರಿಗೆ ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ಕಳುಹಿಸಲಾಗಿದೆ. ಕಟ್-ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು. MCA ಸುತ್ತೋಲೆಗಳು ನೀಡಿದ ವಿನಾಯಿತಿಗಳ ಪ್ರಕಾರ, ಈ ಅಂಚೆ ಮತಪತ್ರಕ್ಕಾಗಿ ಅಂಚೆ ಮತಪತ್ರ ಸೂಚನೆಯ ಹಾರ್ಡ್ ಪ್ರತಿಗಳು, ಅಂಚೆ ಮತಪತ್ರ ನಮೂನೆಗಳು ಮತ್ತು ಪೂರ್ವ-ಪಾವತಿಸಿದ ವ್ಯವಹಾರ ಲಕೋಟೆಗಳನ್ನು ಸದಸ್ಯರಿಗೆ ಕಳುಹಿಸಲಾಗುವುದಿಲ್ಲ. ಸದಸ್ಯರು ತಮ್ಮ ಸಮ್ಮತಿ ಅಥವಾ ಭಿನ್ನಾಭಿಪ್ರಾಯವನ್ನು ರಿಮೋಟ್ ಇ-ಮತದಾನ ವ್ಯವಸ್ಥೆಯ ಮೂಲಕ ಮಾತ್ರ ಸಂವಹನ ಮಾಡಬೇಕು. ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಇ-ಮತದಾನ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ CDSL ಸೇವೆಗಳನ್ನು ಪಡೆದುಕೊಂಡಿದೆ. ಇ-ಮತದಾನ ಸೌಲಭ್ಯವು ಈ ಕೆಳಗಿನ ಅವಧಿಯಲ್ಲಿ ಲಭ್ಯವಿರುತ್ತದೆ:

ಇ-ಮತದಾನ ಅವಧಿಯ ಪ್ರಾರಂಭ	ಗುರುವಾರ, 12 ಜೂನ್ 2025 ಬೆಳಿಗ್ಗೆ 9:00 ಗಂಟೆ (IST) ಇಂದ
ಇ-ಮತದಾನ ಅವಧಿಯ ಮುಕ್ತಾಯ	ಶುಕ್ರವಾರ, 11 ಜುಲೈ 2025 ಸಂಜೆ 5:00 ಗಂಟೆ (IST) ವರೆಗೆ
ಮತ ಚಲಾಯಿಸಲು ಅರ್ಹತೆಯ ಕಟ್-ಆಫ್ ದಿನಾಂಕ	ಶುಕ್ರವಾರ, 6 ಜೂನ್ 2025

CDSL ಮೂಲಕ ಇ-ಮತದಾನ ಮಾಡ್ಯೂಲ್ ಅನ್ನು ಶುಕ್ರವಾರ, ಜುಲೈ 11, 2025 ರಂದು ಸಂಜೆ 5:00 ಗಂಟೆಯ ನಂತರ ತಕ್ಷಣವೇ ನಿಷ್ಕ್ರಿಯಗೊಳಿಸಲಾಗುವುದು. ಸದಸ್ಯರು ಒಮ್ಮೆ ನಿರ್ಣಯಗಳ ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರಿಗೆ ಅದನ್ನು ನಂತರ ಬದಲಾಯಿಸಲು ಅವಕಾಶವಿರುವುದಿಲ್ಲ.

ಇ-ಮತದಾನಕ್ಕಾಗಿ ವಿವರವಾದ ಸೂಚನೆಗಳನ್ನು ಸೂಚನೆಯ ಭಾಗವಾಗಿ ಒದಗಿಸಲಾಗಿದೆ, ಮತ ಚಲಾಯಿಸುವ ಮೊದಲು ಸದಸ್ಯರು ಅದನ್ನು ಎಚ್ಚರಿಕೆಯಿಂದ ಓದುವಂತೆ ವಿನಂತಿಸಲಾಗಿದೆ. ಸೂಚನೆಯನ್ನು ಅದರ ವಿವರಣಾತ್ಮಕ ಹೇಳಿಕೆಯೊಂದಿಗೆ ಕಂಪನಿಯ ವೆಬ್‌ಸೈಟ್ <https://www.ajax-engg.com/> ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳಾದ www.bseindia.com <https://www.bseindia.com> ಮತ್ತು www.nseindia.com ನಲ್ಲಿಯೂ ಲಭ್ಯವಿದೆ. ಕಂಪನಿಯ ನಿರ್ದೇಶಕರ ಮಂಡಳಿಯು ಅಂಚೆ ಮತಪತ್ರ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಶ್ರೀ ಪ್ರಮೋದ್ ಎಸ್. ಎಂ. ಅಥವಾ ಅವರ ಅನುಪಸ್ಥಿತಿಯಲ್ಲಿ ಸಿ.ಎಸ್. ಬಿಸ್ವಜಿತ್ ಘೋಷ್, ಪಾಲುದಾರರು (ಸದಸ್ಯತ್ವ ಸಂಖ್ಯೆ F7834), ಮೆ/ಸೇ ಬಿಎಂಪಿ & ಕಂ. ಎಲ್‌ಎಲ್‌ಪಿ ಯ ಪ್ರಾಕ್ಟೀಸಿಂಗ್ ಕಂಪನಿ ಸೆಕ್ರೆಟರಿಗಳನ್ನು ಪರಿಶೀಲಕರಾಗಿ ನೇಮಿಸಿದೆ. ಅಂಚೆ ಮತಪತ್ರದ ಮತದಾನ ಫಲಿತಾಂಶಗಳನ್ನು ಪರಿಶೀಲಕರ ವರದಿಯೊಂದಿಗೆ ಇ-ಮತದಾನ ಅವಧಿ ಮುಗಿದ 2 ಕೆಲಸದ ದಿನಗಳೊಳಗೆ ಕಂಪನಿಯು ಘೋಷಿಸುತ್ತದೆ ಮತ್ತು ಕಂಪನಿಯ ಭದ್ರತೆಗಳು ಪಟ್ಟಿ ಮಾಡಲಾದ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ತಿಳಿಸಲಾಗುತ್ತದೆ. ಫಲಿತಾಂಶಗಳನ್ನು ಪರಿಶೀಲಕರ ವರದಿಯೊಂದಿಗೆ ಕಂಪನಿಯ ವೆಬ್‌ಸೈಟ್ <https://www.ajax-engg.com/> ಮತ್ತು ಆರ್‌ಟಿಎ ವೆಬ್‌ಸೈಟ್ <https://in.mpms.mufg.com/> ನಲ್ಲಿಯೂ ಪ್ರಕಟಿಸಲಾಗುವುದು. ಇ-ಮತದಾನ ಸೇರಿದಂತೆ ಅಂಚೆ ಮತಪತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಕುಂದುಕೊರತೆ/ಸ್ಪಷ್ಟೀಕರಣಕ್ಕಾಗಿ, ಸದಸ್ಯರು helpdesk.evoting@cdslindia.com ಗೆ ಇ-ಮೇಲ್ ಮೂಲಕ CDSL ಅನ್ನು ಸಂಪರ್ಕಿಸಬಹುದು ಅಥವಾ ಶ್ರೀಮತಿ ಶ್ರುತಿ ವಿಶ್ವನಾಥ್ ಶೆಟ್ಟಿ ಅವರನ್ನು +91 8296336111 ಗೆ ಸಂಪರ್ಕಿಸಬಹುದು ಅಥವಾ ಅನುಸರಣಾ ಅಧಿಕಾರಿ ಮತ್ತು ಕಂಪನಿ ಕಾರ್ಯದರ್ಶಿಗೆ complianceofficer@ajax-engg.com ಗೆ ಇ-ಮೇಲ್ ಬರೆಯಬಹುದು.

ಎಜಾಕ್ಸ್ ಇಂಜಿನಿಯರಿಂಗ್ ಲಿಮಿಟೆಡ್‌ಗಾಗಿ
(ಹಿಂದೆ ಎಜಾಕ್ಸ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ಸಹಿ/-
ಶ್ರುತಿ ವಿಶ್ವನಾಥ್ ಶೆಟ್ಟಿ
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ
ಸದಸ್ಯತ್ವ ಸಂಖ್ಯೆ: A33617

ದಿನಾಂಕ: 11 ಜೂನ್ 2025
ಸ್ಥಳ: ಬೆಂಗಳೂರು

ಜಾಗತಿಕ ಮಟ್ಟಕ್ಕೆ ರಾಜ್ಯದ ಉತ್ಪಾದನಾ ವಲಯ ಕೊಂಡೊಯ್ಯುವ ಗುರಿ: ಸಚಿವ ಎಂ.ಬಿ.ಪಾಟೀಲ

ಉತ್ಪಾದನಾ ವಲಯ ಬಲವರ್ಧನೆಗೆ ಟಾಸ್ಕ್‌ಫೋರ್ಸ್

ಬೆಂಗಳೂರು: ಮುಂದಿನ ಐದು ವರ್ಷಗಳಲ್ಲಿ ರಾಜ್ಯವನ್ನು ಉತ್ಪಾದನಾ ವಲಯದಲ್ಲಿ ಜಾಗತಿಕ ಮಟ್ಟಕ್ಕೆ ಕೊಂಡೊಯ್ಯಲು ಸರಕಾರವು 6 ಪ್ರಮುಖ ವಲಯಗಳ ಪ್ರಗತಿಗೆ ಪ್ರತ್ಯೇಕ ಟಾಸ್ಕ್ ಫೋರ್ಸ್‌ಗಳನ್ನು ರಚಿಸಲಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಉತ್ಪಾದನಾ ವಲಯದ ಬಲವರ್ಧನೆಗೆ ಆಗಬೇಕಾದ ಕಾಯಕಲ್ಪ ಕುರಿತು 60 ಕಂಪನಿಗಳ 80 ಮುಖ್ಯಸ್ಥರು ಮತ್ತು ಸಿಇಒಗಳೊಂದಿಗೆ ನಡೆದ 'ಉತ್ಪಾದನಾ ಮಂಥನ' ಸಮಾವೇಶದಲ್ಲಿ ಮಾತನಾಡಿ, ರಾಜ್ಯದ ಕೈಗಾರಿಕಾ ವಲಯವು ತಯಾರಿಕಾ ವಲಯಕ್ಕೆ ಹೊರಳಿಕೊಳ್ಳಬೇಕಾಗಿದೆ. ಇದಕ್ಕಾಗಿ ರಫ್ತು ಕೇಂದ್ರಿತವಾಗಿರುವಂಥ 'ಫ್ರೀ ಟ್ರೇಡ್ ವೇರ್–ಹೌಸಿಂಗ್ ಝೋನ್'ಗಳು, ರಫ್ತನ್ನೇ ಮುಖ್ಯವಾಗಿ ಹೊಂದಿರುವ ಕೈಗಾರಿಕಾ ಪಾರ್ಕ್‌ಗಳು, ಬಂದರುಗಳಿಗೆ ತ್ವರಿತ ಸಂಪರ್ಕ ವ್ಯವಸ್ಥೆ ಎಲ್ಲವನ್ನೂ ಕಲ್ಪಿಸಲಾಗುವುದು. ಉದ್ಯಮಿಗಳು ಮಾಡಿರುವ ಶಿಫಾರಸುಗಳನ್ನು ಸರಕಾರದ ಕ್ರಿಯಾ ಯೋಜನೆಯ ಭಾಗವನ್ನಾಗಿ ಮಾಡಿಕೊಳ್ಳಲಾಗುವುದು. ಜತೆಗೆ, ಆರೂ ವಲಯಗಳಲ್ಲಿ ಪ್ರಗತಿ ಸಾಧಿಸಲು ಟಾಸ್ಕ್–ಫೋರ್ಸ್‌ಗಳನ್ನು ರಚಿಸಲಾಗುವುದು. ಇದಕ್ಕಾಗಿ 2030ರ ಹೊತ್ತಿಗೆ 7.5 ಲಕ್ಷ ಕೋಟಿ ರು. ಬಂಡವಾಳ ಹೂಡಿಕೆ ಆಕರ್ಷಿಸುವ ಜತೆಗೆ, 20 ಲಕ್ಷ ಉದ್ಯೋಗ ಸೃಷ್ಟಿಸುವತ್ತ ದಾಪುಗಾಲು ಇಡಬೇಕಾಗಿದೆ. ಮೂರು ತಿಂಗಳ ಬಳಿಕ ಮತ್ತೊಮ್ಮೆ ಸಾಧಕಬಾಧಕ ಚರ್ಚಿಸಲಾಗುವುದು ಎಂದರು.

ಸಚಿವ ಎಂ.ಬಿ.ಪಾಟೀಲ್ ನೇತೃತ್ವದಲ್ಲಿ 'ಉತ್ಪಾದನಾ ಮಂಥನ' ಸಮಾವೇಶ ನಡೆಯಿತು.

ಈ ಸಮಾವೇಶದಲ್ಲಿ ಏರೋಸ್ಪೇಸ್ ಮತ್ತು ಡಿಫೆನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಸೆಮಿಕಂಡಕ್ಟರ್ಸ್, ಕ್ಯಾಪಿಟಲ್ ಗೂಡ್ಸ್ ಮತ್ತು ರೋಬೋಟಿಕ್ಸ್, ಆಟೋ ಮತ್ತು ಎಲೆಕ್ಟ್ರಿಕ್ ವೆಹಿಕಲ್ಸ್, ಟೆಕ್ನಿಕಲ್ ಮತ್ತು ಎಂಎಂಎಫ್ ಬೇಸ್ಡ್ ಟೆಕ್ಸ್‌ಟೈಲ್ಸ್ ಹಾಗೂ ಪಾದರಕ್ಷೆ, ಗೊಂಬೆ ಮತ್ತು ಎಫ್‌ಎಂಸಿಜಿ ಉತ್ಪನ್ನಗಳನ್ನು ಒಳಗೊಂಡಿರುವ ಗ್ರಾಹಕ ಉತ್ಪನ್ನಗಳ ವಲಯಗಳ ಮೇಲೆ ಗಮನ ಕೇಂದ್ರೀಕರಿಸಲಾಗಿತ್ತು. ಇದಕ್ಕೆ ಪೂರಕವಾಗಿ ಒಂದೊಂದು ವಲಯಕ್ಕೂ ಸಂಬಂಧಿಸಿದಂತೆ ಏರ್ಪಡಿಸಿದ್ದ ವಿಚಾರ ಸಂಕಿರಣ ಮತ್ತು ಪ್ರಾತ್ಯಕ್ಷಿಕೆ ಪ್ರದರ್ಶನಗಳಲ್ಲಿ ಸಚಿವರು ಇಡೀ ದಿನ ಇದ್ದು, ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಉತ್ಪಾದನಾ ಮಂಥನದಲ್ಲಿ ಆ್ಯಕ್ಸೆಲ್ ಕಂಪನಿಯ ಸ್ಥಾಪಕ ಪಾಲುದಾರ ಪ್ರಶಾಂತ್ ಪ್ರಕಾಶ್, ಏಕಸ್ ಕಂಪನಿಯ ಮುಖ್ಯಸ್ಥ ಅರವಿಂದ್ ಮೆಳ್ಳಿಗೇರಿ, ಡೆಲ್ಟಾ ಎಲೆಕ್ಟ್ರಾನಿಕ್ಸ್ ವ್ಯವಸ್ಥಾಪಕ ನಿರ್ದೇಶಕ ನಿರಂಜನ್ ನಾಯಕ್, ಅಪ್ಲೈಡ್ ಮೆಟೀರಿಯಲ್ಸ್ ಮುಖ್ಯಸ್ಥ ಅವಿನಾಶ ಅವುಲಾ, ಕ್ರೋನ್ಸ್ ವ್ಯವಸ್ಥಾಪಕ ನಿರ್ದೇಶಕ ಹರೀಶ್ ಹನಗೂಡು, ವಿಂಗ್ಸ್ ಆಗ್ರೋ ಸಿಇಒ ಹಿರೇನ್ ಸೋಧಾ, ಶಾಹಿ ಎಕ್ಸ್‌ಪೋರ್ಟ್ಸ್ ಮುಖ್ಯಸ್ಥ ಪಿ ಬಿ ಆನಂದ್, ನಾರ್ ಬ್ರೆಮ್ಸ್ ಸಿಟಿಒ ಕಿರಣ್ ಕೋಸನಂ ಮತ್ತು ನ್ಯೂಸ್ಪೇಸ್ ಕಂಪನಿಯ ಸಹಸಂಸ್ಥಾಪಕ ದಿಲೀಪ್ ಛಾಬ್ರಿಯಾ, ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಸಿಇಒ ಡಾ.ಮಹೇಶ್ ಇದ್ದರು.

ಇವಿ ವಾಹನ ತಯಾರಿಕೆಗೆ ಬಲ

ವೈಮಾನಿಕ ಕ್ಷೇತ್ರದಲ್ಲಿ ಉತ್ಪಾದಿಸುವಂತಹ ಗುಣಮಟ್ಟದ ಸ್ಟೀಲ್ ಅಲಾಯ್ ಮತ್ತು ಕಾಂಪೋಸಿಟ್ ಮೆಟೀರಿಯಲ್‌ಗಳಿಗೆ ಪ್ರತ್ಯೇಕ ಸೌಲಭ್ಯ ಒದಗಿಸಬೇಕು ಎಂಬ ಬೇಡಿಕೆ ಪರಿಶೀಲಿಸಲಾಗುವುದು. ಬ್ಯಾಟರಿ ಮತ್ತು ಇತರ ಬಿಡಿಭಾಗಗಳನ್ನು ತಯಾರಿಸುವ ಕೈಗಾರಿಕಾ ಕ್ಲಸ್ಟರುಗಳನ್ನು ಅಭಿವೃದ್ಧಿಪಡಿಸುವ ಮೂಲಕ ವಿದ್ಯುತ್‌ಚಾಲಿತ ವಾಹನ ತಯಾರಿಕೆ ಕ್ಷೇತ್ರಕ್ಕೆ ಬಲ ತುಂಬಲಾಗುವುದು. ಅಲ್ಲದೆ, ಗ್ರೀನ್ ಹೈಡ್ರೋಜನ್, ಮೆಡ್-ಟೆಕ್, ವೈಮಾಂತರಿಕ್ಷ ಎಂಆರ್‌ಒ, ಪ್ರಿಸಿಷನ್ ಎಂಜಿನಿಯರಿಂಗ್ ಮತ್ತು ಸ್ಪೇಸ್-ಟೆಕ್ ಕ್ಷೇತ್ರಗಳಲ್ಲಿ ರಾಜ್ಯವು ಅಗ್ರಸ್ಥಾನದಲ್ಲಿರುವಂತೆ ನೋಡಿಕೊಳ್ಳಲಾಗುವುದು ಎಂದು ಸಚಿವ ಎಂ.ಬಿ. ಪಾಟೀಲ್ ಹೇಳಿದರು.

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 334/2025

ಅರ್ಜಿದಾರರು: 1. ಶ್ರೀ ನಾಗವೇಣಿ ಬಿನ್ ಲೇಟ್ ರಾಮರಾಜೇ ಅರಸು ವಾಸ: ಹೊಸಕೆರೆದೊಡ್ಡಿ ಗ್ರಾಮ, ಹೊರಳಗಲ್ಲು ಪೋಸ್ಟ್, ಕಸಬಾ ಹೋಬಳಿ, ಕನಕಪುರ ತಾಲ್ಲೂಕು – 17 ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಾಯಿಯವರಾದ ಶ್ರೀಮತಿ ಗೌರಮ್ಮಣ್ಣಿ ಕೋಂ ಲೇಟ್ ರಾಮರಾಜೇ ಅರಸು ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಹೊಸಕೆರೆದೊಡ್ಡಿ ಗ್ರಾಮದಲ್ಲಿ ದಿನಾಂಕ 10–05–2007 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 14–07–2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜೂನ್ 9ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಮುಜಾಮಿಲ್ ಅಹಮದ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 09/06/2025

ಮಾನ್ಯ ಗೌರವಾನ್ವಿತ 2ನೇ ಅಪರ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಲಯ ಕನಕಪುರ
ಸಿ.ಮಿಸ್.ನಂ. 333/2025

ಅರ್ಜಿದಾರರು: 1. ಶ್ರೀ ನಾಗವೇಣಿ ಬಿನ್ ಲೇಟ್ ರಾಮರಾಜೇ ಅರಸು ವಾಸ: ಹೊಸಕೆರೆದೊಡ್ಡಿ ಗ್ರಾಮ, ಹೊರಳಗಲ್ಲು ಪೋಸ್ಟ್, ಕಸಬಾ ಹೋಬಳಿ, ಕನಕಪುರ ತಾಲ್ಲೂಕು – 17 ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ಧ

ಪ್ರತಿ ಅರ್ಜಿದಾರರು: ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು, ಮತ್ತು ಇನ್ನೊಬ್ಬರು.

ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ತಂದೆಯವರಾದ ಶ್ರೀ ರಾಮರಾಜೇ ಅರಸು ಬಿನ್ ಲೇಟ್ ಎ.ಆರ್.ರಾಮರಾಜೇ ಅರಸು ರವರು, ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಹೊಸಕೆರೆದೊಡ್ಡಿ ಗ್ರಾಮದಲ್ಲಿ ದಿನಾಂಕ 18–11–2013 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿಯಾಗಲೀ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 14–07–2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥ ಗೊಳಿಸಲಾಗುವುದು.

2025ರ ಜೂನ್ 9ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ

ಅರ್ಜಿದಾರರ ಪರ ವಕೀಲರು
ಮುಜಾಮಿಲ್ ಅಹಮದ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 09/06/2025

ಮುಡಾ ಆಸ್ತಿ ತಾತ್ಕಾಲಿಕ ಮುಟ್ಟುಗೋಲು ಹಾಕಿದ ಜಾರಿ ನಿರ್ದೇಶನಾಲಯ

100 ಕೋಟಿ ಮೌಲ್ಯದ ಮುಡಾ ಸ್ಥಿರಾಸ್ತಿ ಜಪ್ತಿ



ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿನ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ವಸತಿ ಸಹಕಾರಿ ಸಂಘ, ಮುಡಾ ಅಧಿಕಾರಿಗಳು ಸೇರಿದಂತೆ ಪ್ರಭಾವಿಗಳ ಹೆಸರಿನಲ್ಲಿ ನೋಂದಣಿಯಾಗಿದ್ದ ಸುಮಾರು 100 ಕೋಟಿ ರು ಮೌಲ್ಯದ ಸ್ಥಿರಾಸ್ತಿಯನ್ನ ಜಾರಿ ನಿರ್ದೇಶನಾಲಯ ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ.

2002ರ ಅಕ್ರಮ ಹಣ ವರ್ಗಾವಣೆ ತಡೆ ಕಾಯಿದೆಯ ನಿಬಂಧನೆಗಳಡಿ ಮುಡಾದ ನಿವೇಶನಗಳು ಸೇರಿದಂತೆ 92 ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅನರ್ಹ ಫಲಾನುಭವಿಗಳನ್ನು ಗುರುತಿಸಿ, ಸರಕಾರಿ ಆದೇಶಗಳನ್ನು ನೇರವಾಗಿ ಉಲ್ಲಂಘಿಸಿ ನಕಲಿ / ಅಪೂರ್ಣ ದಾಖಲೆಗಳನ್ನು ಬಳಸಿ ನಿವೇಶನಗಳನ್ನ ಹಂಚಿಕೆ ಮಾಡಲಾಗಿದೆ. ಕೆಲವು ಸಂದರ್ಭಗಳಲ್ಲಿ ಹಿಂದಿನ ದಿನಾಂಕಗಳನ್ನ ನಮೂದಿಸಿ ಹಂಚಿಕೆ ಪತ್ರಗಳನ್ನ ನೀಡಲಾಗಿದೆ. ಮತ್ತು ಈ ಅಕ್ರಮ ಹಂಚಿಕೆಗಳಿಗೆ ಪ್ರತಿಯಾಗಿ ಸಹಕಾರಿ ಸಂಘ ಮತ್ತು ಹಂಚಿಕೆ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಅಧಿಕಾರಿಗಳ ಸಂಬಂಧಿಕರು/ಸಹವರ್ತಿಗಳ ಬ್ಯಾಂಕ್ ಖಾತೆಗಳಿಗೆ ಹಣ ರವಾನಿಸಲಾಗಿದೆ ಎಂದು ಇ.ಡಿ ಉಲ್ಲೇಖಿಸಿದೆ. ವಿವಿಧ ಕಾನೂನುಗಳು, ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಮೋಸದ ವಿಧಾನಗಳ ಮೂಲಕ ಮುಡಾ ಸೈಟ್‌ಗಳ ಹಂಚಿಕೆಯಲ್ಲಿ ದೊಡ್ಡ ಪ್ರಮಾಣದ ಹಗರಣ ನಡೆದಿರುವುದನ್ನ ಇ.ಡಿ ತನಿಖೆ ಬಹಿರಂಗಪಡಿಸಿದೆ. ಪರಿಹಾರದ ನಿವೇಶನಗಳನ್ನ ಅರ್ಹರಲ್ಲದ ವ್ಯಕ್ತಿ, ಸಂಸ್ಥೆಗಳಿಗೆ ಅಕ್ರಮವಾಗಿ ಹಂಚಿಕೆ ಮಾಡಿರುವುದರಲ್ಲಿ ಮುಡಾದ ಮಾಜಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಸೇರಿದಂತೆ ಇತರರು ಪ್ರಮುಖ ಪಾತ್ರವಹಿಸಿದ್ದಾರೆ. ಪ್ರತಿಯಾಗಿ ಲಂಚ ಪಡೆದಿದ್ದಕ್ಕೆ ಸಂಬಂಧಿಸಿದ ಪುರಾವೆಗಳು, ನಗದು, ಬ್ಯಾಂಕ್ ವರ್ಗಾವಣೆ, ಚರ/ಸ್ಥಿರ ಆಸ್ತಿಗಳ ರೂಪದಲ್ಲಿ ಅಕ್ರಮವಾಗಿ ಹಂಚಿಕೆ ಮಾಡಿದ್ದಕ್ಕೆ ಸಂಬಂಧಿಸಿದ ಪುರಾವೆಗಳನ್ನು ಸಂಗ್ರಹಿಸಲಾಗಿದೆ ಎಂದು ಇ.ಡಿ ತಿಳಿಸಿದೆ.

ಈ ಹಿಂದೆ 160 ನಿವೇಶನ ಜಪ್ತಿ

ಈ ಹಿಂದೆ ಸುಮಾರು 300 ಕೋಟಿ ರು. ಮೌಲ್ಯದ 160 ಮುಡಾ ನಿವೇಶನಗಳನ್ನ ಮುಟ್ಟುಗೋಲು ಹಾಕಿಕೊಳ್ಳಲಾಗಿತ್ತು. ಈ 92 ಸ್ಥಿರಾಸ್ತಿಗಳ ಬಳಿಕ ಒಟ್ಟು ಸುಮಾರು 400 ಕೋಟಿ ರು.ಗಳಷ್ಟು ಮುಟ್ಟುಗೋಲು ಹಾಕಿಕೊಂಡಂತಾಗಿದೆ ಎಂದು ಇ.ಡಿ ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಇಂದಿನಿಂದ ಐಸಿಸಿ ಟೆಸ್ಟ್

3ನೇ ಆವೃತ್ತಿಯ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯಕ್ಕೆ ಲಾರ್ಡ್ಸ್ ಮೈದಾನ ಅಣಿಗೊಂಡಿದ್ದು, ಬುಧವಾರದಿಂದ ದಕ್ಷಿಣ ಆಫ್ರಿಕಾ-ಆಸ್ಟ್ರೇಲಿಯ ತಂಡಗಳ ನಡುವಿನ ಹಣಾಹಣಿ ನಡೆಯಲಿದೆ. ಆಸ್ಟ್ರೇಲಿಯಾ 2 ಬಾರಿ ಟೆಸ್ಟ್ ಚಾಂಪಿಯನ್ ಆಗಿದ್ದು, ದ.ಆಫ್ರಿಕಾ ಚೊಚ್ಚಲ ಐಸಿಸಿ ಕಪ್ ಗೆಲುವಿಗಾಗಿ ಎದುರು ನೋಡುತ್ತಿದೆ.

ಮಾಲ್ಡೀವ್ಸ್‌ಗೆ ಕತ್ರಿನಾ ಪ್ರವಾಸಿ ರಾಯಭಾರಿ

ಮಾಲ್ಡೀವ್ ಜಾಗತಿಕ ಪ್ರವಾಸೋದ್ಯಮ ರಾಯಭಾರಿಯಾಗಿ ನಟಿ ಕತ್ರಿನಾ ಕೈಫ್ ಅವರನ್ನು ಆಯ್ಕೆ ಮಾಡಿದೆ. ಈ ಮೂಲಕ ಭಾರತೀಯ ಪ್ರವಾಸಿಗರನ್ನು ಸೆಳೆಯಲು ಮುಂದಾಗಿದೆ.

ಸೊಂಪಾದ ಪುಟಗಳು

ಥೀಬ್ಸ್‌ನಿಂದ ಹಸ್ತಿನಾವತಿವರೆಗೆ ಕಾಮ, ಪ್ರೇಮ ಮತ್ತು ಪ್ರೀತಿ!
ಹಿಂದಿರುಗಿ ನೋಡಿದಾಗ
ಡಾ. ನಾ.ಸೋಮೇಶ್ವರ 6

ಆಡಳಿತ ಸೇವೆ
ಆಡಳಿತದಲ್ಲಿ ಇರುವವರ ಸೇವೆ ಅಲ್ಲ!
ಲೋಕಮತ
ಲೋಕೇಶ್ ಕಾಯರ್ಗ 7

ದಾರಿದೀಪೋಕ್ತಿ



ಸಂತಸ ಅಥವಾ ನೆಮ್ಮದಿ ಎನ್ನುವುದನ್ನು ಅರಸಿಕೊಂಡು ಹೋದರೆ ಸಿಗುವುದಿಲ್ಲ. ಅವು ನಮ್ಮೊಳಗೇ ಇರುವಂಥದ್ದು. ಅನೇಕ ಮಂದಿ ಅವನ್ನು ಹುಡುಕುವುದನ್ನೇ ಕಾಯಕ ಮಾಡಿಕೊಂಡಿರುತ್ತಾರೆ. ಇನ್ನು ಕೆಲವರು ದುಬಾರಿ ವಸ್ತುವಿನಲ್ಲಿ ಅವು ಇರಬಹುದು ಎಂದು ಭಾವಿಸಿರುತ್ತಾರೆ.

ವಕ್ರತುಂಡೋಕ್ತಿ

ಹೆಂಡತಿಯಂಥ ವ್ಯಕ್ತಿ ಜಗತ್ತಿನಲ್ಲಿ ಮತ್ತೊಬ್ಬಳಿಲ್ಲ. ಅವಳ ಹಾಗೆ ಬೇರೆ ಯಾರೂ ಗೊರಕೆ ಹೊಡೆಯಲಾರರು.

ಹೈಕಮಾಂಡ್ ಸೂಚನೆ ಬಳಿಕ ಸಿಎಂ ಘೋಷಣೆ

ಮರು ಜಾತಿಗಣತಿ

90 ದಿನಗಳಲ್ಲಿ ಗಣತಿ ಪೂರ್ಣ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ರಾಜಕೀಯದಲ್ಲಿ ತೀವ್ರ ವಿವಾದಕ್ಕೆ ಕಾರಣವಾಗಿದ್ದ, ಸಚಿವ ಸಂಪುಟದಲ್ಲಿ 'ಭಿನ್ನರಾಗ'ಕ್ಕೆ ನಾಂದಿ ಹಾಡಿದ್ದ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆಯನ್ನು ಹೊಸದಾಗಿ ಮಾಡುವ ಮಹತ್ವದ ತೀರ್ಮಾನಕ್ಕೆ ಕಾಂಗ್ರೆಸ್ ಸರಕಾರ ಬಂದಿದೆ.

ದೆಹಲಿ ಪ್ರವಾಸದಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರನ್ನು ಭೇಟಿಯಾದ ಸಮಯದಲ್ಲಿ ಜಾತಿ ಗಣತಿಯ ವಿಷಯ ಪ್ರಸ್ತಾಪವಾಗಿದೆ. ಈ ವೇಳೆ ಪರ-ವಿರೋಧ ಚರ್ಚೆಗಳು ಶುರುವಾಗುತ್ತಿದ್ದಂತೆ, ಹಾಲಿ ಗಣತಿಯನ್ನು ರದ್ದುಗೊಳಿಸಿ ಹೊಸದಾಗಿ ಮಾಡಲು ಕ್ರಮವಹಿಸಿ ಎಂದು ರಾಹುಲ್ ಗಾಂಧಿ ಸೂಚನೆ ನೀಡಿದ್ದಾರೆ. ಆದ್ದರಿಂದ ರಾಜ್ಯಾದ್ಯಂತ ಹೊಸದಾಗಿ ಜಾತಿ ಗಣತಿ ನಡೆಸಲು ರಾಜ್ಯ ಸರಕಾರ ತೀರ್ಮಾನಿಸಿದೆ. ಶಾಶ್ವತ ಹಿಂದುಳಿದ ಆಯೋಗ ಸಲ್ಲಿಸಿರುವ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯನ್ನು ಸಚಿವ ಸಂಪುಟದ ಸದಸ್ಯರು ಮಾತ್ರವಲ್ಲದೇ, ವಿವಿಧ ಸಂಘಟನೆಗಳು, ಸ್ವಾಮೀಜಿಗಳು ವಿರೋಧಿಸುತ್ತಿದ್ದಾರೆ ಎನ್ನುವುದನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ರಾಹುಲ್ ಗಾಂಧಿ ಗಮನಕ್ಕೆ ತಂದಿದ್ದಾರೆ. ಸಮೀಕ್ಷೆಯ ವರದಿಯನ್ನು ಸಲ್ಲಿಸಿಯೇ 8 ವರ್ಷ ಕಳೆದಿರುವುದರಿಂದ ಈ ಸಮೀಕ್ಷೆಯನ್ನು ತಾತ್ವಿಕವಾಗಿ ಒಪ್ಪಿಕೊಂಡರೂ ಮರು ಸಮೀಕ್ಷೆ ನಡೆಸುವಂತೆ ರಾಗಾ ಸೂಚನೆ ನೀಡಿದ್ದಾರೆ. ಇದರ ಬೆನ್ನಲ್ಲೇ, ಸಿಎಂ ಸಿದ್ದರಾಮಯ್ಯ ಜಾತಿ ಗಣತಿಯನ್ನು ಹೊಸದಾಗಿ ಮಾಡಲು ಆದೇಶ ಹೊರಡಿಸಿದ್ದಾರೆ. → 4

ದೆಹಲಿಯಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಚರ್ಚಿಸಿದರು.

ಹಲವು ಗೊಂದಲ

- ಕೇಂದ್ರ ಗಣತಿ ಮಧ್ಯೆ ರಾಜ್ಯ ಗಣತಿಗೆ ಅವಕಾಶವಿದೆಯೇ?
- ಹಾಲಿ ಒಳಮೀಸಲು ಗಣತಿ ಕಥೆಯೇನು?
- 90 ದಿನಗಳಲ್ಲಿ ಗಣತಿ ನಡೆಸಿ, ವರದಿ ನೀಡಲು ಸಾಧ್ಯವೇ?
- ಮರು ಗಣತಿ ಆಧಾರದಲ್ಲಿ ಒಳ ಮೀಸಲು ಸಮೀಕ್ಷೆ ?

ಜಾತಿ ಗಣತಿಯ ದತ್ತಾಂಶ 10 ವರ್ಷ ಹಳೆಯದಾಗಿರುವುದರಿಂದ ಮರುಗಣತಿ ಮಾಡಲು ತೀರ್ಮಾನಿಸಲಾಗಿದೆ. ಈಗಾಗಲೇ ಪರಿಶಿಷ್ಟ ಜಾತಿಗಳ ಜನಗಣತಿ ನಡೆದಂತೆ, ಇತರೆ ಜಾತಿಗಳ ಗಣತಿಯನ್ನು ಹೊಸದಾಗಿ ಕೈಗೊಳ್ಳಲು ನಿರ್ಧರಿಸಲಾಗಿದೆ. ಸಮೀಕ್ಷಾ ಕಾರ್ಯವನ್ನು 90 ದಿನದೊಳಗೆ ಪೂರ್ಣಗೊಳಿಸಿ ವರದಿ ಪಡೆಯಲಾಗುವುದು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಶುಭಾಂಶು ಅಂತರಿಕ್ಷಯಾನ ಇಂದು

ದೆಹಲಿ: ಭಾರತದ ಗಗನಯಾತ್ರಿ, ಶುಭಾಂಶು ಶುಕ್ಲಾ ಮತ್ತು ಕಮಾಂಡರ್ ಪೆಗ್ಗಿ ವಿಟ್ಸನ್, ಹಂಗರಿಯ ಟಿಬೊರ್ ಕಾಪು ಹಾಗೂ ಪೋಲೆಂಡ್‌ನ ಸ್ಲಾವೋಸ್ ಯು.ವಿಸ್ನಿವ್‌ಸ್ಕಿ ಜೂನ್ 11ರಂದು ಸಂಜೆ 5.30ಕ್ಕೆ ಅಂತರಿಕ್ಷಯಾನ ಕೈಗೊಳ್ಳಲಿದ್ದಾರೆ. ಫ್ಲಾರಿಡಾದಲ್ಲಿರುವ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಸ್ಪೇಸ್ ಎಕ್ಸ್‌ನ ಫಾಲ್ಕನ್-9 ರಾಕೆಟ್‌ನ ಉಡಾವಣೆಯು ಜೂನ್ 10 ರಂದು ಸಂಜೆ ನಿಗದಿಯಾಗಿತ್ತು. ಹವಾಮಾನ ವೈಪರೀತ್ಯದ ಕಾರಣಕ್ಕೆ ಉಡಾವಣೆಯನ್ನು ಮುಂದೂಡಲಾಗಿತ್ತು ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಅವರು ತಿಳಿಸಿದ್ದಾರೆ.

ಹೈಕಮಾಂಡ್‌ಗೆ ಸಿಎಂ, ಡಿಸಿಎಂ ವಿವರಣೆ
ಪರಿಷತ್ ನಾಮನಿರ್ದೇಶನದ ಬಗ್ಗೆಯೂ ಚರ್ಚೆ

ಕೈ ವರಿಷ್ಠರಿಗೆ ಕಾಲ್ತುಳಿತದ ವರದಿ ಸಲ್ಲಿಕೆ



- ಸಿಎಂ ಅಧಿಕೃತ ಆಹ್ವಾನದ ಮೇರೆಗೆ ರಾಜ್ಯಪಾಲರು ಭಾಗಿ: ರಾಜಭವನ ಸ್ಪಷ್ಟನೆ
- ನಾಳೆ ಮಧ್ಯಾಹ್ನದೊಳಗೆ ವರದಿಗೆ ಹೈ ಸೂಚನೆ
- ಭುಮಿಕ್ ನಿವಾಸಕ್ಕೆ ಅಶೋಕ ಭೇಟಿ, ಸಾಂತ್ವನ
- ಸರಕಾರದ ವೈಫಲ್ಯ ಖಂಡಿಸಿ ಜೂನ್ 13ರಿಂದ ರಾಜ್ಯಾದ್ಯಂತ ಬಿಜೆಪಿ ಹೋರಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಂತಾರಾಷ್ಟ್ರೀಯ ಮಟ್ಟದಲ್ಲಿ ತೀವ್ರ ಚರ್ಚೆಗೆ ಗ್ರಾಸವಾದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿನ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವಿವರಣೆ ನೀಡಿದ್ದಾರೆ. ಬೆಂಗಳೂರಿನ ಕಾಲ್ತುಳಿತ ಪ್ರಕರಣದಿಂದ ಕಾಂಗ್ರೆಸ್ ಸರಕಾರದ ವಿರುದ್ಧ ರಾಷ್ಟ್ರೀಯ ಮಟ್ಟದಲ್ಲಿ ಕಟುಟೀಕೆಗಳು ಶುರುವಾಗಿದ್ದವು. ಇದರಿಂದ ಪಕ್ಷದ ವರ್ಚಸ್ಸಿಗೆ ರಾಷ್ಟ್ರೀಯ ಮಟ್ಟದಲ್ಲಿ ಧಕ್ಕೆ ಬಂದಿದ್ದರಿಂದ ಪ್ರಕರಣವನ್ನು ರಾಹುಲ್ ಗಾಂಧಿ ಅವರು ಗಂಭೀರವಾಗಿ ಪರಿಗಣಿಸಿದ್ದರು. → 4

ದಿಲ್ಲಿಗೆ ದಂಡು

ಸಂಪುಟ ಪುನಾರಚನೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚೆ ಬೆನ್ನಲ್ಲೇ ಲಕ್ಷ್ಮೀ ಹೆಬ್ಬಾಳ್ಕರ್, ಸತೀಶ್ ಜಾರಕಿಹೊಳಿ ಸೇರಿದಂತೆ ಹಲವು ಸಚಿವರು ಹಾಗೂ ಆಕಾಂಕ್ಷಿಗಳು ದೆಹಲಿಗೆ ತೆರಳಿದ್ದಾರೆ.

ಮುಡಾ: ₹100 ಕೋಟಿ ಆಸ್ತಿ ಜಪ್ತಿ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿನ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ವಸತಿ ಸಹಕಾರಿ ಸಂಘ, ಮುಡಾ ಅಧಿಕಾರಿಗಳು ಸೇರಿದಂತೆ ಪ್ರಭಾವಿಗಳ ಹೆಸರಿನಲ್ಲಿ ನೋಂದಣಿಯಾಗಿದ್ದ ಸುಮಾರು 100 ಕೋಟಿ ರು. ಮೌಲ್ಯದ ಸ್ಥಿರಾಸ್ತಿಯನ್ನು ಜಾರಿ ನಿರ್ದೇಶನಾಲಯ ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಂಡಿದೆ. 2002ರ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ ನಿಬಂಧನೆಗಳಡಿ ಮುಡಾದ ನಿವೇಶನಗಳು ಸೇರಿದಂತೆ 92 ಸ್ಥಿರಾಸ್ತಿಗಳನ್ನು ತಾತ್ಕಾಲಿಕವಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇಡಿ ತಿಳಿಸಿದೆ.

ಮುಸ್ಲಿಂ ಜನಸಂಖ್ಯೆ ಶೇ.21ರಷ್ಟು ಹೆಚ್ಚಳ

ವಾಷಿಂಗ್ಟನ್: ವಿಶ್ವದಲ್ಲಿನ ಮುಸ್ಲಿಂ ಜನಸಂಖ್ಯೆ ಅತ್ಯಂತ ವೇಗವಾಗಿ ಹೆಚ್ಚಳವಾಗುತ್ತಿದ್ದು, ಕಳೆದ ದಶಕದಲ್ಲಿ ಶೇ.21ರಷ್ಟು ವೃದ್ಧಿ ಕಂಡಿದೆ. ಇದೇ ವೇಳೆ ಯಾವುದೇ ಧರ್ಮಕ್ಕೂ ಸೇರದವರ ಸಂಖ್ಯೆಯೂ ಶೇ.16.57ರಷ್ಟು ಪ್ರಮಾಣದಲ್ಲಿ ಏರಿಕೆ ಕಂಡಿದೆ. ಇನ್ನೊಂದೆಡೆ, ವಿಶ್ವದ ಜನ ಸಂಖ್ಯೆಯಲ್ಲಿ ನಂ.1 ಮತ್ತು ನಂ.3ನೇ ಸ್ಥಾನದಲ್ಲಿರುವ ಕ್ರೈಸ್ತರು (ಶೇ.5.58) ಮತ್ತು ಹಿಂದೂಗಳ (ಶೇ.11.76) ಜನಸಂಖ್ಯೆ ಹೆಚ್ಚಳದ ಗತಿ ಬಹಳ ಕಡಿಮೆ ಇದೆ. ಬೌದ್ಧ ಧರ್ಮೀಯರ ಸಂಖ್ಯೆ ಇಳಿಮುಖವಾಗುತ್ತಿದೆ.

ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ
ಕೇಂದ್ರ ಪರಿಹಾರ ಸಮಿತಿ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರವು ನಿರ್ಗತಿಕರು ಮತ್ತು ಭಿಕ್ಷುಕರ ಬಗ್ಗೆ ಕಾಳಜಿ ವಹಿಸುತ್ತಿದೆ.

ನಿಮಗೆ ಯಾರಾದರೂ ಭಿಕ್ಷೆ ಬೇಡುತ್ತಿರುವುದು ಕಂಡುಬಂದಲ್ಲಿ, ದಯವಿಟ್ಟು
9482 300 400ಗೆ ಕರೆ ಮಾಡಿ.

ಭಿಕ್ಷಾಟನೆ ನಿರ್ಮೂಲನೆಗಾಗಿ ಸಹಕರಿಸಿ
ಕರ್ನಾಟಕ ಭಿಕ್ಷಾಟನೆ ನಿಷೇಧ ಕಾಯ್ದೆ 1975 ರಂತೆ ಭಿಕ್ಷಾಟನೆ ಅಪರಾಧ.
ಭಿಕ್ಷುಕರ ಕರದಿಂದ ರಾಜ್ಯದಲ್ಲಿ 14 ಸುಸಜ್ಜಿತ ನಿರಾಶ್ರಿತರ ಪರಿಹಾರ ಕೇಂದ್ರಗಳನ್ನು ನಿರ್ವಹಿಸಲಾಗುತ್ತಿದೆ. ಇಲ್ಲಿ ಸರಾಸರಿ 3500 ಭಿಕ್ಷುಕರಿಗೆ ಪುನರ್ವಸತಿ ಕಲ್ಪಿಸಲಾಗಿದೆ.

ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ ರವರು ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಉಪಸ್ಥಿತರಿರುವರು.

ಜನ ಜಾಗೃತರಾದಲ್ಲಿ, ಕರ್ನಾಟಕ ಭಿಕ್ಷುಕ ಮುಕ್ತ ರಾಜ್ಯ ವಾದೀತು.

"ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು" – ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

ಕೇಂದ್ರ ಪರಿಹಾರ ಸಮಿತಿ
ಮಾಗಡಿ ರಸ್ತೆ, ಬೆಂಗಳೂರು- 560 091

ದೂ : 080-29556626, 080-29554646
ಇ-ಮೇಲ್ : crcbng@yahoo.co.in
ವೆಬ್‌ಸೈಟ್ : www.crcbng.karnataka.gov.in

ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು

ಮೊದಲು ಬಿಜೆಪಿಗರು ರಾಜೀನಾಮೆ ನೀಡಲಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಾಲ್ತುಳಿತದ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುವ ಮೊದಲು ಬಿಜೆಪಿಯವರು ತಾವು ಮಾಡಿರುವ ಘೋರ ಅಪರಾಧಗಳಿಗೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಲಿ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಹಾರಾಷ್ಟ್ರದಲ್ಲಿ ಪೊಲೀಸ್ ಠಾಣೆಯ ಮುಂದೆ ಜನ ಜಮಾಯಿಸಿ ಐದು ಮಂದಿ ಮೃತಪಟ್ಟಿದ್ದಾರೆ. ಅದರ ಬಗ್ಗೆ ಯಾವುದೇ ರಾಷ್ಟ್ರೀಯ ಮಾಧ್ಯಮಗಳು ಚರ್ಚೆ ಮಾಡುತ್ತಿಲ್ಲ. ಅಲ್ಲಿನ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳು ಸುದ್ದಿಗೋಷ್ಠಿ ನಡೆಸಿ ಘಟನೆ ಬಗ್ಗೆ ಮಾಹಿತಿ ನೀಡಿಲ್ಲ. ಬಿಜೆಪಿಯವರಾರೂ ರಾಜೀನಾಮೆ ಕೇಳಿಲ್ಲ, ಉತ್ತರ ಪ್ರದೇಶದ ಕುಂಭಮೇಳದಲ್ಲಿ ಕಾಲ್ತುಳಿತದಲ್ಲಿ ಮೃತಪಟ್ಟವರಿಗೆ ಈವರೆಗೂ ಪರಿಹಾರ ನೀಡಿಲ್ಲ ಎಂದು ನ್ಯಾಯಾಲಯ ಛೀಮಾರಿ ಹಾಕಿದೆ. ಕುಂಭಮೇಳ ಕಾಲ್ತುಳಿತಕ್ಕೆ ಅಲ್ಲಿನ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆಗಲಿ ಕಾರ್ಯಕ್ರಮ ಆಯೋಜನೆ ಮಾಡಿ ಸಾಧಿಸಿದ್ದೇವೆ ಎಂದು ಬಿಂಬಿಸಿಕೊಂಡಿದ್ದ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹಸಚಿವ ಅಮಿತ್ ಶಾ ಸೇರಿದಂತೆ ಬೇರೆ ಯಾರಾದರೂ ರಾಜೀನಾಮೆ ಕೊಟ್ಟಿದ್ದಾರೆಯೇ? ಎಂದು ಪ್ರಶ್ನಿಸಿದರು.

ಮಂಗಳೂರಿನ ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣವನ್ನು ಎನ್‌ಐಎ ತನಿಖೆ ನಡೆಸುವುದರ ಹಿಂದೆ ರಾಜಕೀಯ ದುರುದ್ದೇಶವಿದೆ. ಬಿಜೆಪಿಯವರಿಗೆ ಹೆಣದ ಮೇಲೆ ರಾಜಕೀಯ ಮಾಡುವುದು ಒಂದು ಕೆಟ್ಟ ಅಭ್ಯಾಸ. ಹಿಂದೆ ಪರೇಶ್ ಮೇಸ್ತ ಸಾವಿನ ಪ್ರಕರಣವನ್ನು ರಾಜಕೀಯಕ್ಕೆ ಬಳಸಿಕೊಂಡು ಸಾರ್ವಜನಿಕರ ನೆಮ್ಮದಿ ಹಾಳು ಮಾಡಿದ್ದರು. ರಾಜ್ಯದ ಪೊಲೀಸರ ವರದಿಯಲ್ಲೂ ಆ ವೇಳೆ ಅನುಮಾನಿಸಲಾಗಿತ್ತು. ಕೊನೆಗೆ ಸಿಬಿಐ ತನಿಖೆ ಕೂಡ ರಾಜ್ಯದ ಪೊಲೀಸರ ವರದಿಯನ್ನೇ ಅಂಗೀಕರಿಸಿದೆ. ಅದರ ನೈತಿಕ ಹೊಣೆ ಹೊತ್ತು ಬಿಜೆಪಿಯ ಶೋಭಾ ಕರಂದ್ಲಾಜೆಯಾಗಲಿ ಅಥವಾ ಬೇರೆ ಯಾವುದೇ ಸಂಸದರು ರಾಜೀನಾಮೆ ನೀಡಲಿಲ್ಲವೇಕೆ? ಎಂದು ಪ್ರಶ್ನಿಸಿದರು.

ಬಿಜೆಪಿಯವರಿಂದ ಅಪಪ್ರಚಾರ

ಆರ್‌ಸಿಬಿ ವಿಜಯೋತ್ಸವದ ವೇಳೆ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿಯವರು ನೀಡಿದ್ದ ಹೇಳಿಕೆಯನ್ನು ತಿರುಚಿ ಬಿಜೆಪಿಯವರು ಅಪಪ್ರಚಾರ ಮಾಡುತ್ತಿದ್ದಾರೆ. ಹೇಳಿಕೆಗಳನ್ನು ತಿರುಚುವುದರಲ್ಲಿ ಅವರು ನಿಸ್ಸೀಮರು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮ ಸರಕಾರದ್ದಾಗಿರಲಿಲ್ಲ. ಖಾಸಗಿ ಸಂಸ್ಥೆಯವರ ಪತ್ರ ಆಧರಿಸಿ ಸಿಬ್ಬಂದಿಗಳನ್ನು ಒದಗಿಸುವುದು ನಮ್ಮ ಜವಾಬ್ದಾರಿ. ಈ ರೀತಿ ಹೇಳಿರುವುದರಲ್ಲಿ ಮುಖ್ಯಮಂತ್ರಿ ಯವರ ತಪ್ಪೇನಿದೆ? ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಲೋಕಾ ಬಲೆಗೆ ಪಿಎಸ್ಐ

ಕೋಲಾರ: ಲೋಕಾಯುಕ್ತ ಎಸ್ಪಿ ಧನಂಜಯ ಅವರು ನಡೆಸಿದ ಎರಡು ಪ್ರತ್ಯೇಕ ದಾಳಿಯಲ್ಲಿ ಠಾಣೆಯಲ್ಲೇ ಲಂಚ ಪಡೆಯುತ್ತಿದ್ದ ಸಬ್‌ಇನ್ಸ್‌ಪೆಕ್ಟರ್ ಸೇರಿದಂತೆ ನಾಲ್ವರನ್ನು ಬಂಧಿಸಿ ಜೈಲಿಗೆ ಅಟ್ಟಿದ್ದಾರೆ.

ಮುಳಬಾಗಲು ತಾಲೂಕಿನ ನಂಗಲಿ ಪೊಲೀಸ್ ಠಾಣೆಯಲ್ಲಿ ಮಾಮೂಲಿ ಪಡೆದುಕೊಳ್ಳುತ್ತಿದ್ದ ಸಬ್ ಇನ್ಸ್‌ಪೆಕ್ಟರ್ ಅರ್ಜುನ್ ಗೌಡ ಮತ್ತು ಕಾನ್ಸ್‌ಟೇಬಲ್ ಸುರೇಶ್ ಅವರನ್ನು ಬಂಧಿಸಲಾಗಿದೆ. ಬಾರ್ ಮಾಲೀಕ ಪ್ರಶಾಂತ್ ದೂರು ದಾಖಲಿಸಿದ್ದರು. ತಿಂಗಳಿಗೆ 35 ಸಾವಿರ ರು. ಮಾಮೂಲಿ ಫಿಕ್ಸ್ ಮಾಡಿದ್ದ ಪೊಲೀಸರು ಈಗಾಗಲೇ 20 ಸಾವಿರ ರು. ಪಡೆದುಕೊಂಡಿದ್ದು ಉಳಿಕೆ ಹಣ ತೆಗೆದುಕೊಳ್ಳುವಾಗ ಲೋಕಾ ಬಲೆಗೆ ಸಿಲುಕಿದ್ದಾರೆ. ಡಿಸಿ ಕಚೇರಿಯಲ್ಲಿ ಭೂ ಪರಿವರ್ತನೆಗಾಗಿ 22 ಸಾವಿರ ರು. ಲಂಚ ಪಡೆದುಕೊಳ್ಳುತ್ತಿದ್ದ ಶಿರಸ್ತೇದಾರ್ ಚಂದ್ರಪ್ಪ ಮತ್ತು ಜವಾನ ಮುನಿಯಪ್ಪನನ್ನು ಬಂಧಿಸಲಾಗಿದೆ.

ಕೈ ವರಿಷ್ಠರಿಗೆ ಕಾಲ್ತುಳಿತದ ವರದಿ ಸಲ್ಲಿಕೆ

← ಮೊದಲಪುಟದಿಂದ

ಡಿ.ಕೆ.ಶಿವ ಕುಮಾರ್ ವಿವರಣೆ ನೀಡಿದ ಬಳಿಕ ಇದೀಗ, ಸಿದ್ದರಾಮಯ್ಯ ಅವರು ತೆರಳಿ ಕಾಲ್ತುಳಿತ ಪ್ರಕರಣಕ್ಕೆ ಕಾರಣ, ಬಳಿಕ ಸರಕಾರ ತೆಗದುಕೊಂಡಿರುವ ತೀರ್ಮಾನಗಳ ಬಗ್ಗೆ ವಿವರಿಸಿದ್ದಾರೆ ಎನ್ನಲಾಗಿದೆ.

ಪ್ರಮುಖವಾಗಿ ಸಿಎಂಗೆ ಸರಕಾರದಿಂದ ಅಭಿನಂದನೆ ಮಾಡುವುದು ಬೇಡ ಎನ್ನುವ ಮನಸ್ಥಿತಿ ಇದ್ದರೂ, ಅಭಿನಂದನೆ ಕಾರ್ಯ ಕ್ರಮ ಮಾಡುವಂತೆ ಒತ್ತಡ ಹೇರಿದ್ದ ಗೋವಿಂದರಾಜು ಅವರನ್ನು ಈಗಾಗಲೇ ರಾಜಕೀಯ ಕಾರ್ಯದರ್ಶಿ ಸ್ಥಾನದಿಂದ ಕೆಳಗಿಸಿರುವುದು ಹಾಗೂ ಭದ್ರತೆಗೆ ಸಂಬಂಧಿಸಿದಂತೆ ಸೂಕ್ತ ಮಾಹಿತಿಯನ್ನು ಬೆಂಗಳೂರು ಪೊಲೀಸ್ ಆಯುಕ್ತ ದಯಾ ನಂದ ನೀಡದಿರುವುದೇ ಕಾಲ್ತುಳಿತಕ್ಕೆ ಕಾರಣ. ಆದ್ದರಿಂದ ಈ ಇಬ್ಬರಿಗೂ ಈಗಾ ಗಲೇ 'ಶಿಕ್ಷೆ' ವಿಧಿಸಲಾಗಿದೆ ಎನ್ನುವ ವಿವರಣೆಗೆ ರಾಹುಲ್ ಒಪ್ಪಿಗೆ ಸೂಚಿಸಿದ್ದಾರೆ ಎನ್ನಲಾಗಿದೆ.

ಪರಿಷತ್ ನಾಮನಿರ್ದೇಶನ ಬಗ್ಗೆಯೂ ಚರ್ಚೆ:

ಇದರೊಂದಿಗೆ ಖಾಲಿಯಾಗಿರುವ ನಾಲ್ಕು ವಿಧಾನ ಪರಿಷತ್ ನಾಮನಿರ್ದೇಶನ ಸ್ಥಾನಕ್ಕೆ ಸಂಬಂಧಿಸಿದಂತೆಯೂ ಹೈಕಮಾಂಡ್ ಜತೆ ಚರ್ಚಿಸಲಾಗಿದೆ. ಸರಕಾರದಿಂದ ರಾಜಭವನಕ್ಕೆ ರವಾನೆಯಾಗಿರುವ ಹೆಸರುಗಳಿಗೆ ಹೈಕಮಾಂಡ್ 'ಹಸಿರು ನಿಶಾನೆ' ತೋರಿಸಿಲ್ಲ. ಆದ್ದರಿಂದ ಈ ಬಗ್ಗೆ ಮತ್ತೊಮ್ಮೆ ಚರ್ಚಿಸಿ, ಪಟ್ಟಿಯನ್ನು ಪರಿಷ್ಕೃತಗೊಳಿಸಲು ಬಗ್ಗೆ ತೀರ್ಮಾನಿಸಲಾಗಿದೆ. ಯಾರ ಹೆಸರನ್ನು ರವಾನಿಸಬೇಕು ಎನ್ನುವ ಬಗ್ಗೆ ಶೀಘ್ರವೇ ಹೇಳುವುದಾಗಿ ಹೈಕಮಾಂಡ್ ಹೇಳಿದೆ ಎಂದು ತಿಳಿದುಬಂದಿದೆ.

ದೆಹಲಿಗೆ ಸಚಿವ ದಂಡು

ಸಿಎಂ, ಡಿಸಿಎಂ ಇಬ್ಬರಿಗೂ ಹೈಕಮಾಂಡ್ ಬುಲಾವ್ ನೀಡಿದ್ದರಿಂದ ಸಚಿವ ಸಂಪುಟ ಪುನಾರಚನೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚೆಯಾಗುವ ಸಾಧ್ಯತೆಯಿದೆ ಎನ್ನಲಾಗಿತ್ತು. ಈ ಕಾರಣಕ್ಕೆ ಲಕ್ಷ್ಮೀ ಹೆಬ್ಬಾಳ್ಕರ್, ಸತೀಶ್ ಜಾರಕಿಹೊಳಿ ಸೇರಿದಂತೆ ಹಲವು ಸಚಿವರು ಹಾಗೂ ಸಚಿವ ಸ್ಥಾನದ ಆಕಾಂಕ್ಷಿಗಳು ದೆಹಲಿಗೆ ತೆರಳಿದ್ದರು. ಆದರೆ ಹೈಕಮಾಂಡ್ ಜತೆಗಿನ ಭೇಟಿಯ ವೇಳೆ ಸಂಪುಟ ಪುನಾರಚನೆಯ ವಿಷಯ ಚರ್ಚೆಗೆ ಬಂದಿಲ್ಲ ಎಂದು ಖಚಿತ ಮೂಲಗಳು ತಿಳಿಸಿದ್ದು, ಇದೇ ವಿಷಯವನ್ನು ಸಿಎಂ ಹಾಗೂ ಡಿಸಿಎಂ ಸಹ ಸ್ಪಷ್ಟಪಡಿಸಿದ್ದಾರೆ.

ಸಚಿವ ಸಂಪುಟ ವಿಸ್ತರಣೆ ಅಥವಾ ಪುನಾರಚನೆ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ. ವಿಧಾನ ಪರಿಷತ್ ನಾಮನಿರ್ದೇಶನಕ್ಕೆ ಸಂಬಂಧಿಸಿದಂತೆ ಪಕ್ಷದ ಹೈಕಮಾಂಡ್‌ಗೆ ಮಾಹಿತಿ ನೀಡಿದ್ದು, ಅವರು ಈ ಬಗ್ಗೆ ಪರಾಮರ್ಶೆ ನಡೆಸಿ ಮುಖ್ಯಮಂತ್ರಿಗಳಿಗೆ ಮಾಹಿತಿ ನೀಡಲಿದ್ದಾರೆ.
- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

4 ದಿನ ನಂದಿಬೆಟ್ಟ ಪ್ರವೇಶ ನಿರ್ಬಂಧ

ಚಿಕ್ಕಬಳ್ಳಾಪುರ: ತಾಲೂಕಿನ ನಂದಿ ಗಿರಿಧಾಮದಲ್ಲಿ ಜೂ.19 ರಂದು ರಾಜ್ಯ ಸರಕಾರದ ಸಚಿವ ಸಂಪುಟದ 2025ನೇ ಸಾಲಿನ 13ನೇ ಸಭೆಯನ್ನು ಚಿಕ್ಕಬಳ್ಳಾಪುರ ಹಮ್ಮಿಕೊಂಡಿರುವುದರ ಜೂನ್ 16 ರ ಸಂಜೆ 6 ಗಂಟೆಯಿಂದ ಜೂನ್ 20 ರ ಬೆಳಗ್ಗೆ 5 ಗಂಟೆಯವರೆಗೆ ಪ್ರವಾಸಿಗರಿಗೆ ಹಾಗೂ ವಾಹನಗಳ ಪ್ರವೇಶಕ್ಕೆ ನಿರ್ಬಂಧಿಸಿ ಆದೇಶಿಸಲಾಗಿದೆ ಎಂದು ಜಿಲ್ಲಾಧಿಕಾರಿ ಪಿ.ಎನ್. ರವೀಂದ್ರ ತಿಳಿಸಿದ್ದಾರೆ.

ರಾಜ್ಯ ಸಚಿವ ಸಂಪುಟ ಸಭೆಗೆ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಹಾಗೂ ಕರ್ನಾಟಕ ಸರಕಾರದ ಸಚಿವ ಸಂಪುಟ ದರ್ಜೆಯ ಎಲ್ಲಾ ಮಂತ್ರಿಗಳು, ಶಾಸನಸಭಾ ಹಾಗೂ ವಿಧಾನಸಭಾ ಸದಸ್ಯರು, ಇಲಾಖಾ ಮುಖ್ಯಸ್ಥರು ಹಾಗೂ ಪತ್ರಕರ್ತರು ಆಗಮಿಸುತ್ತಿದ್ದಾರೆ. ಆದ್ದರಿಂದ ನಂದಿಗಿರಿಧಾಮಕ್ಕೆ ಹೋಗಲು ಮತ್ತು ಬರಲು ಒಂದೇ ರಸ್ತೆ ಇರುವುದರಿಂದ ವಾಹನ ದಟ್ಟಣೆ ಹೆಚ್ಚಾಗಿ



ರುತ್ತದೆ. ಈ ಸಮಯದಲ್ಲಿ ನಂದಿಬೆಟ್ಟದಲ್ಲಿ ಕಡಿದಾದ ತಿರುವುಗಳಿಂದ ಕೂಡಿದ ರಸ್ತೆಗಳಲ್ಲಿ ವಾಹನ ಮತ್ತು ಪ್ರವಾಸಿಗರನ್ನು ನಿಯಂತ್ರಿಸುವುದು ಅತಿ ಕಷ್ಟಕರವಾಗಿರುತ್ತದೆ ಹಾಗೂ ಅಪಘಾತಗಳಾಗುವ ಸಾಧ್ಯತೆಗಳು ಹೆಚ್ಚಾಗಿರುವುದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಜೂನ್ 17 ರಿಂದ 19 ರವರೆಗೆ ನಂದಿ ಬೆಟ್ಟದ ಮೇಲೆ ವಸತಿ ಕೊಠಡಿಗಳನ್ನು ಮುಂಗಡ ಕಾಯ್ದಿರಿಸುವಿಕೆಯನ್ನು ನಿಷೇಧಿಸಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಪಿ.ಎನ್. ರವೀಂದ್ರ ತಿಳಿಸಿದ್ದಾರೆ.

ಶೀಲ ಶಂಕಿಸಿ ಮಹಿಳೆಯ ಕೊಲೆ

ಕಲಬುರಗಿ: ಅನೈತಿಕ ಸಂಬಂಧದ ಶಂಕೆಯ ಹಿನ್ನೆಲೆ, ಮಹಿಳೆಯನ್ನು ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಮಂಗಳವಾರ ಬೆಳಗ್ಗೆ ನಗರದ ಶಹಬಜಾರ್ ಬಳಿ ನಡೆದಿದೆ. ರೂಪಾ (32) ಬರ್ಬರವಾಗಿ ಕೊಲೆಯಾದ ಮಹಿಳೆ. ಮೃತ ಮಹಿಳೆ ಕಲಬುರಗಿ ತಾಲೂಕಿನ ಕಲ್ಲಹಂಗರಗಾ ಗ್ರಾಮದ ನಿವಾಸಿಯಾಗಿದ್ದು, ಸಮೋಸಾ ಮಾಡಲು ಹೋಟೆಲ್‌ಗೆ ತೆರಳುವಾಗ ಈ ಘಟನೆ ನಡೆದಿದೆ ಎನ್ನಲಾಗಿದೆ. ಮಹಿಳೆಯ ಅನೈತಿಕ ಸಂಬಂಧದ ಹಿನ್ನೆಲೆಯಲ್ಲಿ ಹತ್ಯೆ ಮಾಡಲಾಗಿದೆ ಎಂಬ ಶಂಕೆ ವ್ಯಕ್ತವಾಗಿದೆ.

ಮರು ಜಾತಿಗಣತಿ

← ಮೊದಲಪುಟದಿಂದ

ಜಾತಿ ಗಣತಿಯಲ್ಲಿರುವ ಅಂಕಿ-ಅಂಶಗಳಿಗೆ ಸಂಬಂಧಿಸಿದಂತೆ ಸ್ವತಃ ಡಿಸಿಎಂ ಡಿ.ಕೆ.ಶಿವಕುಮಾರ್ ಆಕ್ಷೇಪಿಸಿದ್ದರು. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಒಕ್ಕಲಿಗ ಶಾಸಕ, ಸಚಿವರ ಸಭೆ ನಡೆಸಿ 'ಪರೋಕ್ಷ' ಅಸಮಾಧಾನ ಹೊರಹಾಕಿದ್ದರು. ಇದೇ ರೀತಿ ಲಿಂಗಾಯತ ಸಮುದಾಯವೂ ಈ ವರದಿಯನ್ನು ಅಂಗೀಕರಿಸಬಾರದು ಎನ್ನುವ ಒತ್ತಡ ಹೇರಿತ್ತು. ಆದ್ದರಿಂದ ಇದೀಗ 'ತಿರಸ್ಕರಿಸಿದರೆ' ಅಹಿಂದ ಸಮುದಾಯದ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ ಎನ್ನುವ ಕಾರಣಕ್ಕೆ ಕಾಂಗ್ರೆಸ್ ಹೈಕಮಾಂಡ್ ಮರು ಸಮೀಕ್ಷೆಯ ತೀರ್ಮಾನಕ್ಕೆ ಬಂದಿದೆ ಎನ್ನಲಾಗಿದೆ.

ಬೀಸುವ ದೊಣ್ಣೆಯಿಂದ ಪಾರಾದ ಕಾಂಗ್ರೆಸ್

ಜಾತಿ ಗಣತಿಯನ್ನು ಸಚಿವ ಸಂಪುಟದಲ್ಲಿ ಮಂಡಿಸುತ್ತಿದ್ದಂತೆ ಸಂಪುಟದಲ್ಲಿರುವ ಹಲವು ಸಚಿವರು ವಿರೋಧ ವ್ಯಕ್ತಪಡಿಸಿದ್ದರು. ಒಕ್ಕಲಿಗ, ಲಿಂಗಾಯತ ಸೇರಿದಂತೆ ಹಲವು ಪ್ರಬಲ ಸಮುದಾಯಗಳಿಂದ ತೀವ್ರ ವಿರೋಧ ವ್ಯಕ್ತವಾಗಿದ್ದರಿಂದ ಈ ವಿಷಯದಲ್ಲಿ ಯಾವ ರೀತಿ ತೀರ್ಮಾನ ಕೈಗೊಳ್ಳಬೇಕು ಎನ್ನುವ ಗೊಂದಲದಲ್ಲಿ ಪಕ್ಷದ ನಾಯಕರಿದ್ದರು. ಒಂದು ವೇಳೆ ಜಾತಿ ಗಣತಿಯನ್ನು ಅನುಮೋದಿಸದಿದ್ದರೆ, ಅಹಿಂದ ಸಮುದಾಯದ ವಿರೋಧ ಕಟ್ಟಿಕೊಳ್ಳಬೇಕು. ಅನುಮೋದಿಸಿದರೆ ಮೇಲ್ಜಾತಿಯ ವಿರೋಧ ಕಟ್ಟಿಕೊಳ್ಳಬೇಕಿತ್ತು. ಆದ್ದರಿಂದ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು 'ಮರು ಜಾತಿ ಗಣತಿ' ಮಾಡುವ ತೀರ್ಮಾನಕ್ಕೆ ಬರಲಾಗಿದೆ ಎಂದು ಮೂಲಗಳು ತಿಳಿಸಿವೆ.

ಜಾತಿ ಗಣತಿ ವಿಚಾರವಾಗಿ ಎದ್ದಿರುವ ಅಪಸ್ವರ, ಸಮುದಾಯಗಳ ಅಂಕಿಅಂಶಗಳ ಬಗ್ಗೆ ಇರುವ ಗೊಂದಲ ನಿವಾರಣೆಗೆ ತೀರ್ಮಾನಿಸಲಾಗಿದೆ. ಮನೆ ಮನೆ ಸಮೀಕ್ಷೆ ಹಾಗೂ ಆನ್‌ಲೈನ್ ಮೂಲಕ ಎಲ್ಲರೂ ತಮ್ಮ ಮಾಹಿತಿಯನ್ನು ಮತ್ತೊಮ್ಮೆ ಸಲ್ಲಿಸಲು ಅವಕಾಶ ನೀಡಲಾಗುವುದು. ಈ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲಾಗುವುದು.
- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಕೇಂದ್ರದಿಂದಲೂ ನಡೆಯುತ್ತಿರುವ ಜಾತಿಗಣತಿ

ಈಗಾಗಲೇ ಕೇಂದ್ರ ಸರಕಾರವೂ ಜಾತಿ ಗಣತಿ ಮಾಡುವುದಾಗಿ ಘೋಷಿಸಿದೆ. ಹೀಗಿರುವಾಗ ಸಂಪುಟದಲ್ಲಿ ಮಂಡನೆಯಾಗಿದ್ದ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆ ಊರ್ಜಿತವಾಗುವುದೇ ಎನ್ನುವ ಗೊಂದಲ ಹಲವರಲ್ಲಿತ್ತು. ಆದರೀಗ ಹೊಸದಾಗಿ ರಾಜ್ಯ ಸರಕಾರದಿಂದಲೂ ಜಾತಿ ಗಣತಿ ನಡೆಸಲು ಅವಕಾಶವಿದೆಯೇ ಎನ್ನುವ ಗೊಂದಲವಿದೆ. ಆದರೆ ರಾಜ್ಯ ಸರಕಾರದ ವತಿಯಿಂದ ನಡೆಸುವ ಜಾತಿ ಗಣತಿಯನ್ನು ಯಾವ ರೀತಿ ನಿಭಾಯಿಸಲಾಗುತ್ತದೆ ಎನ್ನುವ ಗೊಂದಲವಿದೆ.

ಈ ಬಗ್ಗೆ ದೆಹಲಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕೃತ ಘೋಷಣೆ ಮಾಡಿದ್ದು, ಮುಂದಿನ ಸಚಿವ ಸಂಪುಟದಲ್ಲಿ ಈಗಾಗಲೇ ಮಂಡನೆಯಾಗಿರುವ ಸಮೀಕ್ಷೆಯನ್ನು ತಾತ್ವಿಕವಾಗಿ ಒಪ್ಪಿ, ಬಳಿಕ ಮರು ಸಮೀಕ್ಷೆಗೆ ಕ್ರಮವಹಿಸಲು ತೀರ್ಮಾನಿಸಲಾಗಿದೆ. ಈ ಸಭೆಯಲ್ಲಿ ರಾಹುಲ್ ಗಾಂಧಿ ಅವರೊಂದಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಇದ್ದರು.

ಫನ್‌ತರಂಗ

– ರಘುಪತಿ ಶೃಂಗೇರಿ –

ಕಲಾವಿದರನ್ನೇ ಕಡೆಗಣಿಸಿದ 'ವೆಂಕಟಪ್ಪ ಚಿತ್ರಶಾಲೆ' ಉದ್ಘಾಟನೆಯ ಆಹ್ವಾನಪತ್ರಿಕೆಯಲ್ಲಿ 55ಕ್ಕೂ ಹೆಚ್ಚು ರಾಜಕೀಯ ವ್ಯಕ್ತಿಗಳು. ಸುದ್ದಿ



ಮಹಿಳೆ ಕೊಂದ ಹುಲಿ

ಚಾಮರಾಜನಗರ: ತಾಲೂಕಿನ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಬೇಡುಗುಳಿ ವಲಯದಲ್ಲಿ ಹುಲಿ ದಾಳಿಗೆ ಮಹಿಳೆ ಬಲಿಯಾಗಿದ್ದು, ವ್ಯಕ್ತಿಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬೇಡಗುಳಿ ಹಾಡಿಯ ರಂಗಮ್ಮ ಮೃತ ಮಹಿಳೆ. ರಾಮಯ್ಯನ ಪೋಡಿನ ರವಿ ಎನ್ನುವರು ಗಾಯಗೊಂಡವರು. ಮೃತ ರಂಗಮ್ಮ ಮಂಗಳವಾರ ಬೆಳಗಿನ ಜಾವ ಬಹಿರ್ದೆಸೆಗೆ ಹೋಗಿದ್ದಾಗ ಹುಲಿ ದಾಳಿ ಮಾಡಿದೆ. ಸೋಮವಾರ ರಾತ್ರಿ ರವಿ ಹಾಡಿಗೆ ಮರಳುವಾಗ ಹುಲಿ ದಾಳಿ ಮಾಡಿದ್ದು ಅವರ ಕಿರುಚಾಟ ಕೇಳಿ ನೆರವಿಗೆ ಧಾವಿಸಿದ ಸ್ಥಳೀಯರು ಹುಲಿಯನ್ನು ಓಡಿಸಿದ್ದಾರೆ. ರವಿ ತಲೆಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಚಾಮರಾಜನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂ: ಬೆಂಅಪ್ರಾ/ನಯೋಸ/CLU–02/1212/2025–26 ದಿನಾಂಕ: 10.06.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಶ್ರೀ.ಚಂದ್ರಪ್ಪ ಬಿನ್ ವೆಂಕಟಸ್ವಾಮಿ	ಬೆಂಗಳೂರು ಪೂರ್ವ	ಬಿದರಹಳ್ಳಿ	ಕಣ್ಣೂರು	106/4	0–06	ವ್ಯವಸಾಯ	ವಾಣಿಜ್ಯ
					108/6	0–19		
					ಒಟ್ಟು	0–25		

ಷರಾ:– ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಣಿಜ್ಯ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಯಾಗುವುದು ಹಾಗೂ ಸರ್ಕಾರಕ್ಕೆ ಹೆಚ್ಚಿನ ತೆರಿಗೆಗಳು ಸಂಗ್ರಹವಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಮಹಾನಗರ ಪಾಲಿಕೆ, ಕಲಬುರಗಿ
ದೂ: 08472/ 278675 ಫ್ಯಾಕ್ಸ : 08472 / 260776 ಇ ಮೇಲ್– itstaff_ulb_gulbarga@yahoo.com

No: KMP/EE/TS-02/ 15th FC /2025-26 ದಿನಾಂಕ:09.06.2025.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ. ಸಂಖ್ಯೆ: 06/2025–26

1) ಕಾಮಗಾರಿಯ ವಿವರ ಃ ಕಲಬುರಗಿ ಮಹಾನಗರ ಪಾಲಿಕೆಯಿಂದ 15ನೇ ಹಣಕಾಸು ಆಯೋಗದ 2024–25 ನೇ ಸಾಲಿನ ಪರಿಷ್ಕೃತ ಕ್ರಿಯಾ ಯೋಜನೆಯ ಅನುದಾನದಲ್ಲಿ ಹಾಗೂ 15ನೇ ಹಣಕಾಸು ಆಯೋಗದ 2020–21 ರಿಂದ 2022–23ನೇ ಸಾಲಿನ ಉಳಿತಾಯ ಮೊತ್ತದ ಕ್ರಿಯಾ ಯೋಜನೆಯ ಅನುದಾನದಲ್ಲಿ ಅನುಮೋದನೆಗೊಂಡ ಒಟ್ಟು (04) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ–2&3 ರ ಮೂಲಕ 7 ದಿನಗಳ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) **ಪ್ರತಿ ಕಾಮಗಾರಿ ಅಂದಾಜು ಕನಿಷ್ಠ ಮೊತ್ತ ರೂ. 31.00 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ. 85.20 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರಃ 3ನೇ ದರ್ಜೆ ಮತ್ತು ಹೆಚ್ಚು, 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್–2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಕನಿಷ್ಠ ರೂ. 52,100.00 ಗಳು ಹಾಗೂ ಗರಿಷ್ಠ ರೂ. 90,000.00 ಗಳು. 5) ಪೂರ್ವಭಾವಿ ಸಭೆ ದಿನಾಂಕ: **17.06.2025 ರಂದು ಬೆಳಿಗ್ಗೆ 11:00 ಗಂಟೆಗೆ.** 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **17.06.2025 ರಂದು ಸಾಯಂಕಾಲ 4:30 ಗಂಟೆಗೆ.** 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **18.06.2025 ರಂದು ಸಾಯಂಕಾಲ 04:35 ಗಂಟೆಗೆ.** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **19.06.2025 ರಂದು ಬೆಳಿಗ್ಗೆ 11:30 ಗಂಟೆಗೆ.** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ ಃ ಕಾರ್ಯಾಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/

Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/– ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/195/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ
ಮೀನುಗಾರಿಕೆ ಇಲಾಖೆ
(ಜಿಲ್ಲಾ ಪಂಚಾಯತ, ವಿಜಯಪುರ)
ಮೀನುಗಾರಿಕೆ ಸಹಾಯಕ ನಿರ್ದೇಶಕರವರ ಕಛೇರಿ, ಮುದ್ದೇಬಿಹಾಳ

ಸಂಖ್ಯೆ:ಮೀಸನಿ/ಹಗುಪ/ಇ–ಟೆಂಡರ್/1/2025–26 ದಿನಾಂಕ: 09.05.2025

ಇ–ಟೆಂಡರ್ ಪ್ರಕಟಣೆ

ಪಸಂಮೀ ಇ–87 ಮೀಇಇ 2024 ದಿನಾಂಕ:02.06.2025 (ಅನುಬಂಧ–12)

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೇ, ವಿಜಯಪುರ ಜಿಲ್ಲೆಯ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಮುದ್ದೇಬಿಹಾಳ ಕಾರ್ಯವ್ಯಾಪ್ತಿಯಲ್ಲಿ ಬರುವ ಮುದ್ದೇಬಿಹಾಳ,ಬಸವನ ಬಾಗೇವಾಡಿ ತಾಲೂಕಿನ ಈ ಕೆಳಕಂಡ ಸರ್ಕಾರಿ ಜಲಸಂಪನ್ಮೂಲಗಳ ಕೆರೆಗಳ ಮೀನು ಪಾಶುವಾರು ಹಕ್ಕನ್ನು 2025–26 ರಿಂದ 2029–30 ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ (ಅಂದರೆ:01–07–2025 ರಿಂದ 30–06–2030 ರವರೆಗೆ) ಒಟ್ಟು 05 ವರ್ಷಗಳ ಅವಧಿಗೆ ಇ–ಟೆಂಡರ್ ಮೂಲಕ ಈ ಕೆಳಗೆ ನಮೂದಿಸಿರುವ ವೇಳಾಪಟ್ಟಿಯನ್ವಯ ಸರ್ಕಾರದ ಮೀನುಗಾರಿಕೆ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ವಿಲೇವಾರಿ ಮಾಡಲು ಕರ್ನಾಟಕ ಸರ್ಕಾರ ಇ–ಸಂಗ್ರಹಣ ಪೋರ್ಟಲ್ (https://kppp.karnataka. gov.in) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡಲು ಪ್ರಸ್ತಾಪಿಸಿರುವ ಜಲಸಂಪನ್ಮೂಲಗಳ ವಿವರಗಳು.

ಕ್ರ ಸಂ	ತಾಲೂಕು	ಜಲ ಸಂಪನ್ಮೂಲ ಹೆಸರು	ಗ್ರಾಮ	ಜಲ ವಿಸ್ತೀರ್ಣ (ಹೇ)	ಅಚ್ಚುಕಟ್ಟು (ಹೇ)	ಭದ್ರತಾ ಠೇವಣಿ	ಸರಕಾರಿ ಸವಾಲ	ಮೀಸಲು ವರ್ಗ
1	ತಾಳಿಕೋಟಿ	ಮಡಿಕೆಶಿರೂರ ಕೆರೆ	ಮಡಿಕೆಶಿರೂರ	153.82	943	34610/–	230730/–	ಸಾಮಾನ್ಯ
2	ಮುದ್ದೇಬಿಹಾಳ	ಅಡವಿ ಹುಲಗಬಾಳ ಕೆರೆ	ಅಡವಿ ಹುಲಗಬಾಳ	104.82	405	23585/–	157230/–	ಸಾಮಾನ್ಯ
3	ಬ.ಬಾಗೇವಾಡಿ	ಅರೇಶಂಕರ ಕೆರೆ	ಅರೇಶಂಕರ	225	470	50625/–	337500/–	ಸಾಮಾನ್ಯ

1) ಇ–ಟೆಂಡರ್ ದಸ್ತಾವೇಜು ಪಡೆಯುವ ದಿನಾಂಕ : 09.06.2025
2) ಇ–ಟೆಂಡರ್ ಬಿಡ್ ಸಲ್ಲಿಕೆ ಅಂತಿಮ ದಿನಾಂಕ ಮತ್ತು ಸಮಯ : 23.06.2025, 17–30
3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳ : 25.06.2025, 11.00, ಮೀ.ಸ.ನಿ. ಕಛೇರಿ, ಮುದ್ದೇಬಿಹಾಳ
4) ಆರ್ಥಿಕ ಬಿಡ್ ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳ : 27.06.2025, 12.00, ಮೀ.ಸ.ನಿ. ಕಛೇರಿ, ಮುದ್ದೇಬಿಹಾಳ
5) ಇ–ಟೆಂಡರ್ ಪೂರ್ವ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ : 17.06.2025, 11.00, ಮೀ.ಸ.ನಿ. ಕಛೇರಿ, ಮುದ್ದೇಬಿಹಾಳ

ಹೆಚ್ಚಿನ ಮಾಹಿತಿಗಾಗಿ: (https://kppp.karnataka.gov.in) ಇ–ಸಂಗ್ರಹಣಾ ಪೋರ್ಟಲ್ ಭೇಟಿ ಮಾಡುವುದು.

ವಾಸಾಸಂಇ/ವಿಜಯಪುರ/120/ಕೆಎಸ್‌ಎಂಸಿಎ/2025–26 **ಸಹಿ/– ಮೀನುಗಾರಿಕೆ ಸಹಾಯಕ ನಿರ್ದೇಶಕರು, ಮುದ್ದೇಬಿಹಾಳ**

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ – 562123.
ದೂರವಾಣಿ: 9663046622 ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/17/2025–26 ದಿನಾಂಕ: 04–06–2025

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3) ರಂತೆ)

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ಕಸಬಾ ಹೋಬಳಿ, ನೆಲಮಂಗಲ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಪ್ರಶ್ನಿತ ಪ್ರದೇಶವನ್ನು **"ಉದ್ಯಾನವನ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಮಹಾಯೋಜನೆ ಅನುಮೋದನೆಗೊಂಡು ಐದು ವರ್ಷಗಳ ಅವಧಿಯು ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರನ್ವಯ **"ಉದ್ಯಾನವನ"** ವಲಯದಲ್ಲಿ ಕಾಯ್ದಿರಿಸಲಾದ ಭೂ ಉಪಯೋಗ ರದ್ದಾಗುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 ರನ್ವಯ ಈ ಕೆಳಕಂಡಂತೆ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ ಸದರಿ ಕಲಂ 69 (4) ರ ಅಡಿಯಲ್ಲಿ **"ವಸತಿ"** ಭೂ ಉಪಯೋಗ ನಿಗಧಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗು)	ಅನುಮೋದಿತ ಮಹಾಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1) ಶ್ರೀಮತಿ ಲಕ್ಷ್ಮಮ್ಮ ಬಿನ್ ಸಂಜೀವಯ್ಯ	ನೆಲಮಂಗಲ / ಕಸಬಾ / ನೆಲಮಂಗಲ	26/2	01-10½ ಪೈಕಿ 00-07	ಉದ್ಯಾನವನ	ವಸತಿ
2) ಶ್ರೀ ಹೆಚ್. ರಾಮಕೃಷ್ಣ ಬಿನ್ ಲೇಟ್ ಹನುಮಂತಯ್ಯ		26/8	00-35 ಪೈಕಿ 00-07½		
3) ಶ್ರೀ ಹನುಮಂತರಾಜು ಬಿನ್ ಲೇಟ್ ಹನುಮಂತಯ್ಯ		26/9	00-32.12 ಪೈಕಿ 00-07½		

ಷರಾ:– ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ಉದ್ಯಾನವನ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ನಿಗಧಿಪಡಿಸಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.
ವಾಸಾಸಂಇ/ವಾ.ಪ್ರ/1154/ಅಡ್ವರ್ಟೋರ್/2025–26

ಪುರಸಭಾ ಕಾರ್ಯಾಲಯ ಆನೇಕಲ್
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562106
ಫೋನ್ : 080–27859225, ಫ್ಯಾಕ್ಸ್ : 080–27830092, Email :- itstaff_ulb_anekal@yahoo.com

ಸಂಖ್ಯೆ: ಪು.ಕಾ.ಆ/ಆ.ಶಾ/ಸಿ.ಆರ್/04/2025–26 ದಿನಾಂಕ: 10.06.2025

ಆಸಕ್ತ ಅಭಿವ್ಯಕ್ತ (EOI) ಗಾಗಿ ಅರ್ಜಿ ಅಹ್ವಾನ

ಬೆಂಗಳೂರು ನಗರ ಜಿಲ್ಲೆಯ, ಆನೇಕಲ್ ಪುರಸಭಾ ವ್ಯಾಪ್ತಿಯಲ್ಲಿ ನಲ್ಮ್–ಡೇಯಲ್ಲಿ ನೊಂದಾಯಿತ ಸ್ವ–ಸಹಾಯ ಗುಂಪುಗಳ ನೇಮಕಾತಿಯ ಮೂಲಕ ಸ್ವಚ್ಛ ಭಾರತ್–2.0 ಯೋಜನೆಯಡಿಯಲ್ಲಿ ಮಾಹಿತಿ ವಿದ್ಯಾಭ್ಯಾಸ, ಸಂವಹನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಆಸಕ್ತ ಅಭಿವ್ಯಕ್ತ (EOI) ಗಾಗಿ ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತ ಸ್ವ–ಸಹಾಯ ಗುಂಪುಗಳು ಭಾಗವಹಿಸಬಹುದಾಗಿದೆ.

TOR ಆಯ್ಕೆ ಪ್ರಕ್ರೀಯೆ ಮತ್ತು ಸಂಭಾವನೆ ವಿವರಗಳು **www.anekaltown.mrc.gov.in** ನಲ್ಲಿ ಲಭ್ಯವಿರುತ್ತದೆ. ಆಸಕ್ತ ಗುಂಪುಗಳ ಸದಸ್ಯರು ವೆಬ್ ಸೈಟ್‌ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ **ದಿನಾಂಕ: 27.06.2025 ಸಂಜೆ 5.00 ಗಂಟೆಯ** ಮೊದಲು ಅಥವಾ ಅದಕ್ಕೂ ಮೊದಲು ಅಧಿಕೃತ ಇಮೇಲ್ ಐಡಿ anekaltmestaffs@gmail.com ಗೆ ಕಳುಹಿಸಬಹುದಾಗಿದೆ.

ಆಸಕ್ತ ಗುಂಪಿನ ಸದಸ್ಯರುಗಳು ಅರ್ಜಿಯನ್ನು ಸಲ್ಲಿಸುವಾಗ ಅವಶ್ಯವಿರುವ ದಾಖಲೆಗಳನ್ನು ನಿಗದಿತ ನಮೂನೆಯೊಂದಿಗೆ ಲಗತ್ತಿಸಲು ಕೋರಿದೆ. 1. ಗುರುತಿನ ಪುರಾವೆ (ಓಟರ್ ಐಟಿ), 2. ವಿಳಾಸದ ಪುರಾವೆ (ಆಧಾರ್ ಕಾರ್ಡ್), 3. ಎಂಪಾನೇನ್ಡ್ ದಾಖಲೆಗಳು, 4. ಶೈಕ್ಷಣಿಕ ಅರ್ಹತೆ (ಎಸ್.ಎಸ್.ಎಲ್.ಸಿ ಅಂಕಪಟ್ಟಿ), 5. ಡೇ–ನಲ್ಮ್ ಅನುಮೋದನೆ ಪಡೆದ ನಮೂನೆ.

ಆಯ್ಕೆಯಾದ ಅಭ್ಯರ್ಥಿಗಳಿಗೆ, ಸಂದರ್ಶನವನ್ನು ಆಯೋಜಿಸಿ ವಿಷಯದ ತಿಳುವಳಿಕೆ ಸಾಮರ್ಥ್ಯದ ಆಧಾರದ ಮೇರೆಗೆ ಆಯ್ಕೆ ಮಾಡಲಾಗುವುದು ಹಾಗೂ ಸಂದರ್ಶನದ ದಿನಾಂಕವನ್ನು ಪತ್ರದ ಮೂಲಕ ತಿಳಿಸಲಾಗುವುದು.

ಸಹಿ/– ಅಧ್ಯಕ್ಷರು ಪುರಸಭೆ ಆನೇಕಲ್ | **ಸಹಿ/– ಉಪಾಧ್ಯಕ್ಷರು ಪುರಸಭೆ ಆನೇಕಲ್** | **ಸಹಿ/– ಮುಖ್ಯಾಧಿಕಾರಿ ಪುರಸಭೆ ಆನೇಕಲ್**
ವಾಸಾಸಂಇ/ವಾ.ಪ್ರ/1159/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಇಂಜನೀಯರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ.
ದೂರವಾಣಿ ಸಂ: (0831) 2463850 / ಫ್ಯಾಕ್ಸ್ ಸಂ : (0831) 2423008

No.EE/MI&GWDDD/BGM/TND/AE/2025-26/2437 ದಿ:09–06–2025

ಅಲ್ಪಾವಧಿ ಟೆಂಡರ ಪ್ರಕಟಣೆ (ಕೆ.ಡಬ್ಲ್ಯೂ–1,2,3&4)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ ಅಧಿನಿಯಮ–2000ರ ಮತ್ತು ಇತ್ತೀಚಿನ ತಿದ್ದುಪಡಿಗಳಂತೆ, ಅರ್ಹ ಗುತ್ತಿಗೆದಾರರಿಂದ ಐಟಂ ದರದಂತೆ ಗುತ್ತಿಗೆಯನ್ನು "ಕೆಪಿಪಿಪಿ" ಮುಖಾಂತರ ಕಾರ್ಯನಿರ್ವಾಹಕ ಇಂಜನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ, ಬೆಳಗಾವಿ ಇವರಿಂದ ಆಹ್ವಾನಿಸಲಾಗಿದೆ. ಗೋಕಾಕ/ಅಥಣಿ ಉಪ ವಿಭಾಗಗಳಡಿಯ ಒಟ್ಟು 09 ಕಾಮಗಾರಿಗಳ ಅಂದಾಜು ಮೊತ್ತ ಗರಿಷ್ಠ ರೂ.339.00 ಲಕ್ಷಗಳು ಹಾಗೂ ಕನಿಷ್ಠ ರೂ.3.80 ಲಕ್ಷಗಳು. 1. ಕೆ.ಡಬ್ಲ್ಯೂ–4 ಕಾಮಗಾರಿಗಾಗಿ ಪೂರ್ವ ಟೆಂಡರ ಸಭೆಯು ದಿನಾಂಕ:16–06–2025 ಮುಂ 11.00 ಘಂಟೆಗೆ, 2. ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ:17–06–2025 ಸಾಯಂಕಾಲ 4.00 ಗಂಟೆಯವರೆಗೆ, 3. ಟೆಂಡರ ತೆರೆಯುವ ದಿನಾಂಕ: 18–06–2025 ಸಾಯಂಕಾಲ 4.30 ಘಂಟೆಗೆ ಮುಂದುವರೆದು (ಸಾಧ್ಯವಾದಲ್ಲಿ), 4. ಹೆಚ್ಚಿನ ವಿವರಗಳಿಗೆ ಸಂಪರ್ಕಿಸುವ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಬೆಳಗಾವಿ & www.kppp.gov.in

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ಸ.ನೀ ಮತ್ತು ಅಂ.ಅ.ಇ ವಿಭಾಗ,
ಬೆಳಗಾವಿ.

DIPR/ BGM/ RO-NO- 447 2025-26

ಸಮಾಚಾರ ಸಣ್ಣದಲ್ಲ

ಶುಕ್ರವಾರ ಕೋರ್ಟ್‌ಗೆ ಹಾಜರಾಗುವೆ

ಬೆಳಗಾವಿ: ಬಲಿಷ್ಠ ನಾಯಕರ ಹಿಂದೆ ಕುತಂತ್ರ ಮಾಡುವುದು ಸಹಜ. ನಾನು ನ್ಯಾಯಾಲಯ ಆದೇಶ ಗೌರವಿಸುತ್ತೇನೆ. ಶುಕ್ರವಾರ ಬೆಂಗಳೂರು ಕೋರ್ಟ್‌ಗೆ ಹಾಜರಾಗುತ್ತೇನೆ ಎಂದು ಮಾಜಿ ಸಚಿವ ವಿನಯ್ ಕುಲಕರ್ಣಿ ಅಭಿಪ್ರಾಯ ಪಟ್ಟರು. ನಗರದಲ್ಲಿ ಮಂಗಳವಾರ ಧಾರವಾಡದ ಅಧಿಕಾರಿಗಳ ಜತೆ ಸಭೆ ನಡೆಸಿ ಮಾತನಾಡಿದ ಅವರು, ಶುಕ್ರವಾರ ನಾನು ಬೆಂಗಳೂರು ನ್ಯಾಯಾಲಯಕ್ಕೆ ಹಾಜರಾಗುತ್ತೇನೆ. ಮುಂದೆ ನ್ಯಾಯಾಲಯದಲ್ಲಿ ಕಾನೂನು ಹೋರಾಟ ಮುಂದುವರಿಸುತ್ತೇನೆ ಎಂದರು. ಪ್ರಕರಣದ ಹಿಂದೆ ಕಾಣದ ಕೈವಾಡ ಇರೋ ಆರೋಪಕ್ಕೆ ಪ್ರತಿಕ್ರಿಯೆ ನೀಡಿ, ಅದು ಸಹಜವಾಗಿ ಇದ್ದೇ ಇರುತ್ತದೆ. ಬಲಿಷ್ಠ ನಾಯಕರ ಹಿಂದೆ ಈ ರೀತಿ ಕುತಂತ್ರ ಮಾಡುವುದು ಸಹಜ. ಇದಕ್ಕೆ ಏನು ಮಾಡೋಕೆ ಆಗುವುದಿಲ್ಲ ಎದುರಿಸಬೇಕಾಗುತ್ತದೆ ಎಂದರು. ವಿನಯ ಕುಲಕರ್ಣಿ ಸಚಿವರಾಗುತ್ತಾರೆ ಎನ್ನುವ ಕಾರಣಕ್ಕೆ ಸಮಯ ನೋಡಿಕೊಂಡು ಕುತಂತ್ರ ಮಾಡಿದರಾ ಎಂಬ ಮಾಧ್ಯಮಗಳ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಮುಂದೆ ಏನು ಆಗುತ್ತದೆ ನೋಡೋಣ. ನನ್ನ ಪಕ್ಷ, ಕ್ಷೇತ್ರದ ಜನರು ನನ್ನ ಜತೆಗಿದ್ದಾರೆ. ನನ್ನ ಪತ್ನಿ, ಮಕ್ಕಳು ಹೊರಗಡೆ ಇದ್ದು ಎಲ್ಲವನ್ನು ನೋಡಿಕೊಳ್ಳುತ್ತಾರೆ. ಹಾಗಾಗಿ, ಯಾವುದೇ ಸಮಸ್ಯೆ ಇಲ್ಲ ಎಂದು ವಿನಯ ಕುಲಕರ್ಣಿ ಉತ್ತರಿಸಿದರು.

ಕಾಂಗ್ರೆಸ್ ಸರಕಾರ ಪತನ ಸನ್ನಿಹಿತ

ಕಾರವಾರ: ರಾಜ್ಯದ ಕಾಂಗ್ರೆಸ್ ಸರಕಾರ ಯಾವುದೇ ಕ್ಷಣದಲ್ಲೂ ಪತನವಾಗಬಹುದು. ಬಿಜೆಪಿ ಅಧಿಕಾರ ಹಿಡಿಯುವುದು ನಿಶ್ಚಿತ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ಇಲ್ಲಿನ ಪ್ರೀಮಿಯರ್ ಹೋಟೆಲ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಕಾರ್ಯಾಗಾರದಲ್ಲಿ ಅವರು ಮಾತನಾಡಿ, ಹಿಂದುತ್ವದ ಪರ ಕೆಲಸ ಮಾಡುತ್ತಿರುವ ಕಾರ್ಯಕರ್ತರಿಗೆ ಕಿರುಕುಳ ನೀಡುವ ಕೆಲಸ ಕಾಂಗ್ರೆಸ್ ಸರಕಾರದಿಂದ ನಡೆಯುತ್ತಿದೆ. ಹಿಂದೂ ಸಂಘಟನೆಗಳ ಕಾರ್ಯಕರ್ತರಿಗೆ ಕಿರುಕುಳ ನೀಡುವುದನ್ನು ನಿಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಆದರೆ, ಹಿಂದುತ್ವ ವಿಚಾರಧಾರೆ ಕುಗ್ಗಿಸಲು ಸರಕಾರ ಅಧಿಕಾರಿಗಳ ಮೇಲೆ ಒತ್ತಡ ಹೇರುತ್ತಿದೆ' ಎಂದು ಆರೋಪಿಸಿದರು. ಆಡಳಿತದಲ್ಲಿ ಸಮನ್ವಯತೆ ಇಲ್ಲ, ದುರಾಡಳಿತ ಉತ್ತುಂಗ ತಲುಪಿದೆ ಎಂಬುದಕ್ಕೆ ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತ ದುರಂತವೇ ಕಾರಣ. ಈ ದುರ್ಘಟನೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಮುಸುಕಿನ ಗುದ್ದಾಟದ ಅಡ್ಡ ಪರಿಣಾಮ ಎಂಬುದು ಜನರಿಗೂ ಅರಿವಿಗೆ ಬರುತ್ತಿದೆ ಎಂದರು.

11 ಕುಟುಂಬಸ್ಥರ ಕಣ್ಣೀರಿಗೆ ಸಿಎಂ ಹೊಣೆ

ತೀರ್ಥಹಳ್ಳಿ: ಸಿದ್ದರಾಮಯ್ಯನವರ ಹೇಳಿಕೆ ನೋಡಿದರೆ ಅವರೆಷ್ಟು ಭಂಡ ಬಿದ್ದಿದ್ದಾರೆ ಎಂದು ಶಾಸಕ ಆರಗ ಜ್ಞಾನೇಂದ್ರ ವಾಗ್ದಾಳಿ ನಡೆಸಿದರು. ಬೇರೆ ಯಾರೇ ಮುಖ್ಯಮಂತ್ರಿ ಆಗಿದ್ದರೂ ರಾಜೀನಾಮೆ ಕೊಟ್ಟು ಹೋಗುತ್ತಿದ್ದರು. ಅವರ ತಪ್ಪಿನಿಂದಲೇ ಆಗಿದ್ದು ಎಂದು ಸಾಮಾನ್ಯ ಜನರಿಗೂ ಗೊತ್ತಾಗುತ್ತದೆ ಇಂದು 11 ಕುಟುಂಬ ಕಣ್ಣೀರಿಗೆ ಸಿದ್ದರಾಮಯ್ಯನವರೇ ಕಾರಣ. ಡಿಕೆಶಿ ಅವರು ತಮ್ಮ ಪ್ರತಿಷ್ಠೆಗಾಗಿ ಹಾಗೂ ರಾಜಕೀಯ ಲಾಭಕ್ಕಾಗಿ ಸಮಾರಂಭ ಮಾಡಿದ್ದಾರೆ ಎಂದರು.

ಆರ್‌ಸಿಬಿ ದುರ್ಘಟನೆ ಬಳಿಕ ಕಾರ್ಯಾಂಗದಲ್ಲಿ ಕುದಿಮೌನ | ಅನುಮತಿ ಕೊಡಿಸಿದವರ ವಿರುದ್ಧ ಕ್ರಮಕ್ಕೆ ಐಪಿಎಸ್ ಅಧಿಕಾರಿಗಳ ಆಗ್ರಹ

ಕಾಲ್ತುಳಿತ: ಹೈ(ಐ) ಅಧಿಕಾರಿಗಳಲ್ಲೂ ಕೋಲ್ಡ್‌ವಾರ್

ಧ್ಯಾನ್ ಪೂಣಚ್ಚ ಬೆಂಗಳೂರು

ಆರ್‌ಸಿಬಿ ವಿಜಯೋತ್ಸವದ ದುರ್ಘಟನೆ ನಂತರ ರಾಜ್ಯದ ಕಾರ್ಯಾಂಗದಲ್ಲಿ ಕುದಿಮೌನ ಏರ್ಪಟ್ಟಿದೆ. ಕಾನೂನು ಆದೇಶ ಮಾಡುವವರು ಹಾಗೂ ಪಾಲಕರಾದ ಎರಡು ಇಲಾಖೆಗಳ ಉನ್ನತ ಅಧಿಕಾರಿಗಳ (ಐಎಎಸ್ ಹಾಗೂ ಐಪಿಎಸ್) ನಡುವೆ ಶೀತಲ ಸಮರ ಏರ್ಪಟ್ಟು ಒಳಗೊಳಗೇ ಕ್ರಮಕ್ಕೆ ಆಗ್ರಹಿಸಲಾಗುತ್ತಿದೆ.

ಕಾಲ್ತುಳಿತ ವಿಚಾರ ರಾಜಕೀಯ ವಲಯದಲ್ಲಿ ಆರೋಪ ಪ್ರತ್ಯಾರೋಪ ನಡೆಯುತ್ತಿರುವ ನಡುವೆಯೇ ಉನ್ನತ ಅಧಿಕಾರಿಗಳ ಮಟ್ಟದಲ್ಲೂ ಕೋಲ್ಡ್ ವಾರ್ ಆರಂಭವಾಗಿದೆ ಎನ್ನಲಾಗಿದೆ. ವಿಜಯೋತ್ಸವಕ್ಕೆ ಅನುಮತಿ ನೀಡದಿದ್ದರೂ, ಘಟನೆಯಲ್ಲಿ ಪೊಲೀಸ್ ಅಧಿಕಾರಿಗಳಷ್ಟೇ ಹೊಣೆ ಏಕೆ(ಐಪಿಎಸ್ ಸೇರಿದಂತೆ) ಐಎಎಸ್ ಅಧಿಕಾರಿಗಳಿಬ್ಬರ ತಪ್ಪೇ ಇಲ್ಲ ಯಾಕೆ ? ಎಂದು ಐಪಿಎಸ್ ಅಧಿಕಾರಿಗಳು ಪಟ್ಟು ಹಿಡಿದಿದ್ದಾರೆ ಎನ್ನಲಾಗಿದೆ. ಅನುಮತಿ ಕೊಡಿಸಿದವರ ವಿರುದ್ಧವೂ ಕ್ರಮ ಆಗಲೇಬೇಕು ಎಂದು ಐಪಿಎಸ್ ಅಧಿಕಾರಿಗಳು ಆಗ್ರಹಿಸುತ್ತಿರುವುದು ಅಲ್ಲಲ್ಲಿ ಕೇಳಿ ಬಂದಿದೆ.

ಸಲಹೆ ನಿರ್ಲಕ್ಷಿಸಿದ ಐಎಎಸ್‌ಗಳು ?

ಪೊಲೀಸ್ ಇಲಾಖೆ ವಿಜಯೋತ್ಸವಕ್ಕೆ ಭದ್ರತೆ ನೀಡುವುದು ಕಷ್ಟ ಎಂದ ಮೇಲೂ ಇಬ್ಬರು ಐಎಎಸ್ ಅಧಿಕಾರಿಗಳು ನಿರ್ಲಕ್ಷ್ಯ ಮಾಡಿದ್ದಾರೆ ಎನ್ನಲಾಗಿದೆ. ಇದರಿಂದಲೇ ಈ ರೀತಿ ದುರಂತ ಸಂಭವಿಸಿದ್ದು ಎಂಬುದು ಐಪಿಎಸ್ ಅಧಿಕಾರಿಗಳು ಆರೋಪಿಸಿದ್ದಾರೆ. ಅನುಮತಿ ಆದೇಶ ಬರುವ ಮೊದಲೇ ಆ ಐಎಎಸ್ ಅಧಿಕಾರಿ ಅನುಮತಿ ನೀಡುವಂತೆ ಹಲವು ಸರ್ಕಸ್ ಮಾಡಿದ್ದಾರೆ ಎನ್ನಲಾಗಿದ್ದು, ಪೊಲೀಸ್ ಅನುಮತಿ ನಿರಾಕರಿಸಿದರೂ ಡೋಂಟ್ ಕೇರ್ ಎನ್ನುವಂತೆ ಒತ್ತಡ ಹೇರಿದ್ದರು ಎನ್ನಲಾಗಿದೆ. ಆರ್‌ಸಿಬಿ ಟ್ವೀಟ್ ಮಾಡಿದ ಮೇಲೆ ಅದನ್ನೇ ಮುಂದಿಟ್ಟುಕೊಂಡು ವಿಧಾನಸೌಧದಲ್ಲಿ ಕಾರ್ಯಕ್ರಮ ಪ್ಲ್ಯಾನ್ ಮಾಡಿದ್ದಾರೆ. ಈಗಾಗಲೇ ಟ್ವೀಟ್ ಮಾಡಿದ್ದಾರೆ, ನಾವು ಅನುಮತಿ ಕೊಡದಿದ್ದರೇ ಅಭಿಮಾನಿಗಳ ಆಕ್ರೋಶ ಎದುರಿಸಬೇಕಾಗುತ್ತದೆ ಎಂದು ಅದೇ ಐಎಎಸ್ ಅಧಿಕಾರಿ ಹೇಳಿದ್ದಾರೆ. ಅದನ್ನು ಸರಕಾರದ ಮಟ್ಟದಲ್ಲಿ ನಡೆದು ರೂಲ್ಸ್ ಬ್ರೇಕ್ ಆಟ ಮಾಡಲಾಗಿದೆ ಎಂಬುದು ಈಗ ಐಪಿಎಸ್ ವಲಯದಲ್ಲಿ ಬಹು ಚರ್ಚಿತ ವಿಷಯವಾಗಿದ್ದು ಸಿದ್ದರಾಮಯ್ಯ ಅವರ ಸರಕಾರ ಸಿಲುಕಿ ಒದ್ದಾಡುವಂತಾಗಿದೆ.

ಕಾಲ್ತುಳಿತ ಘಟನೆಗೆ ಹಲವು ಕಾರಣದಲ್ಲಿ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳ ನಡುವೆ ಮುಸುಕಿನ ಗುದ್ದಾಟವೂ ದುರಂತಕ್ಕೆ ಕಾರಣವಾಗಿದೆ. ಭದ್ರತೆ ಕಷ್ಟ ಇದೆ ಅಂದಿದ್ದರೂ ಹಠ ಮಾಡಿ ಕಾರ್ಯಕ್ರಮ ಆಯೋಜನೆಗೆ ಆದೇಶಿಸಿದ್ದು ಐಎಎಸ್ ಅಧಿಕಾರಿ ಅನ್ನುವ ಪ್ರಶ್ನೆ ಎದ್ದಿದೆ. ತಮಗೆ ಬೇಕಾದವರೊಬ್ಬರಿಗೆ ಕಾರ್ಯಕ್ರಮದ ಗುತ್ತಿಗೆ ನೀಡುವ ಹಠಕ್ಕೆ ಬಿದ್ದು ವಿಜಯೋತ್ಸವಕ್ಕೆ ತರಾತುರಿಯಲ್ಲಿ ಆದೇಶಿಸಿದ್ದರು ಎಂಬ ಆರೋಪ ಕೇಳಿಬಂದಿದೆ. ತಮ್ಮ ಲಾಭಕ್ಕಾಗಿ ಸಹೋದರನಿಗೆ ಐಎಎಸ್ ಅಧಿಕಾರಿ ಕಾರ್ಯಕ್ರಮ ಜವಾಬ್ದಾರಿ ವಹಿಸಿದ್ದರು ಎಂಬ ಗುಸುಗುಸು ಈಗ ಐಪಿಎಸ್ ವಲಯದಲ್ಲಿ ಎದ್ದಿದ್ದು ಗಂಭೀರ ವಿಚಾರವಾಗಿದೆ.

ಹೀಗಿದ್ದರೂ ಐಪಿಎಸ್ ಅಧಿಕಾರಿಗಳನ್ನು ಮಾತ್ರ ಸರಕಾರ ಅಮಾನತು ಮಾಡಿದೆ. ಡಿಪಿಎಆರ್ ಕಾರ್ಯದರ್ಶಿ ಸತ್ಯವತಿ ಅವರ ಲೋಪ ಇಲ್ಲಿ ಕಾಣುತ್ತಿದೆ. ಅವರ ಮೇಲೆ ಕ್ರಮವೇಕಿಲ್ಲ ಎಂದು ಚರ್ಚೆಯಾಗುತ್ತಿದೆ. ಇನ್ನು ಭಾರತೀಯ ಪೊಲೀಸ್ ಒಕ್ಕೂಟದಿಂದ ಅಮಾನತು ವಾಪಸ್ ಪಡೆಯುವಂತೆ ಸಿಎಂ ಸಿದ್ದರಾಮಯ್ಯಗೆ ಪತ್ರ ಬರೆಯಲಾಗಿದೆ. ಕಾಲ್ತುಳಿತ ಘಟನೆ ಬೆನ್ನಲ್ಲೇ ಸರಕಾರಇನ್ನು ಮುಂದೆ ಸಾವಿರಾರು ಜನ ಸೇರುವ ಕಾರ್ಯಕ್ರಮಕ್ಕೆ ಆರೋಗ್ಯ ಇಲಾಖೆ ಅನುಮತಿ ಕಡ್ಡಾಯಗೊಳಿಸಿ ನಿಯಮಾವಳಿ ಪ್ರಕಟಿಸಿದೆ.

ಸರಕಾರದ ಮೇಲೆಯೇ ಆರೋಪ

ವಿಜಯೋತ್ಸವ ವೇಳೆ ನಡೆದ ಕಾಲ್ತುಳಿತ ದುರಂತ ಪ್ರಕರಣ ಮಹತ್ವದ ತಿರುವು ಪಡೆದುಕೊಳ್ಳುತ್ತಲೇ ಇದೆ. ಒಂದೆಡೆ ರಾಜ್ಯ ಸರಕಾರ , ಕೆಎಸ್‌ಸಿಎ, ಡಿಎನ್‌ಎ ಹಾಗೂ ಆರ್‌ಸಿಬಿ ಮ್ಯಾನೇಜ್‌ಮೆಂಟ್‌ನತ್ತ ಬೊಟ್ಟು ಮಾಡಿ ತೋರಿಸುತ್ತಿದೆ. ಮತ್ತೊಂದೆಡೆ ಸರಕಾರದ ವಿರುದ್ಧ ಕೋರ್ಟ್ ನಲ್ಲಿ ಸಾಲು ಸಾಲು ರಿಟ್ ಅರ್ಜಿಗಳು ಸಲ್ಲಿಕೆಯಾಗಿದೆ. ಮತ್ತೊಂದೆಡೆ ಪೊಲೀಸ್ ಅಧಿಕಾರಿಗಳ ಅಮಾನತು ಮಾಡಿರುವುದಕ್ಕೆ ವ್ಯಾಪಕ ವಿರೋಧಗಳು ವ್ಯಕ್ತವಾಗುತ್ತಿವೆ. ಅಲ್ಲದೇ ಅಮಾನತು ಪ್ರಶ್ನಿಸಿ ಅಧಿಕಾರಿಯೊಬ್ಬರು ಸರಕಾರದ ವಿರುದ್ಧ ಸಿಎಟಿ ಮೊರೆ ಹೋಗಿದ್ದಾರೆ. ಡಿಎನ್‌ಎ ಸರಕಾರದ ವಿರುದವೇ ಹಲವು ಆರೋಪಗಳನ್ನು ಮಾಡಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಭಾರತ ಟಿ20 ವಿಶ್ವಕಪ್ ಗೆದ್ದಾಗ ವಿಕ್ಟರಿ ಪೆರೇಡ್ ನಡೆಸಲಾಗಿತ್ತು. ಡಿಎನ್‌ಎ ಆಯೋಜಿಸಿದ್ದ ಪೆರೇಡ್ ನಲ್ಲಿ 3 ಲಕ್ಷ ಜನರಿದ್ದರೂ ಅವಘಡಗಳಾಗಿರಲಿಲ್ಲ. ವಾಂಖೇಡೆ ಸ್ಟೇಡಿಯಂನ ಪ್ರೇಕ್ಷಕರ ಸಾಮರ್ಥ್ಯ 32 ಸಾವಿರವಿದ್ದರೂ ಸಮಸ್ಯೆ ಆಗಿರಲಿಲ್ಲ. ಆರ್‌ಸಿಬಿ ವಿಕ್ಟರಿ ಪೆರೇಡ್ ನಡೆಸಲು ಅನುಮತಿಗಾಗಿ ಜೂ. 3ರಂದು ಪತ್ರ ಬರೆದಿದ್ದೆವು. ತೆರೆದ ಬಸ್ ಪೆರೇಡ್ ಗೆ ಪೊಲೀಸರು ಅನುಮತಿ ನಿರಾಕರಿಸಿದ್ದರು. ರಾಜ್ಯ ಸರಕಾರ ವಿಧಾನಸೌಧದ ಮುಂದೆ ಕಾರ್ಯಕ್ರಮಕ್ಕೆ ನಿರ್ಧರಿಸಿತ್ತು. ಪೊಲೀಸರು ವಿಧಾನಸೌಧದ ಕಾರ್ಯಕ್ರಮಕ್ಕೆ ಹೆಚ್ಚಿನ ಭದ್ರತೆ ನೀಡಿದರು. ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಅಗತ್ಯವಿದ್ದಷ್ಟು ಪೊಲೀಸರು ಇರಲಿಲ್ಲ. ಡಿಎನ್‌ಎ ನಿಂದಲೇ 584 ಖಾಸಗಿ ಸಿಬ್ಬಂದಿ ನೇಮಿಸಲಾಗಿತ್ತು. ಸರಕಾರ ತನ್ನ ವೈಫಲ್ಯ ಮುಚ್ಚಿಟ್ಟುಕೊಳ್ಳಲು ಬಂಧನಕ್ಕೆ ಆದೇಶಿಸಿದೆ ಎಂದು ರಿಟ್ ಅರ್ಜಿಯಲ್ಲಿ ಕೋರ್ಟ್ ಗೆ ತಿಳಿಸಿದೆ.

ವಿಧಾನಸೌಧ ಭದ್ರತಾ ವಿಬಾಗ ಡಿಸಿಪಿ ಜೂನ್ 4ರಂದೇ ಅಪಾಯದ ಎಚ್ಚರಿಕೆ ನೀಡಿದ್ದು, ಇದನ್ನು ಡಿಪಿಆರ್‌ಎ ನಿರ್ಲಕ್ಷ್ಯ ಮಾಡಿರುವುದು ಕಂಡುಬಂದಿದ್ದು, ಡಿಸಿಪಿಯ ಈ ಪತ್ರದಿಂದಾಗಿ ಈ ಸರಕಾರಕ್ಕೆ ಮುಂಜುಗರ ಉಂಟಾಗಿದ್ದು ಐಎಎಸ್ ಹಾಗೂ ಐಪಿಎಸ್ ಗುದ್ದಾಟ ತಾರಕಕ್ಕೇರುತ್ತಿದೆ.

ಚಿನ್ಮಯಿ ಶೆಟ್ಟಿ ಕುಟುಂಬಕ್ಕೆ ಪರಿಹಾರ ಚೆಕ್ ವಿತರಣೆ

ಹೆಬ್ರಿ: ಆರ್‌ಸಿಬಿ ಸಂಭ್ರಮಾಚರಣೆಯ ವೇಳೆ ಕಾಲ್ತುಳಿತಕ್ಕೆ ಬಲಿಯಾದ ಹೆಬ್ರಿ ಮೂಲದ ಪ್ರತಿಭಾವಂತ ವಿದ್ಯಾರ್ಥಿನಿ ಚಿನ್ಮಯಿ ಶೆಟ್ಟಿ ಅವರ ಹೆಬ್ರಿ, ಇಂದಿರಾ ನಗರದಲ್ಲಿರುವ ಮನೆಗೆ ಉಡುಪಿ ಜಿಲ್ಲಾಧಿಕಾರಿ ಡಾ. ವಿದ್ಯಾ ಕುಮಾರಿ ಭೇಟಿ ನೀಡಿ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಕೊಡ ಮಾಡಿದ 25 ಲಕ್ಷ ರು. ಚೆಕ್‌ನ್ನು ಮಂಗಳವಾರ ರಂದು ತಂದೆ ಕರುಣಾಕರಶೆಟ್ಟಿ ಅವರಿಗೆ ಹಸ್ತಾಂತರಿಸಿದರು.

ಆಕೆಯ ತಂದೆ ತಾಯಿ ಮತ್ತು ಸಹೋದರನಿಗೆ ಸಾಂತ್ವನ ಹೇಳಿ ಬಳಿಕ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಸರಕಾರದ ಸೂಚನೆ ಮೇರೆಗೆ ಈ ದಿನ ಅವರ ಮನೆಗೆ ಭೇಟಿ ನೀಡಿ ಪರಿಹಾರದ ಚೆಕ್‌ನ್ನು ಹಸ್ತಾಂತರಿಸಿದ್ದೇವೆ. ಮನೆಯವರ ದುಃಖದಲ್ಲಿ ಸದಾ ಜಿಲ್ಲಾಡಳಿತ ಅವರೊಂದಿಗೆ ಇದೆ. ಯಾವುದೇ ಸಮಸ್ಯೆ ಆದರೂ ನಮ್ಮನ್ನು ಸಂಪರ್ಕಿಸಬಹುದು ಎಂದು ಹೇಳಿದರು.



ಚಿನ್ಮಯಿ ಶೆಟ್ಟಿ ಅವರ ಹೆಬ್ರಿ ಇಂದಿರಾ ನಗರದಲ್ಲಿರುವ ಮನೆಗೆ ಉಡುಪಿ ಜಿಲ್ಲಾಧಿಕಾರಿ ಡಾ. ವಿದ್ಯಾ ಕುಮಾರಿ ಭೇಟಿ ನೀಡಿ 25 ಲಕ್ಷ ರು. ಚೆಕ್‌ನ್ನು ತಂದೆ ಕರುಣಾಕರಶೆಟ್ಟಿ ಅವರಿಗೆ ಹಸ್ತಾಂತರಿಸಿದರು.

ಭಾವುಕರಾದ ಜಿಲ್ಲಾಧಿಕಾರಿ: ಚಿನ್ಮಯಿ ಶೆಟ್ಟಿಯ ತಂದೆ ತಾಯಿ ಸಹೋದರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ, ತಾಯಿಯನ್ನು ತಬ್ಬಿ ಹಿಡಿದು ನಿಮ್ಮೊಂದಿಗೆ ಸದಾ ನಾವಿದ್ದೇವೆ ಎಂದು ಭಾವುಕರಾದರು.

ನನಗೂ ಸಿಎಂ ಆಗುವ ಆಸೆ: ಸಚಿವ ದರ್ಶನಾಪುರ

ಯಾದಗಿರಿ: ರಾಜ್ಯ ರಾಜಕಾರಣದಲ್ಲಿ ಬದಲಾವಣೆ ಚರ್ಚೆ ಮುನ್ನೆಲೆಗೆ ಬರುತ್ತಿದ್ದಂತೆ ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಸಹ ಮುಖ್ಯಮಂತ್ರಿ ಆಗಬೇಕೆನ್ನುವ ಇಂಗಿತ ವ್ಯಕ್ತಪಡಿಸುವ ಮೂಲಕ ಬಹಿರಂಗವಾಗಿ ನಾನು ಕೂಡಾ ಸಿಎಂ ಆಕಾಂಕ್ಷಿ ಎಂದು ಘೋಷಿಸಿದ್ದಂತಾಗಿದೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸ್ಥಾನದ ಮೇಲೆ ಯಾರಿಗೆ ಆಸೆ ಇರಲ್ಲ. ನಾಳೆ ರಾಹುಲ್ ಗಾಂಧಿ ಕರೆದು ಮುಖ್ಯಮಂತ್ರಿ ಆಗು ಅಂದ್ರೆ ನಾನು ಸಿದ್ಧ ಎಂದರು.

ಇನ್ನೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಚಾರವಾಗಿ ಮಾತನಾಡಿ, ಸತೀಶ ಜಾರಕಿಹೊಳಿ ಕೂಡ ಡಿಕೆಶಿ ಅವರನ್ನು ತೆಗೆದು ಅಧ್ಯಕ್ಷ ಸ್ಥಾನ ಕೊಡಿ ಎಂದು ಎಲ್ಲಿಯೂ ಕೂಡಾ ಹೇಳಿಲ್ಲ, ಎಲ್ಲರಿಗೂ ಆಗುವ ಆಸೆ ಇದ್ದೆ ಇರುತ್ತೆ. ನನಗೆ ಶಾಸಕ ಸ್ಥಾನದಲ್ಲೇ ತೃಪ್ತಿಯಿದೆ ಎಂದರು.

ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆಗೆ ವಿಜಯೇಂದ್ರ ಆಗ್ರಹ

ಕಾಲ್ತುಳಿತ: 13ಕ್ಕೆ ಬೆಂಗಳೂರಿನಲ್ಲಿ ಬಿಜೆಪಿ ಪ್ರತಿಭಟನೆ

ಶಿವಮೊಗ್ಗ: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿನ ಕಾಲ್ತುಳಿತ ಪ್ರಕರಣದಲ್ಲಿ ರಾಜ್ಯ ಸರಕಾರಕ್ಕೆ ಕ್ಲೀನ್ ಚಿಟ್ ಪಡೆಯಲು ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆಗೆ ಆದೇಶಿಸಲಾಗಿದೆ. ಸರಕಾರಕ್ಕೆ ಮಾನ ಮರ್ಯಾದೆ ಇದ್ದರೆ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಲಿ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಲ್ತುಳಿತದ ದುರ್ಘಟನೆಯಲ್ಲಿ ಸಿಎಂ, ಡಿಸಿಎಂ ಹಾಗೂ ಗೃಹ ಸಚಿವರು ಎ 1, ಎ 2 ಹಾಗೂ ಎ 3 ಆರೋಪಿಗಳು. ಆದರೆ ಲೋಪ ಮುಚ್ಚಿ ಹಾಕಲು ಪೊಲೀಸ್ ಅಧಿಕಾರಿಗಳನ್ನು ಹರಕೆಯ ಕುರಿ ಮಾಡಿದ್ದಾರೆ ಎಂದು ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಆರ್ ಸಿಬಿ ಗೆಲುವಿನ ಜನಪ್ರಿಯತೆಯ ವಾತಾವರಣವನ್ನು ವೈಯಕ್ತಿಕ ವರ್ಚಸ್ಸು ಹೆಚ್ಚಿಸಿಕೊಳ್ಳಲು ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಪೈಪೋಟಿಗಿಳಿದಿದ್ದರು. ಹೀಗಾಗಿಯೇ ವಿಧಾನಸೌಧದ ಆವರಣದ ಕಾರ್ಯಕ್ರಮ ಒಬ್ಬರು, ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿನ ವಿಜಯೋತ್ಸವವನ್ನು ಮತ್ತೊಬ್ಬರು ಹಂಚಿಕೊಂಡಿದ್ದರು. ಅದೇ ಕಾರಣಕ್ಕೆ 'ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ದುರ್ಘಟನೆಗೆ ನಾನು ಜವಾಬ್ದಾರ ಅಲ್ಲ' ಎಂದು ಸಿಎಂ ಹೇಳುತ್ತಿದ್ದಾರೆ. ಪರೋಕ್ಷವಾಗಿ ಡಿಸಿಎಂ ಕಡೆ ಬೆಟ್ಟು ಮಾಡುತ್ತಿದ್ದಾರೆ ಎಂದು ಹೇಳಿದರು.

ಬಹಿರಂಗ ಪತ್ರ

ರಾಜ್ಯದ ಇತಿಹಾಸದಲ್ಲಿ ಜೂನ್ 4 ಅತ್ಯಂತ ಕರಾಳ ದಿನ. ಆ ದುರ್ಘಟನೆಯ ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಲು ಸಿಎಂ, ಡಿಸಿಎಂ ಹಾಗೂ ಗೃಹ ಸಚಿವರು ಮುಂದಾಗಬೇಕು.ಆ ನಿಟ್ಟಿನಲ್ಲಿ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಸರಕಾರಕ್ಕೆ ಬಹಿರಂಗ ಪತ್ರ ಬರೆದಿರುವೆ ಎಂದು ಬಿಜೆಪಿ ರಾಜ್ಯಾಧ್ಯ ವಿಜಯೇಂದ್ರ ಪತ್ರ ಪ್ರದರ್ಶಿಸಿದರು.

ಕಾಲ್ತುಳಿತದಲ್ಲಿ 11 ಜನ ಅಮಾಯಕರ ಸಾವಿನ ಪ್ರಕರಣವನ್ನು ಕಾಂಗ್ರೆಸ್ ಹೈಕಮಾಂಡ್ ಯಾವ ರೀತಿ ಪರಿಗಣಿಸಿದೆಯೋ ಗೊತ್ತಿಲ್ಲ. ಆ ಪಕ್ಷದ ಹೈಕಮಾಂಡ್ ಪ್ರಬಲವಾಗಿದ್ದರೆ, ರಾಜ್ಯದ ಜನರ ಆಕ್ರೋಶವನ್ನು ಗ್ರಹಿಸಿ ಇಷ್ಟೊತ್ತಿಗೆ ಸಿಎಂ, ಡಿಸಿಎಂ ಹಾಗೂ ಗೃಹ ಸಚಿವರ ರಾಜೀನಾಮೆ ಪಡೆಯಬೇಕಿತ್ತು. ಆದರೆ ರಾಜ್ಯದಲ್ಲಿ ಪ್ರಬಲರೇ ಅಧಿಕಾರದಲ್ಲಿ ಜಂಡಾ ಹೂಡಿದ್ದಾರೆ. ಇಲ್ಲಿ ಬಾಲವೇ ದೇಹವನ್ನು ಅಲುಗಾಡಿಸುತ್ತಿದೆ. ಹೀಗಾಗಿ ಸರಕಾರ ಹುಚ್ಚು ಕುದುರೆಯಂತೆ ವರ್ತಿಸುತ್ತಿದೆ.

-ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಜೂನ್ 16 ರಂದು ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲೂ ಬಿಜೆಪಿಯಿಂದ ಪ್ರತಿಭಟನೆ ನಡೆಯಲಿದೆ ಎಂದರು.

ಬಳ್ಳಾರಿಯಲ್ಲಿ ಮಾಜಿ ಸಚಿವ ಶ್ರೀರಾಮುಲು ವಿವಾದಾತ್ಮಕ ಹೇಳಿಕೆ

ಮೋದಿ ಪ್ರಧಾನಿಗಿಂತ ಮುಂಚೆ ಭಾರತ ಭಿಕ್ಷುಕರ ದೇಶ ಆಗಿತ್ತು

ಬಳ್ಳಾರಿ: ನರೇಂದ್ರ ಮೋದಿಯವರು ಪ್ರಧಾನಿಯಾಗುವುದಕ್ಕೂ ಮೊದಲು ಭಾರತ ಭಿಕ್ಷುಕರ ದೇಶ ಆಗಿತ್ತು ಎಂದು ಮಾಜಿ ಸಚಿವ ಶ್ರೀರಾಮುಲು ವಿವಾದಾತ್ಮಕ ಹೇಳಿಕೆಯನ್ನು ಕೊಟ್ಟಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನಿ ಮೋದಿ ಸರಕಾರ 11 ವರ್ಷ ಪೂರೈಸಿದ ಹಿನ್ನೆಲೆ ಹನ್ನೊಂದು ವರ್ಷದ ಸಾಧನೆ ಕುರಿತು ಮಾತನಾಡಿದ ಅವರು, ನರೇಂದ್ರ ಮೋದಿ ಬರೋದಕ್ಕೂ ಮೊದಲು ಭಾರತವನ್ನು ಭಿಕ್ಷುಕರ ದೇಶ, ಹಾವಾಡಿಗರ ದೇಶ ಎಂದು ಕರೆಯುತ್ತಿದ್ದರು. ಈಗ ಕಾಲ ಬದಲಾಗಿದೆ, ಇದೀಗ ಭಾರತವನ್ನು ವಿಶ್ವವೇ ನೋಡುವಂತೆ ಮಾಡಿದ್ದಾರೆ. ನೆಹರು ಅವರ ಕಾಲದಲ್ಲಿ ವೈಯಕ್ತಿಕ ಹಿತಾಸಕ್ತಿಗೆ ಕೆಲಸ ಮಾಡಿದ್ದರು. ದೇಶದ ಅಭಿವೃದ್ಧಿ ಬಗ್ಗೆ ನೆಹರು ಕುಟುಂಬ ಚಿಂತನೆ ಮಾಡಿಲ್ಲ. ವೈಯಕ್ತಿಕ ಅಭಿವೃದ್ಧಿ ಹೊಂದಿದ್ದ ಹೊರತು ದೇಶ ಅಭಿವೃದ್ಧಿ ಮಾಡಲಿಲ್ಲ. ಚೀನಾ-ಭಾರತದ ಯುದ್ಧದಲ್ಲಿ ಭಾರತ ಮಂಡಿಯೂರಿತು. ಇದಕ್ಕೆ ನೆಹರು ನಿಲುವು ಕಾರಣವಾಯಿತು. ನೆಹರು ಅವರ ಕಾಲಘಟ್ಟ ಕೆಟ್ಟದಾಗಿತ್ತು, ಸಾವಿರಾರು ಸೈನಿಕರು ಹುತಾತ್ಮರಾದರು ಎಂದು ನೆಹರು ಮತ್ತು ಇಂದಿರಾ ಗಾಂಧಿ ಕಾಲಘಟ್ಟದ ಭ್ರಷ್ಟಾಚಾರದ ವಿವರಣೆ ನೀಡಿದರು.

ಕಳೆದ 70 ವರ್ಷದಲ್ಲಿ ಮಾಡದೇ ಇರೋ ಸಾಧನೆ ಕಳೆದ ಹತ್ತು ವರ್ಷದಲ್ಲಿ ಮೋದಿ ಮಾಡಿದ್ದಾರೆ. ಕಿಸಾನ್ ಸನ್ಮಾನ್ ಯೋಜನೆಯಡಿ ರೈತರಿಗೆ ಆರು ಸಾವಿರ ಹಣ ನೀಡಲಾಗುತ್ತಿದೆ, ಆದರೆ ರಾಜ್ಯ ಸರಕಾರ ನಾಲ್ಕು ಸಾವಿರ ಹಣ ನೀಡುತ್ತಿಲ್ಲ. ಪಹಲ್ಗಾಮ್ ದಾಳಿ ಬಳಿಕ ಉಗ್ರರ ತಾಣ ನಾಶ ಮಾಡಲಾಗಿದೆ. ಮೋದಿ ನೇತೃತ್ವದ ದೇಶದಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಲಾಗಿದೆ.

-ಶ್ರೀರಾಮುಲು, ಮಾಜಿ ಸಚಿವ

ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅಭಿಮತ

ಪ್ರವಾಸಿ ಪ್ರಪಂಚ ಪರಿಪೂರ್ಣ, ಅಚ್ಚುಕಟ್ಟು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವಿಶ್ವವಾಣಿ ಸಮೂಹದಿಂದ ಲೋಕಾರ್ಪಣೆಗೊಂಡಿರುವ ಪ್ರವಾಸಿ ಪ್ರಪಂಚ ಪತ್ರಿಕೆ ಪರಿಪೂರ್ಣ, ಅಚ್ಚುಕಟ್ಟು ಹಾಗೂ ಪ್ರವಾಸಿಗರಿಗೆ ಮಾರ್ಗದರ್ಶಿಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ರಮಣಶ್ರೀ ಕಂಫರ್ಟ್‌ನಲ್ಲಿ ರಮಣ ಶ್ರೀ ಸಮೂಹದ ಮುಖ್ಯಸ್ಥ, ಅಂಕಣಕಾರ ಎಸ್. ಷಡಕ್ಷರಿ ಅವರು ಆಯೋಜಿಸಿದ್ದ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಇತ್ತೀಚಿಗೆ ಲೋಕಾರ್ಪಣೆಗೊಂಡ ಪ್ರವಾಸಿ ಪ್ರಪಂಚ ವಾರಪತ್ರಿಕೆಯ ಯಶಸ್ಸನ್ನು ಸಂಭ್ರಮಿಸಲಾಯಿತು. ಈ ವೇಳೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ವಿಶ್ವೇಶ್ವರ ಭಟ್ ಅವರ ಸಾಹಸಮಯ ವ್ಯಕ್ತಿ. ಪ್ರವಾಸಿ ಪ್ರಪಂಚ ಪತ್ರಿಕೆಯಲ್ಲಿ ಪ್ರವಾಸಿಗರ ಅದ್ಭುತ ಅನುಭವ, ಪ್ರವಾಸಿ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೊದಲ ಸಂಚಿಕೆಯಲ್ಲಿಯೇ, ಉತ್ತಮ ಅಭಿರುಚಿಯ ಚಿತ್ರಣ ಇದೆ. ಸಾಹಸಪ್ರಿಯರಾದ ವಿಶ್ವೇಶ್ವರ ಭಟ್ಟರು ಯಾವಾಗಲೂ ವಿಶೇಷವಾದದನ್ನೇ ಮಾಡುತ್ತಾರೆ. ರಾಜ್ಯಕ್ಕೆ ಪ್ರಪಂಚದ ಮೂಲೆಮೂಲೆಗಳಲ್ಲಿರುವ ಪ್ರವಾಸಿ ಸ್ಥಳಗಳನ್ನು ತಮ್ಮ ಬರವಣಿಗೆಯ ಮೂಲಕ ತಿಳಿಸುತ್ತಿರುವ ಅವರು, ಇತ್ತೀಚಿನ ದಿನಗಳಲ್ಲಿ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಮೂಲಕ ಕರುನಾಡಿನ ಎಲೆಮರೆಯ ಕಾಯಿಗಳನ್ನು ವಿದೇಶಗಳಲ್ಲಿ ಸನ್ಮಾನಿಸಿ, ಗೌರವಿಸುವ ಕೆಲಸವನ್ನು ಮಾಡುತ್ತಿದ್ದಾರೆ.

ಕಾರ್ಯಕ್ರಮದಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಸುಷ್ಮಾ ಭಟ್, ರಮಣ ಶ್ರೀ ಸಮೂಹದ ಅಧ್ಯಕ್ಷ ಎಸ್. ಷಡಕ್ಷರಿ, ಗಡಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿ. ಸೋಮಶೇಖರ್, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್, ವೈ.ಕೆ. ಮುದ್ದುಕೃಷ್ಣ, ಉದ್ಯಮಿ ಕಿರಣ್, ಕನ್ನಡಪ್ರಭ ಪ್ರಧಾನ ಸಂಪಾದಕ ರವಿ ಹೆಗಡೆ, ಉದಯವಾಣಿ ಸಂಪಾದಕ ರವಿಶಂಕರ್ ಭಟ್, ಸಂಯುಕ್ತ ಕರ್ನಾಟಕ ಸಂಪಾದಕ ಮಹಾಬಲ ಸೀತಾಳಭಾವಿ, ಕನ್ನಡಪ್ರಭ ಪುರವಣಿ ಸಂಪಾದಕ, ಸಾಹಿತಿ ಜೋಗಿ, ಹಿರಿಯ ಸಾಹಿತಿ ಬಿ.ಆರ್. ಲಕ್ಷ್ಮಣರಾವ್, ಮಸ್ಕತ್‌ನಲ್ಲಿ ನೆಲೆಸಿರುವ ಉದ್ಯಮಿ ಪ್ರಸಾದ್ ದಂಪತಿ, ಅಮೆರಿಕದಲ್ಲಿ ನೆಲೆಸಿರುವ ರೂಪಾ ಸಿದ್ದರಾಜು - ಸಿದ್ದರಾಜು, ವೀರೇಂದ್ರ, ಷಡಕ್ಷರಿ, ಅರುಣಾ ಷಡಕ್ಷರಿ, ದಿಯಾ ವೀರೇಂದ್ರ, ಸುಬೀಕ್ಷಾ, ಸತೀಶ್, ನಂಜನಗೂಡು ಮೋಹನ್ ಸೇರಿ ಅನೇಕರು ಭಾಗವಹಿಸಿದ್ದರು.

ರಮಣಶ್ರೀ ಸಮೂಹದ ಮುಖ್ಯಸ್ಥ ಎಸ್. ಷಡಕ್ಷರಿ ಅವರು ಆಯೋಜಿಸಿದ್ದ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ಪ್ರವಾಸಿ ಪ್ರಪಂಚ ಪತ್ರಿಕೆಯನ್ನು ಬಿಡುಗಡೆಗೊಳಿಸಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ. ಈ ವೇಳೆ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಸುಷ್ಮಾ ಭಟ್, ರಮಣ ಶ್ರೀ ಸಮೂಹದ ಅಧ್ಯಕ್ಷ ಎಸ್. ಷಡಕ್ಷರಿ, ಗಡಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿ. ಸೋಮಶೇಖರ್, ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್, ವೈ.ಕೆ. ಮುದ್ದುಕೃಷ್ಣ, ಉದ್ಯಮಿ ಕಿರಣ್ ಇದ್ದರು.

ಕನ್ನಡ ಪತ್ರಿಕೋದ್ಯಮದಲ್ಲಿಯೇ ಪ್ರವಾಸ, ಆತಿಥ್ಯ ಕ್ಷೇತ್ರಕ್ಕೆ ಮೀಸಲಾಗಿ ಆರಂಭವಾಗಿರುವ ಮೊದಲ ಪತ್ರಿಕೆ ಎನ್ನುವ ಹೆಗ್ಗಳಿಕೆಯನ್ನು ಪ್ರವಾಸಿ ಪ್ರಪಂಚ ಪಡೆದಿದೆ. ವಿಶ್ವೇಶ್ವರ ಭಟ್ಟರ ಸಾರಥ್ಯದಲ್ಲಿ ಮೂಡಿಬರುತ್ತಿ ರುವ ಪ್ರವಾಸಿ ಪ್ರಪಂಚ ಪ್ರಪಂಚದಲ್ಲೇ ಅದ್ಭುತ ಪತ್ರಿಕೆ ಆಗಲಿ. ದೇಶದ ಮುಂಚೂಣಿ ಪತ್ರಿಕೆ ಆಗಲಿ.

-ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ

ಟ್ವೀಟೂ-ಖಾರಾ

ಕರ್ನಾಟಕ ಬಿಜೆಪಿ

ಕಾಂಗ್ರೆಸ್ ಸರಕಾರದ ಪ್ರಭಾವಿಗಳ ತಾಳಕ್ಕೆ ತಕ್ಕಂತೆ ಪೊಲೀಸರು ಕುಣಿದರೆ, ಅದರ ಪ್ರತಿಫಲವನ್ನು ಅನುಭವಿಸಬೇಕಾಗುತ್ತದೆ. ಈಗಾಗಲೇ ಬೆಂಗಳೂರಿನ ದುರ್ಘಟನೆ ಪೊಲೀಸರಿಗೆ ಎಚ್ಚರಿಕೆಯ ಗಂಟೆಯಾಗಿದೆ. ನ್ಯಾಯೋಚಿತವಾಗಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲಿ, ನಮ್ಮ ಹಿಂದೂ ಕಾರ್ಯಕರ್ತರ ನೈತಿಕ ಬಲ ಕುಗ್ಗಿಸಲು ಯತ್ನಿಸಿದರೆ ಪರಿಣಾಮ ಎದುರಿಸಲು ಸರಕಾರ ಸಿದ್ಧವಾಗಲಿ. ಕರಾವಳಿಯಲ್ಲಿ ಶಾಂತಿ ಸುವ್ಯವಸ್ಥೆ ನೆಲೆಸಬೇಕು, ದೇಶವಿದ್ರೋಹಿ ಶಕ್ತಿಗಳ ಕೋಮು ಅಟ್ಟಹಾಸ ನಿಲ್ಲಬೇಕು ಎಂಬುದು ಪಕ್ಷದ ಒತ್ತಾಯವಾಗಿದೆ.

ಕುಶಾ . ಎನ್

ನೀವು, ನಿಮ್ಮ ಪಕ್ಷ ಸರಿ ಇದ್ದಿದ್ರೆ, ಇವೆಲ್ಲಾ ಆಗ್ತಾ ಇರಲಿಲ್ಲ.

ಬಾಗಲಕೋಟೆ ತೋಟಗಾರಿಕಾ ವಿವಿ 14ನೇ ಘಟಿಕೋತ್ಸವ | ಗವರ್ನರ್ ಗೆಹ್ಲೋಥ್ ಪದವಿ ಪ್ರದಾನ

ಬಿಎಸ್‌ಸಿ, ಎಂಎಸ್‌ಸಿ ವಿದ್ಯಾರ್ಥಿನಿಯರ ಚಿನ್ನದ ಬೇಟೆ

ಅಭಿಷೇಕ ಪಾಟೀಲ ಬಾಗಲಕೋಟೆ

ವಿದ್ಯಾಭ್ಯಾಸದಲ್ಲಿ ತಾವೇ ಮುಂದು ಎಂದು ಮತ್ತೊಮ್ಮೆ ಬಾಗಲಕೋಟೆ ತೋಟಗಾರಿಕೆ ವಿವಿ ಮೂಲಕ ಮಹಿಳೆಯರು ಸಾಭೀತು ಮಾಡಿದ್ದಾರೆ. ತೋಟಗಾರಿಕಾ ಪದವಿ ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ ಮೊದಲೆರಡು ಸ್ಥಾನಗಳನ್ನು ಪಡೆದ ವಿದ್ಯಾರ್ಥಿನಿಯರು ಚಿನ್ನದ ಪದಕಕ್ಕೆ ಹೆಮ್ಮೆಯಿಂದ ಕೊರಳೊಡ್ಡಿದ್ದರು.

ತೋಟಗಾರಿಕೆ ವಿಜ್ಞಾನಿಗಳ ವಿಶ್ವವಿದ್ಯಾಲಯದ 14ನೇ ಘಟಿಕೋತ್ಸವದಲ್ಲಿ 508 ಬಿಎಸ್ಸಿ (ಹಾನರ್ಸ್), 144 ಬಿ.ಟೆಕ್ (ಆಹಾರ ತಂತ್ರಜ್ಞಾನ) ಹಾಗೂ ಪಿಎಚ್.ಡಿಯ 9 ವಿಭಾಗಗಳ 42 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಘಟಿಕೋತ್ಸವದಲ್ಲಿ ಪಾಲ್ಗೊಂಡ ಗವರ್ನರ್ ಥಾವರ್‌ಚಂದ್ ಗೆಹ್ಲೋಥ್ ಪದವಿ ಪ್ರದಾನ ಮಾಡಿದರು.

ತಾಯಿ, ಅಣ್ಣನ ಪ್ರೋತ್ಸಾಹದಿಂದ 16 ಚಿನ್ನ: ಬಿಎಸ್‌ಸಿ ತೋಟಗಾರಿಕೆ ಕೃಷಿಯಲ್ಲಿ 16 ಚಿನ್ನದ ಪದಕ ಪಡೆದ ಕೊಪ್ಪಳ ಜಿಲ್ಲೆಯ ತಳಬಾಳದ ಭೀಮವ್ವ, ತಾಯಿ ಮತ್ತು ಅಣ್ಣನ ಪ್ರೋತ್ಸಾಹದಿಂದ ನಾನು ಸಾಧನೆ ಮಾಡಲು ಸಾಧ್ಯವಾಯಿತು. ನನ್ನ ಓದಿಗೆ ಯಾವುದೇ ಕೊರತೆಯಾಗದಂತೆ ನೋಡಿಕೊಂಡರು ಎಂದು ಕಣ್ಣಂಚಲ್ಲಿ ನೀರು ತಂದರು. ನಮ್ಮ ಮನೆಯಲ್ಲಿ ಯಾರೂ ಚೆನ್ನಾಗಿ ಓದಿಲ್ಲ. ನೀನು ಓದು ಎಂದು ಅಣ್ಣ ಪ್ರಕಾಶ, ತಂದೆ ಇಲ್ಲದ ಕೊರತೆಯನ್ನು ನೀಗಿಸಿದ್ದಾರೆ. ಸಂಬಂಧಿ ಅಣ್ಣನೊಬ್ಬ ಪದವಿಯಲ್ಲಿ ಒಂದು ಚಿನ್ನದ ಪದಕ ಪಡೆದಿದ್ದ, ಆತನ ಸಂಭ್ರಮ ನೋಡಿ ನಾನು ಚಿನ್ನದ ಪದಕ ಪಡೆಯುವ ಕನಸು ಕಂಡಿದ್ದೆ. ನಮ್ಮ ಅವ್ವ ತುಂಬುತ್ತಿದ್ದ ಧೈರ್ಯ ಹಾಗೂ ನನ್ನ ಛಲ ಈ ಸಾಧನೆ ಸಾಧ್ಯವಾಯಿತು ಎಂದರು.

ಅಮೂಲ್ಯ ಕೆಎಎಸ್ ಅಧಿಕಾರಿ ಕನಸು: ಸೈನಿಕನಾಗಿದ್ದ ಅಪ್ಪ ಶಿಸ್ತಿನಿಂದ ಬೆಳೆಸಿದ ಪರಿಣಾಮ ಇಂದು ನಾನು ಸ್ನಾತ್ತಕೋತ್ತರದಲ್ಲಿ 4 ಚಿನ್ನ ಪಡೆಯಲು ಸಾಧ್ಯವಾಯಿತು ಎಂದು ಚಿಕ್ಕಮಗಳೂರು ಜಿಲ್ಲೆಯ ಹೆಚ್ಚೆ ಗ್ರಾಮದ ಅಮೂಲ್ಯ ಎಚ್.ಟಿ ಹೇಳಿಕೊಂಡರು. ಕೆಎಎಸ್ ಅಧಿಕಾರಿಯಾಗಿ ಜನರ ಸೇವೆ ಮಾಡುವ ಅಭಿಲಾಷೆಯಿಂದ ಸದ್ಯ ಕೆಪಿಎಸ್ಸಿ ಪರೀಕ್ಷೆಗೆ ತಯಾರಿ ಮಾಡುತ್ತಿದ್ದೇನೆ. ಈ ಹಿಂದೆ ಅಗ್ನಿಶಾಮಕ ಇಲಾಖೆಯಲ್ಲಿ ಅಧಿಕಾರಿಯಾಗಿದ್ದ ನನ್ನ ಅಜ್ಜ ರಾಷ್ಟ್ರಪತಿ ಪದಕ ಪಡೆದಿದ್ದಾರೆ. ಅಜ್ಜ-ಅಜ್ಜಿ, ಅಪ್ಪ-ಅಮ್ಮನ ಪ್ರೋತ್ಸಾಹ ನನ್ನ ಸಾಧನೆಗೆ ಬೆನ್ನೆಲುಬು ಎಂದು ಸಂತಸ ವ್ಯಕ್ತಪಡಿಸಿದರು.

ಬ್ಯಾಂಕ್ ಅಧಿಕಾರಿಯಾಗುವ ಹಂಬಲ: ಎಂಎಸ್ಸಿಯಲ್ಲಿ ಕೊಡಗಿನ ಸೋಮವಾರಪೇಟೆ ತಾಲೂಕಿನ ಈರಳೆ ವಳಮುಡಿಯ ಗ್ರಾಮದ ಧನ್ಯಶ್ರೀ ಎಸ್.ಜಿ ಕೂಡ ಸ್ನಾತ್ತಕೋತ್ತರದಲ್ಲಿ 4 ಚಿನ್ನದ ಪದವಿ ಪಡೆದು ಸಾಧನೆ ಮಾಡಿದ್ದಾಳೆ. ಸದ್ಯ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿರುವ ಧನ್ಯಶ್ರೀ ಐಪಿಎಸ್ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದಾರೆ.

ಭೀಮವ್ವ

ಅಮೂಲ್ಯ

ಧನ್ಯಶ್ರೀ

ನನಗಿರುವ ಮೂವರು ಮಕ್ಕಳಲ್ಲಿ ಸಹನಾ ದೊಡ್ಡವಳು, 2ನೇ ಮಗಳು ಸೌಮ್ಯಾ ಬಿಎಸ್ಸಿ ನರ್ಸಿಂಗ್ ಓದುತ್ತಿದ್ದಾಳೆ. ಮಗ ಸಾಗರ ಎಂಬಿಬಿಎಸ್ ಮೊದಲ ವರ್ಷ. ಮೂವರು ಮಕ್ಕಳಿಗೂ ಸರಕಾರಿ ಸೀಟ್ ದೊರೆತಿದೆ. ಅವರು ಓದುವಷ್ಟು ಓದಿಸುತ್ತೇವೆ.

-ಮಂಜುನಾಥ ಪಟಗೆ, ಸಹನಾ ತಂದೆ.

ಪಿಎಚ್.ಡಿಯಲ್ಲಿ ಪವನ್‌ಗೆ 4 ಚಿನ್ನ

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ಪಿಟ್ಲಾಲಿಯ ಕೃಷಿ ಕುಟುಂಬದಿಂದ ಬಂದ ಪವನ್ ಪಿಎಚ್.ಡಿಯಲ್ಲಿ 4 ಚಿನ್ನದ ಪದಕ ಪಡೆದಿದ್ದಾರೆ. ಇನ್ನೂ ಬಾಗಲಕೋಟೆಯ ವಂದನಾ ಹಾಗೂ ತಮಿಳುನಾಡಿನ ತಿರುವಣ್ಣಾಮಲೈನ ಮಹಾಲಕ್ಷ್ಮೀ.ಎಂ ತಲಾ 2 ಚಿನ್ನದ ಪದಕ ಪಡೆದಿದ್ದಾರೆ.

ಟೈಲರ್ ಮಗಳಿಗೆ 17 ಚಿನ್ನದ ಪದಕ

ಟೈಲರ್ ಮಗಳು ಸಹನಾ ಪಟಗೆ ಬಿಎಸ್ಸಿ ತೋಟಗಾರಿಕೆಯಲ್ಲಿ 17 ಚಿನ್ನದ ಪದಕ ಪಡೆಯುವ ಮೂಲಕ ತೋಟಗಾರಿಕೆ ವಿವಿಗೆ ಪ್ರಥಮ ಸ್ಥಾನ ಪಡೆದು ಗಮನ ಸೆಳೆದಿದ್ದಾರೆ. ಸಹನಾ ಪಟಗೆ ಮೂಲತಃ ವಿಜಯನಗರ ಜಿಲ್ಲೆಯ ಹೂವಿನ ಹಡಗಲಿ ತಾಲೂಕಿನ ಹೊಳಲು ಪಟ್ಟಣದವರು. ಟೈಲರ್ ವೃತ್ತಿ ಮಾಡಿಕೊಂಡಿರುವ ಸಹನಾ ತಂದೆ ಮಂಜುನಾಥ್ ಪ್ರತಿಭಾವಂತ ಮಗಳನ್ನು ಉನ್ನತ ವ್ಯಾಸಂಗ ಮಾಡಿಸಿದ್ದಾರೆ. ಸದ್ಯ ಕೋಯಂಬತ್ತೂರಿನ ಟಿಎನ್‌ಎಯು ಕಾಲೇಜಿನಲ್ಲಿ ತರಕಾರಿ ವಿಭಾಗದಲ್ಲಿ ಎಂಎಸ್ಸಿ ಮಾಡುತ್ತಿರುವ ಸಹನಾ ವಿಜ್ಞಾನಿಯಾಗುವ ಕನಸು ಕಂಡಿದ್ದಾರೆ. ಚಿನ್ನದ ಪದಕ ವಿಜೇತೆ

ತೋಟಗಾರಿಕೆ ಬಿಎಸ್ಸಿಯಲ್ಲಿ 17 ಚಿನ್ನದ ಪದಕ ಪಡೆದ ಸಹನಾ ಪಟಗೆ, ತಂದೆ ತಾಯಿ ಜತೆ.

ಸಹನಾ ಪಟಗೆ ಸಂತಸ ವ್ಯಕ್ತಪಡಿಸಿ, ನನ್ನ ಕನಸಿಗೆ ಪೋಷಕರು ಬೆಂಬಲವಾಗಿ ನಿಂತರು. 4.5 ಎಕರೆ ಜಮೀನಿನಲ್ಲಿ ಕೃಷಿ ಹಾಗೂ ಟೈಲರಿಂಗ್ ಮಾಡಿ ನನ್ನ ತಂದೆ ನನಗೆ ಶಿಕ್ಷಣ ಕೊಡಿಸಿದ್ದಾರೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಇದು ನಿರ್ಲಕ್ಷಿಸುವ ಸಂಗತಿಯಲ್ಲ

ಮಹಾರಾಷ್ಟ್ರದ ಥಾಣೆ ನಗರದ ಬಳಿ ಕಿಕ್ಕಿರಿದು ತುಂಬಿದ್ದ 'ಲೋಕಲ್ ಟ್ರೇನ್'ನಿಂದ ಕೆಳಗೆ ಜಾರಿಬಿದ್ದ ಆರು ಮಂದಿ ಪ್ರಯಾಣಿಕರು ಅಸುನೀಗಿದ ಮತ್ತು ಏಳು ಮಂದಿ ಗಾಯಗೊಂಡ ಸುದ್ದಿಯನ್ನು ನೀವು ಈಗಾಗಲೇ ಓದಿದ್ದೀರಿ. ಮುಂಬೈನ ಲೋಕಲ್ ಟ್ರೇನ್‌ನಲ್ಲಿ ಪ್ರಯಾಣಿಸಿದ ಅನುಭವ ಇರುವವರಿಗೆ, ಜನರು ಅದೆಷ್ಟರ ಮಟ್ಟಿಗೆ ಅವುಗಳಲ್ಲಿ ಕಿಕ್ಕಿರಿದು ತುಂಬಿಕೊಂಡಿರುತ್ತಾರೆ, ನಿರ್ದಿಷ್ಟ ನಿಲ್ದಾಣದಲ್ಲಿ ಹತ್ತುವುದು ಮತ್ತು ಇಳಿಯುವುದು ಅದೆಷ್ಟರ ಮಟ್ಟಿಗೆ ಹರಸಾಹಸವೇ ಆಗಿರುತ್ತದೆ ಎಂಬುದು ಗೊತ್ತಿರುತ್ತದೆ. ಬೋಗಿಯೊಳಗೆ ನಿಲ್ಲುವುದಕ್ಕೂ ಜಾಗವಿಲ್ಲದೆ, ಕಿಟಕಿಯ ಸರಳಗಳನ್ನು ಹಿಡಿದು ಬಾಗಿಲಲ್ಲಿ ನೇತಾಡುವವರ ಸಂಖ್ಯೆ ಸಾಕಷ್ಟಿರುವುದನ್ನೂ ಇಲ್ಲಿ ಕಾಣಬಹುದು. ಇಂಥ ವೇಳೆ ದಣಿವಿನಿಂದಲೋ ಅಥವಾ ಯಾರಾದರೂ ಗೊತ್ತಾಗದೆ ತಳ್ಳಿದಾಗಲೋ ಪ್ರಯಾಣಿಕರು ಕೆಳಗೆ ಬೀಳುವ ಸಾಧ್ಯತೆ ಸಾಕಷ್ಟಿರುತ್ತದೆ. ಹೀಗಾಗಿ ಇಂಥ ಪ್ರಯಾಣ ಯಾವತ್ತಿಗೂ ಅಪಾಯಕಾರಿಯೇ. ಸಾಕಷ್ಟು ವರ್ಷಗಳ ಹಿಂದೆ ಬೆಂಗಳೂರಿನ ನಗರ ಸಾರಿಗೆ ಬಸ್‌ಗಳಲ್ಲೂ ಇಂಥ ದೃಶ್ಯವನ್ನು ಕಾಣಬಹುದಿತ್ತು; ಈ ಪೈಕಿ, ಬಸ್ಸಿನೊಳಗೆ ಸಾಕಷ್ಟು ಜಾಗವಿದ್ದರೂ ಶೋಕಿಗಾಗಿ ಬಾಗಿಲಲ್ಲಿ/ಫುಟ್‌ಬೋರ್ಡ್ ಮೇಲೆ ನಿಂತುಕೊಳ್ಳುವ ಪ್ರಯಾಣಿಕರೂ ಸಾಕಷ್ಟು ಇರುತ್ತಿದ್ದರು ಎನ್ನಿ. ಆದರೆ ನಗರ ಸಾರಿಗೆ ಬಸ್‌ಗಳಿಗೆ ಸ್ವಯಂಚಾಲಿತ ಬಾಗಿಲು ಅಳವಡಿಸುವ ಪರಿಪಾಠ ಬಂದ ಮೇಲೆ ಇಂಥ ಕಸರತ್ತುಗಳು ಮತ್ತು ಅದರಿಂದಾಗುತ್ತಿದ್ದ ಅಪಘಾತಗಳು ತಗ್ಗಿದವು ಎನ್ನಬೇಕು. ಇದನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡು, ಮುಂಬೈ ಸೇರಿದಂತೆ ವಿವಿಧೆಡೆಯ ನಗರ ಸಾರಿಗೆಯ ಟ್ರೇನ್‌ಗಳಲ್ಲೂ ಸ್ವಯಂಚಾಲಿತ ಬಾಗಿಲು ಅಳವಡಿಸುವ ಕುರಿತು ಚಿಂತನೆಯಾಗಬೇಕು. ಮತ್ತೊಂದೆಡೆ, ಕರ್ನಾಟಕ ಸೇರಿದಂತೆ ಬಹಳಷ್ಟು ರಾಜ್ಯಗಳ ಗ್ರಾಮಾಂತರ ಪ್ರದೇಶಗಳಲ್ಲಿ ಖಾಸಗಿ ಬಸ್ಸಿನೊಳಗೆ ಜಾಗ ಸಿಗದವರು ಚಾವಣಿಯನ್ನೇರಿ ಕೂತು ಊರು ತಲುಪುವ ದೃಶ್ಯವೂ ಸಾಮಾನ್ಯ. ಇದು ಕೂಡ ಬಾಗಿಲಲ್ಲಿ ಜೋತಾಡುವಷ್ಟೇ ಅಪಾಯಕಾರಿ. ಇಂಥ ದುಸ್ಸಾಹಸಗಳು ಇನ್ನಾದರೂ ನಿಲ್ಲಬೇಕು. ಜೀವವು ಎಲ್ಲಕ್ಕಿಂತ ಅಮೂಲ್ಯವಾದುದು ಎಂಬುದನ್ನು ಇಂಥ ಕಸರತ್ತುಗಳಲ್ಲಿ ತೊಡಗುವವರು ಅರಿಯಬೇಕು.

ಸೊಂಪಾದಕೀಯ

ಹಣ ಮತ್ತು ಹೆಣದ ಸುತ್ತಮುತ್ತ

ಆರ್‌ಸಿಬಿ ಗೆಲುವಿನ ಸಂಭ್ರಮಾಚರಣೆ ವೇಳೆ ಕಾಲ್ತುಳಿತದಿಂದ ಸತ್ತವರಿಗೆ ಸರಕಾರ ಪರಿಹಾರದ ಹಣ ವಿಲೇವಾರಿ ಮಾಡುತ್ತಿದೆ. ಈ ಸಂದರ್ಭದಲ್ಲಿ ಸತ್ತವರ ಪೋಷಕರಲ್ಲಿ ಕೆಲವರು ನಡೆದುಕೊಳ್ಳುತ್ತಿರುವ ರೀತಿ ಮಾತ್ರ ಸತ್ತ ಅವರ ಮಕ್ಕಳಿಗೆ ಗೌರವ ತರುವಂತೆ ಇಲ್ಲ ಅನ್ನೋದು ವಿಪರ್ಯಾಸ. ಮೃತನೊಬ್ಬನ ತಂದೆ ನಿನ್ನೆ 25 ಲಕ್ಷ ರುಪಾಯಿ ಪಡೆದುಕೊಂಡು ಇದು ಸಾಕಾಗಲ್ಲ ಅನ್ನೋ ರೀತಿ ಮಾತಾಡಿದ್ದಾನೆ. ತಮ್ಮ ಮುಂದೆ ಮೀಡಿಯಾದವರು ಮೈಕ್ ಹಿಡಿದಿದ್ದೇ ತಡ, 'ನಾವು ತುಂಬಾ ಅಂದ್ರೆ ತುಂಬಾ ಬಡವರು, ತಿನ್ನೋಕೆ ಗತಿಯಿಲ್ಲ' ಅಂತ ಮಾತಾಡಿರೋ ಈತ ಸಾಲ ಮಾಡಿಕೊಂಡಿದ್ದಾನಂತೆ. ಪಾಪ, ಮಗ ಸತ್ರೆ ನಿನ್ನ ಸಾಲ ತೀರಿಸ್ತೀವಿ ಅಂತ ಇವರಿಗೆ ಯಾವ ಸರಕಾರ ಹೇಳಿತ್ತೋ ಗೊತ್ತಿಲ್ಲ. ಆದರೆ ಪರಿಹಾರ ಎಷ್ಟು ಕೊಡಬೇಕು ಮತ್ತೆ ಅಂತ ಕೇಳಿದ್ರೆ, '50 ಲಕ್ಷ ರುಪಾಯಿ ಕೊಡಬೇಕು, ಅದೂ ಸಾಕಾಗಲ್ಲ' ಎಂದಿದ್ದಾನೆ. ತಿನ್ನೋಕೆ ಗತಿ ಇಲ್ಲದ ಈತ 50 ಲಕ್ಷ ರುಪಾಯಿ ಸಾಲ ಯಾಕೆ ಮಾಡಿದ ಅನ್ನೋದು ಯಕ್ಷ ಪ್ರಶ್ನೆ ಮತ್ತು ಲಕ್ಷ ಪ್ರಶ್ನೆ. ಆದರೆ ಲಕ್ಷಕ್ಕೂ ಮೀರಿದ ಮಿಲಿಯನ್ ಡಾಲರ್ ಪ್ರಶ್ನೆ ಅಂದ್ರೆ, ತಿನ್ನೋಕೂ ಗತಿ ಇಲ್ಲದ ಈತನಿಗೆ 50 ಲಕ್ಷ ರುಪಾಯಿ ಸಾಲ ಹೆಂಗೆ ಸಿಕ್ತು, ಕೊಟ್ಟವರು ಯಾರು ಅನ್ನೋದು. ಈತ ನೋಡಿದ್ರೆ ಹೀಗೆ ಮಗನ ಸಾವಲ್ಲಿ ದುಡ್ಡು ಮಾಡಿಕೊಳ್ಳುವ ಆತುರದಲ್ಲಿದ್ದರೆ, ಅತ್ತ ಇನ್ನೊಬ್ಬ ತಂದೆ ಮಗ ಸತ್ತ ಮರುದಿನವೇ 'ಬಿಜೆಪಿ, ಕಾಂಗ್ರೆಸ್' ಅಂತ ರಾಜಕೀಯ ಮಾತಾಡಿ ತನ್ನ ಬೇಳೆ ಬೇಯಿಸಿಕೊಳ್ತಾ ಇದ್ದಾನೆ. ಮಗನ ಸಮಾಧಿ ಮೇಲೆ ಬರ್ಮುಡಾ ಹಾಕಿಕೊಡು ಮಲಗಿ ಪೋಸು ಕೊಡುವ ಈತ, ಯಾರಾದ್ರೂ ಫೋಟೋ ತೆಗೀತಿದ್ದಾರೋ ಇಲ್ಲವೋ ಅಂತ ಮೆಲ್ಲಗೆ ಈ ಕಡೆ ತಿರುಗಿ ನೋಡುತ್ತಾನೆ. ಮೀಡಿಯಾದವರ ಮೈಕು, ಕ್ಯಾಮೆರಾ ಕಂಡರೆ ಸಾಕು ಮಗನ ಸಾವನ್ನು ಬಿಟ್ಟು ರಾಜಕೀಯದ ಮಾತಾಡ್ತಾನೆ. ಇನ್ನು ಈತ 100 ಕೋಟಿ ರುಪಾಯಿ ಆಸ್ತಿಯ ಒಡೆಯ ಅಂತೆ. ಮತ್ತೆ ಮತ್ತೆ ಅದನ್ನೇ ಹೇಳುವ ಈತನ ಮಾತುಗಳನ್ನು ಕೇಳಿದ್ರೆ, ಪಾಪ ಮಗನ ಸಾವಿನ ಬೇಸರಕ್ಕಿಂತ ಇರೋ 100 ಕೋಟಿ ರುಪಾಯಿ ಹಣವನ್ನು ಏನು ಮಾಡೋದು ಅನ್ನೋ ಚಿಂತೆಯೇ ಇವನಿಗೆ ಹೆಚ್ಚಾಗಿದೆ ಅನ್ನಿಸಿದ್ರೆ ತಪ್ಪಲ್ಲ.

ಸಂಪಾದಕರ ಸದ್ಯಶೋಧನೆ

ವಿಮಾನ ನೀರಿನ ಮೇಲಿಳಿದರೆ...?

ವಿಮಾನ ಟೇಕಾಫ್ ಆಗಲು ರನ್‌ವೇಗೆ ಹೋಗುವುದಕ್ಕಿಂತ ಮುನ್ನ, ಗಗನಸಖಿಯರು ಪ್ರಯಾಣಿಕರಿಗೆ ಸುರಕ್ಷತಾ ಸೂಚನೆಗಳನ್ನು ನೀಡುತ್ತಾರೆ. ಯಾವ ರೀತಿ ಸೀಟ್ ಬೆಲ್ಟ್ ಕಟ್ಟಿಕೊಳ್ಳಬೇಕು, ತುರ್ತುಸ್ಥಿತಿಯಲ್ಲಿ ಏನು ಮಾಡಬೇಕು... ಮುಂತಾದ ಮಹತ್ವದ ವಿಷಯಗಳ ಬಗ್ಗೆ ಮಾಹಿತಿ ನೀಡುತ್ತಾರೆ. 'ವಿಮಾನ ನೀರಿನ ಮೇಲೆ ಎಮರ್ಜೆನ್ಸಿ ಲ್ಯಾಂಡ್ ಆದರೆ ಏನು ಮಾಡಬೇಕು, ಅಂಥ ಸಂದರ್ಭದಲ್ಲಿ ಲೈಫ್ ಜಾಕೆಟ್ ಹೇಗೆ ಧರಿಸಬೇಕು' ಎಂಬ ಸೂಚನೆ ನೀಡಿದಾಗ ಬಹುತೇಕ ಪ್ರಯಾಣಿಕರು ತುಸು ಗಲಿಬಿಲಿಗೊಳಗಾಗುತ್ತಾರೆ. ಕೆಲವು ಪ್ರಯಾಣಿಕರಿಗೆ ಈ ಸೂಚನೆ ತಕ್ಷಣವೇ ಉಸಿರಾಟ ತೊಂದರೆಯನ್ನುಂಟುಮಾಡಬಹುದು, ಇನ್ನು ಕೆಲವರಿಗೆ ಬೆವರು ಕಿತ್ತುಕೊಂಡು ಬರಬಹುದು. 'ವಿಮಾನ ನೀರಿನಲ್ಲಿ ಬೀಳುತ್ತಾ? ಬಿದ್ದರೆ ಏನು ಮಾಡುವುದು?' ಎಂಬ ಯೋಚನೆ ಅವರಲ್ಲಿ ಮತ್ತಷ್ಟು ಆತಂಕವನ್ನು ಹೆಚ್ಚಿಸುತ್ತದೆ. ಈ ಸೂಚನೆ ಅನಿವಾರ್ಯವಾಗಿದ್ದರೂ, ಅಗತ್ಯವಿಲ್ಲ ಎಂಬುದು ಅನೇಕರ ವಾದ. ಇದು ಪ್ರಯಾಣಿಕರಲ್ಲಿ ಅನಗತ್ಯ ಉದ್ವೇಗವನ್ನುಂಟು ಮಾಡುತ್ತದೆ ಎಂಬುದು ಅವರ ತರ್ಕ. ವಿಮಾನ ಪ್ರಯಾಣ ಎಷ್ಟೇ ಸುರಕ್ಷಿತವಾಗಿರಲಿ, ಪ್ರತಿಯೊಂದು ವಿಮಾನ ಕಂಪನಿಗೂ ತನ್ನ ಪ್ರಯಾಣಿಕರ ಸುರಕ್ಷತೆ ಅತ್ಯಂತ ಮುಖ್ಯ. ಈ ಕಾರಣದಿಂದಲೇ, ಸಾಧ್ಯತೆ ಇರುವ ಅಪಾಯಗಳನ್ನು ವಿವರಿಸಬೇಕಾದುದು ಕರ್ತವ್ಯ ಎಂದು ಭಾವಿಸುತ್ತವೆ. ನೀರಿನಲ್ಲಿ ಲ್ಯಾಂಡ್ ಮಾಡುವ ಸಾಧ್ಯತೆ ಇದ್ದರೂ ಅದು ಬಹಳ ಕಡಿಮೆ, ಆದರೆ ಅದನ್ನು ಸಂಪೂರ್ಣ ತಳ್ಳಿ ಹಾಕುವಂತಿಲ್ಲ. ಈ ಸೂಚನೆಗಳ ಉದ್ದೇಶ ಸ್ಪಷ್ಟ. ವಿಮಾನ ಪ್ರಯಾಣದಲ್ಲಿ ಯಾವತ್ತೂ ಪೂರ್ವಸಿದ್ಧತೆಗೆ ಹೆಚ್ಚಿನ ಪ್ರಾಮುಖ್ಯ. ವಿಮಾನ ದುರಂತ ಸಂಭವಿಸಿದರೆ, ಪ್ರಯಾಣಿಕರು ತುರ್ತು ಪರಿಸ್ಥಿತಿಯಲ್ಲಿ ಎಂಥ ಕಾರ್ಯ ಕೈಗೊಳ್ಳಬೇಕು ಎಂಬ ವಿಷಯದಲ್ಲಿ ಸನ್ನದ್ಧರಾಗಿರಲೇಬೇಕು. ತುರ್ತುಸ್ಥಿತಿಯಲ್ಲಿ ಆತಂಕ ಅಥವಾ ಗೊಂದಲವನ್ನು ಕಡಿಮೆ ಮಾಡುವುದು ಸಹ ಈ ಸೂಚನೆಯ ಉದ್ದೇಶ. ಇದು ತುರ್ತುಸ್ಥಿತಿಯಲ್ಲಿ ಪ್ರಯಾಣಿಕರು ಕಂಗಾಲಾಗದೆ, ತಾಳ್ಮೆಯಿಂದ ನಿರ್ದಿಷ್ಟ ಕ್ರಮ ಅನುಸರಿಸಲು ನೆರವಾಗುತ್ತದೆ. ಹೀಗಾಗಿ, ಗಗನಸಖಿಯರು ನೀಡುವ ಈ ನೀರಿನಲ್ಲಿ ಲ್ಯಾಂಡಿಂಗ್ ಕುರಿತ ಸೂಚನೆಗಳು ಭಯ ಹುಟ್ಟಿಸಲು ಅಲ್ಲ, ಬದಲು ಸುರಕ್ಷತೆಗಾಗಿ. ಮನುಷ್ಯನಿಗೆ ಅಜ್ಞಾತದ ಭಯ (fear of the unknown) ಸಾಮಾನ್ಯ. ವಿಮಾನ ಪ್ರಯಾಣವೆಂಬುದು ಅನೇಕರಿಗೆ ಅದೇ ತಾನೇ? ಭೂಮಿಯಿಂದ ಎತ್ತರಕ್ಕೆ ಹೋಗುವುದು, ನೈಸರ್ಗಿಕ ನಿಯಮಗಳನ್ನು ಮೀರಿ ಆಕಾಶದಲ್ಲಿ ಸಾಗುವುದು ಅನೇಕರಿಗೆ ದಿಗಿಲು ಹುಟ್ಟಿಸುವ ಸಂಗತಿಯೇ. ಯಾವತ್ತೂ ಬೆಂಕಿ ಬಿದ್ದ ನಂತರ ಬಾವಿ ತೋಡುವುದಕ್ಕಿಂತ, ಬೆಂಕಿ ಬಿದ್ದರೆ ಏನು ಮಾಡಬೇಕು ಎಂಬುದನ್ನು ಮೊದಲೇ ತಿಳಿಸುವುದು ಜಾಣತನ. ಆ ಸೂಚನೆ ನೀಡಲು ಇದು ಮುಖ್ಯ ಕಾರಣ. ಅಂತಾರಾಷ್ಟ್ರೀಯ ವಿಮಾನಯಾನ ಸಂಸ್ಥೆಗಳು (ICAO, IATA) ಹಾಗೂ ಪ್ರತಿ ದೇಶದ ನಾಗರಿಕ ವಿಮಾನಯಾನ ಇಲಾಖೆ, ವಿಮಾನಗಳ ಭದ್ರತಾ ಮಾನದಂಡಗಳನ್ನು ಕಟ್ಟುನಿಟ್ಟಾಗಿ ನಿರ್ವಹಿಸುತ್ತವೆ. ವಿಮಾನ ಹಾರುವ ಮೊದಲು ಎಲ್ಲ ತುರ್ತು ಸ್ಥಿತಿಗಳ ಬಗ್ಗೆ ಪ್ರಯಾಣಿಕರಿಗೆ ಸೂಚನೆ ನೀಡಲೇಬೇಕು. ಇದರಲ್ಲಿ ನೀರಿನಲ್ಲಿ ಲ್ಯಾಂಡ್ ಆಗುವ ಸಂದರ್ಭವೂ ಸೇರಿರಬೇಕು. ವಿಡಿಯೋ ಅಥವಾ ಗಗನಸಖಿಯರು ಆಂಗಿಕವಾಗಿ ಇದನ್ನು ವಿವರಿಸಬೇಕು. ಹೀಗಾಗಿ ಈ ಸೂಚನೆಗಳನ್ನು ಏರ್‌ಲೈನ್ಸ್ ಕಂಪನಿಗಳು ಬಿಡುವಂತಿಲ್ಲ. ಹಾಗಾದರೆ ವಿಮಾನ ನೀರಿನಲ್ಲಿ ಲ್ಯಾಂಡ್ ಆಗುವ ಸಂಭವವಿದೆಯೇ? ಹೌದು, ಆದರೆ ಬಹಳ ಅಪರೂಪ. ಇದನ್ನು 'ditch landing' ಅಥವಾ 'water ditching' ಎನ್ನುತ್ತಾರೆ. 2009ರಲ್ಲಿ ಯುಎಸ್ ಏರ್‌ವೇಸ್ ವಿಮಾನ 1549 ನ್ಯೂಯಾರ್ಕ್ ನಗರದ ಹಡ್ಸನ್ ನದಿಯಲ್ಲಿ ಲ್ಯಾಂಡ್ ಆಯಿತು. ಪೈಲಟ್ ಸುಲ್ಲೆನ್‌ಬರ್ಗರ್ ಅವರ ಸಾಹಸದಿಂದ ಎಲ್ಲ ಪ್ರಯಾಣಿಕರು ಬಚಾವಾದರು. ಆಗ ಲೈಫ್ ಜಾಕೆಟ್, ಎಮರ್ಜೆನ್ಸಿ ಸ್ಲೈಡ್ ಬೋಟ್ ಹಾಗೂ ನುರಿತ ಸಿಬ್ಬಂದಿ ಇದ್ದಿದ್ದರಿಂದ ಏನೂ ಆಗಲಿಲ್ಲ. ಇತ್ತೀಚಿನ ದಿನಗಳಲ್ಲಿ ವಿಮಾನ ಕಂಪನಿಗಳು ತಂತ್ರಜ್ಞಾನ, ವಿಡಿಯೋ, ಅನಿಮೇಷನ್ ಮತ್ತು ತಿಳಿ ಹಾಸ್ಯದೊಂದಿಗೆ ಸುರಕ್ಷತಾ ಸಂದೇಶಗಳನ್ನು ನೀಡುತ್ತಿವೆ. ಇದರಿಂದ ಭಯದ ಬದಲು ಆಸಕ್ತಿ ಹುಟ್ಟುವಂತಾಗಿದೆ. ವಿಮಾನ ಪ್ರಯಾಣ ಅತ್ಯಂತ ಸುರಕ್ಷಿತ ಪ್ರಯಾಣ. ಎಮರ್ಜೆನ್ಸಿ ಸೂಚನೆಗಳು ಕೆಲವರಿಗೆ ಗಲಿಬಿಲಿಯಾಗಬಹುದು, ಆದರೆ ಅವುಗಳ ಉದ್ದೇಶ ಪ್ರಯಾಣಿಕರಿಗೆ 'ಹೆಚ್ಚಿನ ಭದ್ರತೆ' ನೀಡುವುದು ಎಂಬುದನ್ನು ಮನಗಾಣಬೇಕು.

ಥೀಬ್ಸ್‌ನಿಂದ ಹಸ್ತಿನಾವತಿಯವರೆಗೆ ಕಾಮ, ಪ್ರೇಮ ಮತ್ತು ಪ್ರೀತಿ!

ಹಿಂದಿರುಗಿ ನೋಡಿದಾಗ

ಡಾ. ನಾ.ಸೋಮೇಶ್ವರ
vveditoped@gmail.com

ಜೀವಜಗತ್ತಿನಲ್ಲಿ ಕಾಮ-ಪ್ರೇಮ-ಪ್ರೀತಿಯ ಲೀಲೆಗಳು ನಮಗೆ ಇನ್ನೂ ಪರಿಪೂರ್ಣವಾಗಿ ಅರ್ಥವಾಗಿಲ್ಲ.

ಜಗತ್ತಿನಲ್ಲಿ ಜೀವಿಯು ಏಕಕಣರೂಪದಲ್ಲಿ ಹುಟ್ಟಿತು. ಅಲೈಂಗಿಕವಾಗಿ ಸಂತಾನ ವರ್ಧನೆಯನ್ನು ನಡೆಸಿತು. ಅಲೈಂಗಿಕ ಸಂತಾನ ವರ್ಧನೆಯಿಂದ 'ಜೀವ ವೈವಿಧ್ಯತೆ'ಯು ಅಸಾಧ್ಯ ಎಂದು ಮನವರಿಕೆಯಾದಾಗ, ಲೈಂಗಿಕ ಸಂತಾನವರ್ಧನೆಯನ್ನು ಆರಂಭಿಸಿತು. ಅದು ಸಸ್ತನಿಗಳಲ್ಲಿ (ಮ್ಯಾಮಲ್ಸ್) ಅದ್ಭುತವಾಗಿ ಅಭಿವರ್ಧನೆಯಾಗಿ, ಮನುಷ್ಯರಲ್ಲಿ ಉತ್ತುಂಗ ಸ್ಥಿತಿಯನ್ನು ತಲುಪಿತು.

ಪ್ರಕೃತಿಯ ಮೂಲ ಉದ್ದೇಶ ಉತ್ಕೃಷ್ಟ ಸಂತಾನ ವರ್ಧನೆ. ಉತ್ಕೃಷ್ಟ ಸಂತಾನ ವರ್ಧನೆಗಾಗಿ, ಯಾವಾಗಲೂ 'ಸೋದರೇತರ' ಸಂಬಂಧಗಳಲ್ಲಿ ವಿವಾಹವಾಗಬೇಕು. 'ಸೋದರಿಕೆ'ಯಲ್ಲಿ ಆಗಬಾರದು. ಒಂದು ನಾಯಿಯು ಐದು ಹೆಣ್ಣು, ಮೂರು ಗಂಡುಗಳಿಗೆ ಜನ್ಮವನ್ನು ನೀಡಿತು. ಈ ಸೋದರ-ಸೋದರಿ ನಾಯಿಮರಿಗಳ ನಡುವೆ ಸಂತಾನ ವರ್ಧನೆಯಾದರೆ, ಉತ್ಕೃಷ್ಟ ಸಂತಾನವನ್ನು ಬಿಡಿ, ಸಂತಾನವು ಗರ್ಭದಲ್ಲಿಯೇ ಮರಣಿಸೀತು ಅಥವಾ ನಾನಾ ರೋಗಗಳ ಜತೆಯಲ್ಲಿ ಹುಟ್ಟೀತು. 'ಕಾಮಾತುರಾಣಾಂ ನ ಭಯಂ ನ ಲಜ್ಜಾ' ಎಂಬ ನಿಯಮವು ಮನುಷ್ಯಲೋಕಕ್ಕೆ ಹೆಚ್ಚು ಅನ್ವಯಿಸುತ್ತದೆ, ಪ್ರಾಣಿಲೋಕಕ್ಕೆ ಅಲ್ಲ. ಪ್ರಾಣಿಗಳಲ್ಲಿ ಒಳಸಂತಾನ ವರ್ಧನೆಯನ್ನು ತಡೆಗಟ್ಟಲು ಫೆರಮೋನುಗಳೆಂಬ ವಿಶೇಷ ರಾಸಾಯನಿಕಗಳು ನೆರವಾಗುತ್ತವೆ. ನಾಯಿಗಳ ಒಡಲಿನಲ್ಲಿ ಒಂದು ಎಚ್ಚರಿಕೆಯ ವ್ಯವಸ್ಥೆಯಿರುತ್ತದೆ. 'ನಾವು ಸೋದರರು; ನಮ್ಮ ನಡುವೆ ಸಂತಾನ ವರ್ಧನೆಯು ನಡೆಯಬಾರದು' ಎಂದು ಅವುಗಳ ಒಡಲಿನಲ್ಲಿರುವ 'ಮೇಜರ್ ಹಿಸ್ಟೋಕಂಪ್ಯಾಟಬಿಲಿಟಿ ಜೀನ್ಸ್' ಅಥವಾ 'ಎಂಎಚ್‌ಸಿ ಜೀನುಗಳು' ಫೆರಮೋನುಗಳ ಮೂಲಕ ಎಚ್ಚರಿಕೆಯನ್ನು ನೀಡುತ್ತವೆ. ಒಳಸಂತಾನ ವರ್ಧನೆಯು ನಡೆಯದಂತೆ ತಡೆಯುತ್ತವೆ.

ಆನೆಗಳನ್ನು ಗಮನಿಸಿ. ಒಂದು ಗುಂಪಿನಲ್ಲಿರುವ ಗಂಡು ಆನೆ ಮರಿಯು, ವಯಸ್ಸಿಗೆ ಬರುತ್ತಿದ್ದ ಹಾಗೆ, ಹಿಂಡಿನ ಅಜ್ಜಿ ಆನೆಯು, ಈ ವಯಸ್ಸಿಗೆ ಬಂದ ಗಂಡನ್ನು ಗುಂಪಿನಿಂದ ಹೊರಹೋಗುವಂತೆ ಆಜ್ಞಾಪಿಸುತ್ತದೆ. ಆ ಗಂಡು ಬೇರೊಂದು ಆನೆಯ ಗುಂಪನ್ನು ಸೇರಿಕೊಂಡು, ಅಲ್ಲಿರುವ ಹೆಣ್ಣು ಆನೆಯ ಜತೆಯಲ್ಲಿ ಸಂತಾನವರ್ಧನೆಯನ್ನು ನಡೆಸುತ್ತದೆ. ಅಜ್ಜಿ ಆನೆಯು ಪುಂಡು ಗಂಡುಗಳನ್ನು ಹೊರ ಅಟ್ಟದಿದ್ದರೆ, ಒಳಸಂತಾನ ವರ್ಧನೆಯು ನಡೆಯುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಇದೇ ವರ್ತನೆಯು, ಮನುಷ್ಯರಲ್ಲಿ 'ಅಳಿಯ ಸಂತಾನ' ಆಚರಣೆಯ ರೂಪದಲ್ಲಿ ಇಂದಿಗೂ ಅಸ್ತಿತ್ವದಲ್ಲಿದೆ.

ಮನುಷ್ಯನು ತನ್ನ ಮನಸ್ಸು, ಬುದ್ಧಿ ಹಾಗೂ ವಿವೇಕವನ್ನು ಮೀರಿ ನಡೆದಾಗ, ಸಂಕೀರ್ಣ ಸಂಬಂಧಗಳ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಮುಖ್ಯವಾದ ಕೆಲವು ಉದಾಹರಣೆಗಳನ್ನು ಗಮನಿಸೋಣ.

ಮನುಕುಲದಲ್ಲಿ ಒಳಸಂತಾನ ವರ್ಧನೆಯ ಪ್ರಮುಖ ಪ್ರಸ್ತಾಪವು, ಋಗ್ವೇದದ 10ನೆಯ ಮಂಡಲದ 10ನೆಯ ಮಂತ್ರದಲ್ಲಿ ಬರುತ್ತದೆ. ಸೂರ್ಯ ಮತ್ತು ಸಂಜ್ಞಾದೇವಿಗೆ 'ಯಮ' ಮತ್ತು 'ಯಮಿ' ಎಂಬ ಅವಳಿ ಮಕ್ಕಳು. ಇವರಿಬ್ಬರೂ ಭೂಮಿಯ ಮೇಲೆ ಹುಟ್ಟಿದ ಮೊದಲ ಮಾನವ ಜೋಡಿಗಳು. ಇಬ್ಬರೂ ವಯಸ್ಸಿಗೆ ಬಂದರು. ಆಗ ಅವರಿಬ್ಬರ ನಡುವೆ ನಡೆಯುವ ಸಂಭಾಷಣೆಯ ಸಾರವು ಹೀಗಿದೆ:

''ಸೋದರನೆ! ನಾವಿಬ್ಬರೂ ವಯಸ್ಸಿಗೆ ಬಂದಿದ್ದೇವೆ. ನನಗೆ ಸಂತಾನವರ್ಧನೆಯಲ್ಲಿ ತೊಡಗಿಕೊಳ್ಳುವ ಬಯಕೆ ಉಂಟಾಗಿದೆ. ಬಾ ನಾವಿಬ್ಬರೂ ಸಂಭೋಗಿಸೋಣ. ಮಕ್ಕಳನ್ನು ಪಡೆಯೋಣ'' ಎನ್ನುತ್ತಾಳೆ. ''ಗಂಡು ಮತ್ತು ಹೆಣ್ಣು ಮಿಲನವಾಗುವುದು ಪ್ರಕೃತಿಯ ನಿಯಮ. ಅಲ್ಲಿ ನೋಡು ಬಾನು ಭುವಿಯೊಡನೆ ಮಿಲನವಾಗುತ್ತಿದೆ. ಹಾಗಾಗಿ ನಾವಿಬ್ಬರು ಸೇರಿ ಮಕ್ಕಳನ್ನು ಪಡೆಯೋಣ. ಇದರಲ್ಲಿ ತಪ್ಪಿಲ್ಲ'' ಎನ್ನುತ್ತಾಳೆ.

ಯಮಿಯ ಪ್ರಸ್ತಾವನೆಯನ್ನು ಯಮನು ಒಪ್ಪುವುದಿಲ್ಲ. ಆತ ''ಈ ಭೂಮಿಯ ಮೇಲೆ ಇರುವ ಪ್ರತಿಯೊಂದು ಜೀವಿಗೆ-ವಸ್ತುವಿಗೆ ಸ್ವಭಾವ ಸಿದ್ಧವಾದ 'ಋತ' ಎನ್ನುವುದು ಇರುತ್ತದೆ. ಆ ಋತವನ್ನು ಮೀರಬಾರದು. ಸೋದರ-ಸೋದರಿಯರ ನಡುವೆ ಸಂತಾನ ವರ್ಧನೆಯಾಗಬಾರದು ಎಂದು ದೇವತೆಗಳು ನಿಯಮಗಳನ್ನು ರೂಪಿಸಿದ್ದಾರೆ. ಹಾಗಾಗಿ ನಾವು ಋತವನ್ನು ಉಲ್ಲಂಘಿಸುವುದು ಬೇಡ'' ಎನ್ನುತ್ತಾನೆ. ''ನಾವು ಮಾಡುವ ಪ್ರತಿಯೊಂದು ಕೆಲಸಗಳಿಗೂ ಸಾಕ್ಷಿಗಳಿರುತ್ತವೆ. ಸಾಕ್ಷಿಗಳ ಕಣ್ಣನ್ನು ತಪ್ಪಿಸಿ ನಾವು ಏನನ್ನೂ ಮಾಡಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ಅದಕ್ಕೆ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಹಾಗಾಗಿ ನಾನು ನನ್ನ ಋತದಿಂದ ವಿಚಲಿಸಲಾರೆ'' ಎಂದು ಸ್ಪಷ್ಟವಾಗಿ ಯಮಿಯ ಆಹ್ವಾನವನ್ನು ತಿರಸ್ಕರಿಸುತ್ತಾನೆ. ಅನಾದಿ ಕಾಲದ ನಮ್ಮ ಪೂರ್ವಜರಲ್ಲಿ ಸೋದರ ಸಂತಾನ ವರ್ಧನೆಯು ನಡೆಯುತ್ತಿತ್ತೋ ಏನೋ... ಅಂಥದನ್ನು ತಡೆಗಟ್ಟಲು ಈ ಕಥೆಯನ್ನು ಕಟ್ಟಿರಬಹುದು ಎಂದು ನಾವು ಭಾವಿಸಬಹುದು.

''ಬ್ರಹ್ಮನು ತನ್ನ ಮಗಳಾದ ಸರಸ್ವತಿಯನ್ನು ಮದುವೆಯಾದ'' ಎನ್ನುವ ಪ್ರಸ್ತಾಪವು ಪುರಾಣಗಳಲ್ಲಿ ಬರುತ್ತದೆ. ತಂದೆಯು ಮಗಳನ್ನೇ ಮದುವೆಯಾಗಬಹುದೆ? ಇದು ಋತದ ಉಲ್ಲಂಘನೆಯಲ್ಲವೆ? ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ಮತ್ಸ್ಯ ಪುರಾಣ, ಬ್ರಹ್ಮ ಪುರಾಣ ಹಾಗೂ ಶಿವಪುರಾಣಗಳಲ್ಲಿ ಈ ಪ್ರಸಂಗದ ಉಲ್ಲೇಖವಿದೆ. ಬ್ರಹ್ಮನು ವಿಷ್ಣುವಿನ ಹೊಕ್ಕಳಿನಿಂದ ಹುಟ್ಟಿದ. ಬ್ರಹ್ಮಾಂಡ ಸೃಷ್ಟಿಯ ಕೆಲಸವನ್ನು ಹೊತ್ತುಕೊಂಡ. ಸೃಷ್ಟಿಕಾರ್ಯವನ್ನು ನಡೆಸಲು ಜ್ಞಾನವಿರಬೇಕು, ಬುದ್ಧಿಯಿರಬೇಕು, ಸೃಜನಶೀಲತೆಯಿರಬೇಕು ಹಾಗೂ ಮಾತು ತಿಳಿದಿರಬೇಕು. ಬ್ರಹ್ಮನು ಇವೆಲ್ಲವನ್ನೂ ಒಳಗೊಂಡ ಒಂದು ಸ್ತ್ರೀರೂಪವನ್ನು ಮಾನಸಿಕವಾಗಿ ಸೃಜಿಸಿದ. ಆಕೆಯೇ ಸರಸ್ವತಿ. ಸರ್ವಾಂಗ ಸುಂದರಿ. ಆಕೆಯನ್ನು ನೋಡುತ್ತಿರುವಂತೆಯೇ ಬ್ರಹ್ಮನ ಮನಸ್ಸಿನಲ್ಲಿ ಮೋಹವು ಆವರಿಸಿತು. ಬ್ರಹ್ಮವೈವರ್ತ ಪುರಾಣದ ಅನ್ವಯ, ಬ್ರಹ್ಮ-ಸರಸ್ವತಿಯರ 'ವಿವಾಹ'ವು ನಡೆಯಿತು. ಇವರಿಬ್ಬರ ಸಂತಾನವಾಗಿ ವೇದ, ಸಂಗೀತ, ಸಾಹಿತ್ಯ, ನೃತ್ಯ ಇತ್ಯಾದಿಗಳು ಹುಟ್ಟಿದವು. ಇದು ಕಥೆ.

ಯಮ-ಯಮಿಯರ ಕಥೆಗೂ, ಬ್ರಹ್ಮ-ಸರಸ್ವತಿಯರ ಕಥೆಗೂ ವ್ಯತ್ಯಾಸಗಳಿವೆ. ಯಮ-ಯಮಿಯರು ಸಂಜ್ಞಾದೇವಿಯ ಹೊಟ್ಟೆಯಲ್ಲಿ ಹುಟ್ಟಿದ ಅವಳಿ ಸಂತಾನ. ಸರಸ್ವತಿ ಎನ್ನುವ ಸ್ತ್ರೀ ರೂಪಕ್ಕೆ ಭೌತಿಕ ದೇಹವಿಲ್ಲ, ಬೌದ್ಧಿಕ ದೇಹವಿದೆ. ಹಾಗಾಗಿ ಈ ಕಥೆಯನ್ನು ಸಾಂಕೇತಿಕವಾಗಿ ಸ್ವೀಕರಿಸಬೇಕು. ಅಕ್ಷರಶಃ ಅಲ್ಲ. ಸೃಷ್ಟಿ ಜ್ಞಾನವು, ಸೃಷ್ಟಿ ಕರ್ತನ ಬಳಿಯೇ ಉಳಿಯಬೇಕಾದದ್ದು ನ್ಯಾಯ. ಇಂಥ ಕಥೆಗಳು ಗ್ರೀಕ್ ಸಂಸ್ಕೃತಿ (ಯೂರನಸ್ ಮತ್ತು ಜಿಯಾ), ಈಜಿಪ್ಷಿಯನ್ ಸಂಸ್ಕೃತಿ (ಆತುಮ್ ತನ್ನಿಂದ ಶೂ ಮತ್ತು ತೆಫ್ನುತ್ ಸೃಜನೆ) ಹಾಗೂ ನೋಸ್ಟಿಕ್ ಸಂಸ್ಕೃತಿಯಲ್ಲಿ (ಸೋಫಿಯ ಜನನ) ಇವೆ.

ಸಿಗ್ಮಂಡ್ ಫ್ರಾಯ್ಡ್ (1856-1939) ಆಧುನಿಕ ಮನೋವೈದ್ಯಕೀಯದ ಸ್ಥಾಪಕರಲ್ಲಿ ಒಬ್ಬ. ಈತನ 'ಮನೋವಿಶ್ಲೇಷಣೆ' ಅಥವಾ 'ಸೈಕೋ-ಅನಾಲಿಸಿಸ್' ಇಂದಿಗೂ ಪ್ರಚಲಿತದಲ್ಲಿದೆ. ''ಪ್ರತಿಯೊರ್ವ ಗಂಡು ಮಗುವಿನ ಮನಸ್ಸಿನಲ್ಲಿ, ತನ್ನ ತಾಯಿಯ ಬಗ್ಗೆ ಅಜ್ಞಾತ ಕಾಮವಿರುತ್ತದೆ. ತನ್ನ ತಂದೆಯನ್ನು ಪ್ರತಿಸ್ಪರ್ಧಿ ಎಂದು ಆ ಮಗು ಭಾವಿಸುತ್ತದೆ. ಈ ಭಾವವು 3-6 ವರ್ಷಗಳ ನಡುವೆ ಬಲವಾಗಿರುತ್ತದೆ'' ಎನ್ನುವುದು ಆತನ ಅಭಿಪ್ರಾಯ. ಸಿಗ್ಮಂಡ್ ಫ್ರಾಯ್ಡ್ ಈ ಬಗ್ಗೆ ತನ್ನ 'ಇಂಟರ್‌ಪ್ರಿಟೇಷನ್ ಆಫ್ ಡ್ರೀಮ್ಸ್' ಎನ್ನುವ ಪುಸ್ತಕದಲ್ಲಿ ವಿವರವಾಗಿ ಬರೆದ. ಇದನ್ನು 'ಈಡಿಪಸ್ ತೊಡಕು' ಅಥವಾ 'ಈಡಿಪಸ್ ಕಾಂಪ್ಲೆಕ್ಸ್' ಎಂದು ಕರೆದ.

ಈಡಿಪಸ್, ಗ್ರೀಕ್ ಪುರಾಣಗಳಲ್ಲಿ ಬರುವ ಪಾತ್ರ. ಥೀಬ್ಸ್ ನಗರದ ಅರಸು ಲಾಯಿಸ್ ಮತ್ತು ಅರಸಿ ಯೋಕಾಸ್ತ. ಒಂದು ದೇವವಾಣಿಯು ''ಲಾಯಿಸ್ ಹಾಗೂ ಯೋಕಾಸ್ತಳ ಗಂಡು ಮಗನು, ತಂದೆಯನ್ನು ಕೊಂದು, ತಾಯಿಯನ್ನು ಮದುವೆಯಾಗುತ್ತಾನೆ'' ಎಂದು ಭವಿಷ್ಯವನ್ನು ನುಡಿಯುತ್ತದೆ. ಲಾಯಿಸ್ ಮತ್ತು ಯೋಕಾಸ್ತಳ ಮಗ ಈಡಿಪಸ್. ಲಾಯಿಸ್, ಈಡಿಪಸ್‌ನನ್ನು ಕೊಲ್ಲುವಂತೆ ಸೇವಕರಿಗೆ ಹೇಳಿದರೆ, ಅವರು ಮಗುವನ್ನು ಕೊಲ್ಲದೆ ಕಾಡಿನಲ್ಲಿ ಬಿಡುತ್ತಾರೆ. ಆ ಮಗುವು ಕಾರಿಂತ್ ನಗರದ ಅರಸರಾದ ಪಾಲಿಬಸ್ ಹಾಗೂ ಮೆರೋಪೆಯರ ಕೈಗೆ ದೊರೆತು ಬೆಳೆಯುತ್ತದೆ. ಒಂದು ಪಾನಗೃಹದಲ್ಲಿ ''ನೀನು, ನಿನ್ನ ತಂದೆಯ ಮಗನಲ್ಲ'' ಎಂದು ಕುಡುಕನೊಬ್ಬ ಮತ್ತಿನಲ್ಲಿ ಒರಲಿದಾಗ, ಈಡಿಪಸ್ ತನ್ನ ನಿಜ ತಂದೆ ತಾಯಿಯರನ್ನು ಹುಡುಕಿಕೊಂಡು ಹೊರಟ.

ಒಂದು ಕಿರಿದಾದ ಹಾದಿ. ಈಡಿಪಸ್ ಹಾಗೂ ಮುದುಕನೊಬ್ಬ ಎದುರು ಬದುರಾದರು. ಯಾರು ಯಾರಿಗೆ ದಾರಿಯನ್ನು ಬಿಡಬೇಕು, ಎನ್ನುವ ವಾಗ್ಯುದ್ಧದಲ್ಲಿ ಈಡಿಪಸ್ ಆ ಮುದುಕನನ್ನು ಕೊಂದ. ಅವನೇ, ಈಡಿಪಸ್ಸನ ತಂದೆಯಾದ ಲಾಯಿಸ್. ಈಡಿಪಸ್ ಥೀಬ್ಸ್ ನಗರವನ್ನು ಸಮೀಪಿಸಿದ. ಅಲ್ಲಿ 'ಸ್ಫಿಂಕ್ಸ್' ಎನ್ನುವ ರಕ್ಕಸಿ. ದಾರಿಹೋಕರಿಗೆ ಪ್ರಶ್ನೆಯನ್ನು ಕೇಳಿ, ಉತ್ತರ ನೀಡದವರನ್ನು ತಿಂದು ಹಾಕುತ್ತಿರುತ್ತದೆ. ಹಾಗಾಗಿ ಯೋಕಾಸ್ತೆಯು ''ಯಾರು ಸ್ಫಿಂಕ್ಸ್ ಮಾರಿಯನ್ನು ಕೊಲ್ಲುವರೋ, ಅವರನ್ನು ತಾನು ಮದುವೆಯಾಗುತ್ತೇನೆ'' ಎಂದು ಡಂಗುರ ಹೊಡೆಸಿರುತ್ತಾಳೆ. ಈಡಿಪಸ್, ಸ್ಫಿಂಕ್ಸ್ ಪ್ರಶ್ನೆಗಳಿಗೆ ಸರಿಯುತ್ತರವನ್ನು ನೀಡಿದ. ಸ್ಫಿಂಕ್ಸ್ ಸತ್ತಿತು. ಯೋಕಾಸ್ತೆ ಈಡಿಪಸ್‌ನನ್ನು ಮದುವೆಯಾದಳು. ಅವರಿಗೆ ಅಂತಿಗೊನೆ, ಇಸ್ಮೇನೆ, ಈಟಿಯೋಕ್ಲೆಸ್ ಮತ್ತು ಪಾಲಿನೈಸೀಸ್ ಎಂಬ ನಾಲ್ವರು ಮಕ್ಕಳಾದರು. ಕೊನೆಗೆ ಅವರಿಗೆ ಸತ್ಯ ಗೊತ್ತಾಗುತ್ತದೆ. ಯೋಕಾಸ್ತ ನೇಣು ಹಾಕಿಕೊಂಡಳು. ಈಡಿಪಸ್ ತನ್ನ ಕಣ್ಣುಗಳೆರಡನ್ನು ಚುಚ್ಚಿಕೊಂಡ. ಮಗಳು ಅಂತಿಗೊನೆಯ ಆಶ್ರಯದಲ್ಲಿ ಬದುಕಿ ಮರಣಿಸಿದ.

ತಾಯಿ-ಮಗನ ಕಾಮಕಥೆಯ ಈ ನಾಟಕವನ್ನು ನೋಡಿದ ಫ್ರಾಯ್ಡ್, ತನ್ನ ಸಿದ್ಧಾಂತಕ್ಕೆ 'ಈಡಿಪಸ್ ಕಾಂಪ್ಲೆಕ್ಸ್' ಎಂದು ಹೆಸರಿಟ್ಟ. ಕೆಲವರು ''ಮಗಳು ಹಾಗೂ ತಂದೆಯ ನಡುವೆ ಕಾಮವಿರುವುದಿಲ್ಲವೆ?'' ಎಂದು ಪ್ರಶ್ನಿಸಿದರು. ಅದಕ್ಕೆ ಫ್ರಾಯ್ಡ್ 'ಫೆಮಿನೈನ್ ಈಡಿಪಸ್ ಕಾಂಪ್ಲೆಕ್ಸ್' ಎಂಬ ಹೆಸರನ್ನು ಸೂಚಿಸಿದ. ಆದರೆ ಕಾರ್ಲ್ ಯೂಂಗ್ (1875-1961) 'ಎಲೆಕ್ಟ್ರಾ ಕಾಂಪ್ಲೆಕ್ಸ್' ಎಂಬ ಪದವನ್ನು ಬಳಕೆಗೆ ತಂದ. ಇದು ಸಹ ಗ್ರೀಕ್ ಪುರಾಣದ ಕಥೆ. ಅಗೆಮೆಮ್ನಾನ್ ರಾಜ. ಕ್ಲೈತ್ರಮೆನೆಸ್ತ್ರ ರಾಣಿ. ಎಲೆಕ್ಟ್ರಾ ಇವರ ಮಗಳು. ಈಕೆಗೆ ತಂದೆಯ ಮೇಲೆ ಪ್ರೀತಿ. ತಾಯಿಯ ಮೇಲೆ ದ್ವೇಷ. ಕ್ಲೈತ ಮೆನೆಸ್ತ್ರ ತನ್ನ ಪ್ರಿಯಕರ ಏಜಿಸ್ತಸ್‌ನನ್ನು ಸೇರಲು ಗಂಡನನ್ನು ಕೊಂದಳು. ಇದನ್ನು ಕಂಡ ಎಲೆಕ್ಟ್ರಾ ತನ್ನ ಸೋದರ ಒರೆಸ್ಟಸ್‌ನನ್ನು ಪ್ರಚೋದಿಸಿ, ಅವನ ಮೂಲಕ ತಾಯಿಯನ್ನು ಕೊಲ್ಲಿಸಿದಳು. ಇದುವೇ 'ಎಲೆಕ್ಟ್ರಾ ತೊಡಕು' ಅಥವಾ 'ಎಲೆಕ್ಟ್ರಾ ಕಾಂಪ್ಲೆಕ್ಸ್'. ಈ ಎರಡೂ ಕಥೆಗಳಲ್ಲಿ, ಹೆತ್ತವರು ಮತ್ತು ಮಕ್ಕಳ ನಡುವೆ 'ಕಾಮ'ದ ಪಾತ್ರವಿದೆ ಎನ್ನುವುದು ಫ್ರಾಯ್ಡನ ನಿಲುವು. ಅದರ ಬದಲು, 'ಅನುಬಂಧ' ಎಂಬ ಪದವು ಹೆಚ್ಚು ಸೂಕ್ತವಾಗಬಹುದು.

ಸುಧೀರ್ ಕಕ್ಕರ್ (1938-2024) ಭಾರತೀಯ ಕಾದಂಬರಿಕಾರ. 1978ರಲ್ಲಿ 'ದಿ ಇನ್ನರ್ ವರ್ಲ್ಡ್: ಎ ಸೈಕೋ-ಅನಲಿಟಿಕಲ್ ಸ್ಟಡಿ ಆಫ್ ಚೈಲ್ಡ್‌ಹುಡ್ ಸೊಸೈಟಿ ಆಫ್ ಇಂಡಿಯ' ಎಂಬ ಪುಸ್ತಕವನ್ನು ಹಾಗೂ 1987ರಲ್ಲಿ 'ಇಂಟಿಮೇಟ್ ರಿಲೇಶನ್ಸ್: ಎಕ್ಸ್‌ಪ್ಲೋರಿಂಗ್ ಇಂಡಿಯನ್ ಸೆಕ್ಸುವಾಲಿಟಿ' ಎಂಬ ಪುಸ್ತಕವನ್ನು ಬರೆದ. ಈ ಪುಸ್ತಕಗಳಲ್ಲಿ ಹೆತ್ತವರ ಮತ್ತು ಮಕ್ಕಳ ನಡುವೆ ಇರುವ ಲೈಂಗಿಕ-ಲೈಂಗಿಕೇತರ ಅನುಬಂಧಗಳ ಬಗ್ಗೆ ಚರ್ಚಿಸಿ, 'ಯಯಾತಿ ತೊಡಕು' ಅಥವಾ 'ಯಯಾತಿ ಕಾಂಪ್ಲೆಕ್ಸ್' ಎಂಬ ಹೊಸ ಪರಿಕಲ್ಪನೆಯನ್ನು ಮುಂದಿಟ್ಟ.

ಫ್ರಾಯ್ಡ್ ಸಿದ್ಧಾಂತದ ಅನ್ವಯ ''ಮಗನಿಗೆ ತಾಯಿಯ ಮೇಲೆ ಕಾಮವಾಂಛೆಯಿರುವ ಕಾರಣ, ತಂದೆಯನ್ನು ಪ್ರತಿಸ್ಪರ್ಧಿಯಂತೆ ಕಾಣುತ್ತಾನೆ''. ಹಾಗೆಯೇ ''ಮಗಳಿಗೆ ತಂದೆಯ ಮೇಲೆ ಕಾಮವಾಂಛೆಯಿದ್ದು, ತಾಯಿಯನ್ನು ಪ್ರತಿಸ್ಪರ್ಧಿಯಂತೆ ಕಾಣುತ್ತಾಳೆ'' ಎನ್ನಬಹುದು. ಸುಧೀರ್ ಕಕ್ಕರ್ ಈ ಪರಿಕಲ್ಪನೆಯನ್ನು ವಿಭಿನ್ನ ಮಟ್ಟಕ್ಕೆ ಏರಿಸಿದರು. ತಂದೆಯಾದವನು, ಸಕಾಲದಲ್ಲಿ ಕೌಟುಂಬಿಕ ಜವಾಬ್ದಾರಿಯನ್ನು ಮಗನಿಗೆ ವಹಿಸದಿದ್ದರೆ, ಅವನು ತಂದೆಯನ್ನು ದ್ವೇಷಿಸುತ್ತಾನೆ ಎನ್ನುವುದು ಅವರ ವಾದದ ತಿರುಳು. ಮಗನು ಕಾಮವಾಂಛೆಗಾಗಿ ತಂದೆಯನ್ನು ದ್ವೇಷಿಸುತ್ತಿಲ್ಲ; ಬದಲಿಗೆ ಅಧಿಕಾರ-ಅವಕಾಶವನ್ನು ಬಿಟ್ಟುಕೊಡದಿರುವ ಹಿನ್ನೆಲೆಯಲ್ಲಿ ದ್ವೇಷಿಸುತ್ತಾನೆ ಎನ್ನುತ್ತಾರೆ.

ಯಯಾತಿಯು ಸಹಜ ವೃದ್ಧಾಪ್ಯವನ್ನು ತಲುಪಿದ. ಆಗ ಅವನು ಹಸ್ತಿನಾವತಿಯ ಸಿಂಹಾಸನವನ್ನು ಮಕ್ಕಳಿಗೆ ಬಿಟ್ಟುಕೊಡಬೇಕಾಗಿತ್ತು. ಆದರೆ ಯಯಾತಿಗೆ ತನ್ನ ಮಕ್ಕಳಿಂದ ಯೌವನವನ್ನು ಪಡೆದು, ಮತ್ತಷ್ಟು ದಶಕಗಳ ಕಾಲ (ಸಿಂಹಾಸನದಲ್ಲಿ ರಾಜನಾಗಿ ಕುಳಿತುಕೊಂಡು) ಸುಖ ಸಂತೋಷಗಳನ್ನು ಅನುಭವಿಸುವ ಆಸೆ. ಯಯಾತಿಗೆ ಐವರು ಮಕ್ಕಳು. ಯದು, ತುರ್ವಸು, ದ್ರುಹ್ಯ, ಅನು ಮತ್ತು ಪುರು. ಈ ಐದು ಮಕ್ಕಳಲ್ಲಿ ಮೊದಲ ನಾಲ್ವರು ತಮ್ಮ ಯೌವನದ ವಿನಿಮಯಕ್ಕೆ ಒಪ್ಪುವುದಿಲ್ಲ. ಹಾಗಾಗಿ ಅವರಿಗೆ ''ಕುರು ಸಾಮ್ರಾಜ್ಯದಲ್ಲಿ ಪಾಲಿಲ್ಲ; ಅವರು ರಾಜರಾಗಲು ಅನರ್ಹರು'' ಎಂದು ಶಪಿಸುತ್ತಾನೆ ಯಯಾತಿ. ಯೌವನ ವಿನಿಮಯಕ್ಕೆ ಒಪ್ಪಿದ ಪುರು ಅಥವ ಪುರೂರವನನ್ನು (ಪುರೂರವನ ಯೌವನವನ್ನು ಅನುಭವಿಸಿದ ನಂತರ) ಹಸ್ತಿನಾಪುರದ ಅರಸನನ್ನಾಗಿಸುತ್ತಾನೆ. ಆಗ ''ಯಯಾತಿಯ ನಾಲ್ವರು ಮಕ್ಕಳಿಗೆ, ತಮ್ಮ ತಂದೆಯನ್ನು ಕೊಲ್ಲಬೇಕೆಂಬ ಭಾವನೆಯು ಬಂದಿದ್ದರೆ ಆಶ್ಚರ್ಯ ಪಡಬೇಕಿಲ್ಲ'' ಎನ್ನುತ್ತಾರೆ ಸುಧೀರ್ ಕಕ್ಕರ್. ಇದು ಯಯಾತಿ ತೊಡಕಿನ ತಿರುಳು.

ಮನುಷ್ಯರ ನಡುವಿನ ಕಾಮ-ಪ್ರೇಮ-ಪ್ರೀತಿಯು, ಪ್ರಾಣಿ ಜಗತ್ತಿನಷ್ಟು ಸರಳವಲ್ಲ. ಮನುಷ್ಯನು ಮನಸ್ಸನ್ನು ಕಾಮದ ವಶಕ್ಕೆ ನೀಡದೆ, ಬುದ್ಧಿ ಹಾಗೂ ವಿವೇಕಗಳಿಗೆ ಮನಸ್ಸನ್ನು ಒಪ್ಪಿಸಿದರೆ, ಹೆಚ್ಚಿನ ಲೈಂಗಿಕ ಸಮಸ್ಯೆಗಳು ಹುಟ್ಟಿಕೊಳ್ಳುವುದಿಲ್ಲ.

ಪರೀಕ್ಷೆಗಳೇ ಫೇಲ್ ಆಗುತ್ತಿವೆಯಲ್ಲಾ...?!

ಯಕ್ಷಪ್ರಶ್ನೆ

ರಮಾನಂದ ಶರ್ಮಾ
vveditoped@gmail.com

ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಪಾಸ್ ಅಥವಾ ಫೇಲ್ ಆಗುವುದು ಸಾಮಾನ್ಯ ಪ್ರಕ್ರಿಯೆ. ಆದರೆ ಇತ್ತೀಚೆಗೆ ಪರೀಕ್ಷೆಗಳೇ ಫೇಲ್ ಆಗುತ್ತಿರುವುದು ಮಾತ್ರ ವಿಪರ್ಯಾಸ. ಇಂದು ಬಹುತೇಕ ಪರೀಕ್ಷೆಗಳು (ಶಾಲಾ-ಕಾಲೇಜು, ಸ್ಪರ್ಧಾತ್ಮಕ ಅಥವಾ ನೇಮಕಾತಿ ಹೀಗೆ ಯಾವುದೇ ಇರಲಿ) ಗೊಂದಲದಲ್ಲಿ ಆರಂಭವಾಗಿ, ಗೊಂದಲದಲ್ಲಿ ನಡೆದು, ಫಲಿತಾಂಶವೂ ಗೊಂದಲದಲ್ಲೇ ಪ್ರಕಟವಾಗುವ ಪ್ರಮೇಯಗಳೇ ಹೆಚ್ಚು. ಹೀಗಾಗಿ ಅಭ್ಯರ್ಥಿಗಳು ನ್ಯಾಯ ಕೇಳಿ ಕೋರ್ಟ್ ಮೆಟ್ಟಿಲೇರುವುದೂ ಅಷ್ಟೇ ಸಾಮಾನ್ಯವಾಗುತ್ತಿದೆ.

ಬಹುತೇಕರಿಗೆ ಗೊತ್ತಿರುವಂತೆ, ಪರೀಕ್ಷೆಗಳ ದಿನಾಂಕವನ್ನು ನಿಗದಿಪಡಿಸುವುದರಿಂದ ಮೊದಲ್ಗೊಂಡು, ವಿದ್ಯಾರ್ಥಿಗಳಿಗೆ ಸರಿಯಾದ ಅಂಕಪಟ್ಟಿಯನ್ನು ನೀಡುವವರೆಗೂ ಗೊಂದಲಗಳು ಕಾಣಬರುವುದಿದೆ. ವಿವಿಧ ಪರೀಕ್ಷೆಗಳ ದಿನಾಂಕಗಳು ಎಷ್ಟೋ ಬಾರಿ ಪರಸ್ಪರ 'ಕ್ಲ್ಯಾಷ್' ಆಗುತ್ತವೆ. ಶಾಲಾ-ಕಾಲೇಜುಗಳ ಪರೀಕ್ಷೆಯಲ್ಲಿ ಇದು ಗೋಚರವಾಗದಿದ್ದರೂ, ಸ್ಪರ್ಧಾತ್ಮಕ ಮತ್ತು ನೇಮಕಾತಿ ಪರೀಕ್ಷೆಗಳಲ್ಲಿ ಇದು ಸಾಮಾನ್ಯವಾಗಿಬಿಟ್ಟಿದೆ. ಈ ನಿಟ್ಟಿನಲ್ಲಿ ಯಾವ ಪರೀಕ್ಷಾ ಆಯೋಜಕರೂ ಹೊಂದಾಣಿಕೆಗೆ ಬಾರದ ಕಾರಣ, ಕೆಲವಷ್ಟು ಪ್ರತಿಭಾವಂತರು ತಮ್ಮದಲ್ಲದ ತಪ್ಪಿಗೆ ಹಲವು ಪರೀಕ್ಷೆಗಳನ್ನು ತಪ್ಪಿಸಿಕೊಳ್ಳುವಂತಾಗುತ್ತಿದೆ.

ಪರೀಕ್ಷಾ ಕೇಂದ್ರಗಳನ್ನು ನಿಗದಿಪಡಿಸುವಾಗ ಅಭ್ಯರ್ಥಿಗಳಿಗೆ ಅನುಕೂಲವಾಗುವಂತೆ ನೋಡಿಕೊಳ್ಳಬೇಕು ಎಂಬ ನಿಯಮವಿದ್ದರೂ, ಮನಸ್ಸಿಗೆ ತೋಚಿದಂತೆ ಇಂಥ ಕೇಂದ್ರಗಳನ್ನು ನಿಗದಿಪಡಿಸಲಾಗುತ್ತದೆ. ಹೀಗಾಗಿ ಪರೀ ಕ್ಷಾರ್ಥಿಗಳು ತಮ್ಮದಲ್ಲದ ದೂರದ ಊರುಗಳಿಗೆ ಬಸ್-ಟ್ರೇನು ಹಿಡಿದು ಪ್ರಯಾಣಿಸಬೇಕಾಗುತ್ತದೆ, ವಾಸ್ತವ್ಯಕ್ಕೆ ನೆಂಟರಿಷ್ಟರ/ಸ್ನೇಹಿತರ ಮೊರೆಹೋಗಬೇಕಾಗುತ್ತದೆ ಅಥವಾ ವಸತಿಗೃಹಗಳಲ್ಲಿ ದುಬಾರಿ ಬೆಲೆ ತೆತ್ತು ಠಿಕಾಣಿ ಹೂಡಬೇಕಾಗುತ್ತದೆ. ಹಬ್ಬದ ಸಮಯದಲ್ಲಿ ಖಾಸಗಿ ಬಸ್‌ನವರು ಜನರನ್ನು ಸುಲಿಯುವಂತೆ, ಅರ್ಥಶಾಸ್ತ್ರ ದಲ್ಲಿ ಬರುವ 'ಬೇಡಿಕೆ ಮತ್ತು ಪೂರೈಕೆ'ಯ ನೀತಿಯನುಸಾರ ವಸತಿಗೃಹದವರೂ ವಿದ್ಯಾರ್ಥಿಗಳನ್ನು ಸುಲಿ ಯುತ್ತಾರೆ.

ಇನ್ನು ಪರೀಕ್ಷೆಯ ದಿನ ಪ್ರಶ್ನೆಪತ್ರಿಕೆಯ ಕಟ್ಟುಗಳು ಪರೀಕ್ಷಾ ಕೇಂದ್ರಗಳನ್ನು ತಡವಾಗಿ ತಲುಪುವುದು ಅಥವಾ ತಲುಪದೆಯೇ ಇರುವುದು, ಇಲ್ಲವೇ ತಪ್ಪು ಪ್ರಶ್ನೆಪತ್ರಿಕೆಗಳು ತಲುಪುವುದು, ನಿಗದಿತ ಸಂಖ್ಯೆಗಿಂತ ಕಡಿಮೆ ಅಥವಾ ಹೆಚ್ಚು ಪ್ರಶ್ನೆಪತ್ರಿಕೆಗಳು ತಲುಪುವುದು, ಅವುಗಳ ಕಟ್ಟುಗಳು ಒಡೆದುಹೋಗಿರುವುದು ಇವೆಲ್ಲಾ ಆಗಾಗ ಕಾಣಬರುತ್ತವೆ. ಪರೀಕ್ಷೆಯ ಹಿಂದಿನ ದಿನ ಅಥವಾ 3 ತಾಸು ಮೊದಲು ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿ ಶರವೇಗದಲ್ಲಿ ಅಭ್ಯರ್ಥಿಗಳ ಕೈಸೇರುವುದು, ಈ ಪ್ರಕ್ರಿಯೆಯಲ್ಲಿ ಕೆಲವರ ಬ್ಯಾಂಕ್ ಬ್ಯಾಲೆನ್ಸ್ ಏರುವುದು ಕೂಡಾ ತೀರಾ ಸಾಮಾನ್ಯವಾಗಿದೆ.

ಇತ್ತೀಚಿನ ಬೆಳವಣಿಗೆಗಳನ್ನು ನೋಡುವುದಾದರೆ, ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳನ್ನು ಪ್ರವೇಶಿಸುವಾಗ ಚಕ್ರವ್ಯೂಹವನ್ನು ಭೇದಿಸಿ ಒಳಹೊಕ್ಕ ಅನುಭವವಾಗುತ್ತದೆ. ಅವರ ಜನಿವಾರ, ಶಿವದಾರ, ಕಾಶೀದಾರ, ಉಡುದಾರ, ಕಿವಿಯೋಲೆ, ಮಾಂಗಲ್ಯ, ತುಂಬುತೋಳಿನ ಅಂಗಿ ಇತ್ಯಾದಿಗಳನ್ನು ತೆಗೆಸುವ ಅಮಾನವೀಯ ಬೆಳವಣಿಗೆಗಳಾಗುತ್ತಿವೆ (ವಿದ್ಯಾರ್ಥಿಗಳ ಜನಿವಾರ ತೆಗೆಸುವ ಕಸರತ್ತು ದೇಶಾದ್ಯಂತ ಭಾರಿ ಸುದ್ದಿಮಾಡಿ ಪ್ರತಿರೋಧದ ದನಿ ಎದ್ದಿದ್ದನ್ನು ಇಲ್ಲಿ ಸ್ಮರಿಸಬಹುದು). ಈ ಸಂಬಂಧದ ತಪಾಸಣೆಯಿಂದಾಗಿ ವಿದ್ಯಾರ್ಥಿಗಳು ಹೈರಾಣಾಗಿ, ಗೊಂದಲದ ಮನಸ್ಥಿತಿಯಲ್ಲಿ, ಭಯದ ನೆರಳಲ್ಲೇ ಪರೀಕ್ಷೆಯನ್ನು ಬರೆಯಬೇಕಾಗುತ್ತದೆ.

ಪರೀಕ್ಷೆಗಳಲ್ಲಿ ನಕಲು/ಸಾಮೂಹಿಕ ನಕಲು, ಆಪ್ತರು ಹೊರಗಿನಿಂದ ನೆರವಾಗುವುದು, ನಕಲು ಮಾಡಲು ಇಲೆಕ್ಟ್ರಾನಿಕ್ ಸಾಧನಗಳ ಬಳಕೆ, ಕೆಲವೊಮ್ಮೆ ಇನ್‌ವಿಜಿಲೇಟರ್‌ಗಳು ಕೂಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು ಇತ್ಯಾದಿ ಕಸರತ್ತುಗಳು ಇಲ್ಲದಿಲ್ಲ! ನಿಗದಿತ ಪಠ್ಯಕ್ರಮಕ್ಕೆ ಹೊರತಾದ ಪ್ರಶ್ನೆಗಳನ್ನು ಕೇಳುವುದು ಮತ್ತು ಆ ತಪ್ಪಿಗಾಗಿ ಎಲ್ಲರಿಗೂ 'ಗ್ರೇಸ್ ಅಂಕ'ಗಳನ್ನು ನೀಡಿ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವುದು ಮಾಮೂಲಾಗಿಬಿಟ್ಟಿದೆ. 'ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದ ನಾಡು' ಎಂದು ನಾವೆಲ್ಲಾ ಸಂಭ್ರಮಿಸುವ ಕನ್ನಡನಾಡಿನಲ್ಲಿ, ಕನ್ನಡದಲ್ಲಿ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲು ಕನ್ನಡ ಬಲ್ಲವರು ಇಲ್ಲವೇನೋ ಎನ್ನುವಂತೆ ಗೂಗಲ್ ಸಹಾಯದಿಂದ ತರ್ಜುಮೆ ಮಾಡಿಸಿ ಅಧ್ವಾನ ಮಾಡಿದ್ದನ್ನು ಕಂಡಿದ್ದೇವೆ. ಈ ಎಡವಟ್ಟು ಸಾಲದೆಂಬಂತೆ ಪರೀಕ್ಷೆಗಳು ಮುಗಿದ ನಂತರ ಉತ್ತರ ಪತ್ರಿಕೆಗಳು ಕೇಂದ್ರ ಸ್ಥಾನವನ್ನು ತಲುಪದೆಯೇ ಮಾರ್ಗಮಧ್ಯ ದಲ್ಲಿಯೇ ಕಳೆದುಹೋಗುವುದು, ಶಿಕ್ಷಕರು/ಅಧ್ಯಾಪಕರುಗಳೇ ಮೌಲ್ಯಮಾಪನ ಮಾಡುತ್ತಾರೆ ಎಂಬ ಭರವಸೆ ಕೂಡಾ ಇಲ್ಲದಿರುವುದು ಮಾಮೂಲಾಗಿಬಿಟ್ಟಿದೆ. ಇನ್ನು ಬೇಜವಾಬ್ದಾರಿಯಿಂದ ಮೌಲ್ಯಮಾಪನ ಮಾಡುವಿಕೆ, ಅಂಕಗಳನ್ನು ಕೂಡುವಲ್ಲಿ ಮತ್ತು ಅಂಕಪಟ್ಟಿಯಲ್ಲಿ ನಮೂದಿಸುವಲ್ಲಿ ಎಡವಟ್ಟು ಮಾಡುವಿಕೆ, ಅಂಕಪಟ್ಟಿ ಯಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಹೆಸರನ್ನು ತಪ್ಪಾಗಿ ನಮೂದಿಸುವಿಕೆಯೂ ಕಾಣಬರುತ್ತದೆ. ಇತ್ತೀಚಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡದಲ್ಲಿ 75 ಅಂಕ ಪಡೆದಿದ್ದ ವಿದ್ಯಾರ್ಥಿನಿಯ ಅಂಕಪಟ್ಟಿಯಲ್ಲಿ ನಮೂದಾಗಿದ್ದು ಮಾತ್ರ 25 ಅಂಕಗಳು! ಆಕೆಯ ಹೆತ್ತವರ ಸಮಯೋಚಿತ ಕ್ರಮದಿಂದ ಸಂಭಾವ್ಯ ಅನಾ ಹುತವೊಂದು ತಪ್ಪಿತು ಎನ್ನಬೇಕು. ಇನ್ನು, ವಿಶ್ವವಿದ್ಯಾ ಲಯವೊಂದು ನೀಡಿದ ಪ್ರಮಾಣಪತ್ರಗಳೇ ನಕಲಿ ಯಂತೆ!

ಮೇಲೆ ಉಲ್ಲೇಖಿಸಿರುವ ಅಧ್ವಾನಗಳು, ಯುಪಿಎಸ್‌ಸಿ, ನೀಟ್, ಜೆಇಇ ಮತ್ತು ಕಾಮೆಡ್ ಪರೀಕ್ಷೆಗಳನ್ನು ಹೊರತುಪಡಿಸಿದರೆ ಬಹಳಷ್ಟು ಪರೀಕ್ಷೆಗಳಲ್ಲಿ ಕಂಡುಬರುತ್ತವೆ, ಪ್ರತಿವರ್ಷವೂ ಪುನರಾವರ್ತನೆಗೊಳ್ಳುತ್ತವೆ. ಆದರೂ ಸಂಬಂಧಪಟ್ಟವರು ಪರೀಕ್ಷೆಗಳನ್ನು 'ಫೂಲ್-ಪ್ರೂಫ್' ಆಗಿ ನಡೆಸಲಿಕ್ಕೆ ಆಗದಿರುವುದು ಅಚ್ಚರಿಯ ಸಂಗತಿ. ಪರೀಕ್ಷಾ ಪದ್ಧತಿಯಲ್ಲಿ ಆಮೂಲಾಗ್ರ ಬದಲಾವಣೆ ತಂದು ಹೆಚ್ಚು ಪಾರದರ್ಶಕವಾಗಿಸುವ ಮಾತುಗಳು ಆಗಾಗ ಕೇಳಿಬರುತ್ತವೆ, ಅಂಥ ಕಸರತ್ತುಗಳೂ ಕಾಣಬರುತ್ತವೆ; ಆದರೆ ನಿರೀಕ್ಷಿತ ಪರಿಣಾಮ ಮಾತ್ರ ಬಿಸಿಲ್ಗುದುರೆ! ಅಲ್ಲಿಗೆ, ಹಿಂದಿನ ಎಡವಟ್ಟುಗಳು ಮತ್ತು ಕಹಿ ಅನುಭವದ ಮೇಲೆ ವ್ಯವಸ್ಥೆಯನ್ನು ಸುಧಾರಿಸುವ ಗಂಭೀರ ಯತ್ನಗಳಾಗುತ್ತಿಲ್ಲ ಎಂಬುದು ಸ್ಪಷ್ಟ. ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆಗಳಲ್ಲಿ ಎರಡನೇ ಬಾರಿಗೆ ಕನ್ನಡ ಭಾಷಾಂತರದ ಗೊಂದಲ ಕಾಣಿಸಿದ್ದುಂಟು.

ಒಟ್ಟಿನಲ್ಲಿ, 'ಅದೇ ರಾಗ, ಅದೇ ಹಾಡು' ಎನ್ನುವಂತೆ ಪರೀಕ್ಷಾ ವ್ಯವಸ್ಥೆಯು ಬದಲಾಗದೆ ನಡೆದುಕೊಂಡು ಹೋಗುತ್ತಿದೆ. ಇಂಥದೊಂದು ವ್ಯವಸ್ಥೆಯಲ್ಲಿ, ಫೇಲಾಗುವವ ಎನಿಸಿಕೊಂಡಾತ ಪಾಸಾಗುವ, ಉತ್ತಮ ಶ್ರೇಣಿ ನಿರೀಕ್ಷಿಸಿದವನು ಮಂಡಿಯೂರುವ ಬೆಳವಣಿಗೆಗಳನ್ನು ಕಂಡು ಪರಿಶ್ರಮಿ ವಿದ್ಯಾರ್ಥಿಗಳು, 'ಫೇಲ್ ಆಗಿದ್ದು ನಾವಲ್ಲ; ಅದು ಪರೀಕ್ಷಾ ವ್ಯವಸ್ಥೆಯ ಸೋಲು' ಎಂದು ನಿಟ್ಟುಸಿರಿಟ್ಟು ಸಮಾಧಾನ ಪಟ್ಟುಕೊಳ್ಳಬೇಕಾಗಿ ಬಂದಿದೆ. ಮರುಮೌಲ್ಯಮಾಪನ, ಮರುತಪಾಸಣೆ ಮತ್ತು ಟೋಟಲಿಂಗ್ ಹೆಸರಿನಲ್ಲಿ ವಿದ್ಯಾರ್ಥಿಗಳ ಪಾಲಕರಿಂದ ಒಂದಷ್ಟು ಹಣ ಕೈಬಿಡುತ್ತದೆ. ಮರು ಮೌಲ್ಯಮಾಪನದ ಪರಿಣಾಮವಾಗಿ ಫಲಿತಾಂಶ ಬದಲಾಗುವುದನ್ನು/ಗಮನಾರ್ಹ ಸಂಖ್ಯೆಯ ಅಭ್ಯರ್ಥಿಗಳು ತೇರ್ಗಡೆಯಾಗುವುದನ್ನು, ಉನ್ನತ ಶ್ರೇಣಿ ಪಡೆಯುವುದನ್ನು ಕಂಡಾಗ, 'ಒಮ್ಮೆ ಮೌಲ್ಯ ಮಾಪನವಾದ ಉತ್ತರ ಪತ್ರಿಕೆಗಳ ಮರುಮೌಲ್ಯ ಮಾಪನವನ್ನು ಕಡ್ಡಾಯವಾಗಿಸ ಬೇಕೇನೋ?!' ಎನಿಸುತ್ತದೆ. ಏಕೆಂದರೆ, ಉತ್ತರ ಕನ್ನಡ ಜಿಲ್ಲೆಯೊಂ ದರಲ್ಲೇ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಫೇಲಾಗಿದ್ದ 66 ವಿದ್ಯಾರ್ಥಿಗಳು ಮರುಮೌಲ್ಯಮಾ ಪನದಿಂದಾಗಿ ಪಾಸಾಗಿದ್ದಾರೆ, ಅವರಲ್ಲಿ ಕೆಲವರು ತಮ್ಮ 'ಸ್ಕೋರ್' ಹೆಚ್ಚಿಸಿಕೊಂಡಿದ್ದಾರೆ/ರ್ಯಾಂಕ್ ಪಡೆದಿದ್ದಾರೆ. ಒಂದೊಮ್ಮೆ ಮರುಮೌಲ್ಯಮಾಪನ/ಮರು ಎಣಿಕೆ ವ್ಯವಸ್ಥೆ ಇಲ್ಲದಿದ್ದಿದ್ದರೆ ಇಂಥವರ ಭವಿಷ್ಯ ಏನಾಗುತ್ತಿತ್ತೋ, ಅದೆಷ್ಟು ಅನಾಹುತವಾಗುತ್ತಿತ್ತೋ?!

ಪರೀಕ್ಷೆಗಳಲ್ಲಿ ಇಂಥ ಅಧ್ವಾನಗಳು ಹೊಸ ಬೆಳವಣಿಗೆಯೇನಲ್ಲ; ಅವು ಹಿಂದೆಯೂ ಇದ್ದವು, ಈಗಲೂ ಇವೆ, ಮುಂದೆಯೂ ಇರಬಹುದು. ಇಂಥ ಅಧ್ವಾನಗಳನ್ನು ನೋಡಿ 70ರ ದಶಕದಲ್ಲಿ, ಖ್ಯಾತ ಹಾಸ್ಯ ಸಾಹಿತಿ 'ಬೀಚಿ'ಯವರು, ''ನಮ್ಮಲ್ಲಿ ಕೆಲವು ಶಿಕ್ಷಕರು ಮೌಲ್ಯಮಾಪನಕ್ಕೆಂದು ಉತ್ತರ ಪತ್ರಿಕೆಗಳನ್ನು ಮನೆಗೆ ಒಯ್ಯುತ್ತಿದ್ದಾರೆ; ಸಂಸಾರದ ಜಂಜಾಟದಲ್ಲಿ ಮೌಲ್ಯಮಾಪನ ಮಾಡಲಾಗದೆ, ಆ ಉತ್ತರ ಪತ್ರಿಕೆಗಳ ಬಂಡಲ್‌ಗಳನ್ನು ರೂಮಿನ ಮಧ್ಯದಲ್ಲಿಟ್ಟು ಎಡಗಾಲಿನಲ್ಲಿ ಒದೆಯುತ್ತಾರೆ. ಎಡಕ್ಕೆ ಬಿದ್ದವೆಲ್ಲಾ ಪಾಸು, ಬಲಕ್ಕೆ ಬಿದ್ದವೆಲ್ಲಾ ಫೇಲು ಆಗುತ್ತವೆ'' ಎಂದು ಲೇವಡಿ ಮಾಡಿದ್ದರು. ಇದರ ವಿರುದ್ಧ ಹಲವು ಶಿಕ್ಷಕರು ಆಕ್ರೋಶ ವ್ಯಕ್ತಪಡಿಸಿದ್ದರಂತೆ.

ನಮ್ಮ ಪರೀಕ್ಷಾ ವ್ಯವಸ್ಥೆಯಲ್ಲಿನ ಅಧ್ವಾನಗಳು/ದೋಷಗಳಿಂದಾಗಿ ಅದೆಷ್ಟೋ ವಿದ್ಯಾರ್ಥಿಗಳ ಭವಿಷ್ಯ ಮಸುಕಾಗಿರುವ, ಸಾಕಷ್ಟು ಮಂದಿ ಬದುಕನ್ನೇ ಕೊನೆಗೊಳಿಸಿಕೊಂಡ ಉದಾಹರಣೆಗಳಿವೆ. ಸುದೈವದಿಂದ ಮತ್ತು ಹೆತ್ತವರ ಸಮಯೋಚಿತ ಕ್ರಮದಿಂದ ಕೆಲವರು ಬಚಾವಾಗಿದ್ದೂ ಇದೆ. ಆದರೆ ಭ್ರಮನಿರಸನಗೊಂಡಿರುವವರ ಸಂಖ್ಯೆಯೇ ಹೆಚ್ಚು. ಪರೀಕ್ಷೆಗಳನ್ನೇ 'ಪರೀಕ್ಷೆಗೆ ಒಳಪಡಿಸಬೇಕಾದ' ಸಂದರ್ಭ ಅನಿವಾರ್ಯ ವಾಗಿರುವುದು ದುರ್ದೈವ, ಸರಕಾರವು ಈ ನಿಟ್ಟಿನಲ್ಲಿ ತುರ್ತು ಗಮನ ಹರಿಸಬೇಕಿದೆ. ಉತ್ತೀರ್ಣರಾಗ ಬೇಕಾದವರು ಅನುತ್ತೀರ್ಣರಾದರೆ ಅದರ ನೋವನ್ನು ಸಹಿಸಲು ಅಸಾಧ್ಯ; ಅನುಭವಿಸಿದವರಿಗಷ್ಟೇ ಗೊತ್ತು ಆ ನೋವಿನ ತೀವ್ರತೆ...

(ಲೇಖಕರು ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹೊಸ ಮೈಲಿಗಲ್ಲು

ವಿಶ್ವವಾಣಿ ಬಳಗದ 'ಪ್ರವಾಸಿ ಪ್ರಪಂಚ' ವಾರಪತ್ರಿಕೆಯು ನಿಜಕ್ಕೂ ಕನ್ನಡ ಪತ್ರಿಕೋದ್ಯಮದಲ್ಲಿನ ಒಂದು ಮೈಲಿಗಲ್ಲು ಎಂದರೆ ತಪ್ಪಾಗಲಾರದು. ಇದರ ಪುಟಪುಟಗಳತ್ತ ಕಣ್ಣು ಹಾಯಿಸಿದಷ್ಟೂ ಅನುಪಮ ಮಾಹಿತಿಗಳು. ಮುತ್ತಿನಂಥ ಅಕ್ಷರಜೋಡಣೆ, ಗುಣಮಟ್ಟದ ಮುದ್ರಣ, ಮುಖಪುಟಕ್ಕೆ ಶೋಭೆ ತರಬಲ್ಲಂಥ ಆರ್ಟ್ ಪೇಪರ್‌ನ ಬಳಕೆ ಇವನ್ನೆಲ್ಲಾ ನೋಡುತ್ತಿರುವಂತೆಯೇ ಓದುಗರು ಕಳೆದುಹೋಗುತ್ತಾರೆ.

ಮಾರುಕಟ್ಟೆಯಲ್ಲಿ ಪ್ರಸ್ತುತ ಲಭ್ಯವಿರುವ ಇತರೆ ವಾರಪತ್ರಿಕೆಗಳು 25ರಿಂದ 50 ರುಪಾಯಿ ಮುಖಬೆಲೆಯಲ್ಲಿ 'ಎ-4' ಗಾತ್ರದ ಪ್ರಸ್ತುತಿಯಲ್ಲಿ ಮಾರಾಟವಾಗುತ್ತಿರುವ ಸಂದರ್ಭದಲ್ಲಿ, 'ಪ್ರವಾಸಿ ಪ್ರಪಂಚ' ಪತ್ರಿಕೆಯು ಇವೆಲ್ಲಕ್ಕೆ ಸವಾಲೊಡ್ಡುವ ರೀತಿಯಲ್ಲಿ ಕೇವಲ 15 ರುಪಾಯಿ ಬೆಲೆಯಲ್ಲಿ ಲಭ್ಯವಾಗುತ್ತಿದೆ. ಹೀಗೆ ಪ್ರತಿಯೊಬ್ಬರಿಗೂ ಕೈಗೆಟುಕುವ ದರದಲ್ಲಿ ಪತ್ರಿಕೆಯು ದೊರೆಯುವಂತೆ ಮಾಡಿರುವ ವಿಶ್ವವಾಣಿಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ಟರ ಸಾಹಸವನ್ನು ಮೆಚ್ಚಲೇಬೇಕು.

ಭಟ್ಟರ ಪ್ರತಿಯೊಂದು ಕನಸೂ ಸಾಕಾರಗೊಳ್ಳಲಿ, ನವವಧುವಿನಂತೆ ಸಿಂಗರಿಸಿಕೊಂಡು ಬಂದಿರುವ 'ಪ್ರವಾಸಿ ಪ್ರಪಂಚ'ವು ಪ್ರತಿಯೊಬ್ಬ ಓದುಗರ ಮನದಲ್ಲೂ ಶಾಶ್ವತವಾಗಿ ನೆಲೆಯೂರಲಿ ಎಂಬುದೇ ನನ್ನ ಆಶಯ.

- ಬೆಂ. ಮು. ಮಾರುತಿ, ಬೆಂಗಳೂರು

ಮನೆಗೆ ಬಂದ ಪ್ರಪಂಚ!

ವಿಶ್ವೇಶ್ವರ ಭಟ್ಟರಿಗೆ ಮತ್ತು ಅವರ ವಿಶ್ವಾಸಿ ತಂಡಕ್ಕೆ ಅನಂತಾನಂತ ಹೃತ್ಪೂರ್ವಕ ಧನ್ಯವಾದಗಳು. ಪ್ರಪಂಚವನ್ನೇ ನನ್ನ ಮನೆಯೊಳಗೆ ತಂದಿಟ್ಟಿದ್ದೀರಿ! 'ಪ್ರವಾಸಿ ಪ್ರಪಂಚ'ದ ಪ್ರಪ್ರಥಮ ಸಂಚಿಕೆಯ ಪುಟಗಳನ್ನು ತಿರುವುತ್ತ ತಿರುವುತ್ತ ಅವಾಕ್ಕಾದೆ! ನನ್ನ ನಿರೀಕ್ಷೆಗಿಂತ ಅದ್ಭುತವಾಗಿ ಮೂಡಿಬಂದಿದೆ 'ಪ್ರವಾಸಿ ಪ್ರಪಂಚ' ವಾರಪತ್ರಿಕೆ! ವಾರವಿಡೀ ಓದಿನ ಸುಖ ಅನುಭವಿಸಬಹುದು. ಪ್ರವಾಸದ ಒಲವಿಲ್ಲದವರಿಗೂ ಪ್ರವಾಸ ಕೈಗೊಳ್ಳುವ ಉಮೇದು ನೀಡುವಷ್ಟು ಸೊಗಸಾಗಿದೆ, ಮಾಹಿತಿಪೂರ್ಣವಾಗಿದೆ. ಕೂಲಂಕಷ ಓದಿ, ಆ ಪತ್ರಿಕೆಗೇ ಪ್ರತಿಕ್ರಿಯಿಸುತ್ತೇನೆ.

ಕನ್ನಡದಲ್ಲಿ ಪ್ರಪ್ರಥಮ ಮತ್ತು ಭಾರತೀಯ ಪತ್ರಿಕಾರಂಗದಲ್ಲಿ ಅಪ್ರತಿಮ ಸಾಧನೆಯಾಗಿರುವ 'ಪ್ರವಾಸಿ ಪ್ರಪಂಚ'ದ ಸೃಷ್ಟಿಕರ್ತ ವಿಶ್ವೇಶ್ವರ ಭಟ್ಟರಿಗೆ ಮತ್ತೊಮ್ಮೆ ಧನ್ಯವಾದಗಳು. ಸಾಹಸಕ್ಕಾಗಿ ಅಭಿನಂದನೆಗಳು.

- ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಬೇಲಿಯೇ ಮೇಯ್ದಂತೆ..

ಶೈಕ್ಷಣಿಕ ವರ್ಷದ ಶಾಲೆಗಳು ಪ್ರಾರಂಭವಾಗಿವೆ. ಸರಕಾರಿ ಶಾಲೆಗಳಲ್ಲಿ ದಾಖಲಾತಿ ಇಲ್ಲದೇ ಈ ವರ್ಷವೂ ಕೆಲವು ಶಾಲೆಗಳು ವಿಲೀನವಾಗುವ ಸಾಧ್ಯತೆ ಇದ್ದರೆ, ಇನ್ನುಳಿದ ಶಾಲೆಗಳು ಮುಚ್ಚುವ ಹಂತದಲ್ಲಿವೆ. ಹೀಗಿರುವಾಗ ಸ್ವತಃ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಬಿಇಒ ಕಚೇರಿಯ ಸಿಬ್ಬಂದಿಗಳು ಖಾಸಗಿ ಶಾಲೆಗಳಿಗೆ ದಾಖಲಾತಿ ಮಾಡಿ ಎಂದು ಪಾಲಕರನ್ನು ಪ್ರೋತ್ಸಾಹಿಸಿ, ತಮ್ಮ ಹೆಸರು ಹೇಳಿ ಶಾಲಾ ಶುಲ್ಕವನ್ನು ಮನ್ನಾ ಮಾಡಿಸುತ್ತಿರುವುದು ಕೆಲವೆಡೆ ಕಂಡುಬರುತ್ತಿದೆ. ಇಂದು ಬಹುತೇಕ ಸರಕಾರಿ ಉದ್ಯೋಗಿಗಳು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗೆ ಸೇರಿಸುವುದು ಸಾಮಾನ್ಯ ಸಂಗತಿ. ಆದರೆ ಇಲ್ಲಿ ಶಿಕ್ಷಣ ಇಲಾಖೆಯ ಉದ್ಯೋಗಿಗಳೇ ಖಾಸಗೀಕರಣಕ್ಕೆ ಒತ್ತು ನೀಡುವುದು ಸರಿಯೇ?

ಇಂಥ ಸ್ಥಿತಿಯಲ್ಲಿ ಯಾವ ಪಾಲಕರು ತಾನೇ ಸರಕಾರಿ ಶಾಲೆಯತ್ತ ಮುಖ ಮಾಡುತ್ತಾರೆ? ಇದರೊಂದಿಗೆ ಬಿಇಒ ಕಚೇರಿಯ ಅಧಿಕಾರಿಗಳು ನಿಯಮಗಳ ಹೆದರಿಕೆ ತೋರಿಸಿ ಖಾಸಗಿ ಶಾಲೆಯಲ್ಲಿ ಪುಕ್ಕಟೆ ಸೀಟ್ ಪಡೆಯುವುದು ಜಾಸ್ತಿಯಾಗಿದೆ. ಇದರ ಬಗ್ಗೆ ಶಿಕ್ಷಣ ಸಚಿವರು ವಿಶೇಷ ತನಿಖಾ ತಂಡ ರಚಿಸಿ, ಸೂಕ್ತ ಕ್ರಮ ಕೈಗೊಳ್ಳುವರೇ?

- ಸುರೇಂದ್ರ ಪೈ, ಭಟ್ಕಳ

ಭಟ್ಟರ್ ಸ್ಕಾಚ್

- **ಹೇಮಾ ವಿನಾಯಕ, ಬೆಂಗಳೂರು**
ಭಟ್ರೇ, ಸರಕಾರಕ್ಕೆ ಕಷ್ಟ ಬಂದಾಗಲೆಲ್ಲ ನೆರವಿಗೆ ಬರೋದು ಯಾರು?
- **ಜಾತಿ ಗಣತಿ!**

- **ರಾಜೇಶ ಚಂದಾಪುರ, ಚಂದಾಪುರ**
ಭಟ್ರೇ, ಚಿಕ್ಕವಳಿದ್ದಾಗ ಆಕೆಗೆ ಕೋಳಿಗರಿ ಕೊಟ್ಟಿದ್ದೆ. ಈಗಲೂ ಇಟ್ಟುಕೊಂಡಿರಬಹುದಾ?
- **ಗರಿ ಬದಲು ಕೋಳಿಯನ್ನೇ ಕೊಟ್ಟಿದ್ದರೂ ಬಿರಿಯಾನಿ ಮಾಡಿ ತಿಂದಿರುತ್ತಿದ್ದಳು!**

- **ಬಿ.ಪಿ.ಷಡಕ್ಷರಿ, ನೆಲಮಂಗಲ**
ಭಟ್ರೇ, ಈ ಕಾಲದಲ್ಲಿ ಪತ್ರ ಬರೆದು ಪ್ರೀತಿ ಮಾಡಬಹುದಾ?
- **ಎಸ್ಸೆಮ್ಮೆಸ್ಸೇ ವರ್ಕ್ ಆಗಲ್ಲ, ಇನ್ನು...!**

- **ರೂಪಾ ಶ್ರೀಪಾದ, ಹುಬ್ಬಳ್ಳಿ**
ಭಟ್ರೇ, 'ಹೆಂಗಸರಿಗೆ ಪ್ರವೇಶ ಇಲ್ಲ' ಅಂತ ಇಲ್ಲೊಂದು ಬಾರಿನಲ್ಲಿ ಬೋರ್ಡು ಹಾಕಿದ್ದಾರಲ್ಲ, ಏಕೆ?
- **ಕುಡಿಯದೇ ಹಾಗೆ ವರ್ತಿಸುತ್ತಾರೆ.. ಇನ್ನು ಕುಡಿದರೆ ಕೇಳಬೇಕೇ?**

- **ನಾಗೇಂದ್ರ, (ಇಮೇಲ್ ಮೂಲಕ)**
ಭಟ್ರೇ, ಯಾರೋ ಮಾಡಿದ ತಪ್ಪಿಗೆ ಇನ್ಯಾರೋ ಶಿಕ್ಷೆ ಅನುಭವಿಸುತ್ತಾರಲ್ಲ.. ಉದಾಹರಣೆ?
- **ತುಟಿ ಮಾಡಿದ ತಪ್ಪಿಗೆ ಹಲ್ಲು ಉದುರಿಸಿಕೊಂಡು ಪರಿತಪಿಸುವುದಿಲ್ಲವೇ?!**

- **ರಮ್ಯಾ, (ಇಮೇಲ್ ಮೂಲಕ)**
ಭಟ್ರೇ, ಗಂಡ-ಹೆಂಡಿರ ಜಗಳವನ್ನು ಯುದ್ಧಕ್ಕೆ ಹೋಲಿಸುತ್ತಾರಲ್ಲ?
- **ಆಗಾಗ ಯುದ್ಧ ವಿರಾಮ ಘೋಷಣೆ ಆಗುತ್ತಲ್ಲ.. ಅದಕ್ಕೆ!**

- **ಪ್ರದೀಪ ನಾಯಕ, ಬೆಂಗಳೂರು**
ಭಟ್ರೇ, ಒಂದೇ ಸಾಕು ಅಂತ ಹಠ ಹಿಡಿಯುತ್ತಾಳಲ್ಲ?
- **ವಿಶ್ವೇಶ್ವರ ಭಟ್ರು ಕೇಳಿಸಿಕೊಂಡ್ರೆ ಏನು ಹೇಳಬಹುದು ಅಂತ ಮೆಲ್ಲಗೆ ಹೇಳಿ ನೋಡಬೇಕಿತ್ತು!**

- **ಸಿದ್ದೇಶ, ಅರಸೀಕೆರೆ**
ಭಟ್ರೇ, ತೀರಾ ಸಪೂರ ಹೆಂಗಸರು ನೈಟಿ ಹಾಕಿಕೊಂಡ್ರೆ ಚೆನ್ನಾಗಿ ಕಾಣೊಲ್ಲ ಅಲ್ಲವಾ?
- **ನಾರಾಯಣಮೂರ್ತಿಯವರು ಜುಬ್ಬಾ ಹಾಕಿಕೊಂಡಂತಿರುತ್ತದೆ!**

- **ರವೀಂದ್ರ ಸೀಗೇಹಳ್ಳಿ, ಉಡುಪಿ**
ಭಟ್ರೇ, 'ನಾನು ನಿನ್ನ ಮೊಬೈಲ್ ಫೋನ್ ಆಗಿರಬೇಕಿತ್ತು' ಅಂತ ನನ್ನ ಹೆಂಡತಿ ಹೇಳ್ತಾಳಲ್ಲ?
- **ಹೂಂ.. ಸದಾ ಸೈಲೆಂಟ್ ಮೋಡ್‌ನಲ್ಲಿಟ್ಟಿರುತ್ತಿದ್ದೆ ನೀನು!**

ಆಡಳಿತ ಸೇವೆ, ಆಡಳಿತದಲ್ಲಿರುವವರ ಸೇವೆ ಅಲ್ಲ!

ಲೋಕಮತ

ಲೋಕೇಶ್ ಕಾಯರ್ಗ
kaayarga@gmail.com

18 ವರ್ಷಗಳ ಬಳಿಕ ಆರ್‌ಸಿಬಿ ಐಪಿಎಲ್ ಟ್ರೋಫಿ ಗೆದ್ದ ಖುಷಿ ಕೇವಲ 18 ಗಂಟೆಗಳಲ್ಲಿ ಕೊನೆಯಾಗುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಟ್ರೋಫಿ ಗೆದ್ದ ಮರುದಿನವೇ ಬೆಂಗಳೂರಿನಲ್ಲಿ ಆಯೋಜಿಸಲಾದ ವಿಜಯೋತ್ಸವದಲ್ಲಿ ನಡೆದ ಕಾಲ್ತುಳಿತ ಘಟನೆಯಲ್ಲಿ 11 ಜನರು ಬಲಿಯಾಗಿ 45 ಮಂದಿ ಗಾಯಗೊಂಡ ಘಟನೆ ಈಗ ವಿಶ್ವಮಟ್ಟದಲ್ಲಿ ಸುದ್ದಿಯಾಗಿದೆ. ಮೊನ್ನೆಯವರೆಗೂ 'ಕಪ್ ನಮ್ಮದೇ' ಎನ್ನುತ್ತಿದ್ದವರು ಈಗ 'ತಪ್ಪು ಯಾರದು' ಎಂದು ಕೇಳತೊಡಗಿದ್ದಾರೆ. ಆದರೆ ಯಾರೊಬ್ಬರೂ ' ನಮ್ಮದೇ ತಪ್ಪು' ಎಂದು ಹೇಳಲು ಸಿದ್ಧರಿಲ್ಲ. ರಾಜ್ಯ ಸರಕಾರ, ಅಧಿಕಾರಿಗಳು, ಪೊಲೀಸರು, ಆರ್‌ಸಿಬಿ ಆಡಳಿತ ಮಂಡಳಿ, ಕರ್ನಾಟಕ ರಾಜ್ಯ ಕ್ರಿಕೆಟ್ ನಿಯಂತ್ರಣ ಸಂಸ್ಥೆ ಮತ್ತು ಕಾರ್ಯಕ್ರಮ ಆಯೋಜನೆಯ ಉಸ್ತುವಾರಿ ವಹಿಸಿದ ಡಿಎನ್‌ಎ ಇವೆಂಟ್ಸ್ ಮ್ಯಾನೇಜ್‌ಮೆಂಟ್ ಸಂಸ್ಥೆ ತಮ್ಮದೇ ದಾಟಿಯಲ್ಲಿ ವಾದ ಮುಂದಿಡುತ್ತಿದ್ದು, ಘಟನೆಯ ಹೊಣೆ ಹೊರಲು ಯಾರೂ ಸಿದ್ಧರಿಲ್ಲ. ಅಂತಿಮವಾಗಿ ಅಭಿಮಾನಿಗಳ ಅತಿರೇಕದ ಸಂಭ್ರಮವೇ ಈ ಸಾವಿಗೆ ಮೂಲ ಕಾರಣ ಎಂದು ವ್ಯಾಖ್ಯಾನಿಸಲಾಗುತ್ತಿದೆ.

ಕ್ರಿಕೆಟ್ ಈ ದೇಶದ ಉದ್ದಗಲಕ್ಕೂ ವ್ಯಾಪಿಸಿದ 'ಧರ್ಮ' ಎನ್ನಲಾಗುತ್ತಿದೆ. ಆದರೆ ಕ್ರಿಕೆಟ್ ಆಯೋಜನೆಯಲ್ಲಿ ಸರಕಾರದ ಪಾತ್ರ ಕಾನೂನು, ಸುವ್ಯವಸ್ಥೆಗೆ ಸೀಮಿತ. ಬಿಸಿಸಿಐ ಎಂಬ ಖಾಸಗಿ ಕ್ರೀಡಾ ಸಂಸ್ಥೆ ಭಾರತ ಮಾತ್ರವಲ್ಲ ವಿಶ್ವದ ಕ್ರಿಕೆಟನ್ನೂ ನಿಯಂತ್ರಿಸುತ್ತಿದೆ. ಇದರ ಅಂಗ ಸಂಸ್ಥೆ ಐಪಿಎಲ್ ನಡೆಸುತ್ತಿರುವ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ತಂಡದಲ್ಲಿ ಭಾರತ ಮಾತ್ರವಲ್ಲ ವಿದೇಶಿ ಆಟಗಾರರೂ ಇದ್ದಾರೆ. ಅದರಲ್ಲೂ ಆರ್‌ಸಿಬಿ ತಂಡದಲ್ಲಿ ಇದ್ದಿದ್ದು ಕರ್ನಾಟಕದ ಒಬ್ಬಿಬ್ಬರು ಆಟಗಾರರು ಮಾತ್ರ. ಇಷ್ಟಾದರೂ ಮದ್ಯ ಕಂಪನಿಯ ಹೆಸರಿನ ಕೊನೆಯಲ್ಲಿ ಬೆಂಗಳೂರು ಸೇರಿಕೊಂಡಿದೆ ಎಂಬ ಕಾರಣಕ್ಕೆ ಕನ್ನಡಿಗರೆಲ್ಲರೂ ಆರ್‌ಸಿಬಿ ಎಂಬ ತಂಡವನ್ನು ಎದೆಯಲ್ಲಿರಿಸಿಕೊಂಡಿದ್ದಾರೆ. ಇದೇ ಕಾರಣಕ್ಕೆ 18 ವರ್ಷಗಳ ಬಳಿಕ ಬಂದ ಗೆಲುವನ್ನು ಸಂಭ್ರಮಿಸಿದ್ದಾರೆ. ಸರಕಾರ ಜನರ ಸಂಭ್ರಮದಲ್ಲಿ ಭಾಗಿಯಾಗಿ ಅಭಿನಂದನೆ ಸಲ್ಲಿಸಿದ್ದರೆ ಸಾಕಿತ್ತು. ಆದರೆ ಅಭಿಮಾನಿಗಳಂತೆ ಸರಕಾರವೂ ಅತಿರೇಕದ ನಡೆ ಇಟ್ಟಿದ್ದು ಈ ದುರಂತದ ಮೂಲ . ಒಲಿಂಪಿಕ್ಸ್ ಪದಕ ಗೆದ್ದ ಕ್ರೀಡಾಪಟುಗಳಿಗೆ, ಪದ್ಮ ಪುರಸ್ಕೃತ ಗಣ್ಯರಿಗೆ ನೀಡದ ಸ್ವಾಗತ, ಸನ್ಮಾನವನ್ನು ಆರ್‌ಸಿಬಿ ಹೆಸರಿನಲ್ಲಿ ಬಂದ ಅನ್ಯ ರಾಜ್ಯದ, ಅನ್ಯ ದೇಶದ ಕ್ರೀಡಾಪಟುಗಳಿಗೆ ನೀಡಲು ಸರಕಾರ ಮುಂದಾಗಿದ್ದು ಅನಾಹುತಕ್ಕೆಡೆ ಮಾಡಿಕೊಟ್ಟಿದೆ.

ಜನರಿಂದ ಆಯ್ಕೆಯಾದ ಸರಕಾರವೊಂದು ಜನರ ಸಡಗರ, ಸಂಭ್ರಮದಲ್ಲಿ ಪಾಲ್ಗೊಂಡಿದ್ದು ತಪ್ಪಲ್ಲ ಎಂದುಕೊಂಡರೂ, ವ್ಯವಸ್ಥಿತವಾಗಿ ಸಂಘಟಿಸಬೇಕಾಗಿದ್ದ ಕಾರ್ಯಕ್ರಮವೊಂದನ್ನು ಯಾವುದೇ ಪೂರ್ವ ಸಿದ್ಧತೆ ಇಲ್ಲದೆ ಆತುರಾತುರವಾಗಿ ಆಯೋಜಿಸುವ ಅನಿವಾರ್ಯತೆ ಏನಿತ್ತು ? ಇಲ್ಲಿ ಆರಂಭದಿಂದಲೇ ಎಲ್ಲ ನೀತಿ, ನಿಯಮಗಳನ್ನು ಗಾಳಿಗೆ ತೂರಲಾಗಿತ್ತು. ಪಂದ್ಯ ಗೆಲ್ಲುವ ಮುನ್ನವೇ ಆರ್‌ಸಿಬಿ ಪ್ರತಿನಿಧಿಗಳು ಸಂಭ್ರಮಾಚರಣೆಯ ಪ್ರಸ್ತಾಪ ಮುಂದಿಟ್ಟಿದ್ದರು. ಈ ಪ್ರಸ್ತಾಪವನ್ನು ಹೊತ್ತು ಬಂದ ಕೆಎಸ್‌ಸಿಎ ಮತ್ತು ಆಯೋಜಕ ಸಂಸ್ಥೆ ಪ್ರತಿನಿಧಿಗಳು ಪೊಲೀಸರನ್ನು ಸಂಪರ್ಕಿಸುವ ಮೊದಲು ಸರಕಾರದ ಪ್ರಭಾವಿ ನಾಯಕರನ್ನು ಸಂಪರ್ಕಿಸಿದ್ದರು. ಭದ್ರತಾ ದೃಷ್ಟಿಯಿಂದ ವಿಧಾನಸೌಧದ ಆವರಣದಲ್ಲಿ ಕಾರ್ಯಕ್ರಮ ಆಯೋಜಿಸುವುದು ಬೇಡ ಎಂದು ಡಿಸಿಪಿ ಕಚೇರಿ ಸಲಹೆ ನೀಡಿದ್ದರೂ ಆಳುವ ನಾಯಕರು ಮತ್ತು ಹಿರಿಯ ಅಧಿಕಾರಿಗಳು ಈ ಸಲಹೆಯನ್ನು ಬದಿಗೊತ್ತಿದ್ದರು. ಇಂತಹ ಸಂದರ್ಭಗಳಲ್ಲಿ ಅನುಸರಿಸಬೇಕಾದ ಸಾಮಾನ್ಯ ನಿಯಮ (ಎಸ್‌ಒಪಿ) ಗಳನ್ನು ಮೂಲೆಗೆ ತಳ್ಳಲಾಗಿತ್ತು. ರಾಜಕೀಯ ಮತ್ತು ಅಧಿಕಾರದ ಶಿಷ್ಟಾಚಾರಗಳನ್ನು ಧಿಕ್ಕರಿಸಿ ಶಕ್ತಿ ಸೌಧದ ಮುಂದೆ ರಾಜ್ಯಪಾಲರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಜತೆ ನಾಯಕರ ಮಕ್ಕಳು, ಮೊಮ್ಮಕ್ಕಳನ್ನು ವೇದಿಕೆಗೆ ತಂದು ಕೂರಿಸಲಾಗಿತ್ತು. ಡಿಸಿಎಂ ಶಿವಕುಮಾರ್ ಅವರು ವೇದಿಕೆಗೆ ನುಗ್ಗಿ ಬಂದವರ ಕತ್ತು ಹಿಡಿದು ತಳ್ಳಿದ ಕ್ಷಣದಲ್ಲಿಯೇ ಕಾರ್ಯಕ್ರಮದ ಭದ್ರತಾಲೋಪ ಬಯಲಾಗಿತ್ತು. ಸನ್ಮಾನದ ಕಾರ್ಯಕ್ರಮದ ಘನತೆ, ಗೌರವ ಮಣ್ಣುಪಾಲಾಗಿತ್ತು.

ಈ ಪ್ರಕರಣದಲ್ಲಿ ತಪ್ಪು ಯಾರದ್ದು ಎಂದರೆ ಒಬ್ಬರನ್ನು ಬೊಟ್ಟು ಮಾಡಲು ಸಾಧ್ಯವಿಲ್ಲ. ಆದರೆ ಅಭಿಮಾನಿಗಳಿಂದ ಹಿಡಿದು ಆಯೋಜಕರ ತನಕ ಪ್ರತಿಯೊಬ್ಬರೂ ಅಂದು ವಿವೇಕ ಮರೆತು ನಡೆದುಕೊಂಡಿದ್ದರು. ಅತಿಯಾದ ಸಂಭ್ರಮವೋ, ಉದ್ವೇಗವೋ ಅಥವಾ ಆ ಕ್ಷಣದಲ್ಲಿ ಕಾಣಿಸಿಕೊಳ್ಳುವ ಅವಸರವೋ ಕನಿಷ್ಠ ಸಾಮಾನ್ಯ ಜ್ಞಾನವೂ ಮರೆಯಾಗಿತ್ತು. ನಾಯಕರಿಗೆ ವಿಜಯೋತ್ಸವದ ಸಡಗರ ಮತ್ತು ಪ್ರಚಾರದ ಹುಚ್ಚು ಹೊಳೆಯಲ್ಲಿ ಮಿಂದೇಳುವ ತವಕ. ರಾಜಕೀಯ ಮೇಲಾಟದಲ್ಲಿ ತಾವೇ ಮುಂದಾಗಿ ಸನ್ಮಾನಿಸಿ ಕ್ರೆಡಿಟ್ ಪಡೆದುಕೊಳ್ಳುವ ಹುನ್ನಾರ. ಹಿಂಬಾಲಕರಿಗೆ ವಿರಾಟ್ ಕೊಹ್ಲಿಯಂತಹ ಸ್ಟಾರ್ ಆಟಗಾರನನ್ನು ಹತ್ತಿರದಿಂದ ನೋಡಬೇಕೆಂಬ ಇರಾದೆ. ತಮ್ಮ ಮಕ್ಕಳಿಗೆ ಸ್ಟಾರ್ ಆಟಗಾರರ ಆಟೋಗ್ರಾಫ್ ಕೊಡಿಸಿ ಧನ್ಯರಾಗುವ ಹಂಬಲ. ಆರ್‌ಸಿಬಿ ತಂಡದ ಪ್ರತಿನಿಧಿಗಳಿಗೆ, ಸಂಘಟಕರಿಗೆ ವಿಧಾನ ಸೌಧದ ಮುಂದೆ ಕಾರ್ಯಕ್ರಮ ಏರ್ಪಡಿಸಿ, ರಾಜ್ಯಪಾಲರು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯಾಗಿ ಎಲ್ಲರ ಉಪಸ್ಥಿತಿಯಲ್ಲಿ ಆಟಗಾರರನ್ನು ಸನ್ಮಾನಿಸಿ ತಮ್ಮ ಬ್ರ್ಯಾಂಡ್ ವ್ಯಾಲ್ಯೂ ಹೆಚ್ಚಿಸಿಕೊಳ್ಳುವ ವ್ಯಾಪಾರ ತಂತ್ರ. ರಾಜಕೀಯ ನಾಯಕರ ಅಡಿಯಾಳುಗಳಾದ ಪೊಲೀಸರಿಗೆ ಮತ್ತು ಅಧಿಕಾರಿಗಳಿಗೆ ಗಟ್ಟಿ ಧ್ವನಿಯಲ್ಲಿ ಏನನ್ನೂ ಹೇಳಲಾಗದ ಅಸಹಾಯಕತೆ. ಇವೆಲ್ಲವೂಗಳ ಮೇಲಾಟದಲ್ಲಿ ಯಾವುದು ಆಗಬಾರದಿತ್ತೋ ಅದು ಘಟಿಸಿ ಹೋಗಿದೆ. 11 ಅಮಾಯಕ ಜೀವಗಳು ಬಲಿಯಾಗಿವೆ.

ದುರಂತ ಸಂಭವಿಸಿದ ಬಳಿಕವೂ ಈ ಮೇಲಾಟ ನಿಂತಿಲ್ಲ. ಭದ್ರತಾ ವೈಫಲ್ಯಕ್ಕೆ ಪೊಲೀಸರೇ ಕಾರಣ ಎಂದು ಆಯುಕ್ತರು ಸೇರಿ ಐವರು ಹಿರಿಯ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಸಿಎಂ ರಾಜಕೀಯ ಕಾರ್ಯದರ್ಶಿಯ ರಾಜೀನಾಮೆ ಪಡೆದು ಉಳಿದವರನ್ನು ರಕ್ಷಿಸುವ ಯತ್ನ ನಡೆದಿದೆ. ಆರ್‌ಸಿಬಿ, ಕೆಎಸ್‌ಸಿಎ, ಎನ್‌ಡಿಎ ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆ ನ್ಯಾಯಾಲಯದ ಮುಂದಿಟ್ಟಿರುವ ವಾದಗಳನ್ನು ನೋಡಿದರೆ ಕಾನೂನಿನ ಕುಣಿಕೆಯಿಂದ ಪಾರಾಗಲು ಇವರೆಲ್ಲರಿಗೂ ಸಾಕಷ್ಟು ದಾರಿಗಳಿವೆ. ಆದರೆ ವಿಜಯೋತ್ಸವದ ಸಮೂಹ ಸನ್ನಿಯ ಸೆಳೆತಕ್ಕೊಳಗಾಗಿ ಚಿನ್ನಸ್ವಾಮಿ ಸ್ಟೇಡಿಯಂ ದ್ವಾರದಲ್ಲಿ ಉಸಿರು ಚೆಲ್ಲಿದ 11 ಮಂದಿಯ ಕುಟುಂಬ ವರ್ಗ ಮಾತ್ರ ಇನ್ನೂ ಜೀವನ ಪೂರ್ತಿ ಈ ಕ್ರೀಡೆಯನ್ನು ಆಸ್ವಾದಿಸಲು, ಗೆದ್ದಾಗ ಸಂಭ್ರಮಿಸಲು ಸಾಧ್ಯವಿಲ್ಲ.

ನಾಯಕರು, ಅಧಿಕಾರಿಗಳು ಮತ್ತು ಆಯೋಜಕರು ಅರೆಕ್ಷಣ ಯೋಚಿಸಿ, ಕಾಮನ್ ಸೆನ್ಸ್ ಬಳಸಿ ನಿರ್ಧಾರ ಕೈಗೊಂಡಿದ್ದರೂ ಈ ದುರ್ಘಟನೆಯನ್ನು ಖಂಡಿತವಾಗಿಯೂ ತಪ್ಪಿಸಬಹುದಿತ್ತು. ಸಿನಿಮಾ ನಟರು ಮತ್ತು ಕ್ರಿಕೆಟಿಗರ ಬಗ್ಗೆ ನಮ್ಮ ಜನರಿಗಿರುವ ಕ್ರೇಜ್ ಮತ್ತು ಹುಚ್ಚು ಅಭಿಮಾನ ತಿಳಿಯದ ವಿಷಯವೇನಲ್ಲ. ಹಿಂದಿನ ದಿನ ಪಂದ್ಯವನ್ನು ವೀಕ್ಷಿಸಲು ಬೆಂಗಳೂರಿನ ಮೂಲೆ, ಮೂಲೆಯಲ್ಲಿ ಸೇರಿದ್ದ ಜನಸಾಗರ, ರಾತ್ರಿಯಿಡೀ ನಡೆದ ಸಂಭ್ರಮಾಚರಣೆ, ಮಧ್ಯರಾತ್ರಿಯಲ್ಲಿ ಉಂಟಾದ ಟ್ರಾಫಿಕ್ ಜಾಮ್, ಹರಿದ ದಾಖಲೆ ಪ್ರಮಾಣದ ಮದ್ಯದ ಹೊಳೆ..ಇವೆಲ್ಲವೂ ಅಭಿಮಾದ ಹುಚ್ಚು ತಾರಕಕ್ಕೇರಿರುವ ಪ್ರತ್ಯಕ್ಷ ಸಾಕ್ಷ್ಯಗಳನ್ನು ನೀಡಿದ್ದವು. ಇಷ್ಟಾದ ಬಳಿಕವೂ ವಿಜಯೋತ್ಸವದ ಮೆರವಣಿಗೆ ಮತ್ತು ಸಂಭ್ರಮಾಚರಣೆಗೆ ಬನ್ನಿ ಎಂದು ಮುಕ್ತ ಆಹ್ವಾನ ನೀಡಿದರೆ ಲಕ್ಷೋಪಲಕ್ಷ ಜನರು ದಾಂಗುಡಿ ಇಡುತ್ತಾರೆನ್ನುವುದು ನಮ್ಮಂತಹ ಜನಸಾಮಾನ್ಯರೂ ಊಹೆ ಮಾಡಬಹುದಾದ ಸಂಗತಿ. ಈ ಸಣ್ಣ ಸಂಗತಿ ನಮ್ಮ ನಾಯಕರಿಗೆ, ಅಧಿಕಾರಿಗಳಿಗೆ ಮತ್ತು ಆಯೋಜಕರಿಗೆ ಏಕೆ ತಿಳಿಯಲಿಲ್ಲ ?

ಐಪಿಎಲ್ ತಂಡದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ವಿದೇಶಿ ಆಟಗಾರರು ಟೂರ್ನಿ ಮುಗಿಸಿದ ಬೆನ್ನಿಗೇ ಸ್ವದೇಶದ ವಿಮಾನ ಹತ್ತಲು ಸಿದ್ಧರಾಗಿದ್ದಾರೆ ಎಂಬ ಕಾರಣಕ್ಕೆ ತರಾತುರಿಯಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು ಎಂಬ ಮಾತುಗಳು ಕೇಳಿ ಬರುತ್ತಿವೆ. ಎಷ್ಟೇ ತರಾತುರಿ ಇದ್ದರೂ ಕಾನೂನು-ಸುವ್ಯವಸ್ಥೆಗೆ ಧಕ್ಕೆ ಆಗದಂತೆ ನೋಡಿಕೊಳ್ಳಬೇಕಾದ ಹೊಣೆ ಪೊಲೀಸರದ್ದು. ಈ ನಿಟ್ಟಿನಲ್ಲಿ ಬೆಂಗಳೂರು ಪೊಲೀಸರಿಗೆ ಸಾಕಷ್ಟು ಅನುಭವವೂ ಇದೆ. ಡಾ. ವಿಷ್ಣುವರ್ಧನ್, ಅಂಬರೀಶ್, ಪುನೀತ್ ರಾಜ್‌ಕುಮಾರ್ ನಿಧನರಾದ ಅವಧಿಯಲ್ಲಿ ಸೇರಿದ್ದ ಜನಸಾಗರವನ್ನು ಬೆಂಗಳೂರು ಪೊಲೀಸರು ಯಶಸ್ವಿಯಾಗಿ ನಿಬಾಯಿಸಿದ್ದರು. ಸ್ವಲ್ಪ ಎಚ್ಚರಿಕೆ ತಪ್ಪಿದರೂ ಅನುಹುತ ಸಾಧ್ಯ ಎನ್ನುವುದಕ್ಕೆ ಡಾ. ರಾಜ್ ಕುಮಾರ್ ನಿಧನದ ಸಂದರ್ಭದಲ್ಲಿ ಭುಗಿಲೆದ್ದ ಹಿಂಸಾಚಾರದ ದೃಷ್ಟಾಂತವಿತ್ತು.

ಕನ್ನಡದ ಸ್ಟಾರ್ ನಟರು ಬಿಡಿ, ತಮಿಳು, ತೆಲುಗು ಭಾಷೆಯ ಸ್ಟಾರ್ ನಟರು ಬಂದಾಗಲೂ ಇಲ್ಲಿನ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಸಾಮಾನ್ಯ. ಇನ್ನು ಭಾರತ ಮತ್ತು ಹೊರ ದೇಶಗಳಲ್ಲಿ ಕೋಟ್ಯಂತರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿರುವ ವಿರಾಟ್ ಕೊಹ್ಲಿಯಂತಹ ಆಟಗಾರ ಇಲ್ಲಿನ ರಸ್ತೆಗಳಲ್ಲಿ ಕಾಣಿಸಿಕೊಂಡರೆ, ಸಾವಿರಾರು ಜನರು ಮುಗಿ ಬೀಳುವುದು ನಿರೀಕ್ಷಿತವೇ ಆಗಿತ್ತು. ಹೀಗಿರುವಾಗ ಕಪ್ ಗೆದ್ದ ಸಂಭ್ರಮೋತ್ಸವಕ್ಕೆ ಎಷ್ಟು ಜನರು ಸೇರಬಹುದೆಂದು ಒಬ್ಬ ಕಾನ್‌ಸ್ಟೇಬಲ್ ಕೂಡ ಅಂದಾಜಿಸಬಹುದಿತ್ತು. ರಾಜಕೀಯ ನಾಯಕರು, ಸಂಘಟಕರು ಈ ಸಂದರ್ಭವನ್ನು ತಮ್ಮ ಹಿತಾಸಕ್ತಿಗಳನ್ನು ಮೆರೆಯಲು ಈ ಸಂದರ್ಭವನ್ನು ಬಳಸಿಕೊಳ್ಳುವುದು ಕೂಡ ಅನಿರೀಕ್ಷಿತವಾಗಿರಲಿಲ್ಲ. ಸಮೂಹ ಸನ್ನಿಯಲ್ಲಿ ಸಾಗಿ ಬರುವ ಅಭಿಮಾನಿಗಳ ಅತಿರೇಕದ ವರ್ತನೆಯೂ ಅಚ್ಚರಿಯ ವಿಷಯವಾಗಿರಲಿಲ್ಲ. ಸಂದರ್ಭದ ಸೂಕ್ಷ್ಮತೆಯನ್ನು, ಅಪಾಯದ ಸಾಧ್ಯತೆಯನ್ನು ನಗರ ಪೊಲೀಸರು ಆಯೋಜಕರು ಮತ್ತು ನಾಯಕರ ಗಮನಕ್ಕೆ ತರಬೇಕಿತ್ತು. ಈ ವಿಚಾರದಲ್ಲಿ ಕಟ್ಟುನಿಟ್ಟಾಗಿ ವ್ಯವಹರಿಸಬೇಕಿತ್ತು.

ಖಾಸಗಿ ಸಂಘಟನೆಯೊಂದು ಈ ರೀತಿಯ ಕಾರ್ಯಕ್ರಮ ಸಂಘಟಿಸಬೇಕಾದರೆ ಹತ್ತಾರು ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕು. ಆಯೋಜಕರು ಸರಕಾರದ ಮಟ್ಟದಲ್ಲಿ ರಾಜಕೀಯ ಒತ್ತಡ ತರದೇ ಹೋಗಿದ್ದರೆ ರಾತ್ರೋರಾತ್ರಿ ಅಧಿಕಾರಿಗಳು ಮತ್ತು ಪೊಲೀಸರ ಅನುಮತಿ ಪಡೆದುಕೊಳ್ಳಲು ಸಾಧ್ಯವಿರಲಿಲ್ಲ. ಕೆಎಸ್‌ಸಿಎ, ಆರ್‌ಸಿಬಿ ಮತ್ತು ಈವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆ ಈ ವಿಚಾರದಲ್ಲಿ ತಮ್ಮ ರಾಜಕೀಯ ಪ್ರಭಾವ ಬಳಸಿರುವುದು ಮೇಲ್ನೋಟಕ್ಕೆ ತಿಳಿಯುವ ಸಂಗತಿ. ಆದರೆ ವಿಧಾನ ಸೌಧ ಮತ್ತು ಚಿನ್ನಸ್ವಾಮಿ ಸ್ಟೇಡಿಯಂ ಎರಡೂ ಕಡೆ ಸನ್ಮಾನ ಕಾರ್ಯಕ್ರಮ ನಡೆಸುವ ಪ್ರಸ್ತಾಪವನ್ನು ಪೊಲೀಸರು ಮತ್ತು ಅಧಿಕಾರಿಗಳು ಸಾರಾಸಗಟಾಗಿ ತಿರಸ್ಕರಿಸಬೇಕಿತ್ತು. ಎಂಜಿ ರಸ್ತೆಯ ತುದಿಯಿಂದ ಇನ್ನೊಂದು ತುದಿಗೆ ಆಟಗಾರರನ್ನು ಮೆರವಣಿಗೆಯಲ್ಲಿ ಕರೆ ತಂದು ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಸನ್ಮಾನಿಸುವ ನಿರ್ಧಾರ ಕೈಗೊಂಡಿದ್ದರೂ ಭದ್ರತೆ ಕೆಲಸ ಸುಲಭವಾಗುತ್ತಿತ್ತು. ಈ ವಿಷಯದಲ್ಲಿ ಆಯೋಜಕ ಸಂಸ್ಥೆ ಮತ್ತು ಪೊಲೀಸರ ನಡುವೆ ಯಾವುದೇ ಸಮನ್ವಯತೆ ಇರಲಿಲ್ಲ.

ಕಾರ್ಯಕ್ರಮ ಸಂಬಂಧ ಮೊದಲು ಮಾಹಿತಿ ನೀಡಿದ ಆರ್‌ಸಿಬಿ ಪ್ರತಿನಿಧಿಗಳ ಹೊಣೆಗೇಡಿತನ ಈ ಅವ್ಯವಸ್ಥೆಗೆ ನಾಂದಿ ಹಾಡಿದ್ದರಲ್ಲಿ ಸಂಶಯವಿಲ್ಲ. ತನ್ನ ಇನ್ ಸ್ಟಾ ಜಾಲತಾಣದಲ್ಲಿ 2 ಕೋಟಿಗಿಂತ ಹೆಚ್ಚು ಅಭಿಮಾನಿಗಳನ್ನು ಹೊಂದಿರುವ ಸಂಸ್ಥೆ ಯಾವುದೇ ಪೋಸ್ಟ್ ಮಾಡುವ ಮೊದಲು ಹತ್ತಾರು ಬಾರಿ ಯೋಚಿಸಬೇಕಿತ್ತು. ಆದರೆ ಆರಂಭದಲ್ಲಿ ವಿಜಯೋತ್ಸವಕ್ಕೆ ಬನ್ನಿ ಎಂದು ಮುಕ್ತ ಆಹ್ವಾನ ನೀಡಿದ ಕ್ರೀಡಾ ಸಂಸ್ಥೆ, ಆಟಗಾರರ ಮೆರವಣಿಗೆಯ ಮಾಹಿತಿಯನ್ನು ಹಂಚಿಕೊಂಡಿತ್ತು. ಬಳಿಕ ಉಚಿತ ಆನ್ ಲೈನ್ ಟಿಕೆಟ್ ಪಡೆದು ಚಿನ್ನಸ್ವಾಮಿ ಸ್ಟೇಡಿಯಂಗೆ ಬರುವಂತೆ ಆಹ್ವಾನ ನೀಡಿತ್ತು. ಲಕ್ಷಾಂತರ ಸಂಖ್ಯೆಯಲ್ಲಿ ಕ್ರಿಕೆಟ್ ಅಭಿಮಾನಿಗಳು ಬರುವುದು ಗೊತ್ತಿದ್ದರೂ ಕೆಎಸ್‌ಸಿಎ ಆಡಳಿತ ಮಂಡಳಿ, ಆರಂಭದಲ್ಲಿ 21 ಬಾಗಿಲುಗಳಿರುವ ಸ್ಟೇಡಿಯಂನ ಮೂರು ಬಾಗಿಲುಗಳನ್ನಷ್ಟೇ ತೆರೆದಿಟ್ಟಿತ್ತು. ಇದುವೇ ಜನರ ನೂಕುನುಗ್ಗಲಿಗೆ ಪ್ರಧಾನ ಕಾರಣವಾಯಿತು. ಅಲ್ಲಿ ಸೇರಿದ್ದ ಲಕ್ಷ ಸಂಖ್ಯೆಯ ಅಭಿಮಾನಿಗಳನ್ನು ನಿಯಂತ್ರಿಸಲು ನೂರರ ಸಂಖ್ಯೆಯ ಪೊಲೀಸರೂ ಇರಲಿಲ್ಲ.

ವಿಧಾನ ಸೌಧದ ಎದುರು ಲಕ್ಷಾಂತರ ಸಂಖ್ಯೆಯಲ್ಲಿ ನೆರೆದ ಅಭಿಮಾನಿಗಳ ಎಲ್ಲೆ ಮೀರಿದ ವರ್ತನೆಯನ್ನು ಕಂಡಾಗಲೇ ನಾಯಕರು, ಅಧಿಕಾರಿಗಳು ಮತ್ತು ಆಯೋಜಕರು ಅಪಾಯದ ಸೂಚನೆ ಗ್ರಹಿಸಿ ತಕ್ಷಣವೇ ಹೆಚ್ಚುವರಿ ಭದ್ರತೆಗೆ ಕ್ರಮ ತೆಗೆದುಕೊಳ್ಳಬೇಕಿತ್ತು. ವಿಧಾನ ಸೌಧ, ಹೈಕೋರ್ಟ್ ಎಂಬ ಪರಿವೆ ಇಲ್ಲದೆ ಅಲ್ಲಿನ ಪ್ರತಿಮೆಗಳ ಮೇಲೆ, ಕಟ್ಟಡ, ಲೈಟ್ ಕಂಬಗಳನ್ನು ಏರಿ ಕುಳಿತವರನ್ನು ನಿಯಂತ್ರಿಸುವವರಿರಲಿಲ್ಲ. ಅದಾಗಲೇ ಪರಿಸ್ಥಿತಿ ಕೈ ಮೀರಿ ಹೋಗಿತ್ತು. ಒಂದು ವೇಳೆ ಆಟಗಾರರನ್ನು ಮೆರವಣಿಗೆಯಲ್ಲಿ ಒಯ್ದಿದ್ದರೆ ಇನ್ನಷ್ಟು ಅನಾಹುತ ನಡೆಯುವ ಸಾಧ್ಯತೆ ಇತ್ತು. ಅಲ್ಲಿನ ದುಂಡಾವರ್ತಿ ಹಸೀನಾ ಅವರನ್ನು ಹೊರಗಟ್ಟಿದ ಬಾಂಗ್ಲಾ ಸಂಸತ್ ಎದುರಿನ ದಂಗೆ, ಲಂಕಾದ ಅಧ್ಯಕ್ಷರನ್ನು ಹೊರದಬ್ಬಿದ ಕ್ರಿಪ್ರ ರಾಜಕೀಯ ದಂಗೆಯ ದೃಶ್ಯಾವಳಿಗಳನ್ನು ನೆನಪಿಸುವಂತಿತ್ತು.

ಪ್ರಜಾಪ್ರಭುತ್ವದಲ್ಲಿ ಕಾರ್ಯಾಂಗ ಶಾಸಕಾಂಗದ ಸೂಚನೆಯನ್ನು ಪಾಲಿಸಬೇಕು ನಿಜ. ಆದರೆ ಅದಕ್ಕೂ ಸ್ವತಂತ್ರ ಅಸ್ತಿತ್ವವಿದೆ. ಆಡಳಿತ ಸೇವೆಯಲ್ಲಿರುವವರಿಗೆ ದೇಶದ, ರಾಜ್ಯದ ಸೇವೆ ಮತ್ತು ಹಿತಾಸಕ್ತಿ ಮುಖ್ಯವೇ ಹೊರತು ಆಡಳಿತದಲ್ಲಿ ಇರುವವರ ಸೇವೆಯಲ್ಲ. ಐಎಎಸ್, ಐಪಿಎಸ್, ಕೆಎಎಸ್ ಶ್ರೇಣಿಯ ಅಧಿಕಾರಿಗಳು ಇದನ್ನು ಮರೆತರೆ, ಭದ್ರತೆಯಂತಹ ವಿಷಯಗಳಲ್ಲಿ ರಾಜಕೀಯ ಒತ್ತಡಗಳಿಗೆ ಮಣಿದರೆ, ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆದ ದುರಂತ ಮರುಕಳಿಸಬಹುದು. ಈ ಅನಾಹುತ ಮರುಕಳಿಸದಿರಲಿ.

ನಿಮಗೆ ತಿಳಿದಿರಲಿ, ಇದು ಲಿಂಗಾಹತ ಪ್ರತ್ಯೇಕ ಧರ್ಮಕಾರಣದ ಕರ್ಮಕಾಂಡ!

ಬಸವ ಮಂಟಪ

ರವಿ ಹಂಜ್
vveditoped@gmail.com

ಭಕ್ತಿ ಭಂಡಾರಿ ಬಸವಣ್ಣನ ಫೋಟೋವನ್ನು ಸರಕಾರಿ ಕಚೇರಿಗಳಲ್ಲಿ ಹಾಕಿಸುವ ನಿಯಮವನ್ನು ದೇಶದಲ್ಲಿ ಮೊತ್ತ ಮೊದಲಿಗೆ ಜಾರಿಗೊಳಿಸಿದ್ದು ಮಹಾರಾಷ್ಟ್ರ ಸರಕಾರ. ಜಾರಿಗೊಳಿಸಿದ ಮುಖ್ಯಮಂತ್ರಿ, ದೇವೇಂದ್ರ ಫಡ್ನವೀಸ್! ಕರ್ನಾಟಕಕ್ಕೆ ಹೆಚ್ಚು ಆಪ್ಯಾಯಮಾನನಾದ ಬಸವಣ್ಣನನ್ನು ಆಧುನಿಕ ಸಾಮಾಜಿಕ ಹರಿಕಾರ, ಭಾಗ್ಯವಿಧಾತ ಎನಿಸಿದ ಅಂದಿನ ಕರ್ನಾಟಕದ ಮುಖ್ಯಮಂತ್ರಿಗಳು ಫಡ್ನವೀಸ್ ನಡೆಯಿಂದ ಎಚ್ಚರಗೊಂಡು ರಾಜ್ಯ ಸರಕಾರದ ಕಚೇರಿಗಳಲ್ಲಿ ಬಸವಣ್ಣನ ಫೋಟೋ ಹಾಕುವುದನ್ನು ಕಡ್ಡಾಯ ಮಾಡುವುದರೊಂದಿಗೆ ವಿಜಾಪುರದ ಮಹಿಳಾ ವಿಶ್ವವಿದ್ಯಾಲಯಕ್ಕೆ 'ಅಕ್ಕ ಮಹಾದೇವಿ ವಿಶ್ವವಿದ್ಯಾಲಯ' ಎಂದು ನಾಮಕರಣ ಮಾಡಿ ಲಿಂಗಾಯತರ ತೊಟ್ಟಿಲು ತೂಗಿ ಸಂತೈಸಿದರು. ಇವರ ನಾಮಕರಣದ ನಡೆ ಮಹಾರಾಷ್ಟ್ರದ ಫಡ್ನವೀಸರಿಗಿಂತ ತಾವೊಂದು ತೂಕ ಹೆಚ್ಚು ಎಂದು ತೋರಿಸುವ ಪಾಪಪ್ರಜ್ಞೆಯಾಗಿತ್ತೇ ಹೊರತು ಯಾವುದೇ ನೈಜ ಕಳಕಳಿಯಾಗಿರಲಿಲ್ಲ. ನಂತರ ನಡೆದ ವಿದ್ಯಮಾನಗಳು ಈ ಪಾಪಪ್ರಜ್ಞೆಯನ್ನು ಜನಾಂಗೀಯ ದ್ವೇಷ ಬಿತ್ತುವ ಗರ್ವಿಕಪ್ರಜ್ಞೆಯಾಗಿ ಊರ್ಜಿಸಿದ್ದನ್ನು ನಾಡು ಕಂಡಿದೆ.

ಅದಕ್ಕೂ ಹಲವಾರು ವರ್ಷಗಳ ಹಿಂದೆ ಒಮ್ಮೆ ನಾನು ಬೆಂಗಳೂರಿಗೆ ಹೋಗಿದ್ದಾಗ ನನ್ನ ಮಿತ್ರನೊಬ್ಬನನ್ನು ಭೇಟಿಯಾಗಲು ಕರೆ ಮಾಡಿದೆ. ಆತ ಗಾಂಧಿನಗರದ ಬಳಿಯಿರುವ ಮುರುಘಾ ಶರಣರ ಆಸ್ತಿಯಾಗಿರುವ ಕಟ್ಟಡದಲ್ಲಿ ತನ್ನ ಜಾತಿ ಸಂಘದ ಸಭೆ ಇದೆ, ಅಲ್ಲಿಗೆ ಬಂದರೆ ಸಿಗೋಣ ಎಂದನು. ಬೇಗನೆ ಹೋದ ನನ್ನನ್ನೂ ಆತ ಸಭೆಗೆ ಕರೆದೊಯ್ದ. ಅಲ್ಲಿ ಅವರ ಜಾತಿ ರಾಜಕಾರಣಿಯು, "ಲಿಂಗಾಯತರು ಗಟ್ಟಿಯಾಗಿ ಬೆಳೆಯುತ್ತಿದ್ದಾರೆ. ಆಯಕಟ್ಟಿನ ಜಾಗದಲ್ಲಿ ಇದ್ದಾರೆ. ಅವರನ್ನು ತುಳಿಯಬೇಕು. ಬಲಿಷ್ಠ ಸಮುದಾಯದ ಲಿಂಗಾಯತ, ಒಕ್ಕಲಿಗರನ್ನು ಹಿಮ್ಮೆಟ್ಟಿಸದಿದ್ದರೆ ನಿಮಗೆ ಭವಿಷ್ಯವಿಲ್ಲ" ಇತ್ಯಾದಿಯಾಗಿ ದ್ವೇಷಭಾಷಣ ಮಾಡಿದರು. ಇದನ್ನೇ ಸೌಹಾರ್ದಯುತವಾಗಿ ಸ್ಪರ್ಧಾತ್ಮಕವಾಗಿ ತಮ್ಮ ಸಮುದಾಯಕ್ಕೆ ಕಿವಿಮಾತಾಗಿ ಹೇಳಬಹುದಿತ್ತು. ಆದರೆ ಮದೋನ್ಮತ್ತರಾದ ಅವರಿಗೆ ಅಂಥ ಪ್ರೌಢಿಮೆಯ ಭಾಷಣದಲ್ಲಿ ಎಳ್ಳಷ್ಟೂ ಆಸಕ್ತಿಯಿರಲಿಲ್ಲ ಎನಿಸಿತು. ಇಂಥ ವಿಷಯಗಳಲ್ಲಿ ಅಂದು ನನಗೂ ಯಾವ ಆಸಕ್ತಿಯೂ ಇರಲಿಲ್ಲ. ಹಾಗಾಗಿ ಅದನ್ನು ಉಪೇಕ್ಷಿಸಿ ಭಾಷಣ ಮುಗಿದ ಮೇಲೆ ನನ್ನ ಸ್ನೇಹಿತನೊಂದಿಗೆ ಉಂಡು ವಾಪಸ್ಸಾಗಿದ್ದೆ. ಇದು ನಾನು ಕಂಡ, ಮುಂದೆ ಮುಖ್ಯಮಂತ್ರಿಯಾದ ಆ ಜಾತಿನಾಯಕರ 'ಲಿಂಗಾಯತ ಪ್ರೀತಿ'ಯ ಒಂದು ಪೂರ್ವಗ್ರಹ ಅಭಿಪ್ರಾಯದ ಪ್ರಾತ್ಯಕ್ಷಿಕತೆ!

ಇರಲಿ, ಅಂದಿನ ಕಾಂಗ್ರೆಸ್ ಮುಖ್ಯಮಂತ್ರಿಗಳ ಬಸವ ಫಲಕ ಮತ್ತು ಅಕ್ಕಮಹಾದೇವಿ ನಾಮಾಂಕಣ ಕಾರ್ಯಗಳಿಂದ ಖುಷಿಯಾದ ವೀರಶೈವ ಮಹಾಸಭಾ ಅವರನ್ನು ಸನ್ಮಾನಿಸಿ ಪ್ರತ್ಯೇಕ ಧರ್ಮ ಬೇಡಿಕೆಗೆ ಮತ್ತೊಮ್ಮೆ ಜೀವತುಂಬಿ ಅವರ ಮುಂದಿಟ್ಟರು. ಇದರಿಂದ "ಇರದ ತನ್ನದನ್ನು ಎಲ್ಲಿಡಲಿ" ಎಂದು ಜಾಗೃತಗೊಂಡ ಮಾತೆ ಮಹಾದೇವಿ ಸಹ ಮುಖ್ಯಮಂತ್ರಿಗಳಿಗೆ ಪ್ರತ್ಯೇಕ ಧರ್ಮದ ಬೇಡಿಕೆ ಸಲ್ಲಿಸಿದಳು. ತನ್ನ 'ಲಿಂಗಾಂಗ ಸಾಮರಸ್ಯ'ವನ್ನು ಮುಚ್ಚಿಕೊಳ್ಳಲು ಬಸವಣ್ಣ, ಲಿಂಗಾಯತವನ್ನು ಬಳಸಿದ ಮಹಿಳೆಗೆ ಬಹುವಚನ ಸಲ್ಲದ ಕಾರಣ ಇಲ್ಲಿ ಏಕವಚನ ಬಳಸಲಾಗಿದೆ ಎಂಬುದು ಒಂದು ಸ್ಪಷ್ಟನೆ ಅಷ್ಟೇ.

ಈ ಎರಡು ಬದಿಯ ಪ್ರಸ್ತಾವನೆಯಿಂದ ರಾಜಕೀಯ ಪುಳಕವುಂಟಾಗಿ ಅಂದಿನ ಮುಖ್ಯಮಂತ್ರಿಗಳು "ಮಹಾಸಭಾ ಮತ್ತು ಮಾತೆ ಇಬ್ಬರೂ ಸೇರಿ ಒಟ್ಟಿಗೆ ಬನ್ನಿ, ನೋಡೋಣ" ಎಂದರು. ಮಹಾದೇವಿಯ ಮಹಾಕಾರ್ಯಗಳ ಅರಿವಿದ್ದ ಮಹಾಸಭಾ ಸುಮ್ಮನಾಯಿತು.

ಇಲ್ಲಿ ವೀರಶೈವ ಮಹಾಸಭಾ ಮತ್ತೊಮ್ಮೆ ಜೀವತುಂಬಿ ಪ್ರತ್ಯೇಕ ಧರ್ಮ ಬೇಡಿಕೆಯಿಟ್ಟಿತು ಎಂದದ್ದು ಏಕೆಂದರೆ, ವೀರಶೈವ ಮಹಾಸಭಾವು 2010ರಲ್ಲೇ ಪ್ರತ್ಯೇಕ ಧರ್ಮದ ಮನವಿಯನ್ನು ಸೋನಿಯಾ ಗಾಂಧಿ ಅವರಿಗೆ ಸಲ್ಲಿಸಿತ್ತು. ಆಗ ಸುಶೀಲ್ ಕುಮಾರ್ ಶಿಂಧೆ ಅವರು, "ನಿಮ್ಮ ಮಾಹಿತಿಯಲ್ಲಿ ಪ್ರತ್ಯೇಕ ಧರ್ಮದ ಬಗ್ಗೆ ಸ್ಪಷ್ಟತೆಯಿಲ್ಲ. ಹಿಂದೂ ಅಲ್ಲ ಎನ್ನುತ್ತೀರಿ, ಶಿವನನ್ನು ಆರಾಧಿಸುತ್ತೀರಿ; ವೈದಿಕ ಅಲ್ಲ ಎನ್ನುತ್ತೀರಿ, ಲಿಂಗಪೂಜೆ ಎನ್ನುತ್ತೀರಿ. ಹಾಗಾಗಿ ನಿಮ್ಮ ಸಿದ್ಧಾಂತದಲ್ಲಿ ಸ್ಪಷ್ಟತೆಯನ್ನು ಕಂಡುಕೊಂಡು ಬನ್ನಿ" ಎಂದರು. ಕೇವಲ ವೋಟಿಗಾಗಿ ಮಹಾಸಭಾಗೆ ಆತುಕೊಂಡಿದ್ದ ರಾಜಕಾರಣಿಗಳ ಆಡಳಿತದಲ್ಲಿದ್ದ ಮಹಾಸಭಾವು ವೀರಶೈವ ಸಂಶೋಧಕರನ್ನು, ಧಾರ್ಮಿಕ ಪಂಡಿತರನ್ನು ಈ ಸಭೆಗೆ ಪರಿಗಣಿಸಿಯೇ ಇರಲಿಲ್ಲ. ಹಾಗಾಗಿ ಬೌದ್ಧಿಕ ಪಂಡಿತರನ್ನು ನಿಯೋಜಿಸಿ ತಕ್ಕ ವಾದ ಮಂಡಿಸದೆ ಖುದ್ದು ವಾದ ಮಂಡಿಸಿದ್ದು ಈ ತಿರಸ್ಕಾರಕ್ಕೆ ಕಾರಣವಾಗಿತ್ತು. ಮುಂದೆಯೂ ಇದನ್ನು ಸರಿಪಡಿಸದೆ ರಾಜಕಾರಣಿ ಆಡಳಿತವರ್ಗ ಸೋನಿಯಾ ಗಾಂಧಿಯವರ ಮುಂದೆ ಪರೇಡು ಮಾಡಿ ಡೊಗ್ಗು ಸಲಾಮು ಹೊಡೆದು ಸುಮ್ಮನಾಯಿತು.

ಮಹಾಸಭಾದ ಪರೇಡು, ಡೊಗ್ಗು ಸಲಾಮಿನ ಮಾಹಿತಿ ಸಿಕ್ಕೊಡನೆ ಮಾತೆ, ಮತ್ತಿತರೆ ಪ್ರತ್ಯೇಕಿಗಳು ಮುದಗೊಂಡು ಧರ್ಮವೆಂದರೆ ಒಬ್ಬ ಪ್ರವಾದಿ, ಒಂದು ಧರ್ಮಗ್ರಂಥ ಎಂಬ ಶೀಘ್ರಸ್ಖಲಿತ ವಾದದಂತೆ ಬಸವಣ್ಣ, ವಚನ ಎಂದು ಬಡಬಡಾಯಿಸತೊಡಗಿದರು. ಇದಕ್ಕೆ ನೀರೆರೆದು ಪೋಷಿಸಿದ್ದು ಪಾಮರಪಂಡಿತ ಪ್ರೊ. ಕಲಬುರ್ಗಿ! ತಾವು ಯಾರನ್ನು ಆಂಧ್ರದಿಂದ ಓಡಿಬಂದ ಆರಾಧ್ಯ ಬ್ರಾಹ್ಮಣರು ಎನ್ನುವರೋ ಅಂಥ ಜಂಗಮ ಆರ್.ಸಿ. ಹಿರೇಮಠರ ಮನೆಯಲ್ಲಿ ಮಾನ್ಯ ಕಲಬುರ್ಗಿಯವರು ಆಶ್ರಯ, ದಾಸೋಹ, ಪ್ರಸಾದ, ಜ್ಞಾನಾರ್ಜನೆ ಪಡೆದು ಉದ್ಯೋಗ ಗಿಟ್ಟಿಸಿದ್ದರು. ಮುಂದೆ ಇಂಥದೇ ಆಂಧ್ರದಿಂದ ಓಡಿಬಂದ ಆರಾಧ್ಯ ಬ್ರಾಹ್ಮಣರು ಎನ್ನುವರೋ ಅಂಥ ಜಂಗಮ ಎಂ.ಪಿ. ಪ್ರಕಾಶ್ ಅವರ ಕಾಲಿಗೆ ಬಿದ್ದು ಕಾಡಿಬೇಡಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಉಪಕುಲಪತಿ ಹುದ್ದೆ ಗಿಟ್ಟಿಸಿಕೊಂಡರು. ಚೆನ್ನಬಸವಣ್ಣನ ಜನ್ಮರಹಸ್ಯವನ್ನು ಖುದ್ದು ಕಂಡಂತೆ ವರ್ಣಿಸಿದಾಗ ಜನ ತದುಕಲು ಬೆನ್ನಟ್ಟಿ ಬಂದಾಗ ಇವರು ರಕ್ಷಣೆ ಪಡೆದದ್ದೂ ಅದೇ ಆಂಧ್ರದಿಂದ ಓಡಿಬಂದ ಆರಾಧ್ಯ ಬ್ರಾಹ್ಮಣರಾದ ಗದುಗಿನ ತೋಂಟದಾರ್ಯ ಮಠಾಧಿಪತಿಗಳಡಿಯಲ್ಲಿಯೇ! ಹೀಗೆ ತಮ್ಮ ಜೀವನಪರ್ಯಂತ ಇಂಥ ಗುರುಲಿಂಗಜಂಗಮ ದಾಸೋಹ ಪಡೆದು ಉಂಡಮನೆಯಗಳ ಹಿರಿದ ಖ್ಯಾತಿ ಕಲಬುರ್ಗಿಯವರಿಗಿದೆ.

ಇಂಥ ಹೆಡ್ಡ ಸಂಶೋಧಿಗರು ಶಿವನೇ ಬೇರೆ, ಲಿಂಗವೇ ಬೇರೆ, ಕನ್ನಡ ಧರ್ಮ, ಸಾಮಾಜಿಕ ಕ್ರಾಂತಿ ಇತ್ಯಾದಿಯಾಗಿ ಕಾಲ್ಪನಿಕ ಸಂಕಥನ ಕಟ್ಟಿ ಅದಕ್ಕೆ ತಪ್ಪು ತಪ್ಪು ಸಂಶೋಧನೆ ಜೋಡಿಸಿ ಪ್ರತ್ಯೇಕತೆಯ ಅಮಲಿಗರಿಗೆ ಹೆಂಡ ಕುಡಿಸಿದರು. ಮುಂದೆ ಕಲಬುರ್ಗಿ ದಿವಂಗತರಾದ ನಂತರ ನಿವೃತ್ತಿಯಾಗಿ ಖಾಲಿ ಇದ್ದ ಜಾಮದಾರರೆಂಬ ಅಧಿಕಾರಿಶಾಹಿಗೆ ಪೌರಾಣಿಕ ಲಿಂಗೋದ್ಭವವನ್ನು ಪ್ರಶ್ನಿಸಿ ಖುದ್ದು ತಾವೇ ಏಕೆ ಉದ್ಭವವೂ ಆಧುನಿಕ ಬಸವಣ್ಣನೂ ಆಗಬಾರದು ಎಂಬ ದಿವ್ಯಜ್ಞಾನ ಹೊಳೆದು ಕಲಬುರ್ಗಿ-ಪ್ರಣೀತರಾಗಿ ಲಿಂಗಾಯತ ಬೇರೆ ವೀರಶೈವ ಬೇರೆ ಎಂದು ರಂಗಕ್ಕಿಳಿದರು. ಅದೇ ಉದ್ದೇಶದ ಹಲವಾರು ಪ್ರಭೃತಿಗಳೂ ಅವರೊಟ್ಟಿಗೆ ಕೈಜೋಡಿಸಿದರು. ಇದಕ್ಕೆ ಸೋಮಾರಿ ಕಾವಿಧಾರಿಗಳು, ಶುಭ್ರ ಶ್ವೇತಾಂಗನೆಯರು, ಮತ್ತು ಕೆಂಪಂಗಿಗಳು ತೆಕ್ಕೆ ಹಾಕಿಕೊಂಡು ಸೇರಿಕೊಂಡರು. ಧರ್ಮ ಎನ್ನುತ್ತಾ ಧರ್ಮಾಚರಣೆಯ ಒಂದೇ ಒಂದು ತತ್ವವನ್ನೂ ಪ್ರತಿಪಾದಿಸದೆ, ಪಾಲಿಸದೆ ಸಾಮಾಜಿಕ ವಚನಗಳನ್ನೇ ಧರ್ಮ ಎಂದು, ಸಾಮಾಜಿಕ ಮೀಸಲಾತಿ ಎಂಬ ಅಮಲನ್ನು ಹಂಚಲಾರಂಭಿಸಿದರು.

ಈ ಅಮಲಿನ ಘಮಲು ಇಡೀ ರಾಜ್ಯವನ್ನು 2018ರಲ್ಲಿ ಆವರಿಸಿಕೊಂಡಿತು. ಇದಕ್ಕೆ ಕಾಂಗ್ರೆಸ್ ಸರಕಾರದ ಮಹತ್ವಾಕಾಂಕ್ಷಿ ಲಿಂಗಾಯತ ರಾಜಕಾರಣಿಗಳು ಬಂಡವಾಳ ಹೂಡಿ ಹಣದ ಹೊಳೆ ಹರಿಸಿ ಧರ್ಮದ ತಲೆ ಹಿಡಿದರು. ಈ ಅಮಲಿನ ಪರಿಣಾಮವೇ ಓರ್ವ ನವ್ಯ ಜಾತಿಪೀಠಿ ಹುಬ್ಬಳ್ಳಿಯ ಸಮಾವೇಶದಲ್ಲಿ, "ಒಬ್ಬ ತಂದೆಗೆ ಹುಟ್ಟಿದವರು ಲಿಂಗಾಯತರು. ಐವರು ತಂದೆಗೆ ಹುಟ್ಟಿದವರು ವೀರಶೈವರು" ಎಂದು ತಮ್ಮ ಖಾಸಗಿ ಅಧ್ಯಾತ್ಮದ ತಾದಾತ್ಮ್ಯತೆಯನ್ನು ಪ್ರದರ್ಶಿಸಿದರು. ಇದಕ್ಕೆ ಘಮಗುಟ್ಟುವ ಅಮಲಿಗ ಸಮೂಹವು 'ಬೋಪರಾಕ್ ಬೋಪರಾಕ್' ಎಂದು ಜಯಘೋಷ ಮೊಳಗಿಸಿತು. ಅಂದಹಾಗೆ ಹನ್ನೆರಡನೇ ಶತಮಾನದ ಶರಣ ಚಳವಳಿಯೇ ಲಿಂಗಾಯತದ ಮೂಲ ಎನ್ನುವುದಾದರೆ, ಅದಕ್ಕಿರುವುದು ಏಳುನೂರ ಎಪ್ಪತ್ತು ಗಣಂಗಳೇ ಹೊರತು ಏಕೈಕನೊಬ್ಬನಲ್ಲ!

ಅಂದಹಾಗೆ ಜನಾಂಗೀಯ ಜಂಗಮದ್ವೇಷದ ಇವರು ಅರಿಯಬೇಕಾದ್ದು ಅನೇಕ ವೀರಶೈವ ವಿರಕ್ತ ಮಠಗಳಲ್ಲಿ ಜಂಗಮೇತರ ಸ್ವಾಮಿಗಳಿದ್ದಾರೆ ಎನ್ನುವುದು. ಉದಾಹರಣೆಗೆ ಸಿದ್ಧಗಂಗಾ, ಭಾಲ್ಕಿ, ಇಳಕಲ್ ಮಠಗಳು, ಬೈಲೂರಿನ ನಿಜಗುಣಾನಂದ ಸ್ವಾಮಿ, ದೇವನೂರಿನ ಗುರುಮಲ್ಲೇಶ್ವರ ಮಠ ಮತ್ತು ಅದರ ಎಲ್ಲಾ 365 ಶಾಖಾಮಠಗಳು, ಕೊಳ್ಳೇಗಾಲ ತಾಲೂಕಿನ ಮಲೆಮಹದೇಶ್ವರ ಬೆಟ್ಟದ ಸಾಲೂರು ಮಠ, ನಂಜನಗೂಡಿನ ಕಂಬಳೇಶ್ವರ ಮಠ.... ಹೀಗೆ ಅನಾದಿಯಾಗಿ ಅನೇಕ ಮಠಗಳಲ್ಲಿ ಜಂಗಮೇತರ ಸ್ವಾಮಿಗಳೇ ಇದ್ದಾರೆ. ಇನ್ನುಳಿದಂತೆ ಜಾತಿಪೀಠಗಳಲ್ಲಿ ಆಯಾಯ ಜಾತಿಯ ಸ್ವಾಮಿಗಳಿದ್ದಾರೆಯೇ ಹೊರತು ಅವರು ಯಾವುದೇ ಅನ್ಯಜಾತಿಯ ಸ್ವಾಮಿಯನ್ನು ಹೊಂದಿಲ್ಲ. ರಂಗಜ ಸಾಣೇಹಳ್ಳಿ ಸ್ವಾಮಿ ಸಹ ತಮ್ಮ ಪೀಠಕ್ಕೆ ಓರ್ವ ದಲಿತನನ್ನು ಸ್ವಾಮಿ ಮಾಡುತ್ತೇನೆ ಎನ್ನದೆ ತಮ್ಮ ಜಾತಿಯ ಸ್ವಾಮಿಯನ್ನೇ ನೇಮಕ ಮಾಡಲಿದ್ದಾರೆ. ಜಾತಿಪೀಠಗಳ ಇವರೆಲ್ಲರೂ ಬಸವಣ್ಣನಂತೆ ಸಂಸಾರಿಗರಾಗಿ ಭಕ್ತಿ ತೋರದೆ ಸನಾತನ ಧರ್ಮದಂತೆ ಕಾವಿ ಧರಿಸಿ ಬ್ರಹ್ಮಚಾರಿಗಳಾಗಿ ಕೈವಾಡ ತೋರುತ್ತಿದ್ದಾರೆ. ನಾವು ಕ್ರಿಶ್ಚಿಯನ್ನರ ಪ್ರೊಟೆಸ್ಟಂಟರಂತೆ ಎನ್ನುವ ಇವರು ಪ್ರೊಟೆಸ್ಟಂಟರಂತೆ ಮದುವೆಯಾಗಿ ಮಕ್ಕಳ ಹೊಂದಿಯೂ ಚರ್ಚುಗಳ ಧರ್ಮಬೀರುಗಳಾಗಿ ಏಕೆ ಕಾರ್ಯ ನಿರ್ವಹಿಸಬಾರದು ಎಂಬುದು ಒಂದು ಜಿಜ್ಞಾಸೆ.

ಅನಾದಿಯಾಗಿ ಅಧಿಕಾರ ಕೇಂದ್ರೀಕರಣ ತಪ್ಪು, ಅಧಿಕಾರ ವಿಕೇಂದ್ರೀಕರಣವೇ ಮುಖ್ಯ ಎಂಬ ನಿಚ್ಚಳ ಸ್ವರೂಪವೇ ಬ್ರಹ್ಮ, ವಿಷ್ಣು, ಮಹೇಶ್ವರ ಎಂಬ ಮೂವರು ದೇವರುಗಳ ಸೃಷ್ಟಿಯ ಕಲ್ಪನೆಯಾಗಿದೆ. ಇದನ್ನೇ ಜಗತ್ತಿನ ಅನೇಕ ಸಂವಿಧಾನಗಳು ಅಳವಡಿಸಿಕೊಂಡಿವೆ. ಇಂದಿಗೂ ಕೇಂದ್ರೀಕೃತ ಮೈಕ್ರೋಸಾಫ್ಟ್, ಆಪಲ್, ಗೂಗಲ್ ಮುಂತಾದ ಕಂಪನಿಗಳನ್ನು ವಿಭಜಿಸಿ ವಿಕೇಂದ್ರಿಕರಿಸಿ ಎಂದು ನ್ಯಾಯಾಲಯಗಳು ತೀರ್ಪು ಇತ್ತಿವೆ. ಇಂಥ ಸಾಮಾನ್ಯ ಆಧ್ಯಾತ್ಮಿಕ ಸಾಮಾಜಿಕ ವಾಸ್ತವಿಕ ಧಾರ್ಮಿಕ ವ್ಯವಸ್ಥೆಯ 'ರ ಠ ಈ ಕ' ಅರಿಯದ ಹೆಡ್ಡರನ್ನು ಜಾತಿಪೀಠಗಳ ಮೇಲೆ ಕೂರಿಸಿ, ಪುಟದಿಂದ ಪುಟಕ್ಕೆ ರದ್ದಾಗುವ ಹುಂಬರನ್ನು ಸಂಶೋಧಕರನ್ನಾಗಿ ಮಾಡಿಕೊಂಡು, ತನ್ನ 'ಲಿಂಗಾಂಗ ಸಾಮರಸ್ಯ'ವನ್ನು ಮುಚ್ಚಿಕೊಳ್ಳಲು 'ಬಸವಾ ಬಸವಾ' ಜಪಿಸಿದವಳನ್ನು ಜಗನ್ಮಾತೆಯಾಗಿಸಿ, ಅಧ್ಯಾತ್ಮದ ಷಟ್‌ಸ್ಥಲದ ವಚನಗಳನ್ನು ಬಿಟ್ಟು ಕೇವಲ ಅವಧಿ ಮೀರಿದ ಸಾಮಾಜಿಕ ವಚನಗಳನ್ನು ಹಿಡಿದುಕೊಂಡವರು ಧರ್ಮ ಎಂದರೆ, ಅಂಥ ಧರ್ಮ ನಿಂತೀತೆ?!

ಹಾಗಾಗಿಯೇ ಈ ಸಮಾವೇಶ ಮುಗಿದ ಮೇಲೆ 'ಲಿಂಗಾಯತ ಧರ್ಮ' ಎಂಬ ಬರಹವನ್ನು ಹೊತ್ತಿದ್ದ ಟೋಪಿ ಧರಿಸಿದ ಹಲವಾರು ಸಮಾವೇಶಿಗರು ಅಮಲು ಹೆಚ್ಚಾಗಿ ಚರಂಡಿಗಳಲ್ಲಿ ಬಿದ್ದಿರುವ ಫೋಟೋಗಳು ಎಲ್ಲೆಲ್ಲಿಯೂ ಅಂದು ಮಾಧ್ಯಮಗಳಲ್ಲಿ ರಾರಾಜಿಸಿದ್ದವು.

ಅಂದ ಹಾಗೆ ವಚನಗಳಲ್ಲಿ ಆಧ್ಯಾತ್ಮಿಕ ಮತ್ತು ಸಾಮಾಜಿಕ ವಚನಗಳಿವೆ. ಆಧ್ಯಾತ್ಮಿಕ ವಚನಗಳು ಷಟ್‌ಸ್ಥಲ ಆಚರಣೆಗೆ ತಕ್ಕಂತೆ ರೂಪುಗೊಂಡಿದ್ದರೆ, ಸಾಮಾಜಿಕ ವಚನಗಳು ಅಂದಿನ ವರ್ತಮಾನದ ಸಾಮಾಜಿಕ ಕಳಕಳಿಗೆ ತಕ್ಕಂತೆ ರೂಪಿತಗೊಂಡಿದ್ದವು. ಅವು ಅಂದಿನ ವರ್ತಮಾನಕ್ಕೆ ಮಾತ್ರ ಸೀಮಿತ. ಇಂದಿನ ಸಾಂವಿಧಾನಿಕ ಪ್ರಜಾಪ್ರಭುತ್ವದಲ್ಲಿ ಅವು ಇತಿಹಾಸವಷ್ಟೇ. ಮೇಲಾಗಿ ಧಾರ್ಮಿಕವಾಗಿ ಸಹ ಅವು ಎಂದೆಂದಿಗೂ ಅಪ್ರಸ್ತುತ. ಇಂಥ ಸಾಮಾನ್ಯ ಜ್ಞಾನವೂ ಇರದ ಸರಕಾರ ರಚಿಸಿದ ಸಮಿತಿಯ ಅಧ್ಯಕ್ಷತೆಯನ್ನು ನಿವೃತ್ತ ನ್ಯಾಯಾಧೀಶರಾದ ನಾಗಮೋಹನದಾಸ್ ವಹಿಸಿದ್ದರೆ ಸಾಹಿತಿ ಚಿಂತಕ ಸಂಶೋಧಕರಾದ ಪ್ರೊ. ಪುರುಷೋತ್ತಮ ಬಿಳಿಮಲೆ, ವಕೀಲ-ತನಿಖಾ ಪತ್ರಕರ್ತ, ಚಿಂತಕ ಸಾಹಿತಿಗಳಾದ ಸಿ.ಎಸ್. ದ್ವಾರಕಾನಾಥ್, ಪತ್ರಕರ್ತ ಸಾಹಿತಿ ಸರಜೂ ಕಾಟ್ಕರ್, ಸಾಹಿತಿ ಪ್ರೊ. ರಾಮಕೃಷ್ಣ ಮರಾಠೆ, ಸಂಶೋಧಕ ಸಾಹಿತಿ ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಸಾಹಿತಿ ಸಂಶೋಧಕ ಪ್ರೊ. ಮುಜಾಫರ್ ಅಸಾದಿ ಮತ್ತು ಲೇಖಕಿ ಸಂಶೋಧಕಿ ಹನುಮಾಕ್ಷಿ ಗೋಗಿ ಈ ಸಮಿತಿಯ ಸದಸ್ಯರಾಗಿದ್ದರು. ಈ ಸಮಿತಿಯ ವರದಿಯು ಸಾರ್ವತ್ರಿಕವಾಗಿ ಲಭ್ಯವಿಲ್ಲ. ಆದರೆ ಈ ಸಮಿತಿಯು ಲಿಂಗಾಯತ ಪ್ರತ್ಯೇಕ ಧರ್ಮವೆಂದು ವರದಿ ಕೊಟ್ಟಿತ್ತು ಎಂದು ಮಾಧ್ಯಮದಲ್ಲಿ ವರದಿಯಾಗಿತ್ತು.

ಈ ಸಮಿತಿಯು ತನ್ನ ಸತ್ಯಶೋಧನೆಗೆ ಯಾವ ಆಕರಗಳನ್ನು ಬಳಸಿತ್ತೋ ಗೊತ್ತಿಲ್ಲ. ಇವರು ಪ್ರಮುಖವಾಗಿ ಬಸವ ಕೇಂದ್ರಿತ ಆಕರಗಳನ್ನು ಬಳಸಿರಬಹುದಾದ ಕಾರಣ ಹದಿಮೂರನೇ ಶತಮಾನದ ಪಾಲ್ಕುರಿಕೆ ಸೋಮನಾಥ ವಿರಚಿತ ತೆಲುಗು ಭಾಷೆಯಲ್ಲಿರುವ 'ಬಸವಪುರಾಣಮು' ಕೊರಳಿಗೆ ಲಿಂಗ ಕಟ್ಟುವ ಪದ್ಧತಿ ಬಸವಪೂರ್ವದಿಂದಲೂ ಜಾರಿಯಲ್ಲಿತ್ತು ಎಂದು ಹೇಳಿದೆ. ಇದನ್ನೇ ಹರಿಹರನ 'ಬಸವರಾಜದೇವರ ರಗಳೆ' ಅನುಮೋದಿಸುತ್ತದೆ, ಭಾರತೀಯ ಇತಿಹಾಸ ಪುರಸ್ಕರಿಸುತ್ತದೆ, ಉತ್ಖನನ ಸಾಕ್ಷ್ಯ ಪುರಾವೆ ಕೊಡುತ್ತದೆ. ಇಷ್ಟೆಲ್ಲಾ ಪುರಾವೆಗಳಿದ್ದೂ ಬಸವಣ್ಣನೇ ಇಷ್ಟಲಿಂಗ ಜನಕ ಎಂದು ಈ ಸಮಿತಿ ತೀರ್ಮಾನಿಸಿತ್ತು. ಇನ್ನು ವಚನಗಳಲ್ಲಿ ವೀರಶೈವ ಎಂಬ ಪದವನ್ನು 142 ವಚನಗಳಲ್ಲಿ ಒಟ್ಟು 221 ಕಡೆ 30ಕ್ಕೂ ಹೆಚ್ಚು ವಚನಕಾರರು ಬಳಸಿದ್ದಾರೆ. ಲಿಂಗಾಯತ ಎಂಬ ಪದವನ್ನು ಒಟ್ಟು 10 ವಚನಗಳಲ್ಲಿ 12 ಕಡೆ 8 ವಚನಕಾರರು ಬಳಸಿದ್ದಾರೆ. ಈ ಸಮಿತಿಯ ಸತ್ಯಶೋಧನೆಗೆ ವಚನಗಳೇ ಬಹುಪಾಲು ಆಧಾರವಾಗಿರುವಾಗ ಇಂಥ ಅಧಿಕೃತ ಕನಿಷ್ಠ ಅಂಕಿ ಅಂಶಗಳನ್ನೇ ಕೆದಕದ ಈ ಸಮಿತಿಯಲ್ಲಿದ್ದ ಖ್ಯಾತ ನಿವೃತ್ತ ನ್ಯಾಯಾಧೀಶರು, ಸಂಶೋಧನ ಹಿನ್ನೆಲೆಯ ಪ್ರಾಧ್ಯಾಪಕರು, ತನಿಖಾ ವಿಶ್ಲೇಷಣಾ ವರದಿಗಾರ ತಜ್ಞ ಪತ್ರಕರ್ತರು ಅವರವರ ವೃತ್ತಿಗಳಿಗೆ ಅದೆಷ್ಟು ನೈತಿಕತೆ, ನ್ಯಾಯಬದ್ಧತೆ, ಸತ್ಯನಿಷ್ಠೆಯನ್ನು ತೋರಿದ್ದರು ಎಂಬ ಧನಾ(ಋಣಾ)ತ್ಮಕ ಸಂಶಯವನ್ನು ಸಹಜವಾಗಿ ಮೂಡಿಸುತ್ತವೆ! ಏಕೆಂದರೆ ಯಾವಾಗ ಮಾರ್ಚ್ 27, 2018ರಂದು ಚುನಾವಣೆ ಘೋಷಣೆಯ ಅಧಿಸೂಚನೆಯಂತೆ ಚುನಾವಣಾ ಸಂಹಿತೆ ಶೀಘ್ರದಲ್ಲಿ ಜಾರಿಯಾಗುವುದು ಎಂದು ತಿಳಿಯಿತೋ ಆಗ ಕಾಂಗ್ರೆಸ್ ಸರಕಾರವು ವಿಧಾನಸಭೆಯಲ್ಲಿ ಚರ್ಚಿಸದೆ ತರಾತುರಿಯಲ್ಲಿ ಮಾರ್ಚ್ 22ರಂದು 'ಮುಚ್ಚಿದ ದ್ವಾರಗಳ' ಕ್ಯಾಬಿನೆಟ್ ಮೀಟಿಂಗಿನಲ್ಲಿ ಈ ವರದಿಯನ್ನು ಅಂಗೀಕರಿಸಿ ಕೇಂದ್ರಕ್ಕೆ ಕಳುಹಿಸಿಕೊಟ್ಟಿತು. ಆರು ತಿಂಗಳ ಸಮಯ ಕೇಳಿದ್ದ ನಾಗಮೋಹನ್ ದಾಸ್ ಸಮಿತಿ ಎರಡೇ ತಿಂಗಳಲ್ಲಿ ಶೀಘ್ರಸ್ಖಲಿತಗೊಂಡು ಮಾರ್ಚ್ 20ಕ್ಕೇ ತನ್ನ ವರದಿ ಸಲ್ಲಿಸಿ ಸರಕಾರಕ್ಕೆ "ತಾನಿತಂದಾನ ಜೋಡಿಯಾಗೋಣ" ಎಂದು ಕೋರಸ್ ಹಾಡಿತು. ಅಂದಹಾಗೆ ಈ ಸಮಿತಿಯ ಸಂಪೂರ್ಣ ವರದಿಯ ಲೇಖಕರು ಶ್ರೀಯುತ ಜಾಮದಾರರು ಎಂದು ಇಡೀ ರಾಜ್ಯವೇ ಮಾತನಾಡಿಕೊಂಡಿತ್ತು! ಹೀಗೆ ಜಾಮದಾರರು ಕೊಟ್ಟರೆನ್ನುವ ಇಡೀ ವರದಿಗೆ ಸಮಿತಿಯು ತನ್ನ ಹೆಸರು ಹಾಕಿ ಕೈತೊಳೆದುಕೊಂಡು ಸರಕಾರದ ಮೂತಿಗೆ ತನ್ನ ಖರ್ಚಿನ ಬಾಬತ್ತು 36 ಲಕ್ಷ ರುಪಾಯಿಗಳನ್ನು ಒರೆಸಿತು. ಈ ಸಮಯದಲ್ಲಿ ವಕೀಲರೊಬ್ಬರು ನಾಗಮೋಹನ ದಾಸರನ್ನು 'ಅಪ್ರಾಮಾಣಿಕ' ಎಂದು ಸಾಕ್ಷಿ ಸಮೇತ ಸಾಬೀತು ಮಾಡಿದ ವರದಿಯು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವೂ ಆಗಿತ್ತು.

ಈ ಎಲ್ಲಾ ಕಾರಣಗಳಿಗಾಗಿಯೇ ಕಾಂಗ್ರೆಸ್ ಸರಕಾರದ ಆಶಯಕ್ಕೆ ತಕ್ಕಂತೆ ವರದಿ ಕೊಡುವ ಏಕಮಾತ್ರ ನ್ಯಾಯನಿರ್ಣಯಿ ಪುಂಗಿದಾಸರೆಂಬ ಖ್ಯಾತಿವರೇಣ್ಯರಾದ ಕಾರಣ ಇವರು ಈಗಲೂ ಕಾಂಗ್ರೆಸ್ ಸರಕಾರದ ಅನೇಕ ಸಮಿತಿಗಳ ಏಕಮಾತ್ರ ಸದಸ್ಯರಾಗಿದ್ದಾರೆ. ಈ ಸಮಿತಿಯ ಓರ್ವ ಸದಸ್ಯರು ಫಲಾನುಭವಿಗಳಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ. ಉಳಿದವರು ಅವರವರ ಯೋಗ್ಯತೆಗೆ ತಕ್ಕ ಭಾಗ್ಯಗಳನ್ನು ಪಡೆದುಕೊಂಡಿದ್ದಾರೆ. ಒಟ್ಟಿನಲ್ಲಿ ಓರ್ವ ಅಧಿಕಾರಸ್ಥ ರಾಜಕಾರಣಿ ರಚಿಸಿದ ಸಮಿತಿಯು ಆ ರಾಜಕಾರಣಿಗೆ ಬದ್ಧವಾಗಿತ್ತೇ ಹೊರತು ವಿಷಯಕ್ಕಲ್ಲ ಎಂದು ಈ ಸಮಿತಿಯ ವರದಿ ಸಾಬೀತು ಮಾಡಿತ್ತು.

ಇರಲಿ, ಅಂತಿಮವಾಗಿ ಈ ಸಮಿತಿಯು (ನಿಗೂಢ ಕರ್ತೃ ಜಾಮದಾರ) ಲಿಂಗಾಯತ ಪ್ರತ್ಯೇಕ ಧರ್ಮ ಪುರಸ್ಕರಿಸಿ, "ಬಸವತತ್ವ ನಂಬುವವರು ಲಿಂಗಾಯತ ಧರ್ಮಿಗರು" ಎಂದಿತೇ ಹೊರತು ಬಸವತತ್ವ ಪಾಲಿಸುವವರು ಲಿಂಗಾಯತರು ಎನ್ನಲಿಲ್ಲ. ಸಮಗ್ರವಾಗಿ ಇಂತಿಷ್ಟು ಘಟನೆಗಳ ಇತಿಹಾಸ ನಮ್ಮೆಲ್ಲರ ಕಣ್ಣ ಮುಂದಿದೆ. ಇಂಥ ಕ್ಷುಲ್ಲಕ ಘಟನೆಗಳನ್ನು ವಿಸ್ತರಿಸಿ ಪುಸ್ತಕ ಬರೆದು ಅದು ಇತಿಹಾಸದ ದಾಖಲೆ ಎನ್ನುವುದು ಥಾಯ್ಲೆಂಡಿನಲ್ಲಿ ಬಸವಣ್ಣನನ್ನು ಕಂಡವರಿಗೆ ಮತ್ತು ವೃಷಣವನ್ನು ಮಸ್ತಕಕ್ಕಿಂತ ದೊಡ್ಡದೆಂದು ಚಿತ್ರಿಸುವವರಿಗೆ ಮಾತ್ರ ಸಾಧ್ಯ! ಹಾಗೆಯೇ ಇಂಥ ಸ್ಫಟಿಕ ಸದೃಶ ಸುಳ್ಳುಗಳನ್ನು ಪುರಸ್ಕರಿಸಿ ಕೈಗಾರಿಕಾ ಮಂತ್ರಿಮಹೋದಯರು ಬೀಗಿ ತೂಗುವುದು, ಈ ಸುಳ್ಳುಗಳನ್ನು ಅನಾವರಣಗೊಳಿಸಿದ ಶಿಕ್ಷಣ, ಸಂಶೋಧನೆ, ವಿಕಾಸಗಳ ವಾಸ್ತವಿಕ ಅರಿವೇ ಇಲ್ಲದೆ ಶಿಕ್ಷಣ ಕ್ಷೇತ್ರದಿಂದ ಸತತವಾಗಿ ಗೆದ್ದು ಪರಿಷತ್ತಿನ ಅಧ್ಯಕ್ಷರಾದವರು ತಮ್ಮ ಸ್ಥಾನದ ಘನತೆ ಮರೆತು ಜಾತಿಯ ಪ್ರತಿಪಾದಕರಂತೆ ಜಾತಿಯ ಸಂಸ್ಥಾಪಕರಂತೆ ಮಾತನಾಡಿದ್ದು ಎಲ್ಲವೂ ಮಾಹಿತಿ ತಂತ್ರಜ್ಞಾನ ಯುಗದ ಬಸವದುರಂತ!

ಒಟ್ಟಾರೆ, ಸರಕಾರ ನಿಯೋಜಿಸಿದ್ದ ಲಿಂಗಾಯತ ಧರ್ಮ ಅಧ್ಯಯನ ಸಮಿತಿ, ಮತ್ತು ಧರ್ಮಾಭಂಜಕರು ಕಟ್ಟಿಕೊಂಡಿರುವ ಜಾಗತಿಕ ಲಿಂಗಾಹತ ಮಹಾಸಭಾ ಎಂಬುದು ವಿದೂಷಕರ ಅಧೋಗತಿಯ ಮಾಪನವೇ ಹೊರತು ಸಮಾಜದ ಮಾಪಕವಲ್ಲ ಎಂದೇ ಕಾಲ ನಿರ್ಣಯಿಸಲಿದೆ.

ಮೊಹೆಂಜೋ-ದಾರೋ ಉತ್ಖನನದಿಂದ ಉದ್ಭವಗೊಂಡು ಭಕ್ತಿಪಂಥದಲ್ಲಿ ಆಸ್ಫೋಟಕರವಾಗಿ ಬೆಳೆದು ಹತ್ತನೇ ಶತಮಾನದಿಂದ ಹದಿಮೂರನೇ ಶತಮಾನದವರೆಗೆ ವಿಕಾಸಗೊಳ್ಳುತ್ತ ಸಾಗಿ ಬಂದ ವೀರಶೈವದ ಹಾದಿಯು ಬಹು ವಿಸ್ತಾರವಾದುದು. ಅಂದಿನ ಧಾರ್ಮಿಕ, ಸಾಮಾಜಿಕ, ರಾಜಕೀಯ, ಮಾನವ ವಿಕಾಸ, ಸಾಹಿತ್ಯ, ವಾಸ್ತುಶಿಲ್ಪ ಮತ್ತು ಇತಿಹಾಸಗಳನ್ನೆಲ್ಲ ಸಮಗ್ರವಾಗಿ ಪರಿಗಣಿಸಿ ತುಲನಾತ್ಮಕವಾಗಿ ವಿಶ್ಲೇಷಿಸಿದಾಗ ಕಂಡುಬರುವ ಸತ್ಯ, ಕಾಳಾಮುಖ-ವೀರಶೈವ-ಲಿಂಗಾಯತವಷ್ಟೇ! ಇದನ್ನೇ 'ವಿಶ್ವವಾಣಿ' ಲೇಖನಗಳು ವೀರಶೈವ-ಲಿಂಗಾಯತವನ್ನು ಆಧಾರಯುಕ್ತವಾಗಿ, ಸವಿಸ್ತಾರವಾಗಿ, ಐತಿಹಾಸಿಕವಾಗಿ, ಸಾಮಾಜಿಕವಾಗಿ, ಸೈದ್ಧಾಂತಿಕವಾಗಿ, ತಾತ್ವಿಕವಾಗಿ ಸವಾಲೊಡ್ಡಿ ವೀರಶೈವ ಲಿಂಗಾಯತವು ಒಂದೇ ಎಂದು ಸಾಬೀತುಮಾಡಿದೆ. ಅಲ್ಲದೆ ಹಿಂದೂ ಎನ್ನುವುದು ಧರ್ಮವಲ್ಲ ಸಂಸ್ಕೃತಿ ಎಂಬ ಹಿನ್ನೆಲೆಯಲ್ಲಿ ವೀರಶೈವವು ಹೇಗೆ ಪ್ರತ್ಯೇಕ ಧರ್ಮವಾಗಬಲ್ಲದು ಎಂಬ ಸ್ಪಷ್ಟತೆಯನ್ನು ತನ್ನ 'ಬಸವ ಮಂಟಪ' ಸರಣಿಯ ಮೂಲಕ ಕಟ್ಟಿಕೊಟ್ಟಿದೆ. ಇದನ್ನಾಧರಿಸಿ ವೀರಶೈವ ಮಹಾಸಭಾ ತನ್ನ ಹೋರಾಟವನ್ನು ಪುನರುಜ್ಜೀವಗೊಳಿಸುವುದೇ ಅಥವಾ ನಿಸ್ತೇಜ ಶವವಾಗಿ ಲೋಭಿಗರಡಿಯಲ್ಲಿ ಬಿದ್ದಿರುವುದೇ ಎಂಬುದು ಮಹಾಸಭಿಗರಿಗೆ ಬಿಟ್ಟ ವಿಷಯ. ಏಕೆಂದರೆ ಅದಿನ್ನೂ ತನ್ನ ರಾಷ್ಟ್ರಾಧ್ಯಕ್ಷರ ಅಂಗಸೇವಕನ ಮರ್ದನದ ಕೃಪೆಯಲ್ಲಿ ನಿಸ್ತೇಜವಾಗಿದೆ.

(ಲೇಖಕರು ಶಿಕಾಗೊ ನಿವಾಸಿ ಸಾಹಿತಿ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:10, Issue: 147

ಸಮಾಚಾರ ಸಣ್ಣದಲ್ಲ

45 ಕೋಟಿ ರು. ಡ್ರಗ್ಸ್ ವಶ: ನಾಲ್ವರ ಬಂಧನ

ಗುವಾಹಟಿ: ಅಸ್ಸಾಂ ರಾಜ್ಯ ಪೊಲೀಸರು ಮಂಗಳವಾರ ನಡೆಸಿದ ಮಾದಕ ದ್ರವ್ಯ ಜಾಲ ದಮನ ಕಾರ್ಯಾಚರಣೆಯಲ್ಲಿ 45 ಕೋಟಿ ರು. ಬೆಲೆಯ ಮಾದಕ ಮಾತ್ರೆಗಳನ್ನು ವಶಪಡಿಸಿಕೊಂಡು, ನಾಲ್ವರನ್ನು ಬಂಧಿಸಿದ್ದಾರೆ. ಖಚಿತ ಮಾಹಿತಿ ಮೇರೆಗೆ ಕಚಾರ್ ಜಿಲ್ಲೆಯ ಎರಡು ಕಡೆ ದಾಳಿ ನಡೆಸಿದ ರಾಜ್ಯ ಪೊಲೀಸ್ ಇಲಾಖೆಯ ನಾರ್ಕೋಟಿಕ್ಸ್ ವಿಭಾಗದ ಅಧಿಕಾರಿಗಳ ತಂಡ, 45 ಕೋಟಿ ಮೌಲ್ಯದ 1.5 ಲಕ್ಷ ಯಾಬಾ ಮಾತ್ರೆಗಳನ್ನು ವಶಪಡಿಸಿಕೊಂಡಿದೆ. ಮಾತ್ರೆ ಮಾರಾಟ ನಡೆಸುತ್ತಿದ್ದ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ರಾಜ್ಯದಲ್ಲಿ ಡ್ರಗ್ಸ್ ಜಾಲದ ನಾಶ ವೇಗವಾಗಿ ನಡೆದಿದೆ ಎಂದು ಅಸ್ಸಾಂ ಸಿಎಂ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ. ಮಾದಕವಸ್ತು ವ್ಯಾಪಾರ ಯುವಜನರು ಮತ್ತು ಸಮುದಾಯದ ಸುರಕ್ಷತೆ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಯುವಜನರನ್ನು ರಕ್ಷಿಸುವಲ್ಲಿ ಅಸ್ಸಾಂ ಪೊಲೀಸರು ಕಾರ್ಯಾಚರಣೆ ಪ್ರಶಂಸಾರ್ಹ ಎಂದು ಶರ್ಮಾ ಶ್ಲಾಘಿಸಿದ್ದಾರೆ.

ಪುಟ್ಟ ವಿಮಾನ ಪತನ

ವಾಷಿಂಗ್ಟನ್: 6 ಜನರನ್ನು ಹೊತ್ತೊಯ್ಯುತ್ತಿದ್ದ ಸೆಸ್ನಾ 414 ವಿಮಾನ ಅಮೆರಿಕದ ದಕ್ಷಿಣ ಕ್ಯಾಲಿಫೋರ್ನಿಯಾದ (California) ಸ್ಯಾನ್ ಡಿಯಾಗೋ (San Diego) ಬಳಿಯ ಸಾಗರದಲ್ಲಿ ಪತನಗೊಂಡಿದೆ. ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (Federal Aviation Administration) ಪ್ರಕಾರ, ಎರಡು ಇಂಜಿನ್ ಹೊಂದಿರುವ ಸೆಸ್ನಾ 414 (Cessna 414) ವಿಮಾನವು ಭಾನುವಾರ (ಮೇ 8) ಮಧ್ಯಾಹ್ನ 12:30ರ ಸುಮಾರಿಗೆ ಟೇಕ್ ಆಫ್ ಆಗಿತ್ತು. ಅದಾದ ಸ್ವಲ್ಪ ಸಮಯದ ನಂತರ ಅಪಘಾತಕ್ಕೀಡಾಯಿತು.

ಎಂಟು ಯುವಕರು ಬನಾಸ್ ನದಿ ಪಾಲು

ಜೈಪುರ: ಈಜಲೆಂದು ಹೋಗಿದ್ದ 25-30 ವಯೋಮಾನದ ಎಂಟು ಯುವಕರು ರಾಜಸ್ಥಾನದ ಟೋಂಕ್ ಜಿಲ್ಲೆಯ ಬನಾಸ್ ನದಿಯಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಮಂಗಳವಾರ ದುರಂತ ಸಂಭವಿಸಿದ್ದು, ಮೂವರು ಯುವಕರನ್ನು ರಕ್ಷಿಸಲಾಗಿದೆ. ಜೈಪುರದಿಂದ ಬಂದು ವಿಹಾರಾರ್ಥ ಬನಾಸ್ ನದಿ ಬಳಿ ತೆರಳಿದ್ದ 11 ಯುವಕರ ಗುಂಪು ಸ್ನಾನ ಈಜಲೆಂದೇ ನದಿಗೆ ಇಳಿದಿದ್ದರು. ಈ ವೇಳೆ ನೀರಿನಲ್ಲಿ ಮುಳುಗಿ 8 ಯುವಕರು ಸಾವನ್ನಪ್ಪಿದ್ದಾರೆ. ಮೃತರು ಎಂದು ಟೋಂಕ್ ಪೊಲೀಸ್ ವರಿಷ್ಠಾಧಿಕಾರಿ ವಿಕಾಸ್ ಸಾಂಗ್ವಾನ್ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಖ್ಯಾತ ಕಾದಂಬರಿಕಾರ ಫ್ರೆಡರಿಕ್ ನಿಧನ

ಲಂಡನ್: ಹಾಲಿವುಡ್‌ನ ಸಿನಿಮಾ 'ದ ಡೇ ಆಫ್ ಜಾಕಲ್' ಬಹಳ ಜನಪ್ರಿಯ. ಇದನ್ನು ಕಾದಂಬರಿ ರೂಪಕ್ಕಿಳಿಸಿದ್ದ ಫ್ರೆಡರಿಕ್ ಮೆಕಾರ್ಥಿ, ಜೂ.9ರಂದು



86ನೇ ವಯಸ್ಸಿನಲ್ಲಿ ನಿಧನರಾದರು. ಪತ್ನಿ ಸ್ಯಾಂಡಿ ಮೊಲಾಯ್, ಮಕ್ಕಳಾದ ಶೇನ್ ಫೋರ್ಸಿಥ್, ಸ್ಟುವರ್ಟ್ ಫೋರ್ಸಿಥ್ ಇದ್ದಾರೆ. 1938ರ ಆ.25ರಂದು ಯುನೈಟೆಡ್ ಕಿಂಗ್ಡಂನ ಆಶ್‌ಫೋರ್ಡ್‌ನಲ್ಲಿ ಜನಿಸಿದ ಫ್ರೆಡರಿಕ್, 'ದ ಡೇ ಆಫ್ ಜಾಕಲ್', ದಿ ಒಡಿಸ್ಸಾ ಫೈಲ್, ದ ಫೋರ್ಥ್ ಪ್ರೊಟೋಕಾಲ್, ದ ಡಾಗ್ಸ್ ಆಫ್ ವಾರ್, ದ ಡೆವಿಲ್ಸ್ ಆಲ್ಟರ್‌ನೇಟಿವ್, ದ ಫಿಸ್ಟ್ ಆಫ್ ಗಾಡ್, ಐಕಾನ್, ದ ವೆಟರನ್, ಅವೆಂಜರ್, ದ ಆಫ್ಗನ್, ದ ಕೋಬ್ರಾ, ಅಂಡ್ ದ ಕಿಲ್ ಲಿಸ್ಟ್ ಮೊದಲಾದ ರೋಚಕ ಕಾದಂಬರಿಗಳನ್ನು ರಚಿಸಿದ್ದರು. 'ಬೆಸ್ಟ್ ಥ್ರಿಲ್ಲರ್'ಗಳ ಕಾದಂಬರಿಕಾರ ಎನಿಸಿಕೊಂಡಿದ್ದ ಫ್ರೆಡರಿಕ್ ಅವರಿಗೆ ಬ್ರಿಟನ್‌ನಲ್ಲಿ ಅತ್ಯುತ್ತಮ ಕಾದಂಬರಿಗೆ ಕೊಡಲಾಗುವ 'ಈಡ್ಗರ್' ಪ್ರಶಸ್ತಿ, ಕ್ಯಾರ್ಟಿಯರ್ ಡೈಮಂಡ್ ಡ್ಯಾಗರ್ ಪ್ರಶಸ್ತಿಗಳು ಸಂದಿವೆ.

ಡೆಪ್ಯುಟಿ ಸ್ಪೀಕರ್ ಆಯ್ಕೆ ಪ್ರಧಾನಿಗೆ ಖರ್ಗೆ ಪತ್ರ

ದೆಹಲಿ: ದೀರ್ಘ ಅವಧಿಯಿಂದಲೂ ಖಾಲಿಯಾಗಿಯೇ ಇರುವ ಲೋಕಸಭೆ ಉಪ ಸಭಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ತಕ್ಷಣ ಆರಂಭಿಸಿ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಂಗಳವಾರ ಪತ್ರ ಬರೆದು ಆಗ್ರಹಿಸಿದ್ದಾರೆ. 'ಆತ್ಮೀಯ ಪ್ರಧಾನ ಮಂತ್ರಿಗಳೇ, ಸಂವಿಧಾನದ 93ನೇ ವಿಧಿ ಪ್ರಕಾರ ಲೋಕಸಭೆಗೆ ಸ್ಪೀಕರ್ ಮತ್ತು ಡೆಪ್ಯುಟಿ ಸ್ಪೀಕರ್ ಆಯ್ಕೆ ಮಾಡುವುದು ಕಡ್ಡಾಯ. ದೀರ್ಘ ಕಾಲದಿಂದ ಡೆಪ್ಯುಟಿ ಸ್ಪೀಕರ್ ಸ್ಥಾನ ಖಾಲಿ ಬಿಟ್ಟಿರುವುದು ಪ್ರಜಾಪ್ರಭುತ್ವ ದೇಶದ ರಾಜಕೀಯಕ್ಕೆ ಒಳ್ಳೆಯದಲ್ಲ, ಅಲ್ಲದೇ ಅದು ಸಂವಿಧಾನದ ನಿಬಂಧನೆಗಳ ಉಲ್ಲಂಘನೆಯೂ ಆಗಿರುತ್ತದೆ. ಇದು ಅತ್ಯಂತ ಕಳವಳಕಾರಿ ವಿಷಯ. ಈ ಬಗ್ಗೆ ನಿಮ್ಮ ಗಮನ ಸೆಳೆಯಲೆಂದೇ ಈ ಪತ್ರ' ಎಂದು ಖರ್ಗೆ ಬರೆದಿದ್ದಾರೆ.

{ ಫಾರೂಕ್ ಅಬ್ದುಲ್ಲಾ } ಕಾಶ್ಮೀರ ಮಾಜಿ ಸಿಎಂ

ವಿಶ್ವದ ಅತ್ಯಂತ ಎತ್ತರ ಪ್ರದೇಶದ ರೈಲ್ವೆ ಸೇತುವೆ ಎನಿಸಿಕೊಂಡಿರುವ ಚೆನಾಬ್ ಸೇತುವೆಯನ್ನು ವಂದೇ ಭಾರತ್ ರೈಲು ದಾಟುತ್ತಲೇ ಅತ್ಯಾನಂದವಾಯಿತು. ದಶಕಗಳ ಕನಸು ಸಾಕಾರವಾದ ಖುಷಿಗೆ ಆನಂದಬಾಷ್ಪ ಹರಿಯಿತು. ದೇಶದ ವಿವಿಧ ನಗರಗಳ ಜತೆ ನೇರ ಸಂಪರ್ಕ ಸಾಧ್ಯವಾಗಿಸಿದ ವಂದೇ ಭಾರತ್ ರೈಲು ದೊಡ್ಡ ಉಡುಗೊರೆ.



ಕಳೆದ ದಶಕ ಹಿಂದೂ ಶೇ.11.76 ಹೆಚ್ಚಳ | ಯಾವುದೇ ಧರ್ಮಕ್ಕೂ ಸೇರದವರ ಸಂಖ್ಯೆ ಶೇ.16.57ರಷ್ಟು ವೃದ್ಧಿ | ಅಮೆರಿಕದ ಪ್ಯೂ ರೀಸರ್ಚ್ ಸೆಂಟರ್ ವರದಿ

ಜನಸಂಖ್ಯೆ ವೃದ್ಧಿ: ಮುಸ್ಲಿಂ 21%, ಕ್ರೈಸ್ತ 5.58%

ವಾಷಿಂಗ್ಟನ್: ವಿಶ್ವದಲ್ಲಿನ ಮುಸ್ಲಿಂ ಜನಸಂಖ್ಯೆ ಅತ್ಯಂತ ವೇಗವಾಗಿ ಹೆಚ್ಚಳವಾಗುತ್ತಿದ್ದು, ಕಳೆದ ದಶಕದಲ್ಲಿ ಶೇ.21ರಷ್ಟು ವೃದ್ಧಿ ಕಂಡಿದೆ. ಇದೇ ವೇಳೆ ಯಾವುದೇ ಧರ್ಮಕ್ಕೂ ಸೇರದವರ ಸಂಖ್ಯೆಯೂ ಶೇ.16.57ರಷ್ಟು ದೊಡ್ಡ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದೆ.

ಇನ್ನೊಂದೆಡೆ, ವಿಶ್ವದ ಜನಸಂಖ್ಯೆಯಲ್ಲಿ ನಂ.1 ಮತ್ತು ನಂ.3ನೇ ಸ್ಥಾನದಲ್ಲಿರುವ ಕ್ರೈಸ್ತರು (ಶೇ.5.58) ಮತ್ತು ಹಿಂದೂಗಳ(ಶೇ.11.76) ಜನಸಂಖ್ಯೆ ಹೆಚ್ಚಳದ ಗತಿ ಬಹಳ ಕಡಿಮೆ ಇದೆ. ಬೌದ್ಧ ಧರ್ಮೀಯರ ಸಂಖ್ಯೆಯಂತೂ ತೀವ್ರಗತಿಯಲ್ಲಿ ಇಳಿಮುಖವಾಗುತ್ತಿದೆ.

ಈ ಬೆಳವಣಿಗೆಯು ಭವಿಷ್ಯದಲ್ಲಿ ಜಾಗತಿಕ ಮಟ್ಟದಲ್ಲಿ ಸಾಮಾಜಿಕ ಮತ್ತು ರಾಜಕೀಯವಾಗಿ ತೀವ್ರ ಸ್ವರೂಪದ ಪರಿಣಾಮಗಳನ್ನು ಬೀರಲಿದೆ ಎಂದು 'ಪ್ಯೂ ರೀಸರ್ಚ್ ಸೆಂಟರ್' ಅಧ್ಯಯನ ವರದಿ ತಿಳಿಸಿದೆ.

ವರದಿ ಪ್ರಕಾರ, 2010ರಲ್ಲಿ ವಿಶ್ವದಲ್ಲಿನ ಒಟ್ಟಾರೆ ಮುಸ್ಲಿಂ ಜನಸಂಖ್ಯೆ 170 ಕೋಟಿಗಳಷ್ಟಿತ್ತು. 2020ರ ವೇಳೆಗೆ ಅದು 200 ಕೋಟಿಗೆ ಹೆಚ್ಚಳವಾಗಿದೆ. 10 ವರ್ಷದಲ್ಲಿ ಮುಸ್ಲಿಮರ ಜನಸಂಖ್ಯೆ 30 ಕೋಟಿಗಳಷ್ಟು ವೃದ್ಧಿ ಕಂಡಿದೆ. ವಿಶ್ವದ ಪ್ರತಿ ನಾಲ್ಕನೇ ವ್ಯಕ್ತಿ ಮುಸ್ಲಿಮನಾಗಿದ್ದಾನೆ. ಆದರೆ, ಕ್ರೈಸ್ತರು, ಹಿಂದೂಗಳು ಸೇರಿದಂತೆ ವಿಶ್ವದೆಲ್ಲೆಡೆಯ ಇತರೆ ಧರ್ಮಗಳ ಒಟ್ಟಾರೆ ಜನಸಂಖ್ಯೆಯ ಸರಾಸರಿ ವೃದ್ಧಿ ದರ ಕಳೆದ ದಶಕದಲ್ಲಿ ಕೇವಲ ಶೇ.10ರಷ್ಟಿದೆ.

2020ರ ಅಧ್ಯಯನ ಪ್ರಕಾರ ವಿಶ್ವದಲ್ಲಿನ ಧರ್ಮಾಧಾರಿತ ಜನಸಂಖ್ಯೆಯಲ್ಲಿ ಕ್ರೈಸ್ತರೇ ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಜಗತ್ತಿನಲ್ಲಿ 230 ಕೋಟಿ ಕ್ರಿಶ್ಚಿಯನ್ನರಿದ್ದರೆ, ಮುಸ್ಲಿಮರ ಸಂಖ್ಯೆ 200 ಕೋಟಿಗಳಷ್ಟಿದೆ.

ಈ ಪ್ರಮಾಣದ ಧಾರ್ಮಿಕ ಜನಸಂಖ್ಯೆಯ ಬೆಳವಣಿಗೆಗೆ ಕಾರಣವಾಗಿರುವುದು 2010ರ ನಂತರದ ಹತ್ತು ವರ್ಷಗಳಲ್ಲಿ ಕ್ರೈಸ್ತರ ಜನಸಂಖ್ಯೆ 12.16 ಕೋಟಿಯಷ್ಟು(ಶೇ.5.58), ಮುಸ್ಲಿಮರ ಜನಸಂಖ್ಯೆ 34.68 ಕೋಟಿಗಳಷ್ಟು (ಶೇ.20.98) ಹೆಚ್ಚಳವಾಗಿರುವುದೇ ಕಾರಣ ಎಂದು ಪ್ಯೂ ರೀಸರ್ಚ್ ಸೆಂಟರ್ ಅಧ್ಯಯನ ವರದಿ ವಿಶ್ಲೇಷಣೆ ಮಾಡಿದೆ.

ಉಳಿದಂತೆ 2020ರಲ್ಲಿ 30 ಕೋಟಿ ಬೌದ್ಧರು (ಇಳಿಮುಖ), 1.48 ಕೋಟಿ ಯಹೂದಿಗಳು, ಇತರೆ ಧರ್ಮಗಳ 20 ಕೋಟಿ ಜನರು ವಿಶ್ವದೆಲ್ಲೆಡೆ ಇದ್ದಾರೆ.



ಯಹೂದಿಗಳ ಸಂಖ್ಯೆ ಕಳೆದ ದಶಕದಲ್ಲಿ 10 ಲಕ್ಷದಷ್ಟು ಹೆಚ್ಚಳವಾಗಿದೆ ಎಂಬುದು ಅಧ್ಯಯನ ವರದಿಯಿಂದ ತಿಳಿದುಬಂದಿದೆ.

ಇತರೆ ಧರ್ಮಗಳ ಪಟ್ಟಿಯಲ್ಲಿ ಬಹಾಮೀಸ್, ದಾವೋಯಿಸ್ಟ್, ಜೈನ್, ಸಿಖ್, ಜನಪದೀಯ ಧರ್ಮಗಳು ಸೇರಿವೆ. 2020ರ ಲೆಕ್ಕದಲ್ಲಿ ವಿಶ್ವದ ಶೇ.75.80ರಷ್ಟು ಜನರು ಧರ್ಮಗಳನ್ನು ಅನುಸರಿಸುವವರಾಗಿದ್ದಾರೆ. ಶೇ.24.20ರಷ್ಟು ಜನರು ಯಾವುದೇ ಧರ್ಮದ ಜತೆಗೂ ಗುರುತಿಸಿಕೊಳ್ಳದವರಾಗಿದ್ದಾರೆ.

ಪ್ಯೂ ಸಂಶೋಧನಾ ಸಂಸ್ಥೆಯನ್ನು ಆಂಡ್ರಿಯಾ ಕುಹುಟ್ 2004ರಲ್ಲಿ ಸ್ಥಾಪಿಸಿದರು. ಪ್ರಸ್ತುತ ಮೈಕೆಲ್ ಡಿಮೋಕ್ ಅಧ್ಯಕ್ಷರಾಗಿದ್ದಾರೆ.

ನಾಸ್ತಿಕರ ಸಂಖ್ಯೆಯೇ 190 ಕೋಟಿ!

ಆತಂಕಕಾರಿ ವಿಷಯವೆಂದರೆ ಯಾವುದೇ ಧರ್ಮಕ್ಕೂ ಸೇರದವರು ಅಂದರೆ, ನಾಸ್ತಿಕರು, ನಿರೀಶ್ವರ ವಾದಿಗಳ ಜನಸಂಖ್ಯೆಯ ಅತ್ಯಧಿಕ ಪ್ರಮಾಣದಲ್ಲಿ ಬೆಳವಣಿಗೆ ಕಾಣುತ್ತಿರುವುದು. 2010ರಲ್ಲಿ 162.99 ಕೋಟಿಗಳಷ್ಟಿದ್ದ ಯಾವುದೇ ಧರ್ಮಕ್ಕೂ ಸೇರದವರ ಜನಸಂಖ್ಯೆ 2020ರ ವೇಳೆಗೆ 190 ಕೋಟಿಗಳಿಗೆ ಹೆಚ್ಚಳವಾಗಿದೆ. ಅಂದರೆ, ಕಳೆದ ದಶಕವೊಂದರಲ್ಲೇ ವಿಶ್ವದೆಲ್ಲೆಡೆಯ ನಿರೀಶ್ವರವಾದಿಗಳ ಸಂಖ್ಯೆ 27.01 ಕೋಟಿಗಳಷ್ಟು (ಶೇ.16.57ರಷ್ಟು) ಹೆಚ್ಚಳವಾಗಿದೆ. ಅಂದರೆ ವಿಶ್ವದ ಜನಸಂಖ್ಯೆಯ ಶೇ.24.2ರಷ್ಟು ಜನರು ಯಾವ ಧರ್ಮಕ್ಕೂ ಸೇರದವರಾಗಿದ್ದಾರೆ ಎಂದು ವಾಷಿಂಗ್ಟನ್ ಡಿಸಿಯಲ್ಲಿ ಪ್ರಧಾನ ಕಚೇರಿ ಹೊಂದಿರುವ ಪ್ಯೂ ರೀಸರ್ಚ್ ಸೆಂಟರ್ ಇತ್ತೀಚಿನ ಅಧ್ಯಯನ ವರದಿ ತಿಳಿಸಿದೆ.

ಜಗತ್ತನ್ನು ಆಳುತ್ತಿರುವ ಮೂರು ಧರ್ಮಗಳು!

ಕ್ರೈಸ್ತ(230 ಕೋಟಿ), ಮುಸ್ಲಿಂ(200 ಕೋಟಿ), ಹಿಂದೂ(120 ಕೋಟಿ) ಧರ್ಮ ದವರ (550 ಕೋಟಿ) ಜನಸಮುದಾಯವೇ 791 ಕೋಟಿ ಜನರಿರುವ ಈ ಜಗತ್ತನ್ನು ಧಾರ್ಮಿಕವಾಗಿ ಆಳುತ್ತಿದೆ. ಇನ್ನೊಂದೆಡೆ, ಯಾವುದೇ ಧರ್ಮವನ್ನೂ ಅನುಸರಿಸದವರೂ (190 ಕೋಟಿ) ದೊಡ್ಡ ಸಂಖ್ಯೆಯಲ್ಲೇ ಇದ್ದಾರೆ. ಉಳಿದಂತೆ ಬೌದ್ಧ, ಯಹೂದಿ ಹಾಗೂ ಇತರೆ ಸಣ್ಣಪುಟ್ಟ ಧರ್ಮಗಳ ಒಟ್ಟಾರೆ ಜನಸಂಖ್ಯೆ ಕೇವಲ 51 ಕೋಟಿಯಷ್ಟಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ.

ವಿಶ್ವದೆಲ್ಲೆಡೆಯ ಹಿಂದೂ ಸಂಖ್ಯೆ

ಕಳೆದ ದಶಕದಲ್ಲಿ ಹಿಂದೂ ಜನಸಂಖ್ಯೆ 12.60 ಕೋಟಿಯಷ್ಟು ಹೆಚ್ಚಳವಾಗಿದ್ದು, 2020ರ ವೇಳೆಗೆ 120 ಕೋಟಿಗೆ ಮುಟ್ಟಿದೆ. ಆದರೆ, ಕಳವಳಕಾರಿ ವಿಷಯವೆಂದರೆ 2010ರಲ್ಲಿ ವಿಶ್ವದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ.15ರಷ್ಟು ಗಣನೀಯ ಪಾಲು ಹೊಂದಿದ್ದ ಹಿಂದೂಗಳ ಸಂಖ್ಯೆ 2020ರ ವೇಳೆಗೆ ಶೇ.0.01ರಷ್ಟು ಇಳಿಕೆಯೊಂದಿಗೆ ಶೇ.14.9ಕ್ಕೆ ತಗ್ಗಿದೆ.

2050ಕ್ಕೆ ಭಾರತ

ಭಾರತದ ಒಟ್ಟಾರೆ ಜನಸಂಖ್ಯೆ 2050ರ ವೇಳೆಗೆ 166 ಕೋಟಿಗಳಿಗೆ ಮುಟ್ಟಲಿದೆ. ಇದರಲ್ಲಿ ಹಿಂದೂಗಳ ಸಂಖ್ಯೆ 130 ಕೋಟಿಗಳಷ್ಟಿರಲಿದೆ. ಮುಸ್ಲಿಂ ಜನಸಂಖ್ಯೆ 30 ಕೋಟಿ ಆಸುಪಾಸಿನಲ್ಲಿರಲಿದೆ. 2050ರ ವೇಳೆಗೆ ವಿಶ್ವದ ಒಟ್ಟಾರೆ ಮುಸ್ಲಿಂ ಜನಸಂಖ್ಯೆಯಲ್ಲಿ ಭಾರತದಲ್ಲಿನ ಮುಸ್ಲಿಮರ ಪಾಲು ಶೇ.11ರಷ್ಟಿರಲಿದೆ ಎಂದು ಸಂಶೋಧನಾ ವರದಿ ತಿಳಿಸಿದೆ.

ಒಟ್ಟಾರೆ ಸಂಖ್ಯೆಯಲ್ಲಿ ಕ್ರೈಸ್ತರು ಇಳಿಮುಖ

2010ರಲ್ಲಿ 217.84 ಕೋಟಿಯಷ್ಟಿದ್ದ ಕ್ರೈಸ್ತರ ಸಂಖ್ಯೆ ನಂತರದ 10 ವರ್ಷಗಳಲ್ಲಿ 12.20 ಕೋಟಿಗಳಷ್ಟು ಹೆಚ್ಚಳ ಕಂಡು 2020ರ ವೇಳೆಗೆ 230 ಕೋಟಿಗೆ ಮುಟ್ಟಿದ್ದರೂ, ವಾರ್ಷಿಕ ಬೆಳವಣಿಗೆ ದರ ಬಹಳ ಕಡಿಮೆಯೇ ಇದೆ. ಅಲ್ಲದೇ, ವಿಶ್ವದ ಒಟ್ಟಾರೆ 791 ಕೋಟಿ ಜನಸಂಖ್ಯೆಯಲ್ಲಿ ಕ್ರೈಸ್ತ ಧರ್ಮೀಯರ ಪಾಲು ಶೇ.1.8ರಷ್ಟು ಕುಸಿತ ಕಂಡು ಶೇ.28.80ಗೆ ಇಳಿಕೆಯಾಗಿದೆ ಎಂದು ಅಧ್ಯಯನ ವರದಿ ಕಳವಳ ವ್ಯಕ್ತಪಡಿಸಿದೆ.

ಬೌದ್ಧರ ಸಂಖ್ಯೆ ಭಾರಿ ಕುಸಿತ!

ಉಳಿದಂತೆ 2010ರಲ್ಲಿ ವಿಶ್ವದೆಲ್ಲೆಡೆ 34.20 ಕೋಟಿಗಳಷ್ಟಿದ್ದ ಬೌದ್ಧ ಧರ್ಮೀಯರ ಸಂಖ್ಯೆ 2020ರ ವೇಳೆಗೆ 32.34 ಕೋಟಿಗೆ ಕುಸಿತ ಕಂಡಿದೆ. ಅಂದರೆ, ದಶಕ ಕಾಲದಲ್ಲಿ 1.86 ಕೋಟಿ ಬೌದ್ಧರ ಸಂಖ್ಯೆ ಹಿಂದಿನ ಅವಧಿಗಿಂಥ (ಶೇ.5.44ರಷ್ಟು) ಕಡಿಮೆಯಾಗಿದೆ. ವಿಶ್ವದ ಒಟ್ಟಾರೆ ಜನಸಂಖ್ಯೆಯಲ್ಲಿ 2010ರಲ್ಲಿ ಶೇ.4.9ರಷ್ಟಿದ್ದ ಬೌದ್ಧರು, 2020ರ ವೇಳೆಗೆ ಶೇ.0.8ರಷ್ಟು ಕುಸಿತ ಕಂಡು ಶೇ.4.10ರ ಪ್ರಮಾಣಕ್ಕೆ ಇಳಿಕೆ ಆಗಿದ್ದಾರೆ.

ಸದ್ಯ ವಿಶ್ವದಲ್ಲಿ ಕ್ರೈಸ್ತರದ್ದೇ ಅತ್ಯಧಿಕ ಸಂಖ್ಯೆ



★ ಪ್ಯೂ ರೀಸರ್ಚ್ ಸೆಂಟರ್ ಅಧ್ಯಯನ ವರದಿ

ನಿಗಿನಿಗಿ ಕೆಂಡದಂತಾಗಿರುವ ದೆಹಲಿ: ಉಷ್ಣಾಂಶ 49 ಡಿ.ಸೆ.!

ದೆಹಲಿ: ದೇಶದ ರಾಜಧಾನಿ ದೆಹಲಿಯ ತಾಪಮಾನ ಅಕ್ಷರಶಃ ಧಗ ಧಗ ಉರಿವ ಬೆಂಕಿಯಂತಾಗಿದೆ. ಮಂಗಳವಾರ ಮಧ್ಯಾಹ್ನದ ವೇಳೆ ದೆಹಲಿಯಲ್ಲಿನ ನೈಜ ಅನುಭವದ ತಾಪಮಾನ 48.9 ಡಿಗ್ರಿ ಸೆಲ್ಸಿಯಸ್‌ಗಳಷ್ಟು ಇತ್ತು. ಜತೆಗೆ ಬಿಸಿಗಾಳಿಯೂ ಬೀಸುತ್ತಿದ್ದು, ಮನೆಯಿಂದ ಆಚೆಗೆ ಜನರು ಹೋಗುವುದೇ ಕಷ್ಟವಾಗಿದೆ.

ಭಾರತೀಯ ಹವಾಮಾನ ಇಲಾಖೆ ಬುಧವಾರ-ಗುರುವಾರಕ್ಕೆ ಆರೆಂಜ್ ಅಲರ್ಟ್ ಘೋಷಿಸಿದ್ದು, ಜನರಿಗೆ ನಡು ಮಧ್ಯಾಹ್ನ ವೇಳೆ ಬಿಸಿಲಿಗೆ ಹೋಗದೇ ಇರಲು ಪ್ರಯತ್ನಿಸುವಂತೆ ಹಾಗೂ ಬಿಸಿಗಾಳಿಯ ಹೊಡೆತದಿಂದ ರಕ್ಷಿಸಿಕೊಳ್ಳಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಸಲಹೆ ನೀಡಿದೆ.

ಜೂ.12ರವರೆಗೂ ದೆಹಲಿಯಲ್ಲಿ ಬಿಸಿಗಾಳಿ ಬೀಸುವುದು ಮುಂದುವರಿಯಲಿದೆ. ಹಗಲಿನಲ್ಲಿನ ಸರಾಸರಿ ತಾಪಮಾನ 44 ಡಿಗ್ರಿ ಸೆಲ್ಸಿಯಸ್‌ಗಳಷ್ಟು ಇರಲಿದೆ. ರಾತ್ರಿ ವೇಳೆಯೂ 28 ಡಿ.ಸೆ. ಉಷ್ಣಾಂಶವಿರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ವರದಿಯಲ್ಲಿ ತಿಳಿಸಿದೆ.

ಗುರುವಾರದಿಂದ ದೆಹಲಿಯ ಕೆಲವೆಡೆ ಮಿಂಚು-ಗುಡುಗು ಸಹಿತ ಮಳೆಯಾಗಲಿದೆ. ಅಲ್ಲದೇ ತಾಸಿಗೆ 40 ಕಿಮೀ ವೇಗದಲ್ಲಿ ಬಿರುಗಾಳಿ ಬೀಸಲಿದೆ. ಆ ಬಳಿಕ ತಾಪಮಾನ ತುಸು ತಗ್ಗಲಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ದೆಹಲಿಯಲ್ಲಿ ಸೋಮವಾರ ವಾಸ್ತವ ತಾಪಮಾನವೇ 43.4 ಡಿ.ಸೆ.ಗೆ ತಲುಪಿತ್ತು. ಇದು ಈ ಋತುವಿನಲ್ಲೇ ಅತ್ಯಧಿಕ ತಾಪಮಾನವಾ ಗಿದೆ. ಸರಾಸರಿ ಉಷ್ಣಾಂಶಕ್ಕಿಂತ 3.5 ಡಿ.ಸೆ.ಗಳಷ್ಟು ಹೆಚ್ಚಿನ ಪ್ರಮಾಣದ ತಾಪಮಾನವಾಗಿತ್ತು.

ನೆರೆಹೊರೆಯಲ್ಲೂ ಬಿಸಿ: ದೆಹಲಿ ಮಾತ್ರವಲ್ಲದೇ, ಹರಿಯಾಣ, ಚಂಡೀಗಢ ರಾಜ್ಯಗಳಲ್ಲಿಯೂ ಬಿಸಿಗಾಳಿಯ ಆರ್ಭಟವಿದೆ. ಹಿಸಾರ್, ಸಿರ್ಸಾ, ಅಯನಗರ ಮತ್ತು ರೋಹ್ಟಕ್ ನಗರಗಳಲ್ಲಿನ ತಾಪಮಾನ 45 ಡಿ.ಸೆ.ಗಳಿಗೆ ಏರಿಕೆಯಾಗಿದೆ.



ಬಿಸಿಗಾಳಿ ಹೊಡೆತ

ದ್ವಿಚಕ್ರ ವಾಹನ ಸವಾರರಿಗಂತೂ ನಿಗಿನಿಗಿ ಕೆಂಡವೇ ಮುಖಕ್ಕೆ ರಾಚಿದಂತಹ ಅನುಭವವಾಗುತ್ತಿದೆ. ದ್ವಿಚಕ್ರ ವಾಹನಗಳಲ್ಲಿ ಸಂಚರಿಸುವವರೆಲ್ಲರೂ ಕಣ್ಣುಗಳಿಗೆ ಕಪ್ಪು ಕನ್ನಡಕದ ರಕ್ಷಣೆ ನೀಡಿ, ಮುಖ ಪೂರ್ಣ ಮುಚ್ಚುವಂತೆ ಬಟ್ಟೆ ಸುತ್ತಿಕೊಂಡು ಸಂಚಾರ ನಡೆಸಿದ್ದಾರೆ. ತಂಪುಪಾನೀಯ ಮಾರಾಟದಲ್ಲಿ ದಿಢೀರ್ ಏರಿಕೆಯಾಗಿದೆ. ಮಂಜುಗಡ್ಡೆಗೆ ಭಾರೀ ಬೇಡಿಕೆ ಬರುತ್ತಿರುವ ಹಿನ್ನೆಲೆ ಮಂಜಿನ ಸ್ಲ್ಯಾಬ್ ತಯಾರಿಕೆ ಘಟಕಗಳೂ ನಿರಂತರ ಕೆಲಸ ಮಾಡುತ್ತಿವೆ. ಕೆಲವೆಡೆ ರಸ್ತೆಗಳಿಗೆ ಸ್ಥಳೀಯ ಆಡಳಿತದ ವಾಹನಗಳಿಂದ ನೀರು ಚಿಮುಕಿಸುವ ಕಾರ್ಯವೂ ನಡೆದಿದೆ.

ಕಣ್ಮರೆಯಾದ ನಾಲ್ವರಿಗಾಗಿ ಶೋಧ

ಕಂಟೇನರ್ ನೌಕೆ ಬೆಂಕಿ, ಆರು ಸಿಬ್ಬಂದಿ ಆಸ್ಪತ್ರೆಗೆ

ತಿರುವನಂತಪುರ: ಕೇರಳದ ಬೇಪೂರ್ ಭಾಗದಲ್ಲಿ ಸಿಂಗಾಪುರದ ಸರಕು ಸಾಗಣೆ ಹಡಗು ಬೆಂಕಿ ಹೊತ್ತಿ ಉರಿದ ಪ್ರಕರಣದಲ್ಲಿ ವಾಣಿಜ್ಯ ನೌಕೆಯಲ್ಲಿದ್ದ ಸಿಬ್ಬಂದಿಗಳಲ್ಲಿ 6 ಮಂದಿ ಗಾಯಗೊಂಡಿದ್ದು, ಇಬ್ಬರ ಪರಿಸ್ಥಿತಿ ಗಂಭೀರವಾಗಿದೆ.

ಸದ್ಯ 6 ಗಾಯಾಳುಗಳನ್ನೂ ಮಂಗಳೂರಿನ ಎಜೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಇಬ್ಬರಿಗೆ ದೇಹದ ಶೇ.30ರಿಂದ 40ರಷ್ಟು ಭಾಗಗಳು ಸುಟ್ಟು ಹೋಗಿವೆ. ಶ್ವಾಸಕೋಶದಲ್ಲೂ ಸುಟ್ಟಗಾಯಗಳಾಗಿದೆ. ಇಬ್ಬರಿಗೂ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಹಡಗಿನಲ್ಲಿದ್ದ 22 ಸಿಬ್ಬಂದಿಗಳಲ್ಲಿ 18 ಮಂದಿಯನ್ನು ರಕ್ಷಿಸಲಾಗಿದ್ದರೆ, ನಾಲ್ವರು ಕಾಣೆಯಾಗಿದ್ದಾರೆ. ಕಣ್ಮರೆಯಾದವರಿಗಾಗಿ ಶೋಧ ಕಾರ್ಯ ಮಂಗಳವಾರವೂ ಮುಂದುವರಿದಿದೆ. 12 ಮಂದಿ ಸಿಬ್ಬಂದಿಗಳಿಗೆ ಹೋಟೆಲ್‌ನಲ್ಲಿ ಉಳಿಯಲು ವ್ಯವಸ್ಥೆ ಮಾಡಿಕೊಡಲಾಗಿದೆ.

ಸಮುದ್ರ ಮಧ್ಯೆ ಉರಿಯುತ್ತಿದ್ದ ನೌಕೆಯಿಂದ ರಕ್ಷಿಸಲಾದ 18 ಸಿಬ್ಬಂದಿಗಳನ್ನು ಭಾರತೀಯ ನೌಕಾಪಡೆಯ ಐಎನ್‌ಎಸ್ ಸೂರತ್ ನೌಕೆ ಮೂಲಕ ಮಂಗಳೂರಿನ ನವಬಂದರಿಗೆ ಕರೆತರಲಾಗಿದೆ. ಬಳಿಕ 6 ಗಾಯಾಳುಗಳನ್ನು ಆಸ್ಪತ್ರೆಗೆ ಅಂಬುಲೆನ್ಸ್‌ನಲ್ಲಿ ಕರೆದೊಯ್ಯಲಾಗಿದೆ. ಆರು ಗಾಯಾಳುಗಳಲ್ಲಿ ಮೂವರು ಚೀನಾದವರು, ಇಬ್ಬರು ಬರ್ಮಾ ಹಾಗೂ ಒಬ್ಬ ಇಂಡೋನೇಷ್ಯಾ ಪ್ರಜೆ. ಕಣ್ಮರೆಯಾದವರಲ್ಲಿ ತೈವಾನ್‌ನ ಸೆಕೆಂಡ್ ಇಂಜಿನಿಯರ್ ಯು ಬೊ ಫಾಂಗ್, ಮತ್ತು ಮೋಟರ್ ಮ್ಯಾನ್ ಸಿಹ್ ಚಾಯ್ ವೆನ್, ಮ್ಯಾನ್ಮಾರ್‌ನ ಕಾರ್ಪೆಂಟರ್ ಸಾನ್‌ವಿನ್, ಇಂಡೋನೇಷ್ಯಾದ ಎಬಿ ಜಾನಲ್ ಆಬಿದಿನ್ ಸೇರಿದ್ದಾರೆ.



ಲಂಕಾದ ಕೊಲಂಬೊದಿಂದ ಮುಂಬೈಗೆ ಸಾಗುತ್ತಿದ್ದ ಸಿಂಗಾಪುರ ಮೂಲದ ಕಂಟೇನರ್ ಸಾಗಣೆ ಹಡಗಿನಲ್ಲಿ ಪೇಂಟ್, ಗನ್ ಪೌಡರ್ ಸೇರಿದಂತೆ ಹಲವು ವಸ್ತುಗಳಿದ್ದವು. ಬೆಂಕಿ ಅವಘಡಕ್ಕೆ ಗನ್ ಪೌಡರ್ ಕಾರಣವಾಗಿರಬಹುದು ಎಂದು ಶಂಕಿಸಲಾಗಿದೆ.

ಚೀನಾದಿಂದ ಧನ್ಯವಾದ!

ಭಾರತದ ನೌಕಾಪಡೆ ಸಕಾಲದಲ್ಲಿ ಸ್ಥಳಕ್ಕೆ ಧಾವಿಸಿ ಹೊತ್ತಿ ಉರಿಯುತ್ತಿದ್ದ ಸರಕು ಸಾಗಣೆ ಹಡಗಿನಲ್ಲಿದ್ದ ಸಿಬ್ಬಂದಿಗಳನ್ನು ರಕ್ಷಿಸಿ ದಂಡೆಗೆ ಕರೆತಂದು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿರುವುದಕ್ಕೆ ಚೀನಾ ಸರಕಾರ, ಭಾರತ ಸರಕಾರಕ್ಕೆ ಧನ್ಯವಾದ ಹೇಳಿದೆ. ನೌಕಾಪಡೆಯ ಸಮಯೋಚಿತ ಕ್ರಮವನ್ನು ಬಹಳವಾಗಿ ಶ್ಲಾಘಿಸಿದೆ. ಬೆಂಕಿ ಅವಘಡದಲ್ಲಿ ರಕ್ಷಿಸಲ್ಪಟ್ಟ 18 ಜನರಲ್ಲಿ ಚೀನಾದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಬೆಂಕಿಯಿಂದ ಪಾರಾಗಲು 8ನೇ ಮಹಡಿ ಇಂದ ಜಿಗಿದ ತಂದೆ-2 ಮಕ್ಕಳ ಸಾವು

ದೆಹಲಿ: 9 ಮಹಡಿಗಳ ವಸತಿ ಸಂಕೀರ್ಣಕ್ಕೆ ಬೆಂಕಿ, 3 ಸಾವು

ದೆಹಲಿ: ದೆಹಲಿಯ ದ್ವಾರಕಾ ಸೆಕ್ಟರ್ 13ರ ಶಾಬಾದ್ ವಸತಿ ಸಮುಚ್ಚಯದಲ್ಲಿ ಮಂಗಳವಾರ ಬೆಳಗ್ಗೆ ಬೆಂಕಿ ಕಾಣಿಸಿಕೊಂಡು ಕಟ್ಟಡದ ವಿವಿಧ ಅಂತಸ್ತುಗಳಿಗೆ ವ್ಯಾಪಿಸಿದ್ದು, ಬೆಂಕಿಯಿಂದ ಪಾರಾಗುವ ತರಾತುರಿಯಲ್ಲಿ 8ನೇ ಮಹಡಿಯ ಬಾಲ್ಕನಿಯಿಂದ ಇಬ್ಬರು ಮಕ್ಕಳೊಂದಿಗೆ ತಂದೆ ಕೆಳಕ್ಕೆ ಜಿಗಿದಿದ್ದು, ಮೂವರೂ ಸಾವಿಗೀಡಾಗಿದ್ದಾರೆ.

ಬೆಂಕಿಯ ಕಾವು ತಾಳಲಾರದೇ ಯಾದವ್ (35) ತಮ್ಮ 10-11 ವರ್ಷದ ಇಬ್ಬರು ಮಕ್ಕಳೊಂದಿಗೆ ಕೆಳಕ್ಕೆ ಜಿಗಿದರು. ಮಕ್ಕಳು ಸ್ಥಳದಲ್ಲೇ ಸಾವಿಗೀಡಾದರೆ, ತಂದೆ ಯಾದವ್ ಐಜಿಐ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಬೆಂಕಿ ಅವಘಡ ವೇಳೆ ಅಪಾರ್ಟ್‌ಮೆಂಟ್‌ನಲ್ಲಿ ಸಿಲುಕಿದ್ದ ಯಾದವ್ ಅವರ ಪತ್ನಿ ಹಾಗೂ ಹಿರಿಯ ಮಗನನ್ನು ಅಗ್ನಿಶಾಮಕ ಸಿಬ್ಬಂದಿ ರಕ್ಷಿಸಿದ್ದಾರೆ. ಸುಟ್ಟಗಾಯಗಳಾಗಿದ್ದ ತಾಯಿ-ಮಗನನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸದ್ಯ ವಸತಿ ಸಂಕೀರ್ಣದಲ್ಲಿದ್ದ ಎಲ್ಲಾ ನಿವಾಸಿಗಳನ್ನು ಸ್ಥಳಾಂತರಿಸಲಾಗಿದೆ. ಬೆಂಕಿ ವ್ಯಾಪಿಸುವುದನ್ನು ತಡೆಯಲು ವಿದ್ಯುತ್ ಸಂಪರ್ಕ ಮತ್ತು ಅಡುಗೆ ಅನಿಲ ಕೊಳವೆ ಮಾರ್ಗವನ್ನು ಬಂದ್ ಮಾಡಲಾಗಿದೆ.

ಎಲ್ಲೇ ಅಡಗಿದ್ದರೂ ಉಗ್ರರ ಬೇಟೆ ಖಚಿತ: ಜೈಶಂಕರ್

ದೆಹಲಿ: ಗಡಿಯಾಚೆಗಿನ ಭಯೋತ್ಪಾದನೆ ವಿರುದ್ಧ ಪ್ರತಿದಾಳಿಗೆ ಭಾರತ ಹಿಂಜರಿಯುವುದಿಲ್ಲ. ಭಾರತದ ಮೇಲೆ ದಾಳಿ ಮಾಡುವವರು ಪಾಕಿಸ್ತಾನ ಸೇರಿದಂತೆ ವಿಶ್ವದ ಯಾವುದೇ ದೇಶದಲ್ಲೇ ಅಡಗಿದ್ದರೂ ಹುಡುಕಿ ಭೇಟೆಯಾಡುತ್ತೇವೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಮಂಗಳವಾರ ಗುಡುಗಿದ್ದಾರೆ. ಭಾರತ ಇನ್ನು ಮುಂದೆ ಉಗ್ರರ ದಾಳಿಯನ್ನು ಸಹಿಸಿಕೊಳ್ಳುವುದಿಲ್ಲ. ಉಗ್ರರ ದಾಳಿ ಪ್ರತೀಕಾರ ತೆಗೆದುಕೊಳ್ಳುವುದು ಶತಃಸಿದ್ಧ. ಆತ್ಮರಕ್ಷಣೆಗೆ ಅಗತ್ಯವಾದ ಎಲ್ಲಾ ಕ್ರಮಗಳನ್ನೂ ತೆಗೆದುಕೊಳ್ಳುತ್ತೇವೆ. ಅದುವೇ ನಮ್ಮ ಮೂಲಭೂತ ಕರ್ತವ್ಯವಾಗಿದೆ ಎಂದು ಫ್ರೆಂಚ್ ದಿನಪತ್ರಿಕೆ 'ಲೆ ಫಿಗರೊ'ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಭಾರತದ ತಗಾದೆ ಒಂದು ನಿರ್ದಿಷ್ಟ ದೇಶದೊಂದಿಗೆ ಅಲ್ಲ. ಈಗ ನಡೆದಿರುವ ಸಂಘರ್ಷ ಭಾರತ ಮತ್ತು ಭಯೋತ್ಪಾದನೆ ನಡುವಿನದ್ದು ಎಂದರು. ಪಾಕ್ ಜತೆ ಚೀನಾ ನಿಕಟ ಸಂಬಂಧ ಹೊಂದಿರುವ ಬಗೆಗಿನ ಪ್ರಶ್ನೆಗೆ, 'ಭಯೋತ್ಪಾದನೆಯಂತಹ ಮಾನವ ವಿರೋಧಿ ವಿಷಯದಲ್ಲಿ ಅಸ್ಪಷ್ಟ ಅಥವಾ ದ್ವಿಮುಖ ನೀತಿಯನ್ನು ಭಾರತ ಸಹಿಸುವುದಿಲ್ಲ. ಭಯೋತ್ಪಾದನೆ ಎಂಬುದು ಎಲ್ಲಾ ದೇಶಗಳಿಗೂ ಸಂಬಂಧಿಸಿದ ಸಮಸ್ಯೆಯಾಗಿದೆ ಎಂದು ಚೀನಾ ಗುರಿಯಾಗಿಸಿ ಹೇಳಿದರು.



ಅಕ್ರಮ ವಲಸಿಗ ಎಂದ ಅಮೆರಿಕ | ಪ್ರಧಾನಿ ಮೌನಕ್ಕೆ ಕಾಂಗ್ರೆಸ್ ಟೀಕೆ

ನ್ಯೂಜೆರ್ಸಿ: ಭಾರತ ವಿದ್ಯಾರ್ಥಿಗೆ ಕೈಕೋಳ-ಹಿಂಸೆ

ನ್ಯೂಜೆರ್ಸಿ: ಅಮೆರಿಕದ ನ್ಯೂಜೆರ್ಸಿಯ ನ್ಯೂವಾರ್ಕ್ ವಿಮಾನ ನಿಲ್ದಾಣದಲ್ಲಿ ಸೋಮವಾರ ರಾತ್ರಿ ಅಮೆರಿಕದ ವಲಸೆ ವಿಭಾಗದ ಅಧಿಕಾರಿಗಳು ಭಾರತೀಯ ವಿದ್ಯಾರ್ಥಿಯ ಕೈಗೆ ಕೋಳ ಹಾಕಿ, ನೆಲಕ್ಕೆ ಕೆಡವಿ, ಹಿಂಸೆ ಮಾಡಿರುವ ಸಂದರ್ಭದ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದ್ದು, ನೆಟ್ಟಿಗರು ಅಮೆರಿಕ ಅಧಿಕಾರಿಗಳ ಕ್ರಮವನ್ನು ಅಮಾನವೀಯ ಎಂದು ಖಂಡಿಸಿದ್ದಾರೆ.

ಆ ಬಳಿಕ ಭಾರತ ಮೂಲದ ವಿದ್ಯಾರ್ಥಿಯನ್ನು ಗಡೀಪಾರು ಮಾಡಿರುವ ವಲಸೆ ವಿಭಾಗದ ಅಧಿಕಾರಿಗಳು, ಅಮೆರಿಕಕ್ಕೆ ಅಕ್ರಮವಾಗಿ ವಲಸೆ ಬಂದವರು ಮತ್ತು ವೀಸಾ ನಿಯಮಗಳನ್ನು ಉಲ್ಲಂಘಿಸಿದವರು ಹಾಗೂ ಈ ನೆಲದ ಕಾನೂನನ್ನು ಉಲ್ಲಂಘಿಸಿದವರ ಜತೆ ಇದೇ ರೀತಿ ನಡೆದುಕೊಳ್ಳಲಾಗುವುದು ಎಂದು ಕಟುವಾಗಿ ಪ್ರತಿಕ್ರಿಯಿಸಿದ್ದಾರೆ.

ನ್ಯೂವಾರ್ಕ್ ವಿಮಾನ ನಿಲ್ದಾಣದಿಂದ ಭಾರತೀಯ ವಿದ್ಯಾರ್ಥಿಯ ಗಡೀಪಾರು ಪ್ರಕ್ರಿಯೆ ನೋಡಿದೆ. ಆತ ಕನಸುಗಳನ್ನು ಹೊತ್ತು ಇಲ್ಲಿಗೆ ಬಂದಿದ್ದನೋ. ಆದರೆ, ಆತನಿಗೆ ಕೈಕೋಳ ಹಾಕಿ ಅಪರಾಧಿಯಂತೆ ನಡೆಸಿಕೊಂಡಿರುವುದು ಸರಿಯಲ್ಲ. ಒಬ್ಬ ಅನಿವಾಸಿ ಭಾರತೀಯನಾಗಿ ನಾನು ಅಸಹಾಯಕ. ಇದೊಂದು ಮಾನವ ದುರಂತ ಎಂದು ವಿಡಿಯೊ ಹಂಚಿಕೊಂಡಿರುವ ಅಮೆರಿಕದ ಉದ್ಯಮಿ, ಭಾರತೀಯ ಕುನಾಲ್ ಜೈನ್ ಎಂಬವರು 'ಎಕ್ಸ್' ಖಾತೆಯಲ್ಲಿ ಬರೆದಿದ್ದಾರೆ. ವಿದ್ಯಾರ್ಥಿಗೆ ನೆರವಾಗುವಂತೆ ಅಮೆರಿಕದಲ್ಲಿನ ಭಾರತೀಯ ರಾಯಭಾರ ಕಚೇರಿಗೆ ಜೈನ್ ಮನವಿ ಮಾಡಿದ್ದಾರೆ.

ವಿದ್ಯಾರ್ಥಿಯ ಕೈಗಳನ್ನು ಹಿಂದಕ್ಕೆಳೆದು ಕೋಳ ಹಾಕಿ, ಬೆನ್ನಿನ ಮೇಲೆ ಅಧಿಕಾರಿಗಳಿಬ್ಬರು ಮಂಡಿಯೂರಿರುವುದು, ವಿದ್ಯಾರ್ಥಿಯ ಕಾಲು ಅಲುಗಾಡದಂತೆ ಬಿಗಿಯಾಗಿ ಕಟ್ಟಿರುವುದು ವಿಡಿಯೊದಲ್ಲಿ ಗೋಚರಿಸುತ್ತಿದೆ.

ಭಾರತದ ವಿದ್ಯಾರ್ಥಿಗೆ ತೊಂದರೆಯಾಗಿರುವುದು ಗಮನಕ್ಕೆ ಬಂದಿದೆ. ಅಮೆರಿಕ ಅಧಿಕಾರಿಗಳನ್ನು ಸಂಪರ್ಕಿಸಿದ್ದೇವೆ. ಭಾರತ ಮೂಲದವರ ರಕ್ಷಣೆಗೆ ನಮ್ಮ ಕಚೇರಿ ಸದಾ ಬದ್ಧ ಎಂದು ಭಾರತೀಯ ರಾಯಭಾರ ಕಚೇರಿ 'ಎಕ್ಸ್' ಸಂದೇಶದಲ್ಲಿ ಹೇಳಿದೆ.

ಕಾಂಗ್ರೆಸ್ ಅಸಮಾಧಾನ

ಭಾರತೀಯರಿಗೆ ಅಮೆರಿಕದಲ್ಲಿ ಹಿಂಸೆ, ಅವಮಾನವಾಗುತ್ತಿದ್ದರೂ ಪ್ರಧಾನಿ ನರೇಂದ್ರ ಮೋದಿ ಮೌನವಾಗಿರುವುದು ಸರಿಯಲ್ಲ ಎಂದು ಕಾಂಗ್ರೆಸ್ ಅಸಮಾಧಾನ ವ್ಯಕ್ತಪಡಿಸಿದೆ. ವಿದೇಶಾಂಗ ಸಚಿವಾಲಯ ಮಧ್ಯಪ್ರವೇಶಿಸಬೇಕು ಎಂದು ಆಗ್ರಹಿಸಿದೆ.

ಆಸ್ಟ್ರಿಯನ್ ಶಾಲೆಯ ಶೂಟೌಟ್‌ಗೆ 10 ಬಲಿ

ವಿಯೆನ್ನಾ: ಆಸ್ಟ್ರಿಯಾದ 2ನೇ ಅತಿದೊಡ್ಡ ನಗರವಾದ ಗ್ರಾಜ್‌ನಲ್ಲಿನ ಪ್ರೌಢಶಾಲೆಯೊಂದರಲ್ಲಿ ಮಂಗಳವಾರ ಬೆಳಗ್ಗೆ ಶೂಟೌಟ್ ನಡೆದಿದ್ದು, 10 ಜೀವಬಲಿಯಾಗಿವೆ. ಕಡೆಗೂ ಹಂತಕನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ವಿದ್ಯಾರ್ಥಿಯೊಬ್ಬ ಮನೆಯಿಂದ ಬಂದೂಕು ತಂದು ಗುಂಡಿನ ದಾಳಿ ನಡೆಸಿದ್ದರಿಂದ ವಿದ್ಯಾರ್ಥಿಗಳು, ಶಿಕ್ಷಕ ವರ್ಗದವರು ಸೇರಿ ಒಟ್ಟು 10 ಜನರು ಸಾವಿಗೀಡಾಗಿದ್ದಾರೆ. ದಾಳಿ ಬಳಿಕ ಶೌಚಾಲಯಕ್ಕೆ ತೆರಳಿದ ಹಂತಕ ವಿದ್ಯಾರ್ಥಿ, ತನಗೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ನಗರದ ಮೇಯರ್ ಎಲ್ಕೆ ಕಹ್ರ, ಸುದ್ದಿಸಂಸ್ಥೆ ಜತೆ ಮಾತನಾಡಿ, ಇದೊಂದು ಭಯಾನಕ ದುರಂತ. ವಿದ್ಯಾರ್ಥಿಗಳು ಮತ್ತು ಶಿಕ್ಷಕ ಸಮೂಹದ ಜೀವಬಲಿ ನೋವು ತಂದಿದೆ. ಹಂತಕ ಆ ಬಳಿಕ ತನಗೂ ಗುಂಡು ಹಾರಿಸಿಕೊಂಡಿದ್ದಾನೆ ಎಂದಿದ್ದಾರೆ. ಬೆಳಿಗ್ಗೆ 10 ಗಂಟೆ ವೇಳೆ ಶಾಲೆ ಕಡೆಯಿಂದ ಗುಂಡು ಸಿಡಿದ ಶಬ್ದ ಕೇಳಿಬಂದಿತು. ಅದರ ಬೆನ್ನಲ್ಲೇ ದೂರವಾಣಿ ಕರೆಯೂ ಬಂದಿತು. ತಕ್ಷಣವೇ ಸ್ಥಳಕ್ಕೆ ನಮ್ಮ ತಂಡ ಧಾವಿಸಿದೆ. ಶಾಲೆಗೆ ವಿಶೇಷ ಪಡೆಗಳನ್ನೂ ಕಳುಹಿಸಿಕೊಡಲಾಗಿತ್ತು. 11.30ರ ವೇಳೆಗೆಲ್ಲಾ ಶಾಲೆಯಿಂದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳನ್ನು ಸುರಕ್ಷಿತ ಸ್ಥಳಕ್ಕೆ ಕರೆತರಲಾಗಿದೆ ಎಂದು ಪೊಲೀಸ್ ವಕ್ತಾರ ಸಬ್ರಿ, ಯೋರ್ಗುನ್ ಹೇಳಿದ್ದಾರೆ.



ಸಮಾಚಾರ ಸಣ್ಣದಲ್ಲ

ಜಲಮಂಡಳಿಯಿಂದ ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲ ಮಂಡಳಿಯ ವತಿಯಿಂದ ನಗರದಲ್ಲಿ ಜೂ.12ರಂದು ಬೆಳಗ್ಗೆ 9.30ರಿಂದ 11.00 ಗಂಟೆಯವರೆಗೆ ನೀರಿನ ಅದಾಲತ್‌ನ್ನು ಆಯೋಜಿಸಲಾಗಿದೆ ಎಂದು ಮಂಡಳಿ ತಿಳಿಸಿದೆ. ನಗರದ ಉತ್ತರ-2-1, ದಕ್ಷಿಣ-1-1, ದಕ್ಷಿಣ-2-1, ನೈರುತ್ಯ -1, ನೈರುತ್ಯ - 4, ಪೂರ್ವ -1-2, ಪೂರ್ವ -2-2, ಆಗ್ನೇಯ - 2, ಆಗ್ನೇಯ - 5, ಪಶ್ಚಿಮ-1-2 ಮತ್ತು ಪಶ್ಚಿಮ-2-2, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಸಾರ್ವಜನಿಕರು ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆ ಮಾಡಿ ಥವಾ ವಾಟ್ಸ್ ಆಫ್ ಸಂಖ್ಯೆ 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದು ಎಂದು ತಿಳಿಸಿದೆ.

ದತ್ತಿ ಪ್ರಶಸ್ತಿಗೆ ಮಿತ್ರಾ ಆಯ್ಕೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ಪಂಕಜಶ್ರೀ ಪ್ರಶಸ್ತಿಗೆ ಮುಂಬೈನ ಕಥೆಗಾರ್ತಿ ಮಿತ್ರಾ ವೆಂಕಟ್ರಾಜುರನ್ನು ಆಯ್ಕೆ ಮಾಡಲಾಗಿದೆ ಎಂದು ನಾಡೋಜ ಡಾ.ಮಹೇಶ ಜೋಶಿ ತಿಳಿಸಿದರು. ಕನ್ನಡದ ಪ್ರಮುಖ ಲೇಖಕಿಯಾಗಿದ್ದ ಎ.ಪಂಕಜ 25ಕ್ಕೂ ಅಧಿಕ ಕೃತಿಗಳನ್ನು ರಚಿಸಿದವರು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಮೇಲಿನ ಗೌರವದಿಂದ ದತ್ತಿ ನಿಧಿಯನ್ನು ಸ್ಥಾಪಿಸಿದ್ದು ಲೇಖಕಿಯರಿಗೆ ಪ್ರತಿ ವರ್ಷ ಪುರಸ್ಕಾರ ನೀಡುವಂತೆ ನಿಯಮವನ್ನು ರೂಪಿಸಿದ್ದಾರೆ. 2025ನೇ ಸಾಲಿನ ಪ್ರಶಸ್ತಿಗೆ ಕುಂದಾಪುರ ಮೂಲದ ಕಥೆಗಾರ್ತಿ ಮಿತ್ರಾ ವೆಂಕಟ್ರಾಜ್‌ರನ್ನು ಆಯ್ಕೆ ಮಾಡಲಾಗಿದೆ ಎಂದರು. ನಾಡೋಜ ಡಾ.ಮಹೇಶ ಜೋಶಿ ಅಧ್ಯಕ್ಷತೆಯ ಆಯ್ಕೆ ಸಮಿತಿಯಲ್ಲಿ ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟಿ, ಡಾ.ಪದ್ಮಿನಿ ನಾಗರಾಜು , ಗೌರವ ಕೋಶಾಧ್ಯಕ್ಷರಾದ ಬಿ.ಎಂ.ಪಟೇಲ್ ಪಾಂಡು, ಮಾಧ್ಯಮ ವಿಭಾಗದ ಸಂಚಾಲಕ ಎನ್.ಎಸ್.ಶ್ರೀಧರಮೂರ್ತಿ ಇದ್ದರು.

ಬಾಲ ಪ್ರತಿಭೆಗಳ ಕಲಾ ಪ್ರದರ್ಶನ ಜೂ.14ಕ್ಕೆ

ಬೆಂಗಳೂರು: ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯ ಅನಾವರಣಕ್ಕಾಗಿ ವೇದಿಕೆ ಕಲ್ಪಿಸುವ ಉದ್ದೇಶದಿಂದ ಜೂ. 14 ರಂದು ಬಾಲಕಲಾ ಪ್ರತಿಭಾ ಕಾರಂಜಿ ಆಯೋಜನೆ ಮಾಡಲಾಗಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ರವೀಂದ್ರ ಕಲಾ ಕ್ಷೇತ್ರದ ನಯನ ಸಭಾಂಗಣದಲ್ಲಿ ಕಾರ್ಯಕ್ರಮ ಜರುಗಲಿದ್ದು, ರಾಜ್ಯದ ವಿವಿಧ ಭಾಗಗಳಿಂದ ಆಯ್ದ ಮಕ್ಕಳಿಂದ ಗಾಯನ, ವಾದನ, ನರ್ತನ, ವಾಚನ, ಯಕ್ಷಗಾನ, ಜಾದೂ ಪ್ರದರ್ಶನ ನಡೆಯಲಿದೆ. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಲಾಸಕ್ತರು ಪಾಲ್ಗೊಂಡು ಬಾಲಪ್ರತಿಭೆಗಳನ್ನು ಪ್ರೋತ್ಸಾಹಿಸಲು ಪರಂಪರಾ ಕಲ್ಚರಲ್ ಫೌಂಡೇಶನ್ ಕೋರಿದೆ.

ಜೈವಿಕ ಉದ್ಯಾನದಲ್ಲಿ ಜೀಬ್ರಾ ಸಾವು

ಬೆಂಗಳೂರು: ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿನ ಜೀಬ್ರಾ ಆವರಣದಲ್ಲಿದ್ದ ಕಾವ್ಯಾ ಎಂಬ ಹೆಣ್ಣು ಜೀಬ್ರಾ ಸಾವನ್ನಪ್ಪಿದೆ ಎಂದು ಆಡಳಿತಾಧಿಕಾರಿ ಸೂರ್ಯ ಸೇನ್ ತಿಳಿಸಿದ್ದಾರೆ. ಮೂರು ವರ್ಷ ಪ್ರಾಯದ ಪ್ಲೈನ್ಸ್ ಜೀಬ್ರಾ ಕಾವ್ಯಾ, ಆಘಾತ ಮತ್ತು ಕ್ಯಾಪ್ಚರ್ ಮಯೋಪತಿಯಿಂದಾಗಿ ಸಾವನ್ನಪ್ಪಿದೆ ಎಂದು ತಿಳಿಸಿದ ಅವರು ಜೀಬ್ರಾ ಚೈನ್ ಲಿಂಕ್ ಜಾಲಕ್ಕೆ ಡಿಕ್ಕಿ ಹೊಡೆದು ತನ್ನನ್ನು ತಾನೇ ಗಾಯಗೊಳಿಸಿಕೊಂಡು ಆಘಾತಕ್ಕೀಡಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಇತರ ಗಂಡು ಜೀಬ್ರಾಗಳ ಆಂತರಿಕ ಕದನ ಅಥವಾ ಕಾಡಿನ ಪರಭಕ್ಷಕ ಪ್ರಾಣಿಗಳ ಪ್ರವೇಶದಿಂದ ಬಾಹ್ಯ ಒತ್ತಡ ಉಂಟಾಗಿರಬಹುದು ಎಂಬ ಶಂಕೆಯನ್ನು ವ್ಯಕ್ತಪಡಿಸಿ ಆ ದೃಷ್ಟಿ ಕೋನದಿಂದಲೂ ಪರಿಶೀಲಿಸಲಾಗುತ್ತಿದೆ. ಕಾವ್ಯಾ ಗರ್ಭಿಣಿಯಾಗಿದ್ದು ಕೆಲವು ತಿಂಗಳಲ್ಲಿ ಮರಿ ಹಾಕುವ ನಿರೀಕ್ಷೆಯಿತ್ತು. ಈ ಅನಿರೀಕ್ಷಿತಾ ಅವಘಡದಿಂದಾಗಿ ನೋವಾಗಿದ್ದು ಇನ್ನು ಮುಂದೆ ಇನ್ನೂ ಹೆಚ್ಚಿನ ಮುಂಜಾಗ್ರತೆ ಕ್ರಮ ವಹಿಸಲಾಗುವುದು ಎಂದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ಸಿ.ಟಿ.ರವಿ } ವಿಧಾನಪರಿಷತ್ ಸದಸ್ಯ

ಮುಡಾದಲ್ಲಿ ಭ್ರಷ್ಟಾಚಾರ ನಡೆದಿರುವುದಕ್ಕೆ ಸ್ಪಷ್ಟ ಪುರಾವೆ ಜಾರಿ ನಿರ್ದೇಶನಾಲಯದ (ಇ.ಡಿ.) ಕೈಗೆ ಸಿಕ್ಕಿದೆ. ಈಗ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ? ಮುಡಾದಲ್ಲಿ ಭ್ರಷ್ಟಾಚಾರ ನಡೆದಿಲ್ಲ ಎನ್ನುತ್ತಾರಾ? ಅಥವಾ ಭ್ರಷ್ಟಾಚಾರ ನಡೆದಿರುವುದನ್ನು ಒಪ್ಪಿಕೊಂಡು ತಮ್ಮ ಜವಾಬ್ದಾರಿ ಹೊತ್ತುಕೊಳ್ಳುವರೇ?

ರಾಹುಲ್ ಗಾಂಧಿ ಜತೆಗಿನ ಸಭೆಯ ಬಳಿಕ ಸಿಎಂ ಸಿದ್ದರಾಮಯ್ಯ ಘೋಷಣೆ

ಜಾತಿ ಗಣತಿ ತಾತ್ವಿಕ ಒಪ್ಪಿಗೆಯಾದರೂ ಮರುಗಣತಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜಾತಿಗಣತಿ ವರದಿ ಬಗ್ಗೆ ಅಪಸ್ವರ ಎದ್ದಿರುವ ಹಿನ್ನಲೆಯಲ್ಲಿ, ಈಗಾಗಲೇ ಸಲ್ಲಿಕೆಯಾಗಿರುವ ಜಾತಿಗಣತಿ ವರದಿಗೆ ತಾತ್ವಿಕ ಒಪ್ಪಿಗೆ ನೀಡಿ, ಸಮೀಕ್ಷೆಗೆ ಮರುಗಣತಿ ನಡೆಸಲು ನಿರ್ಧಾರ ಕೈಗೊಂಡಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟದಲ್ಲಿ ನಡೆಯುತ್ತಿರುವ ರಾಜಕೀಯ ಬೆಳವಣಿಗೆಗಳ ಬಗ್ಗೆ ಕಾಂಗ್ರೆಸ್ ವರಿಷ್ಠರೊಂದಿಗೆ ಚರ್ಚಿಸಲಾಗಿದೆ. ವಿವಿಧ ಜಾತಿಗಳ ಸಂಘ ಸಂಸ್ಥೆಗಳು, ಮಠಾಧೀಶರು, ಸಮುದಾಯದಗಳ ಮುಖಂಡರು, ಸಚಿವರು ಜಾತಿಗಣತಿ ವರದಿ ಬಗ್ಗೆ ಅಪಸ್ವರ ಎತ್ತಿರುವ ಬಗ್ಗೆ ಚರ್ಚಿಸಲಾಗಿ, ಜಾತಿಗಣತಿ ವರದಿಯನ್ನು ತಾತ್ವಿಕವಾಗಿ ಒಪ್ಪಿಕೊಳ್ಳುವುದು ಹಾಗೂ ಜಾತಿ ಗಣತಿಯ ದತ್ತಾಂಶ ಹತ್ತು ವರ್ಷ ಹಳೆಯದಾಗಿರುವುದರಿಂದ ಮರುಗಣತಿ ಮಾಡಲು ತೀರ್ಮಾನಿಸಲಾಗಿದೆ.

ಈಗಾಗಲೇ ಪರಿಶಿಷ್ಟ ಜಾತಿಗಳ ಜನಗಣತಿ ನಡೆದಂತೆ, ಇತರೆ ಜಾತಿಗಳ ಗಣತಿಯನ್ನು ಹೊಸದಾಗಿ ಕೈಗೊಳ್ಳಲು ನಿರ್ಧರಿಸಲಾಗಿದೆ. ಸಮೀಕ್ಷಾ ಕಾರ್ಯವನ್ನು 90 ದಿನದೊಳಗೆ ಪೂರ್ಣಗೊಳಿಸಿ ವರದಿ ನೀಡಬೇಕಾಗುವುದು ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಕಾಲ್ತುಳಿತ ಪ್ರಕರಣದ ಬಗ್ಗೆ ಚರ್ಚಿಸಿ, ಸರಕಾರ ತೆಗೆದುಕೊಂಡ ಕ್ರಮಗಳ ಬಗ್ಗೆ ವರಿಷ್ಠರಿಗೆ ವಿವರಿಸಲಾಗಿದೆ. ಪ್ರಕರಣದ ತನಿಖೆಗೆ ಜಿಲ್ಲಾಧಿಕಾರಿಗಳ ನೇತೃತ್ವದ ಮ್ಯಾಜಿಸ್ಟ್ರಿಯಲ್ ತನಿಖೆ, ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಏಕಸದಸ್ಯ ಆಯೋಗ ರಚನೆ ಮೈಕೆಲ್ ಕುನ್ಹಾ , ಐದು ಪೊಲೀಸ್ ಅಧಿಕಾರಿಗಳ ಅಮಾನತು , ಗುಪ್ತಚರ ಇಲಾಖೆಯ ಮುಖ್ಯಸ್ಥರ ಬದಲಾವಣೆ, ರಾಜಕೀಯ ಕಾರ್ಯದರ್ಶಿಗಳ ಬದಲಾವಣೆಯಂತಹ ಸರಕಾರದ ಕ್ರಮಗಳು ಸಮರ್ಪಕವಾಗಿರುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಏಕಸದಸ್ಯ ಆಯೋಗದ ತನಿಖಾ ವರದಿಯನ್ನು ಆಧರಿಸಿ, ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಕುಂಭಮೇಳದ ಕಾಲ್ತುಳಿತಕ್ಕೆ ಯುಪಿ ಸಿಎಂ ಜವಾಬ್ದಾರರಲ್ಲವೇ?

ಕೇಂದ್ರದ ಸಂಸತ್‌ನಲ್ಲಿ ಬೆಂಗಳೂರಿನ ಕಾಲ್ತುಳಿತದ ಘಟನೆ ಚರ್ಚೆಗೆ ಬರುವ ಸಾಧ್ಯತೆಯಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಕೇಂದ್ರ ಸರಕಾರ ಮೊದಲು ಕುಂಭಮೇಳದಲ್ಲಿ ನಡೆದ ಕಾಲ್ತುಳಿತ, ಪ್ರಧಾನಿಯವರು ಉದ್ಘಾಟಿಸಿದ ಸೇತುವೆ ಕುಸಿದು ಜನ ಮೃತಪಟ್ಟ ಘಟನೆಯ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಯಲಿ. ಬೆಂಗಳೂರಿನಲ್ಲಿ ನಡೆದ ಘಟನೆ ನಡೆದಿರುವುದುಕ್ಕೆ ಸರಕಾರಕ್ಕೆ ದು:ಖದ ಸಂಗತಿಯಾಗಿದೆ. ಯುವಜನರ ಸಾವು ಎಲ್ಲರಿಗೂ ನೋವು ತರುವ ವಿಚಾರ. ಕುಂಭಮೇಳದ ಘಟನೆಯಲ್ಲಿ ಜನರ ಸಾವು ಪ್ರಕರಣದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರ ಜವಾಬ್ದಾರಿಯಲ್ಲವೇ ಎಂದು ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದರು.

ಕಳೆದ ಎರಡು ತಿಂಗಳಿನಿಂದ ಒಳಮೀಸಲಾತಿ ವಿಚಾರವಾಗಿ ಪರಿಶಿಷ್ಟ ಜಾತಿ ಅವರ ಜನಗಣತಿ ಮಾಡುತ್ತಿದ್ದೇವೆ. ಹೀಗಾಗಿ ಈ ಪ್ರಕ್ರಿಯೆ ಸುದೀರ್ಘವಾಗಿ ನಡೆಯುವುದರಿಂದ ಇದನ್ನು ಸಂಪುಟದಲ್ಲಿ ಚರ್ಚಿಸಿ ತೀರ್ಮಾನ ಮಾಡುತ್ತೇವೆ. ನಾವು ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಎಲ್ಲರಿಗೂ ನ್ಯಾಯ ಒದಗಿಸಿಕೊಡಲಾಗುವುದು. ಇದರಲ್ಲಿ ಯಾವುದೇ ಆತಂಕ ಬೇಡ. ನಮ್ಮ ಈ ಪ್ರಯತ್ನದ ಮೂಲಕ ಜಾತಿಗಣತಿ ವಿಚಾರವಾಗಿ ಇರುವ ಅಪಸ್ವರವನ್ನು ಸರಿಪಡಿಸಲಾಗುವುದು. ನಮ್ಮ ರಾಜ್ಯದವರು ಎಲ್ಲೇ ಇದ್ದರೂ ಈ ಬಗ್ಗೆ ಆನ್ ಲೈನ್ ಮೂಲಕ ಮಾಹಿತಿ ನೀಡಲು ಅವಕಾಶ ಕಲ್ಪಿಸಲಾಗುವುದು.

– ಡಿ.,ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಗೊಂದಲ ಬಗೆಹರಿಸಲು ಮತ್ತೊಮ್ಮೆ ಅವಕಾಶ: ಡಿಸಿಎಂ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಜಾತಿ ಗಣತಿ ವಿಚಾರವಾಗಿ ಎದ್ದಿರುವ ಅಪಸ್ವರ, ಸಮುದಾಯಗಳ ಅಂಕಿಅಂಶಗಳ ಬಗ್ಗೆ ಇರುವ ಗೊಂದಲ ನಿವಾರಣೆಗೆ ತೀರ್ಮಾನಿಸಲಾಗಿದೆ. ಮನೆ ಮನೆ ಸಮೀಕ್ಷೆ ಹಾಗೂ ಆನ್‌ಲೈನ್ ಮೂಲಕ ಎಲ್ಲರೂ ತಮ್ಮ ಮಾಹಿತಿಯನ್ನು ಮತ್ತೊಮ್ಮೆ ಸಲ್ಲಿಸಲು ಅವಕಾಶ ನೀಡಲಾಗುವುದು. ಈ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸಲಾಗುವುದು ಎಂದು ತಿಳಿಸಿದರು.

ಮಂಗಳವಾರದಂದು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ವೇಣುಗೋಪಾಲ್ ಹಾಗೂ ರಣದೀಪ್ ಸಿಂಗ್ ಸುರ್ಜೇವಾಲ ಅವರು ನನ್ನನ್ನು ಹಾಗೂ ಮುಖ್ಯಮಂತ್ರಿಗಳನ್ನು ಕರೆಸಿ ಪಕ್ಷ ಸಂಘಟನೆ ವಿಚಾರವಾಗಿ, ರಾಜ್ಯ ರಾಜಕಾರಣ ಹಾಗೂ ಇತ್ತೀಚಿನ ಕಾಲ್ತುಳಿತ ಪ್ರಕರಣದ ಬಗ್ಗೆ ಚರ್ಚೆ ಮಾಡಲಾಯಿತು ಎಂದು ಹೇಳಿದರು. ಜಾತಿ ಗಣತಿ ವಿಚಾರವಾಗಿ ಇದೇ ತಿಂಗಳ 12ರಂದು ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ತೀರ್ಮಾನ ಮಾಡಲು ನಿರ್ಧರಿಸಿದ್ದೆವು. ಈ ವಿಚಾರವಾಗಿ ಸಂಸದರು, ಶಾಸಕರು, ಸಂಘ ಸಂಸ್ಥೆಗಳು ನಮ್ಮ ವರಿಷ್ಠರ ಜತೆ ಚರ್ಚೆ ಮಾಡಿದ್ದಾರೆ. ಕೆಲವು ಸಂಘಟನೆ ಹಾಗೂ ಸಮಾಜಗಳಿಂದ ಈ ಜಾತಿ ಗಣತಿಗೆ ಅಪಸ್ವರ ಬಂದಿರುವ ಹಿನ್ನೆಲೆಯಲ್ಲಿ ಎಲ್ಲರಿಗೂ ನ್ಯಾಯಬದ್ಧವಾಗಿ ಅವಕಾಶ ಕಲ್ಪಿಸಿಕೊಡಬೇಕು ಎಂದು ವರಿಷ್ಠರು ನಮಗೆ ಮಾರ್ಗದರ್ಶನ ನೀಡಿದ್ದಾರೆ. ಈ ಜಾತಿ ಗಣತಿಯಲ್ಲಿ ಯಾರನ್ನೂ ಬಿಡಬಾರದು, ಎಲ್ಲರನ್ನು ಒಳಗೊಳ್ಳಬೇಕು ಎಂದು ತೀರ್ಮಾನಿಸಲಾಗಿದೆ. ಯಾರ ಅಪಸ್ವರವೂ ಇಲ್ಲದಂತೆ ನೋಡಿಕೊಳ್ಳಲು ಮುಖ್ಯಮಂತ್ರಿಗಳಿಗೆ ನಿರ್ದೇಶನ ನೀಡಿದ್ದಾರೆ ಎಂದು ಮಾಹಿತಿ ನೀಡಿದರು.

ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಅರ್ಜುನ್ ಗೋಪಾಲಯ್ಯ ಆಗ್ರಹ

ಕಾನೂನು ಸುವ್ಯವಸ್ಥೆ ಲೋಪಕ್ಕೆ ಸಿಎಸ್ ಹೊಣೆ ಹೊರಬೇಕು

ಬೆಂಗಳೂರು: ಆರ್‌ಸಿಬಿ ಸಂಭ್ರಮಾಚರಣೆ ಕಾಲ್ತುಳಿತ ಪ್ರಕರಣ ಸಂಬಂಧ ರಾಜ್ಯ ಸರಕಾರ ತನ್ನ ತಪ್ಪಿನಿಂದ ತಪ್ಪಿಸಿಕೊಳ್ಳಲು ದಕ್ಷ ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡಿದೆ. ಇವರ ಅಮಾನತು ಆದೇಶವನ್ನು ಕೂಡಲೇ ರದ್ದುಪಡಿಸಿ ತನಿಖೆಯ ಬಳಿಕ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ರಾಷ್ಟ್ರೀಯ ಅಂಬೇಡ್ಕರ್ ಸೇನೆಯಿಂದ ನಗರದ ಫ್ರೀಡಂ ಪಾರ್ಕ್‌ನಲ್ಲಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಸಂಘಟನೆಯ ಅಧ್ಯಕ್ಷರಾದ ಅರ್ಜುನ್ ಗೋಪಾಲಯ್ಯ ಆಗ್ರಹಿಸಿದರು.

ಪ್ರತಿಭಟನೆ ವೇಳೆ ಮಾತನಾಡಿದ ಅವರು, ಆರ್‌ಸಿಬಿ ಟ್ರೋಫಿ ಗೆದ್ದ ಬಳಿಕ ಸರಕಾರವನ್ನೂ ಒಳಗೊಂಡಂತೆ ಡಿಎನ್‌ಎ ಸಂಸ್ಥೆ ಮತ್ತು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಜತೆಯಾಗಿ ವಿಜಯ ಯಾತ್ರೆ ಆಯೋಜನೆ ಮಾಡಲು ಉತ್ಸುಕವಾಗಿತ್ತು. ಕಳೆದ ರಾತ್ರಿಯಷ್ಟೆ ಅಭಿಮಾನಿಗಳ ಸಂಭ್ರಮಾಚರಣೆಯನ್ನು ನಿಯಂತ್ರಿಸಲು ರಾತ್ರಿಯಿಡೀ ಹರಸಾಹಸಪಟ್ಟಿದ್ದ ಪೊಲೀಸ್ ಸಿಬ್ಬಂದಿಯ ಪರಿಸ್ಥಿತಿಯನ್ನು ಅರಿಯದೇ ತೆಗೆದುಕೊಂಡ ಆತುರದ ನಿರ್ಧಾರದಿಂದ 11 ಅಭಿಮಾನಿಗಳು ಜೀವ ಕಳೆದುಕೊಳ್ಳುವಂತಾಗಿದೆ. ಇದರ ನೇರ ಹೊಣೆಯನ್ನು ಈ ಮೇಲಿನ ಸಂಸ್ಥೆಗಳೇ ಹೊರಬೇಕು ಹೊರತು ನಗರ ಪೊಲೀಸ್ ವಿಭಾಗವಲ್ಲ ಎಂದರು.

ಸರಕಾರ ಮಾಡಿರುವ ಅಮಾನತು ಸರಿ ಎನ್ನುವುದಾದರೆ, ಮೊದಲು ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಗೃಹ ಇಲಾಖೆ ಮುಖ್ಯ ಕಾರ್ಯದರ್ಶಿ, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಹಾಗೂ ಜಿಲ್ಲಾಧಿಕಾರಿಗಳನ್ನು ಅಮಾನತು ಮಾಡಿ ಬಳಿಕ ನಗರ ಪೊಲೀಸ್ ಆಯುಕ್ತರ ತಂಡವನ್ನು ಅಮಾನತು ಮಾಡುವುದು ಸರಿಯಾದ ಕ್ರಮವಾಗಿದೆ ಎಂದು ತಿಳಿಸಿದರು.

ಪೊಲೀಸ್ ಅಧಿಕಾರಿಗಳನ್ನು ಅಮಾನತು ಖಂಡಿಸಿ ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.

ಸರಕಾರದ ವಿರುದ್ಧ ಕಿಡಿ

ಸಂಘಟನೆಯ ಕಾರ್ಯದರ್ಶಿ ಲೋಕೇಶ್ ರಾಮ್ ಮಾತನಾಡಿ, ಘಟನೆ ಸಂಬಂಧ ಸೂಕ್ತ ತನಿಖೆ ಪೂರ್ಣಗೊಳಿಸಿದೆ ದಕ್ಷ ಅಧಿಕಾರಿಗಳನ್ನು ಅಮಾನತು ಮಾಡಿರುವುದು ಸರಕಾರದ ಅರಾಜಕತೆ ಮತ್ತು ಸರ್ವಾಧಿಕಾರಿ ಮನಸ್ಥಿತಿಯನ್ನು ತೋರಿಸುತ್ತದೆ. ಮತದಾರರು ಬಹುಮತ ನೀಡಿದ್ದಾರೆ ಎಂಬ ಮಾತ್ರಕ್ಕೆ ತಾವು ಏನು ಮಾಡಿದರೂ ಸರಿ ಎಂಬ ಅಹಃಭಾವನೆಯಿಂದ ಕಾನೂನಿನ ವ್ಯಾಪ್ತಿ ಮೀರಿ ಮತ್ತು ಸ್ವಾಭಾವಿಕ ಪ್ರಕ್ರಿಯೆಗಳನ್ನು ಉಲ್ಲಂಘಿಸಿ ತಮ್ಮ ಇಚ್ಚೆಗೆ ಅನುಸಾರ ನಿರ್ಧಾರಗಳನ್ನು ತೆಗೆದುಕೊಂಡಿದೆ ಎಂದು ಆರೋಪಿಸಿದರು.

ಆರ್‌ಸಿಬಿ ವಿಜಯೋತ್ಸವಕ್ಕೆ ಆಹ್ವಾನ ಕೊಟ್ಟಿದ್ದ ಸರಕಾರ

ಬೆಂಗಳೂರು: ಆರ್‌ಸಿಬಿ ವಿಜಯೋತ್ಸವ ನಂತರದ ದುರ್ಘಟನೆ ಅನಂತರದ ರಾಜಕೀಯ ಕೆಸರೆರೆಚಾಟದ ನಡುವೆ ರಾಜ್ಯಪಾಲರು ಅಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದೂ ಕೂಡ ಚರ್ಚಿತ ಹಾಗೂ ವಿವಾದವಾಗಿದೆ. ಈ ಸಂಬಂಧ ಕೇಂದ್ರ ಗರಂ ಆಗಿರುವ ಮಧ್ಯೆಯೇ ಕಾರ್ಯಕ್ರಮದಲ್ಲಿ ಭಾಗವಹಿಸಲು ಸರಕಾರವೇ ಆಹ್ವಾನಿಸಿತ್ತು ಎಂದು ರಾಜಭವನ ಹೇಳಿಕೊಂಡಿದೆ.

ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಥ್ ಅವರು ಆರ್‌ಸಿಬಿ ತಂಡವನ್ನು ರಾಜ್ಯಭವನಕ್ಕೆ ಕರೆದು ಅವರನ್ನು ಅಭಿನಂದಿಸಬೇಕು ಎಂದು ಯೋಜನೆ ಹಾಕಿಕೊಂಡಿದ್ದರು. ಆದರೆ ರಾಜ್ಯ ಸರಕಾರದಿಂದ ರಾಜ್ಯಭವನಕ್ಕೆ ಬಂದ ಸಂದೇಶ ಹೇಗಿತ್ತು ಎಂದರೆ ವಿಧಾನಸೌಧದಲ್ಲಿ ಕಾರ್ಯಕ್ರಮ ಮಾಡಲಾಗಿದೆ. ನೀವು ಅಲ್ಲಿಯೇ ಬನ್ನಿ ಎಂದು ಆಮಂತ್ರಿಸಲಾಗಿದೆ ಎಂದು ರಾಜಭನವ ಹೇಳಿದೆ.

ರಾಜಭವನದ ಮಾಹಿತಿಯ ಪ್ರಕಾರ ಮುಖ್ಯಮಂತ್ರಿಯವರೇ ರಾಜ್ಯಪಾಲರನ್ನು ಸ್ವತಃ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದರು ಎನ್ನಲಾಗಿದೆ. ಅಭಿನಂದನಾ ಕಾರ್ಯಕ್ರಮ ರಾಜ್ಯ ಸರಕಾರದ್ದಲ್ಲ. ಇನ್ನು ರಾಜ್ಯಪಾಲರನ್ನು ಆಮಂತ್ರಿಸಿದ್ದು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಶನ್ ಎಂದು ಸರಕಾರ ಹೇಳಿದೆ. ಆದರೆ, ಈ ಕಾರ್ಯಕ್ರಮವನ್ನು ಸರಕಾರವೇ ಮಾಡಿರುವುದು ಎಂದು ರಾಜ್ಯ ಕ್ರಿಕೆಟ್ ಸಂಸ್ಥೆ ನ್ಯಾಯಾಲಯಕ್ಕೂ ತಿಳಿಸಿದೆ.

ನನಗೆ ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಆಹ್ವಾನಿಸಿದ್ದರು. ಅಲ್ಲದೆ, ಪೊಲೀಸರು ಕಾರ್ಯಕ್ರಮ ನಡೆಸಲು ಒಪ್ಪಿದ್ದಾರೆ ಎಂದು ನನಗೆ ಹೇಳಲಾಗಿತ್ತು ಎಂದು ಸಿಎಂ ಹೇಳಿದ್ದರಲ್ಲದೆ, ಅದರ ನಂತರ ಕೆಎಸ್ ಸಿಎ ಕೋಶಾಧಿಕಾರಿ ಹಾಗೂ ಕಾರ್ಯದರ್ಶಿ ನನ್ನನ್ನು ಆಹ್ವಾನಿಸಿದರು.

ಆ ಕಾರ್ಯಕ್ರಮ ನಾನು ಆಯೋಜಿಸಿದ್ದಲ್ಲ. ಅದು ಅಸೋಸಿಯೇಶನ್ ಕಾರ್ಯಕ್ರಮ. ರಾಜ್ಯಪಾಲರನ್ನು ಕೂಡ ಅವರೇ ಕರೆದಿದ್ದರು. ಅದಕ್ಕಾಗಿ ನಾನು ಭಾಗವಹಿಸಿದೆ. ಅದು ಬಿಟ್ಟು ಅದರಲ್ಲಿ ಬೇರೆ ಏನೂ ನನ್ನ ಪಾತ್ರವಿಲ್ಲ ಎಂದು ಭಾನುವಾರ ಹೇಳಿದ್ದರು.

ಇಂದು ಬೆಂಗಳೂರು ನಗರ ವಿವಿ ನಾಲ್ಕನೇ ಘಟಿಕೋತ್ಸವ

ಬೆಂಗಳೂರು: ಬೆಂಗಳೂರು ನಗರ ವಿವಿ ನಾಲ್ಕನೇ ವಾರ್ಷದ ಘಟಿಕೋತ್ಸವ ಇಂದು ಬೆಳಗ್ಗೆ 11 ಗಂಟೆಗೆ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಬೆಂಗಳೂರು ನಗರ ವಿವಿಯ ಕುಲಪತಿ ಪ್ರೊ. ಕೆ.ಆರ್. ಜಲಜಾ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯಪಾಲ ಥಾವರ ಚಂದ್ ಗೆಹ್ಲೋಥ್ ಘಟಿಕೋತ್ಸವದ ಅಧ್ಯಕ್ಷತೆ ವಹಿಸಲಿದ್ದಾರೆ. ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್, ಪಾಟ್ನಾ, ಬಿಹಾರ ಹೈಕೋರ್ಟ್ ನ್ಯಾಯಮೂರ್ತಿ ಪಿ.ಬಿ. ಜಂತ್ರಿ ಘಟಿಕೋತ್ಸವದ ಭಾಷಣ ಮಾಡಲಿದ್ದಾರೆ. ರಾಜ್ಯ ಸರಕಾರ ಜಾರಿಯಲ್ಲಿ ತಂದಿರುವ ಯುಯುಸಿಎಂಎಸ್ ತಂತ್ರಾಂಶದ ಪ್ರಕಾರ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ ಹಾಗೂ ಪರೀಕ್ಷೆ ಚಟುವಟಿಕೆಗಳನ್ನು ಸಂಪೂರ್ಣವಾಗಿ ನಿರ್ವಹಿಸಿ ವಿದ್ಯಾರ್ಥಿಗಳಿಗೆ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಗುತ್ತಿದೆ ಎಂದರು ಹೇಳಿದರು.

ಗಣಿತ ಶಾಸ್ತ್ರ-6, ರಸಾಯನಶಾಸ್ತ್ರ-1 ಮತ್ತು ಶಿಕ್ಷಣ-2 ವಿಭಾಗದಲ್ಲಿ ಪಿಎಚ್.ಡಿ ಪದವೀಧರರು ಬೆಂಗಳೂರು ನಗರ ವಿವಿಯ ನಾಲ್ಕನೇ ಘಟಿಕೋತ್ಸವದಲ್ಲಿ ಪದವಿ ಪಡೆಯಲಿದ್ದಾರೆ. ಘಟಿಕೋತ್ಸವದಲ್ಲಿ ಒಟ್ಟು 64 ವಿದ್ಯಾರ್ಥಿಗಳು ಚಿನ್ನದ ಪದಕ ಮತ್ತು ನಗದು ಬಹುಮಾನವನ್ನು ಸ್ವೀಕರಿಸಲಿದ್ದಾರೆ. ಅವರಲ್ಲಿ 14 ವಿದ್ಯಾರ್ಥಿಗಳು ಮತ್ತು 50 ವಿದ್ಯಾರ್ಥಿನಿಯರಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಬೆಂಗಳೂರು ನಗರ ವಿವಿಯ ಕುಲಪತಿ ಪ್ರೊ. ಕೆ.ಆರ್. ಜಲಜಾ ಮಾತನಾಡಿದರು.

ಸ್ನಾತಕ ಪದವಿಯಲ್ಲಿ ಒಟ್ಟು 26 ರ್‍ಯಾಂಕ್ ವಿಜೇತರಾಗಿದ್ದಾರೆ, ಅದರಲ್ಲಿ- 20 ವಿದ್ಯಾರ್ಥಿನಿಯರು ಮತ್ತುವಿದ್ಯಾರ್ಥಿಗಳು- 6 ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಒಟ್ಟು 38 ರ್‍ಯಾಂಕ್ ವಿಜೇತರಿದ್ದು, ವಿದ್ಯಾರ್ಥಿನಿಯರು- 30 ಮತ್ತು ವಿದ್ಯಾರ್ಥಿಗಳು- 8 ಅಲ್ಲದೇ, 9 ಪಿಎಚ್‌ಡಿ ವಿದ್ಯಾರ್ಥಿಗಳು ಪದವಿಯನ್ನು ಸ್ವೀಕರಿಸಲಿದ್ದಾರೆ ಎಂದು ಮಾಹಿತಿ ನೀಡಿದರು. ಬೆಂಗಳೂರು ನಗರ ವಿವಿ ಕುಲಸಚಿವ (ಮೌಲ್ಯಮಾಪನ) ಪ್ರೊ.ಬಿ. ರಮೇಶ್ ಮತ್ತು ಸಿಂಡಿಕೇಟ್ ಸದಸ್ಯರು ಇದ್ದರು.

ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚುವಂತೆ ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಪಾಲಿಕೆ ಕೇಂದ್ರ ಕಚೇರಿಯಲ್ಲಿ ಸಭೆ ನಡೆಸಿ ಮಾತನಾಡಿ, ನಗರದಲ್ಲಿ ಪ್ರಮುಖ ರಸ್ತೆಗಳಾದ ಆರ್ಟಿರಿಯಲ್ ರಸ್ತೆ, ಸಬ್ ಆರ್ಟಿರಿಯಲ್ ರಸ್ತೆಗಳಿಗೆ ಮೊದಲ ಆದ್ಯತೆ ನೀಡಿ ಮಳೆ ಪ್ರಾರಂಭವಾಗುವುದಕ್ಕೂ ಮುನ್ನ ಎಲ್ಲಾ ರಸ್ತೆ ಗುಂಡಿಗಳನ್ನು ಮುಚ್ಚಲು ಕಾರ್ಯಪ್ರವೃತ್ತರಾಗಬೇಕು. ಮಳೆಯಾಗುವ ಸಂದರ್ಭದಲ್ಲಿ ಕೋಲ್ಡ್ ಮಿಕ್ಸ್ ಬಳಸಿಕೊಂಡು ರಸ್ತೆಗುಂಡಿಗಳನ್ನು ಮುಚ್ಚಬೇಕು. ಡಾಂಬರೀಕರಣ ಕೈಗೆತ್ತಿಕೊಂಡಿರುವ ರಸ್ತೆಗಳಿಗೆ ತ್ವರಿತಗತಿಯಲ್ಲಿ ಪೂರ್ಣಗೊಳಿಸಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸಾಯಿ ಲೇಔಟ್‌ನಲ್ಲಿ ಜಲಾವೃತವಾಗುವುದನ್ನು ತಪ್ಪಿಸುವ ಉದ್ದೇಶದಿಂದ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಿದ್ದು, ಈ ನಿಟ್ಟಿನಲ್ಲಿ ಬಿಡಿಎ ವತಿಯಿಂದ ಈಗಾಗಲೇ ಜಾಕ್ ವೆಲ್ ನಿರ್ಮಾಣ ಮಾಡಲಾಗಿದೆ. ಅದರ ಮೂಲಕ ನೀರನ್ನು ಹೊರ ಹಾಕುವ ವ್ಯವಸ್ಥೆ ಮಾಡಲಾಗಿದೆ. ಅದರ ಜತೆಗೆ ಪಾಲಿಕೆ ವತಿಯಿಂದ ಪಂಪ್ ಸೆಟ್‌ಗಳನ್ನು ಸ್ಥಳದಲ್ಲಿ ಶಾಶ್ವತವಾಗಿಟ್ಟು, ಜಲಾವೃತವಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು. ಇನ್ನು ರೈಲ್ವೆ ವೆಂಟ್ ಕಾಮಗಾರಿಗೆ ವೇಗ ನೀಡಿ ತ್ವರಿತವಾಗಿ ಪೂರ್ಣಗೊಳಿಸುವ ವ್ಯವಸ್ಥೆ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಅವಿನಾಶ್ ಮೆನನ್ ರಾಜೇಂದ್ರನ್, ಪ್ರೀತಿ ಗೆಹ್ಲೋಟ್, ನವೀನ್ ಕುಮಾರ್ ರಾಜು, ವಲಯ ಆಯುಕ್ತರಾದ ಸತೀಶ್, ರಮ್ಯಾ, ಕರೀಗೌಡ, ರಮೇಶ್, ಸ್ನೇಹಲ್, ದಿಗ್ವಿಜಯ್ ಬೋಡ್ಕೆ, ಬಿ-ಸ್ಮೈಲ್ ತಾಂತ್ರಿಕ ನಿರ್ದೇಶಕರಾದ ಪ್ರಹ್ಲಾದ್, ಮುಖ್ಯ ಅಭಿಯಂತರರು, ಅಧಿಕಾರಿಗಳು ಇದ್ದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಪಾಲಿಕೆ ಕೇಂದ್ರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿದರು.

ಪ್ರವಾಹ ಪೀಡಿತ ಜಾಗಗಳ ಮೇಲೆ ನಿಗಾವಹಿಸಿ

ನಗರಲ್ಲಿ ಹೆಚ್ಚು ಮಳೆಯಾಗುವ ಮುನ್ಸೂಚನೆಯಿದ್ದು, ಪ್ರವಾಹಪೀಡಿತ ಪ್ರದೇಶಗಳ ಮೇಲೆ ಹೆಚ್ಚು ನಿಗಾವಹಿಸಬೇಕು. ಆ ಸ್ಥಳದಲ್ಲಿ ಏನಾದರೂ ಸಮಸ್ಯೆ ಇದ್ದರೆ ಅದಕ್ಕೆ ಶಾಶ್ವತ ಪರಿಹಾರ ನೀಡಿ ಯಾವುದೇ ರೀತಿಯ ಸಮಸ್ಯೆಗಳಾಗದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ನಗರದಲ್ಲಿ ಸಾರ್ವಜನಿಕ ಸ್ಥಳಗಳನ್ನು ಗುರುತಿಸಿ ಸಣ್ಣ ಅರಣ್ಯಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಬೇಕು. ಈ ಸಂಬಂಧ ಸ್ಥಳಗಳನ್ನು ಗುರುತಿಸಿದ ಬಳಿಕ ಸಣ್ಣ ಅರಣ್ಯ ನಿರ್ಮಾಣ ಮಾಡಲು ಸೂಕ್ತ ಕ್ರಮಗಳನ್ನು ವಹಿಸಲು ಸೂಚಿಸಿದರು.

ಯಾವುದೇ ರೀತಿಯ ಶೂಟಿಂಗ್ ಮಾಡಲು ಅವಕಾಶವಿಲ್ಲ। ವಾಕಥಾನ್, ಮ್ಯಾರಥಾನ್ ಹಾಗೂ ಜಾಗೃತಿ ಜಾಥಾಕ್ಕೆ ಮಾತ್ರ ಅವಕಾಶ

ಕಬ್ಬನ್ ಪಾರ್ಕ್‌ನಲ್ಲಿ ಇನ್ಮುಂದೆ ವೆಡ್ಡಿಂಗ್ ಶೂಟ್‌ಗೆ ನಿರ್ಬಂಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಧಾನಿ ಬೆಂಗಳೂರಿನ ಹೃದಯಭಾಗದಲ್ಲಿರುವ ಕಬ್ಬನ್ ಪಾರ್ಕ್‌ನಲ್ಲಿರುವ ಸಸ್ಯ ಹಾಗೂ ಪ್ರಾಣಿ ಸಂಪತ್ತನ್ನು ರಕ್ಷಿಸುವ ಉದ್ದೇಶದಿಂದ ತೋಟಗಾರಿಕಾ ಇಲಾಖೆ ಇನ್ನಷ್ಟು ಕಠಿಣ ಕ್ರಮಗಳನ್ನು ಕೈಗೊಂಡಿದ್ದು, ಇದರ ಭಾಗವಾಗಿ ಇನ್ನು ಮುಂದೆ ಕಬ್ಬನ್ ಪಾರ್ಕ್‌ನಲ್ಲಿ ಪ್ರೀವೆಡ್ಡಿಂಗ್ ಶೂಟ್, ಮಾಡೆಲಿಂಗ್‌ಗೆ ಸಂಪೂರ್ಣ ನಿರ್ಬಂಧ ವಿಧಿಸಲಾಗಿದೆ.

ಈ ಹಿಂದೆ ರಜಾದಿನಗಳಂದು ವಾಹನಗಳ ಸಂಚಾರ ನಿರ್ಬಂಧ ಸೇರಿದಂತೆ ಹಲವು ನಿರ್ಬಂಧವನ್ನು ವಿಧಿಸಿದ್ದ ಇಲಾಖೆ ಇದೀಗ ಸಾರ್ವಜನಿಕ ಚಟುವಟಿಕೆಗಳಿಗೂ ಬ್ರೇಕ್ ಹಾಕಲು ಮುಂದಾಗಿದೆ. ಇದರ ಭಾಗವಾಗಿ ಕಬ್ಬನ್ ಪಾರ್ಕ್‌ನಲ್ಲಿ ಇನ್ನು ಮುಂದೆ ಜಾಗೃತಿ ಜಾಥಾ, ವಾಕನಾಥ್, ಮ್ಯಾರಥಾನ್‌ನಂತಹ ಪರಿಸರ ಸ್ನೇಹಿ ಕಾರ್ಯಕ್ರಮಗಳಿಗೆ ಮಾತ್ರ ಅವಕಾಶ ನೀಡಲು ತೀರ್ಮಾನಿಸಲಾಗಿದೆ. ಒಂದು ವೇಳೆ ಈ ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕರು ಕಾರ್ಯಕ್ರಮ ನಡೆಸಿದರೆ 500 ದಂಡ ಹಾಗೂ ಕಾನೂನು ಕ್ರಮವಹಿಸಲು ತೀರ್ಮಾನಿಸಲಾಗಿದೆ.

ಈ ಬಗ್ಗೆ ತೋಟಗಾರಿಕಾ ಇಲಾಖೆಯ ಅಧೀನ ಕಾರ್ಯದರ್ಶಿ ಸ್ಪಷ್ಟ ಆದೇಶ ಹೊರಡಿಸಿದ್ದು, ಸಂರಕ್ಷಣಾ ಹಿತದೃಷ್ಟಿಯಿಂದ ರಚಿಸಲಾದ ನಿಯಮಗಳನ್ನು ಉಲ್ಲಂಘಿಸಿದವರಿಗೆ ಗರಿಷ್ಠ 500ರು.ಗಳವರೆಗೆ ದಂಡ ಹಾಗೂ ಪದೇಪದೆ ಉಲ್ಲಂಘಿಸಿದಲ್ಲಿ ಕಾನೂನು ರೀತಿಯ ಕ್ರಮ ಕೈಗೊಳ್ಳಲು ತೋಟಗಾರಿಕೆ ನಿರ್ದೇಶಕರು, ತೋಟಗಾರಿಕೆ ಉಪ ನಿರ್ದೇಶಕರಿಗೆ ಅಥವಾ ಸಂಬಂಧಿಸಿದ ಸೂಕ್ತ ಅಧಿಕಾರಿಗೆ ಅವಕಾಶ ಕಲ್ಪಿಸಿಕೊಡುವಂತೆ ಆದೇಶಿಸಿದೆ.

ಉಲ್ಲಂಘಿಸಿದ ದಂಡದ ಮೊತ್ತ ಹಾಗೂ ಷರತ್ತಿಗೊಳಪಟ್ಟು ಅನುಮತಿಸಲು ವಿಧಿಸಿರುವ ಮೊತ್ತವನ್ನು ಸುವರ್ಣ ಕರ್ನಾಟಕ ಉದ್ಯಾನವನ ಪ್ರತಿಷ್ಠಾನದ ಖಾತೆಗೆ ಜಮೆ ಮಾಡುವುದು. ಅನುಮತಿಸಬಹುದಾದ ಚಟುವಟಿಕೆಗಳು, ನಿಷೇಧಿಸಿದ ಚಟುವಟಿಕೆಗಳು ಹಾಗೂ ಪಾಲಿಸಬೇಕಾದ ಇತರೆ ಅವಶ್ಯಕ ನಿಯಮಗಳನ್ನು ವ್ಯಾಪಕ ಪ್ರಚಾರಪಡಿಸಲು ತೋಟಗಾರಿಕೆ ನಿರ್ದೇಶಕರು, ಬೆಂಗಳೂರು ಹಾಗೂ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮವಹಿಸುವಂತೆ ಆದೇಶಿಸಿದೆ.

ಏನೆಲ್ಲ ನಿಷೇಧ

ಪ್ರಮುಖವಾಗಿ ಕಬ್ಬನ್ ಪಾರ್ಕ್‌ನಲ್ಲಿ ಅನೇಕರು ರೀಲ್ಸ್, ಫೋಟೋಶೂಟ್, ಫಿಲ್ಡ್ ಶೂಟಿಂಗ್ ಗೆಂದುಬರುತ್ತಿದ್ದರು. ಸಾರ್ವಜನಿಕರು, ಪ್ರವಾಸಿಗರು ಕ್ಯಾಮೆರಾಗಳನ್ನು ಬಳಸಬಹುದಾದರೂ, ಫೋಟೋ ಶೂಟ್, ಪ್ರೀ ಮತ್ತು ಪೋಸ್ಟ್ ವೆಡ್ಡಿಂಗ್ ಶೂಟ್, ವಿಡಿಯೊ, ಕಿರುಚಿತ್ರ, ಚಲನಚಿತ್ರ ಚಿತ್ರೀಕರಣವನ್ನು ನಿಷೇಧಿಸಲಾಗಿದೆ. ಹಾಗೂ ವಾಯು ವಿಹಾರದ ಸಮಯವನ್ನು ಬೆಳಗ್ಗೆ 5.30ರಿಂದ 9 ಗಂಟೆಯವರೆಗೆ ಮತ್ತು ಸಂಜೆ 4.30 ರಿಂದ 6.30 ಗಂಟೆಯವರೆಗೆ ನಿಗದಿಪಡಿಸಲಾಗಿದೆ.

ಇನ್ನುಳಿದಂತೆ ಜಾಗೃತಿ ಜಾಥಾ, ಸಾಂಸ್ಕೃತಿಕ ಕಾರ್ಯಕ್ರಮ, ಮ್ಯಾರಾಥಾನ್, ಯೋಗ, ಧ್ಯಾನ ತರಗತಿಗಳನ್ನು ನಡೆಸಲು ಅವಕಾಶ ನೀಡಿದ್ದರೂ, ಈ ಎಲ್ಲವಕ್ಕೂ ಪೂರ್ವಾನಿಮತಿಯನ್ನು ಕಡ್ಡಾಯಗೊಳಿಸಲಾಗಿದೆ. ಕಬ್ಬನ್ ಉದ್ಯಾನವನದ ಆವರಣದಲ್ಲಿ ನಡೆಯುವ ಮ್ಯಾರಾಥಾನ್, ವಾಕಾಥಾನ್‌ಗಳಿಗೆ 30,000 ರು.ಗಳ ಶುಲ್ಕ ನಿಗದಿಪಡಿಸಿದೆ.

ಯಾವೆಲ್ಲ ಚಟುವಟಿಕೆಗೆ ಅನುಮತಿ

- ವಾಕಾಥಾನ್, ಮ್ಯಾರಥಾನ್ ಹಾಗೂ ಜಾಗೃತಿ ಕಾರ್ಯಕ್ರಮ
- ಬೆ.5.30ರಿಂದ 9ರವರೆಗೆ ಹಾಗೂ ಸಂಜೆ 4.30ರಿಂದ 6.30ರವರೆಗೆ ವಾಯು ವಿಹಾರಕ್ಕೆ ಅವಕಾಶ
- ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶ
- ಸಸ್ಯ, ವನ್ಯಜೀವಿ, ಪ್ರಾಕೃತಿಕ ಹವ್ಯಾಸಿ ಛಾಯಾಗ್ರಹಣಕ್ಕೆ ಅನುಮತಿ
- 20 ಜನ ಮೀರದಂತೆ ಯೋಗ, ಧ್ಯಾನದ ರೀತಿಯ ಕಾರ್ಯಕ್ರಮಕ್ಕೆ ಒಪ್ಪಿಗೆ

ಯಾವೆಲ್ಲ ಚಟುವಟಿಕೆಗೆ ನಿರ್ಬಂಧ

- ಕಿರು ಚಿತ್ರ, ರೀಲ್ಸ್, ವಿಡಿಯೊ ಚಲನಚಿತ್ರ ಚಿತ್ರೀಕರಣ ನಿಷೇಧಿಸಲಾಗಿದೆ.
- ಪ್ರೀ ವೆಡ್ಡಿಂಗ್ ಶೂಟ್, ಬೇಬಿ ಶೈಟ್, ಮಾಡೆಲಿಂಗ್‌ಗೆ ನಿರ್ಬಂಧ
- ಉದ್ಯಾನವನದ ಆವರಣದಲ್ಲಿ ಧೂಮಪಾನ, ಮದ್ಯಪಾನ ಮತ್ತು ಮಾದಕ ವಸ್ತುಗಳ ಬಳಕೆ ಸಂಪೂರ್ಣವಾಗಿ ನಿಷೇಧಿಸಿದೆ.
- ಪ್ಲಾಸ್ಟಿಕ್ ವಸ್ತುಗಳು, ಬಾಟಲಿ, ಪ್ಲಾಸ್ಟಿಕ್ ಚೀಲ. ಪೂಜಾ ಸಾಮಗ್ರಿ, ಹಾಗೂ ಇತರೆ ಯಾವುದೇ ತ್ಯಾಜ್ಯಗಳಿಗೆ ಅವಕಾಶವಿಲ್ಲ.
- ಪಾರ್ಸೆಲ್ ಊಟ / ತಿಂಡಿ ಪದಾರ್ಥಗಳನ್ನು ಉದ್ಯಾನವನದ ಒಳಗಡೆ ಸೇವಿಸುವುದನ್ನು ನಿಷೇಧಿಸಿದೆ.

ಸಮಾಚಾರ ಸಣ್ಣದಲ್ಲ

10 ಗ್ರಾಂ ಚಿನ್ನದ ದರ 110 ರುಪಾಯಿ ಇಳಿಕೆ

ದೆಹಲಿ: ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ. 10 ಗ್ರಾಂ ಚಿನ್ನದ ದರವು (ಶೇ.99.9 ಪರಿಶುದ್ಧತೆ) ₹110 ಕಡಿಮೆಯಾಗಿ, ₹97,670ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ಬೆಲೆಯು (ಶೇ.99.5 ಪರಿಶುದ್ಧತೆ) ₹100 ಇಳಿಕೆಯಾಗಿ, ₹97,250 ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹1 ಸಾವಿರ ಕಡಿಮೆಯಾಗಿದ್ದು, ₹1,07,100 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ದೇಶದಿಂದ 5.16 ಲಕ್ಷ ಟನ್ ಸಕ್ಕರೆ ರಫ್ತು

ದೆಹಲಿ: 2024-25ರ ಸಕ್ಕರೆ ಮಾರುಕಟ್ಟೆ ವರ್ಷದ (ಅಕ್ಟೋಬರ್-ಸೆಪ್ಟೆಂಬರ್) ಜೂನ್ 6ರವರೆಗೆ ದೇಶದಿಂದ 5.16 ಲಕ್ಷ ಟನ್ ಸಕ್ಕರೆ ರಫ್ತಾಗಿದೆ ಎಂದು ಅಖಿಲ ಭಾರತ ಸಕ್ಕರೆ ವ್ಯಾಪಾರಿಗಳ ಒಕ್ಕೂಟ ಮಂಗಳವಾರ ಹೇಳಿದೆ. 4.09 ಲಕ್ಷ ಟನ್ ಬಿಳಿ ಸಕ್ಕರೆ, 81,845 ಟನ್ ಸಂಸ್ಕರಿಸಿದ ಸಕ್ಕರೆ ಮತ್ತು 25,382 ಟನ್ ಕಚ್ಚಾ ಸಕ್ಕರೆ ರಫ್ತಾಗಿದೆ. ಸೊಮಾಲಿಯಾಗೆ ಗರಿಷ್ಠ 1.18 ಲಕ್ಷ ಟನ್ ರಫ್ತಾಗಿದೆ. ಶ್ರೀಲಂಕಾ 76,401 ಟನ್, ಅಫ್ಘಾನಿಸ್ತಾನ 72,833 ಟನ್ ಮತ್ತು ದಿಬೌತಿಗೆ 69,609 ಟನ್ ರಫ್ತು ಮಾಡಲಾಗಿದೆ ಎಂದು ತಿಳಿಸಿದೆ. ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ 10 ಲಕ್ಷ ಟನ್ ಸಕ್ಕರೆ ರಫ್ತಿಗೆ ಕೇಂದ್ರ ಸರಕಾರ ಅನುಮತಿ ನೀಡಿದೆ. ಆದರೆ, 8 ಲಕ್ಷ ಟನ್ ರಫ್ತಾಗಬಹುದು ಎಂದು ಇತ್ತೀಚೆಗೆ ಎಐಎಸ್‌ಟಿಎ ಹೇಳಿತ್ತು.

ಗ್ರೆಟಾ ಥುನ್‌ಬರ್ಗ್ ಗಡಿಪಾರು

ಜರುಸಲೇಂ: ಹೋರಾಟಗಾರ್ತಿ ಗ್ರೆಟಾ ಥುನ್‌ಬರ್ಗ್ ಅವರನ್ನು ಇಸ್ರೇಲ್‌ನಿಂದ ಮಂಗಳವಾರ ಗಡಿಪಾರು ಮಾಡಲಾಗಿದೆ. ಗಾಜಾಪಟ್ಟಿಗೆ ತೆರಳುತ್ತಿದ್ದ ಗ್ರೆಟಾ ಅವರನ್ನು ಬಂಧಿಸಿ, ಅವರಿದ್ದ ಹಡಗನ್ನು ವಶಕ್ಕೆ ಪಡೆದ ಮರುದಿನವೇ ಈ ಕ್ರಮ ಜರುಗಿಸಲಾಗಿದೆ. ಗ್ರೆಟಾ ಅವರು ವಿಮಾನದ ಮೂಲಕ ಫ್ರಾನ್ಸ್‌ಗೆ ಪ್ರಯಾಣಿಸಿದರು. ನಂತರ ಅಲ್ಲಿಂದ ಅವರು ತಮ್ಮ ತವರು ಸ್ವೀಡನ್‌ಗೆ ತೆರಳಲಿದ್ದಾರೆ ಎಂದು ಇಸ್ರೇಲ್ ವಿದೇಶಾಂಗ ಸಚಿವಾಲಯ ಎಕ್ಸ್‌ನಲ್ಲಿ ತಿಳಿಸಿದೆ. ಗ್ರೆಟಾ ಅವರು ವಿಮಾನದ ಸೀಟಿನಲ್ಲಿ ಕುಳಿತಿರುವ ಫೋಟೊ ಕೂಡ ಹಂಚಿಕೊಂಡಿದೆ. ಇಸ್ರೇಲ್ ನಡೆಸುತ್ತಿರುವ ಸೇನಾ ಕಾರ್ಯಾಚರಣೆ ವಿರುದ್ಧ ಪ್ರತಿಭಟಿಸಲು ಬೆಂಬಲಿಗರೊಂದಿಗೆ ಗ್ರೆಟಾ ಅವರು ಗಾಜಾಪಟ್ಟಿಗೆ ತೆರಳುತ್ತಿದ್ದರು. ಈ ಸಂದರ್ಭದಲ್ಲಿ ಇಸ್ರೇಲ್ ಪಡೆಗಳು ಅವರನ್ನು ಬಂಧಿಸಿ, ಹಡಗನ್ನು ವಶಕ್ಕೆ ಪಡೆದಿದ್ದವು.

ಸೇನಾ ನೆಲೆ ಮೇಲೆ ಜೂನ್ 1ರಂದು ನಡೆಸಿದ್ದ ದಾಳಿಗೆ ಪ್ರತಿಯಾಗಿ

ರಷ್ಯಾದಿಂದ ಡ್ರೋನ್ ದಾಳಿ: ಮೂರು ಸಾವು

ಕೀವ್: ರಾಜಧಾನಿ ಕೀವ್ ಸೇರಿ ಉಕ್ರೇನ್‌ನ ಎರಡು ನಗರಗಳ ಮೇಲೆ ರಷ್ಯಾ ಸೇನೆ ಮಂಗಳವಾರ ಸತತ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದ್ದು, ಮೂವರು ಮೃತಪಟ್ಟಿದ್ದಾರೆ.

ಸುಮಾರು 315 ಡ್ರೋನ್‌ಗಳು ಮತ್ತು ಏಳು ಕ್ಷಿಪಣಿಗಳನ್ನು ಈ ಎರಡು ನಗರಗಳನ್ನು ಗುರಿಯಾಗಿಸಿ ರಷ್ಯಾದ ಸೇನೆ ಪ್ರಯೋಗಿಸಿದೆ. ದಾಳಿಯಲ್ಲಿ ಇತರ 13 ಮಂದಿ ಗಾಯಗೊಂಡಿದ್ದಾರೆ. ಯುದ್ಧದ ಈ ಮೂರು ವರ್ಷಗಳ ಅವಧಿಯಲ್ಲಿಯೇ ಇದು ಅತಿ ದೊಡ್ಡ ದಾಳಿಯಾಗಿದೆ ಎಂದು ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಹೇಳಿಕೆ ನೀಡಿದ್ದಾರೆ.

'ಒಡೆಸಾ ನಗರದಲ್ಲಿ ಹೆರಿಗೆ ಆಸ್ಪತ್ರೆ, ವಸತಿ ಸಂಕೀರ್ಣವನ್ನು ಗುರಿಯಾಗಿಸಿ ದಾಳಿ ನಡೆದಿದೆ' ಎಂದು ವಲಯ ಮುಖ್ಯಸ್ಥ ಒಲೆಹ್ ಕಿಪೆರ್ ಹೇಳಿದ್ದಾರೆ.

ಕ್ಷಿಪಣಿ ದಾಳಿಯಿಂದಾಗಿ ಉಕ್ರೇನ್ ರಾಜಧಾನಿ ಕೀವ್‌ನಲ್ಲಿ ವಾತಾವರಣವನ್ನು ದಟ್ಟ ಹೊಗೆ ಆವರಿಸಿರುವುದು.

ಉಳಿದಂತೆ ರಾಜಧಾನಿ ಕೀವ್‌ನಲ್ಲಿ ಡ್ರೋನ್ ದಾಳಿಯಿಂದ ನಾಲ್ವರು ಗಾಯಗೊಂಡಿದ್ದು, ವಸತಿ ಸಂಕೀರ್ಣಗಳಿಗೆ ಹಾನಿಯಾಗಿದೆ ಎಂದು ಮೇಯರ್ ವಿಟಲಿ ಲಿಟ್‌ಸ್ಚ್ಕೊ ತಿಳಿಸಿದ್ದಾರೆ. ರಷ್ಯಾದ ಸೇನಾ ನೆಲೆ ಮೇಲೆ ಜೂನ್ 1ರಂದು ಉಕ್ರೇನ್ ನಡೆಸಿದ್ದ ದಾಳಿಗೆ ಪ್ರತಿಯಾಗಿ ಈಗ ದಾಳಿ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಕ್ರೇನ್ ಸೇನೆಯು ಈ ಡ್ರೋನ್‌ಗಳನ್ನು ತಡೆದುರುಳಿಸುವ ಯತ್ನ ನಡೆಸಿವೆ. ದಾಳಿ ನಂತರ ಆಗಸದಲ್ಲಿ ದಟ್ಟ ಹೊಗೆ ಆವರಿಸಿತ್ತು. ದಾಳಿ ಸಂದರ್ಭದಲ್ಲಿ ಹೆಚ್ಚಿನ ನಾಗರಿಕರು ಮೆಟ್ರೊ ನಿಲ್ದಾಣಗಳಲ್ಲಿ ಆಶ್ರಯ ಪಡೆದಿದ್ದರು ಎಂದು ವರದಿ ಉಲ್ಲೇಖಿಸಿದೆ.



> ಶಾಂತಿ ಸ್ಥಾಪನೆ ಕುರಿತು ಅಮೆರಿಕ ಮತ್ತು ಇತರ ರಾಷ್ಟ್ರಗಳ ಧ್ವನಿಯನ್ನೂ ಅಡಗಿಸುವಂತೆ ರಷ್ಯಾ ಡ್ರೋನ್ ದಾಳಿ ನಡೆಸಿದೆ. ಅಮೆರಿಕ ಮತ್ತು ಯೂರೋಪ್‌ನಿಂದ ಈ ದಾಳಿಗೆ ಪ್ರತಿಯಾಗಿ ಸ್ಪಷ್ಟ ಪ್ರತಿಕ್ರಿಯೆ ಬೇಕಾಗಿದೆ.
> – ವೊಲೊಡಿಮಿರ್ ಝೆಲೆನ್ಸ್ಕಿ ಉಕ್ರೇನ್ ಅಧ್ಯಕ್ಷ

ಹಿಂಸಾತ್ಮಕ ರೂಪ ಪಡೆದ ವಲಸೆ ಜಾರಿ ನೀತಿ ವಿರುದ್ಧದ ಪ್ರತಿಭಟನೆ

ಲಾಸ್ ಏಂಜಲೀಸ್ ಉದ್ವಿಗ್ನ

ಲಾಸ್ ಏಂಜಲೀಸ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಲಸಿಗರ ವಿರುದ್ಧದ ಕಠಿಣ ಕ್ರಮ ಮತ್ತು ನ್ಯಾಷನಲ್ ಗಾರ್ಡ್ ನಿಯೋಜನೆಯಿಂದ ಲಾಸ್ ಏಂಜಲೀಸ್‌ನಲ್ಲಿ ಉದ್ವಿಗ್ನತೆ ತಾರಕಕ್ಕೇರಿದೆ. ಭಾನುವಾರ ಸಾವಿರಾರು ಪ್ರತಿಭಟನಾಕಾರರು ಬೀದಿಗಿಳಿದು, ಪ್ರಮುಖ ಹೆದ್ದಾರಿಯ 101 ರಸ್ತೆಯನ್ನು ಬಂದ್ ಮಾಡಿ ವಾಹನಗಳಿಗೆ ಬೆಂಕಿ ಹಚ್ಚಿದರು. ಸ್ಥಳೀಯ ಪೊಲೀಸರು ಟಿಯರ್ ಗ್ಯಾಸ್, ರಬ್ಬರ್ ಗುಂಡುಗಳು, ಮತ್ತು ಫ್ಲಾಶ್ ಬ್ಯಾಂಗ್‌ಗಳನ್ನು ಬಳಸಿ ಜನರನ್ನು ನಿಯಂತ್ರಿಸಿದರು.

ಟ್ರಂಪ್ ಅವರ ವಲಸಿಗರ ವಿರುದ್ಧದ ಕಾರ್ಯಾಚರಣೆಯನ್ನು ವಿರೋಧಿಸಿ ಮೂರನೇ ದಿನ ಪ್ರತಿಭಟನೆ ನಡೆದಿತ್ತು. ಶುಕ್ರವಾರದಿಂದ ಆರಂಭವಾದ ಈ ಆಂದೋಲನವು ಶನಿವಾರ ಪ್ಯಾರಾಮೌಂಟ್ ಮತ್ತು ಕಾಂಪ್ಟನ್‌ಗೆ ವ್ಯಾಪಿಸಿತ್ತು. ಶನಿವಾರ ವಲಸೆ ಗಸ್ತು ವಾಹನಗಳನ್ನು ತಡೆಯಲು ಕೆಲವರು ಕಲ್ಲು ಮತ್ತು ಸಿಮೆಂಟ್ ತುಂಡುಗಳನ್ನು ಎಸೆದಿದ್ದರು. ಇದಕ್ಕೆ ಪ್ರತಿಯಾಗಿ ಫೆಡರಲ್ ಏಜೆಂಟ್‌ಗಳು ಟಿಯರ್ ಗ್ಯಾಸ್ ಬಳಸಿದ್ದರು. ಕಳೆದ ವಾರದಲ್ಲಿ 100ಕ್ಕೂ ಹೆಚ್ಚು ವಲಸಿಗರನ್ನು ಬಂಧಿಸಲಾಗಿತ್ತು.

ಟ್ರಂಪ್ ವಿರುದ್ಧ ಮೊಕ್ಕದ್ದಮೆ: ವಲಸೆ ಜಾರಿ ನೀತಿಗಳ ವಿರುದ್ಧ ಲಾಸ್ ಏಂಜಲೀಸ್‌ನಲ್ಲಿ ಪ್ರತಿಭಟನೆಗಳು ಹಿಂಸಾತ್ಮಕ ರೂಪಕ್ಕೆ ತಿರುಗಿರುವ ಹಿನ್ನೆಲೆಯಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆದೇಶದ ಮೇರೆಗೆ ಭದ್ರತೆಯನ್ನು ಹೆಚ್ಚಿಸಲಾಗಿದೆ. ಈ ನಿಟ್ಟಿನಲ್ಲಿ ಯುಎಸ್ ಮಿಲಿಟರಿ ಸೋಮವಾರ ಲಾಸ್ ಏಂಜಲೀಸ್‌ಗೆ ಸುಮಾರು 700 ಮೆರೀನ್‌ಗಳನ್ನು ತಾತ್ಕಾಲಿಕವಾಗಿ ನಿಯೋಜಿಸಿದೆ. ಲಾಸ್ ಏಂಜಲೀಸ್‌ನಲ್ಲಿ ಹಿಂಸಾತ್ಮಕ ಪ್ರತಿಭಟಗಳು ನಾಲ್ಕನೇ ದಿನಕ್ಕೆ ಕಾಲಿಟ್ಟಿದ್ದು ಈ ನಡುವೆ ಟ್ರಂಪ್ ಮಾಡಿರುವ ಫೆಡರಲ್ ನಿಯೋಜನೆ ಕಾನೂನುಬಾಹಿರವಾಗಿದೆ ಎಂದು ಕರೆದಿರುವ ಕ್ಯಾಲಿಫೋರ್ನಿಯ ಆಡಳಿತವು ಟ್ರಂಪ್ ವಿರುದ್ಧ ಮೊಕದ್ದಮೆ ಹೂಡಿದೆ.



> ಅವರು ಉಗಿದರೆ, ನಾವು ಹೊಡೆಯುತ್ತೇವೆ. ಅವರು ಹಿಂದೆಂದೂ ಕಾಣದಂತಹ ತಿರುಗೇಟು ನೀಡುತ್ತೇವೆ. ಅಗೌರವವನ್ನು ನಾವು ಸಹಿಸುವುದಿಲ್ಲ.
> -ಡೊನಾಲ್ಡ್ ಟ್ರಂಪ್ ಅಮೆರಿಕ ಅಧ್ಯಕ್ಷ

ನ್ಯಾ.ಶೇಖರ್ ಯಾದವ್ ವಿರುದ್ಧ ಮಹಾಭಿಯೋಗ

ಸಭಾಪತಿ ಧನಕರ್ ವಿರುದ್ಧ ಕಪಿಲ್ ಸಿಬಲ್ ಆರೋಪ

ದೆಹಲಿ: ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಶೇಖರ್ ಕುಮಾರ್ ಯಾದವ್ ವಿರುದ್ಧ ಮಹಾಭಿಯೋಗ ನಿರ್ಣಯ ಮಂಡಿಸಿದ ನೋಟಿಸ್ ಮೇಲೆ ಸಭಾಪತಿ ಜಗದೀಪ್ ಧನಕರ್ ಅವರು ಏಕೆ ಕ್ರಮಕ್ಕೆ ಗೊಂಡಿಲ್ಲ? ಸರಕಾರವೇ ನ್ಯಾಯ ಮೂರ್ತಿಯ ರಕ್ಷಣೆಗೆ ಮುಂದಾಗಿದೆ. ತಾರತಮ್ಯ ನೀತಿ ಅನುಸರಿಸುತ್ತಿದೆ ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಯಾದವ್ ವಿರುದ್ಧ ಮೇಲ್ಮನೆಯಲ್ಲಿ ಅರ್ಜಿಯೊಂದು ಬಾಕಿ ಇರುವುದರಿಂದ, ಅವರ ವಿರುದ್ಧದ ಆಂತರಿಕ ತನಿಖೆಯನ್ನು ಮುಂದುವರಿಸದಂತೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರಿಗೆ ರಾಜ್ಯಸಭೆಯ ಪ್ರಧಾನ ಕಾರ್ಯದರ್ಶಿಯು ಪತ್ರ ಬರೆದಿದ್ದಾರೆ. ಆದರೆ, ನ್ಯಾಯಮೂರ್ತಿ ಯಶವಂತ್ ವರ್ಮಾ ಪ್ರಕರಣದಲ್ಲಿ ಈ ರೀತಿ ನಡೆದುಕೊಂಡಿಲ್ಲ. ಇದು ಅತ್ಯಂತ ದುರದೃಷ್ಟಕರ. ಸಾಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿಯು ತನ್ನ ಕರ್ತವ್ಯ ಪೂರೈಸದಿದ್ದಾಗ ಪ್ರಶ್ನಿಸಬೇಕಾಗುತ್ತದೆ ಎಂದು ಸಿಬಲ್ ತಿಳಿಸಿದ್ದಾರೆ.



> ವಿಎಚ್‌ಪಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನ್ಯಾಯಮೂರ್ತಿ ಯಾದವ್ ದ್ವೇಷದ ಹೇಳಿಕೆಯೊಂದನ್ನು ನೀಡಿದ್ದರು. ಅವರ ವಿರುದ್ಧ ಗಂಭೀರ ಆಪಾದನೆ ಹೊರಿಸಿ, ಕ್ರಮ ಕೈಗೊಳ್ಳುವಂತೆ 55 ಸಂಸದರು ಸಹಿ ಹಾಕಿದ ಮನವಿಯನ್ನು ಸಭಾಪತಿ ಧನಕರ್ ಅವರಿಗೆ 2024ರ ಡಿ.13ರಂದು ಸಲ್ಲಿಸಿದ್ದೆವು. ಆರು ತಿಂಗಳಾದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ.
> – ಕಪಿಲ್ ಸಿಬಲ್ ರಾಜ್ಯಸಭಾ ಸದಸ್ಯ

ಸುಂಕ: ಅಮೆರಿಕ-ಚೀನಾ ಮಾತುಕತೆ

ಲಂಡನ್: ಅಮೆರಿಕ ಮತ್ತು ಚೀನಾದ ಉನ್ನತ ಮಟ್ಟದ ನಿಯೋಗವು ಸೋಮವಾರ ಲಂಡನ್‌ನಲ್ಲಿ ಭೇಟಿಯಾಗಿ ಉಭಯದ ದೇಶಗಳ ನಡುವಿನ ವಾಣಿಜ್ಯ ವ್ಯವಹಾರಗಳಿಗೆ ಸಂಬಂಧಿಸಿದಂತೆ ಮಾತುಕತೆ ನಡೆಸಿತು.

ಆಮದು ವಸ್ತುಗಳ ಮೇಲೆ ಹೇರಿದ್ದ ಭಾರಿ ಪ್ರಮಾಣದ ಪ್ರತಿ ಸುಂಕವನ್ನು ಮೂರು ತಿಂಗಳವರೆಗೆ ತಗ್ಗಿಸುವ ಒಪ್ಪಂದವನ್ನು ಅಮೆರಿಕ ಹಾಗೂ ಚೀನಾ ಮೇ 12ರಂದು ಜಿನೀವಾದಲ್ಲಿ ನಡೆದ ಸಭೆಯಲ್ಲಿ ಕೈಗೊಂಡಿದ್ದವು. ಇದರಿಂದ ಎರಡು ದೇಶಗಳ ನಡುವಿನ ತೆರಿಗೆ ಸಮರಕ್ಕೆ ತಾತ್ಕಾಲಿಕವಾಗಿ ತೆರೆಬಿದ್ದಿತ್ತು. ಹೀಗಾಗಿ ಜಾಗತಿಕ ಷೇರುಪೇಟೆಗಳಲ್ಲಿ ಚೇತರಿಕೆ ಕಂಡುಬಂದಿತ್ತು. ತೆರಿಗೆ ಸಮರ ಕೊನೆಗೊಳಿಸಿ, ವಾಣಿಜ್ಯ ವ್ಯವಹಾರ ಸುಗಮಗೊಳಿಸುವ ಉದ್ದೇಶದಿಂದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ಇತ್ತೀಚೆಗೆ ದೂರವಾಣಿಯಲ್ಲಿ ಮಾತುಕತೆ ನಡೆಸಿದ್ದರು. ಇದರ ಬೆನ್ನಲ್ಲೇ ಉನ್ನತ ಮಟ್ಟದ ನಿಯೋಗದ 2ನೇ ಸುತ್ತಿನ ಮಾತುಕತೆ ನಡೆದಿದೆ.

ಕಮಲ್ ಹಾಸನ್ ನಾಮಪತ್ರ ಅಂಗೀಕಾರ

ಚೆನ್ನೈ: ಎಂಎನ್‌ಎಂ ಮುಖ್ಯಸ್ಥ, ನಟ ಕಮಲ್ ಹಾಸನ್ ಸೇರಿ ತಮಿಳುನಾಡಿನ 6 ಮಂದಿ ರಾಜ್ಯಸಭೆಗೆ ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ಇದೆ.

ಆಡಳಿತಾರೂಢ ಡಿಎಂಕೆಯ ಮೂವರು, ಪ್ರತಿಪಕ್ಷ ಎಐಎಡಿಎಂಕೆಯ ಇಬ್ಬರು ಹಾಗೂ ಕಮಲ್ ಹಾಸನ್ ಅವರು ಸಲ್ಲಿಸಿರುವ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು ವಿಧಾನಸಭೆಯ ಹೆಚ್ಚುವರಿ ಕಾರ್ಯದರ್ಶಿ ಕಚೇರಿ ಮಂಗಳವಾರ ದೃಢಪಡಿಸಿ, ಅವುಗಳನ್ನು ಅಂಗೀಕರಿಸಿದೆ. ಇದೇ ವೇಳೆ 7 ಮಂದಿ ಸ್ವತಂತ್ರ ಅಭ್ಯರ್ಥಿಗಳು ಸಲ್ಲಿಸಿದ್ದ ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ. ಹೀಗಾಗಿ ಕಮಲ್ ಹಾಗೂ ಇತರ ಐವರು ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಬಹುದು ಎನ್ನಲಾಗಿದೆ. ರಾಜ್ಯಸಭೆಯಲ್ಲಿ ತಮಿಳುನಾಡಿನ 6 ಹಾಲಿ ಸಂಸದರ ಅವಧಿ ಜುಲೈ 24ಕ್ಕೆ ಮುಕ್ತಾಯಗೊಳ್ಳಲಿದೆ. ಆ ಸ್ಥಾನಗಳಿಗೆ ಜೂನ್ 19ರಂದು ಚುನಾವಣೆ ನಡೆಯಲಿದೆ.

ಸರಕಾರದ 11 ವರ್ಷಗಳ ಸಾಧನೆಯ ವಿವರ ಹಂಚಿಕೊಂಡ ಪ್ರಧಾನಿ ಮೋದಿ

11 ವರ್ಷದಲ್ಲಿ ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆ

ದೆಹಲಿ: ರಕ್ಷಣಾ ಕ್ಷೇತ್ರದಲ್ಲಿ ಕಳೆದ 11 ವರ್ಷಗಳ ಅವಧಿಯಲ್ಲಿ ಗಣನೀಯ ಬದಲಾವಣೆ ಆಗಿದ್ದು, ರಕ್ಷಣಾ ಪರಿಕರಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಮತ್ತು ಆಧುನೀಕರಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

'ಎಕ್ಸ್' ಜಾಲತಾಣದಲ್ಲಿ ಈ ಅಭಿಪ್ರಾಯ ಹಂಚಿಕೊಂಡಿರುವ ಅವರು, 11 ವರ್ಷಗಳ ಅವಧಿಯಲ್ಲಿ ಆಧುನೀಕರಣ ಮತ್ತು ಸ್ವಾವಲಂಬನೆ ಸಾಧಿಸಲು ಸ್ಪಷ್ಟ ಆದ್ಯತೆ ಸಿಕ್ಕಿದೆ. ಭಾರತವನ್ನು ಸದೃಢಗೊಳಿಸುವಲ್ಲಿ ಜನರ ಸಕ್ರಿಯ ಭಾಗವಹಿಸುವಿಕೆ ನೋಡುವುದೇ ಸಂತೋಷದ ಸಂಗತಿಯಾಗಿದೆ ಎಂದಿದ್ದಾರೆ.

ಆತ್ಮನಿರ್ಭರ ಭಾರತ ಸಂಕಲ್ಪದೊಂದಿಗೆ ಭಾರತವು ಈ ಸ್ವಾವಲಂಬನೆ ಸಾಧಿಸಿದೆ. ಇದರ ಪ್ರಭಾವವು ವಾಣಿಜ್ಯ ಮತ್ತು ತಂತ್ರಜ್ಞಾನ ಕ್ಷೇತ್ರದ ಮೇಲೂ ಆಗಿದೆ. 11 ವರ್ಷಗಳಲ್ಲಿ ಭಾರತದ ಸಾಧನೆ- ಸಾಮರ್ಥ್ಯ, ಪಾಲುದಾರಿಕೆ, ಅಭಿವೃದ್ಧಿ ಎಂದು ಮೋದಿ ಅವರು ಉಲ್ಲೇಖಿಸಿದ್ದಾರೆ.

> ಸರಕಾರದ 11 ವರ್ಷಗಳ ಸಾಧನೆಯ ವಿವರ ಹಂಚಿಕೊಂಡಿರುವ ಅವರು, ರಕ್ಷಣಾ ಸಾಮರ್ಥ್ಯ ವೃದ್ಧಿಯಲ್ಲಿ ಭಾರತವು ಕ್ರಾಂತಿಕಾರಕ ಸಾಧನೆ ಮಾಡಿದೆ. ಜಾಗತಿಕ ಪಾಲುದಾರಿಕೆಯನ್ನು ಬಲಪಡಿಸಿದೆ. ಅಂತರಿಕ್ಷ ಕ್ಷೇತ್ರದಲ್ಲಿ ಚರಿತ್ರಾರ್ಹ ಮೈಲುಗಲ್ಲು ಸಾಧಿಸಿದೆ.
> -ನರೇಂದ್ರ ಮೋದಿ ಪ್ರಧಾನಿ

ಭಾರತದ ರಕ್ಷಣಾ ರಫ್ತು ಪ್ರಮಾಣವು 2014-15ರಲ್ಲಿ ₹ 1,940 ಕೋಟಿ ಇದ್ದರೆ, 2024-25ನೇ ಸಾಲಿನ ವೇಳೆಗೆ ₹ 23,622 ಕೋಟಿ ಆಗಿದೆ. ಈ ಅವಧಿಯಲ್ಲಿ ದೇಶಿ ಉತ್ಪಾದನೆಯ ಐಎನ್‌ಎಸ್ ವಿಕ್ರಾಂತ್ ಅನ್ನು ಭಾರತ ಅನಾವರಣಗೊಳಿಸಿದೆ ಎಂದು ಸರಕಾರದ ಸಾಧನೆ ಕುರಿತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬ್ರೋಕೋಡ್‌ನಲ್ಲಿ ರವಿ

ತಮಿಳು ಚಿತ್ರರಂಗದ ಪ್ರತಿಭಾನ್ವಿತ ನಟ ರವಿ ಮೋಹನ್ ಹೊಸ ಸಿನಿಮಾ ಘೋಷಣೆ ಮಾಡಿದ್ದಾರೆ. ಬ್ರೋಕೋಡ್ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿಬರುತ್ತಿದ್ದು, ಈ ಚಿತ್ರದಲ್ಲಿ ರವಿ ನಾಯಕನಾಗಿ ನಟಿಸುತ್ತಿದ್ದಾರೆ. ಡಿಕ್ಕಿಲೂನಾ ಮತ್ತು ವಡಕ್ಕುಪಟ್ಟಿ ರಾಮಸಾಮಿಯಂತಹ ಚಿತ್ರಗಳ ನಿರ್ದೇಶಿಸಿ ಪ್ರಸಿದ್ಧಿ ಪಡೆದಿರುವ ಕಾರ್ತಿಕ್ ಯೋಗಿ ಬ್ರೋಕೋಡ್ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ರವಿ ಮೋಹನ್, ಎಸ್.ಜೆ.ಸೂರ್ಯ ಹಾಗೂ ನಾಲ್ವರು ಪ್ರಮುಖ ನಟಿಯರು ಈ ಚಿತ್ರದಲ್ಲಿ ಅಭಿನಯಿಸಲಿದ್ದಾರೆ. ಅವರು ಯಾರು ಅನ್ನೋದನ್ನು ಚಿತ್ರತಂಡ ರಿವೀಲ್ ಮಾಡಿಲ್ಲ. ಫೊರ್ ತೋರಿಸಿಲ್ ಸಿನಿಮಾ ಖ್ಯಾತಿಯ ಕಲೈಸೆಲ್ವನ್ ಶಿವಾಜಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಹರ್ಷವರ್ಧನ್ ಸಂಗೀತ ನಿರ್ದೇಶನ, ಪ್ರದೀಪ್ ರಾಘವ್ ಸಂಕಲನ, ಎ. ರಾಜೇಶ್ ಕಲಾ ನಿರ್ದೇಶನ ಬ್ರೋಕೋಡ್ ಸಿನಿಮಾಕ್ಕಿದೆ. ಇದೊಂದು ಫ್ಯಾಮಿಲಿ ಎಂಟರ್‌ಟೇನರ್ ಜತೆಗೆ ಕಾಮಿಡಿ ಜಾನರ್ ಕಥೆಯನ್ನು ಒಳಗೊಂಡಿದೆ. ಚಿತ್ರದ ಚಿತ್ರೀಕರಣ ಸೆಪ್ಟೆಂಬರ್‌ನಲ್ಲಿ ಪ್ರಾರಂಭವಾಗಲಿದೆ. ರವಿ ಮೋಹನ್ ಸುಧಾ ಕೊಂಗರ ನಿರ್ದೇಶನದ ಪರಾಶಕ್ತಿ ಮತ್ತು ಗಣೇಶ್.ಕೆ.ಬಾಬು ನಿರ್ದೇಶನದ ಕರಾಟೆ ಬಾಬು ಚಿತ್ರಗಳಲ್ಲಿಯೂ ನಟಿಸುತ್ತಿದ್ದಾರೆ.

ಮತ್ತೆ ಒಂದಾಗಲಿದೆ ಕೃಷ್ಣಂ ಪ್ರಣಯಸಖಿ ಟೀಂ

ನಟ ಗಣೇಶ್ ಅಭಿನಯದ ಕೃಷ್ಣಂ ಪ್ರಣಯ ಸಖಿ ಚಿತ್ರದ ಕಳೆದ ವರ್ಷ ತೆರೆಗೆ ಬಂದು ಭರ್ಜರಿ ಯಶಸ್ಸು ಕಂಡಿತ್ತು. ಸಿನಿಮಾದ ಹಾಡುಗಳಂತೂ ಭರ್ಜರಿ ಸದ್ದು ಮಾಡಿದವು. ಶಿವಂ, ದಂಡು ಪಾಳ್ಯದಂತಹ ಚಿತ್ರಗಳನ್ನು ನಿರ್ದೇಶಿಸಿದ್ದ ಶ್ರೀನಿವಾಸ್ ರಾಜು ಮೊದಲ ಬಾರಿಗೆ ಅದ್ಭುತ ಲವ್ ಸ್ಟೋರಿಯನ್ನು ಹೇಳಿದ್ದರು. ಅದರ ಜತೆಗೆ ಕೌಟುಂಬಿಕ ಕಥೆಯನ್ನು ಬೆರೆಸಿದ್ದರು. ಇಲ್ಲಿ ಗಣೇಶ್ ಲವ್ವರ್ ಬಾಯ್ ಆಗಿ ಗಮನಸೆಳೆದರು. ದ್ವಾಪರ ಹಾಡಂತೂ ಸಂಗೀತ ಪ್ರಿಯರ ಮನದಲ್ಲಿ ಇಂದಿಗೂ ಗುನುಗುನಿಸುತ್ತಿದೆ.

ಈಗ ಕೃಷ್ಣಂ ಪ್ರಣಯ ಸಖಿ ತಂಡ ಮತ್ತೆ ಒಂದಾಗಲಿದೆ. ನಿರ್ದೇಶಕ ಶ್ರೀನಿವಾಸ್ ರಾಜು ಗಣೇಶ್ ಅವರಿಗಾಗಿ ಹೊಸ ಕಥೆ ಹೆಣೆದಿದ್ದು, ಆ್ಯಕ್ಷನ್ ಕಟ್ ಹೇಳಲು ರೆಡಿಯಾಗಿದ್ದಾರೆ. ಗಣೇಶ್ ಸಿನಿಮಾ ಎಂದ ಮೇಲೆ ಅಲ್ಲಿ ಥ್ರಿಲ್ಲರ್‌ಗಿಂತ ಲವ್ ಸ್ಟೋರಿಯೇ ಹೈಲೈಟ್ ಆಗಿರುತ್ತದೆ. ಇಲ್ಲಿಯೂ ಅಂತಹದ್ದೇ ಕಥೆ ಇರುತ್ತದೆ ಎಂಬುದು ಸ್ಪಷ್ಟವಾಗಿದೆ. ಹಾಗಾಗಿ ತೆರೆಯಲ್ಲಿ ಮತ್ತೊಂದು ರೊಮ್ಯಾಂಟಿಕ್ ಲವ್ ಸ್ಟೋರಿಯನ್ನು ಕಣ್ತುಂಬಿಕೊಳ್ಳಬಹುದಾಗಿದೆ.

ಸದ್ಯ, ಗಣೇಶ್ ಪಿನಾಕ ಚಿತ್ರದಲ್ಲಿ ನಟಿಸುತ್ತಿದ್ದು ಈ ಚಿತ್ರದಲ್ಲಿ ವಿಭಿನ್ನ ಗೆಟಪ್ ತಾಳಿದ್ದಾರೆ. ಇನ್ನು ರಮೇಶ್ ಅರವಿಂದ್ ಅವರ ಜತೆಗೆ ರಾಮ್ ಚಿತ್ರದಲ್ಲಿಯೂ ಅಭಿನಯಿಸುತ್ತಿದ್ದಾರೆ. ಈ ಎರಡು ಸಿನಿಮಾಗಳು ಮುಗಿದ ಬಳಿಕ ಗಣೇಶ್ ಮತ್ತೆ ಶ್ರೀನಿವಾಸ್ ರಾಜು ತಂಡ ಸೇರಲಿದ್ದಾರೆ.





ಮಾರುತದಲ್ಲಿ ಅಬ್ಬರಿಸಿದ ಶ್ರೇಯಸ್

ಪಡ್ಡೆ ಹುಲಿ ಚಿತ್ರದ ಮೂಲಕ ಚಂದನವನಕ್ಕೆ ಪರಿಚಿತರಾದ ಶ್ರೇಯಸ್ ಮಂಜು, ವಿಷ್ಣುಪ್ರಿಯನಾಗಿ ಎಲ್ಲರ ಮನಗೆದ್ದರು. ಈಗ ಮಾರುತದಲ್ಲಿ ಅಬ್ಬರಿಸಲು ಸಿದ್ಧವಾಗಿದ್ದಾರೆ. ಎಸ್.ನಾರಾಯಣ್ ನಿರ್ದೇಶನದಲ್ಲಿ ಸಿದ್ಧವಾಗಿರುವ ಮಾರುತ ಶ್ರೇಯಸ್‌ಗೆ ಸ್ಪೆಷಲ್ ಸಿನಿಮಾವಾಗಿದ್ದು ತಮ್ಮ ಚಿತ್ರದ ಬಗ್ಗೆ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿ : ಮಾರುತದಲ್ಲಿ ನಿಮ್ಮ ಪಾತ್ರ ?

ಶ್ರೇಯಸ್ ಮಂಜು : ಈ ಚಿತ್ರದಲ್ಲಿ ನಾನು ಜವಾಬ್ದಾರಿ ಇಲ್ಲದ ಮಧ್ಯಮ ವರ್ಗದ ಹುಡುಗನ ಪಾತ್ರದಲ್ಲಿ ನಟಿಸಿದ್ದೇನೆ. ಆತನಿಗೆ ಜೀವನದ ಮೇಲೆ ನಂಬಿಕೆ ಇರುತ್ತದೆ. ಆದರೆ ಜವಾಬ್ದಾರಿ ಇರೋದಿಲ್ಲ. ಈ ನಡುವೆ ತಾನಂದುಕೊಂಡಿದ್ದನ್ನು ಸಾಧಿಸಲು ಹೋದಾಗ ಸಮಸ್ಯೆಯಲ್ಲಿ ಸಿಲುಕುತ್ತಾನೆ. ಅದರಿಂದ ಹೊರಬರಲು ಹೇಗೆ ಹೋರಾಟ ಮಾಡುತ್ತಾನೆ ಎಂಬುದು ನನ್ನ ಪಾತ್ರದ ಮೂಲಕ ಹೇಳಲಾಗಿದೆ. ಡಬಲ್ ಶೇಡ್‌ನಲ್ಲಿ ನನ್ನ ಪಾತ್ರ ಸಾಗುತ್ತದೆ.

ವಿ.ಸಿ : ಇದು ನಾಯಕನ ಪಾತ್ರವೇ ಇಲ್ಲ ಖಳನಾಯಕನ ಪಾತ್ರವೆ ?

ಶ್ರೇಯಸ್ : ಇಲ್ಲಿ ಹೀರೊ ಯಾರು ವಿಲನ್ ಯಾರು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು. ನನ್ನದು ನಾಯಕನ ಪಾತ್ರವೂ ಹೌದು, ಖಳನಾಯಕ ಪಾತ್ರವೂ ಹೌದು ಅನ್ನಬಹುದು. ಒಂದು ರೀತಿಯಲ್ಲಿ ಡಿಫರೆಂಟ್ ರೋಲ್‌ನಲ್ಲಿ ಕಾಣಿಸಿಕೊಂಡಿದ್ದೇನೆ.

ವಿ.ಸಿ : ಎಸ್.ನಾರಾಯಣ್ ಅವರ ಸಿನಿಮಾದಲ್ಲಿ ನಟಿಸಿದ ಅನುಭವ ಹೇಗಿತ್ತು ?

ಶ್ರೇಯಸ್ : ಎಸ್.ನಾರಾಯಣ್ ಅವರು ಕನ್ನಡ ಲೆಜೆಂಡ್ ನಿರ್ದೇಶಕರಲ್ಲಿ ಒಬ್ಬರು. ಅವರು ಮೊದಲು ಕಥೆ ಹೇಳಲು ಬಂದಾಗ ಸ್ಟೋರಿ ಕೇಳದೆ ಚಿತ್ರದಲ್ಲಿ ನಟಿಸಲು ಸಮ್ಮತಿಸಿದೆ. ಆ ಬಳಿಕ ನನ್ನ ಪಾತ್ರಕ್ಕೆ ತಕ್ಕಂತೆ ತಯಾರಿ ಮಾಡಿಕೊಳ್ಳಲು ಸಿನಿಮಾದ ಸ್ಟೋರಿ ಕೇಳಿ ತಯಾರಿ ಆರಂಭಿಸಿದೆ. ಸಿನಿಮಾ ಸೆಟ್‌ನಲ್ಲಿ ನಾನೊಬ್ಬ ವಿದ್ಯಾರ್ಥಿಯಂತಿದ್ದು ನಿರ್ದೇಶಕರು ಹೇಳಿದಂತೆ ನಟಿಸಿದೆ. ನಾರಾಯಣ್ ಅವರಿಂದ ಶಿಸ್ತು ಕಲಿತ್ತಿದ್ದೇನೆ.

ವಿ.ಸಿ : ದುನಿಯಾ ವಿಜಯ್ ಅವರೊಂದಿಗೆ ನಟಿಸಿದ್ದು ಹೇಗನ್ನಿಸಿತು?

ಶ್ರೇಯಸ್ : ದುನಿಯಾ ವಿಜಯ್ ಅವರು ನನಗೆ ಹಿಂದಿನಿಂದಲೂ ಪರಿಚಯ. ಅವರೊಬ್ಬರು ಸ್ಟಾರ್ ನಟ ಜತೆಗೆ ನಿರ್ದೇಶಕರು, ಆದರೆ ಅವರಿಗೆ ಹಮ್ಮಿಬಿಮ್ಮು ಇಲ್ಲ. ಸಿನಿಮಾ ಸೆಟ್‌ನಲ್ಲಿ ಎಲ್ಲರೊಂದಿಗೆ ಬೆರೆತು ಸ್ನೇಹಿತರಂತೆ ಇರುತ್ತಿದ್ದರು. ಅವರೊಂದಿಗೆ ನಟಿಸಿದ್ದು ಖುಷಿ ಕೊಟ್ಟಿದೆ. ದುನಿಯಾ ವಿಜಯ್ ಹಾಗೂ ನನ್ನ ನಡುವೆ ಆ್ಯಕ್ಷನ್ ದೃಶ್ಯಗಳಿವೆ, ಆ ಸೀನ್ ಅದ್ಭುತವಾಗಿ ಮೂಡಿಬಂದಿದೆ.

ವಿ.ಸಿ : ನಿಮ್ಮ ಮುಂದಿನ ಸಿನಿಮಾಗಳು ?

ಶ್ರೇಯಸ್ : ಈಗ ದಿಲ್‌ದಾರ್ ಚಿತ್ರದಲ್ಲಿ ಅಭಿನಯಿಸುತ್ತಿದ್ದೇನೆ. ದಿಲ್‌ದಾರ್ ಆ್ಯಕ್ಷನ್ ಜತೆಗೆ ಲವ್ ಸ್ಟೋರಿಯೂ ಬೆರೆತಿದ್ದು, ನಾನು ಸ್ಟೈಲಿಶ್ ಲುಕ್‌ನಲ್ಲಿ ಮಿಂಚಿದ್ದೇನೆ. ದಿಲ್‌ದಾರ್ ಚಿತ್ರದ ಬಹುತೇಕ ಚಿತ್ರೀಕರಣ ಮುಕ್ತಾಯವಾಗಿದ್ದು ಅಂತಮ ಹಂತದ ಶೂಟಿಂಗ್ ನಡೆಯುತ್ತಿದೆ.

ವಿಟಾಕೀಸ್

ಆಂಬೊ ಆಟೋದಲ್ಲಿ ಸತ್ಯನ ಸವಾರಿ

ರಾಮ ರಾಮರೇ.. ಖ್ಯಾತಿಯ ಸತ್ಯ ಪ್ರಕಾಶ್ ಈಗ ನಾಯಕನಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಹೌದು ಎಕ್ಸ್ ಅಂಡ್ ವೈ ಚಿತ್ರವನ್ನು ನಿರ್ದೇಶಿಸಿರುವ ಸತ್ಯ ಪ್ರಕಾಶ್ ಈ ಸಿನಿಮಾದಲ್ಲಿ ನಾಯಕನಾಗಿಯೂ ನಟಿಸುತ್ತಿದ್ದಾರೆ. ಶೀರ್ಷಿಕೆಯಲ್ಲಿ ಕುತೂಹಲ ಮೂಡಿಸಿರುವ ಎಕ್ಸ್ ಅಂಡ್ ವೈ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದೆ. ಎಲ್ಲೋ ಇದ್ದ ಹೈನಾಗಳು.. ಎಂಬ ಹಾಡು ಇದಾಗಿದ್ದು, ಕೆ. ಕಲ್ಯಾಣ್ ಸಾಹಿತ್ಯದ ಈ ಹಾಡಿಗೆ ಕೌಶಿಕ್ ಹರ್ಷ ಸಂಗೀತ ಸಂಯೋಜಿಸಿದ್ದಾರೆ. ಅದ್ವೈತ್ ಪಟ್ನಾಯಕ್ ದನಿಯಲ್ಲಿ ಹಾಡು ಮಧುರವಾಗಿ ಮೂಡಿಬಂದಿದೆ. ಸತ್ಯ ಪ್ರಕಾಶ್, ಬೃಂದಾ ಆಚಾರ್ಯ, ಅಥರ್ವ, ಅಯಾನಾ ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದಾರೆ. ಆಂಬೊ ಆಟೋದಲ್ಲಿ ಹಾಡು ಸಾಗುತ್ತದೆ. ಜತೆಗೆ ಕಡಲ ತಡಿಯ ಸುಂದರ ತಾಣದಲ್ಲಿಯೂ ಹಾಡಿನ ದೃಶ್ಯವನ್ನು ಸೆರೆಹಿಡಿಯಲಾಗಿದೆ. ಸತ್ಯ ಪ್ರಕಾಶ್ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ಸತ್ಯ ಪಿಕ್ಚರ್ಸ್‌ನಲ್ಲಿ ಈ ಸಿನಿಮಾ ನಿರ್ಮಾಣವಾಗಿದೆ. ವಿಭಿನ್ನ ಕಥೆಯ ಈ ಸಿನಿಮಾದಲ್ಲಿ ಬೃಂದಾ ಆಚಾರ್ಯ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಧರ್ಮಣ್ಣ ಕಡೂರು ಇಲ್ಲಿಯೂ ಹಾಸ್ಯದ ಕಚಗುಳಿ ಇಡಲಿದ್ದಾರೆ. ಇಲ್ಲಿ ಆಂಬೊ ಆಟೊ ವಿಶೇಷವಾಗಿದ್ದು, ಈ ಆಟೊದ ಸುತ್ತಲೂ ಚಿತ್ರದ ಕಥೆ ಸಾಗುತ್ತದೆ.

ಎಡಗೈ ಅಪಘಾತಕ್ಕೆ ಕಾರಣ ಟ್ರೇಲರ್ ಮೆಚ್ಚಿದ ಕಿಚ್ಚ

ವಿಭಿನ್ನ ಶೀರ್ಷಿಕೆಯ ಎಡಗೈ ಅಪಘಾತಕ್ಕೆ ಕಾರಣ ಚಿತ್ರ ತೆರೆಗೆ ಸಿದ್ಧವಾಗಿದೆ. ಸದ್ಯ ಈ ಚಿತ್ರದ ಟ್ರೇಲರ್ ರಿಲೀಸ್ ಒಂದಷ್ಟು ಕುತೂಹಲ ಮೂಡಿಸಿದೆ. ಎಡಗೈ ಬಳಸುವವರ ಕುರಿತ ಕಥೆಯನ್ನು ಈ ಚಿತ್ರದ ಮೂಲಕ ಹಾಸ್ಯಮಯವಾಗಿ ಕಟ್ಟಿಕೊಡಲಾಗಿದೆ. ಸಮರ್ಥ್.ಬಿ.ಕಡಕೋಳ ಈ ಚಿತ್ರವನ್ನು ನಿರ್ದೇಶಿಸಿದ್ದು ಹೊಸ ಬಗೆಯ ಕಥೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ, ಈ ಚಿತ್ರದ ಟ್ರೇಲರ್ ಮೆಚ್ಚಿರುವ ಕಿಚ್ಚ ಸುದೀಪ್, ಈ ಚಿತ್ರ ಡಿಸೆಂಟ್ ಆಗಿದೆ, ವಿಶೇಷವಾದ ಕಥೆ ಇರುವುದು ಟ್ರೇಲರ್‌ನಲ್ಲಿ ತಿಳಿಯುತ್ತದೆ ಎಂದಿದ್ದಾರೆ. ಈ ಚಿತ್ರದಲ್ಲಿ ದಿಗಂತ್ ನಾಯಕನಾಗಿ ನಟಿಸಿದ್ದು, ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ವಿಭಿನ್ನವಾದ ಪಾತ್ರವನ್ನು ನಿರ್ವಹಿಸಿದ್ದಾರೆ. ನಿಧಿ ಸುಬ್ಬಯ್ಯ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ದಿಗ್ಗಿ ಹಾಗೂ ನಿಧಿ ಪಂಚರಂಗಿ ಚಿತ್ರದ ಬಳಿಕ ಈ ಚಿತ್ರದಲ್ಲಿ ಒಂದಾಗಿದ್ದಾರೆ. ಸಮರ್ಥ್.ಬಿ.ಕಡಕೋಳ, ರಾಜೇಶ್ ಕೀಳಂಬಿ, ರಂಜನಿ ಪ್ರಸನ್ನ, ಗುರುದತ್ತ ಗಾಣಿಗ ಒಟ್ಟಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಎಡಗೈ ಅಪಘಾತಕ್ಕೆ ಕಾರಣ ಈ ವಾರವೇ ತೆರೆಗೆ ಬರಲಿದೆ.



ಹಿರಿಯ ನಾಗರಿಕರಿಗೆ ಕೆಲವು ಸೂತ್ರಗಳು

• ಸುಭಾಸ ಯಾದವಾಡ

60 ವರ್ಷ ದಾಟಿದವರನ್ನು ಅಧಿಕೃತವಾಗಿ ಹಿರಿಯ ನಾಗರಿಕರು, ನಿವೃತ್ತರು ಎನ್ನುತ್ತಾರೆ. ನಿವೃತ್ತಿ ಎಂದರೆ ಪ್ರಮುಖ ಜವಾಬ್ದಾರಿ ಗಳಿಂದ ಮುಕ್ತಿ. ಅವರು ನಿಗದಿತ ಸಮಯಕ್ಕೆ ಕಛೇರಿಗಳಿಗೆ ಹೋಗಬೇಕಾಗಿಲ್ಲ. ಇಂಥ ಕೆಲಸಗಳನ್ನು ಇಷ್ಟೇ ಸಮಯದಲ್ಲಿ ಮಾಡಿ ಮುಗಿಸಬೇಕೆಂಬ ಒತ್ತಡ- ಒತ್ತಾಯಗಳಿರುವದಿಲ್ಲ. ಹೀಗಾಗಿ ನಿವೃತ್ತ ಜೀವನ ಎಂದರೆ, ಅದು ಸದಾ ಸುಖೀ ಜೀವನಕ್ಕೆ ಬರೆದ ಮುನ್ನುಡಿ. ನಿವೃತ್ತರಲ್ಲಿ ಕೆಲವರು ತಾವು ನಿವೃತ್ತರು, ಹಿರಿಯ ನಾಗರಿಕರು ಎಂಬುದನ್ನೇ ಮರೆತಿರುತ್ತಾರೆ. ನಿವೃತ್ತಿಯ ನಂತರವೂ ಮತ್ತೇನು ಮಾಡಬಹುದು, ಮತ್ತೆ ಹೇಗೆ ಹಣ ಗಳಿಸಬಹುದು ಎಂಬ ಚಿಂತನೆಯಲ್ಲಿಯೇ ತೊಡಗಿರು ತ್ತಾರೆ. ಸುಮ್ಮನಿರದೇ ಮೈಮೇಲೆ ಇರುವೆ ಬಿಟ್ಟುಕೊಂಡರು ಎನ್ನುತ್ತಾರಲ್ಲ.. ಹಾಗೆ. ಇವರು ಏನೆಲ್ಲವನ್ನು ತಾವಗಿಯೇ ಮೈಮೇಲೆ ಎಳೆದುಕೊಂಡು ಒದ್ದಾಡುತ್ತಾರೆ. ಎಳೆಯಲಾಗದೇ ಏಗುತ್ತಾರೆ. ನಿವೃತ್ತಿಯ ಸ್ಥಿತಿ ಎಂದರೆ, ಸುಖ-ಸಂತೋಷಗಳ ಉಯ್ಯಾಲೆ ಆಡುತ್ತ ಆನಂದವಾಗಿ ಕಾಲ ಕಳೆಯುವ ಅನನ್ಯವಾದ ಪಕ್ವ ಕಾಲ. ಆದರೆ ಕೆಲವರು ಹಾಗೆ ಕಾಲ ಕಳೆಯುವದೇ ಇಲ್ಲ!

ಅನೇಕ ನಿವೃತ್ತರು, ಹೊಸ ಜವಾಬ್ದಾರಿಗಳನ್ನು ಅರಸುತ್ತಲೇ ಇರುತ್ತಾರೆ. ಹೊಸ ಗುರಿಗಳನ್ನು ಗೊತ್ತುಪಡಿಸಿಕೊಂಡು, ಅವುಗಳ ಹಿಂದೆ ಬಿಡುವಿಲ್ಲದೇ ಓಡುತ್ತಲೇ ಇರುತ್ತಾರೆ; ಅವರಿಗೆ ಅಷ್ಟು ಉತ್ಸಾಹ, ಹುರುಪು! ಆದರೆ, ಅಂತಹ ಕೆಲವರಿಗೆ ಹಾಯಾಗಿ ಇರವದೆಂದರೆ ಏನು ಎಂಬುದು ಕೊನೆಯವರೆಗೂ ಗೊತ್ತಾಗುವದೇ ಇಲ್ಲ. ನಿವೃತ್ತಿಗೂ ಮುನ್ನ ಮಾಡುವಷ್ಟೇ ಕೆಲಸ ಮಾಡಲು ಹಾತೊರೆಯುತ್ತಿರುತ್ತಾರೆ. ಇವರಿಗೆ ನಿವೃತ್ತರು ಎಂದು ಕರೆಯುವದಾದರೂ ಹೇಗೆ? 60ರ ನಂತರವೂ ದುಡಿಯುವ ಕೆಲವರು, (ಎಲ್ಲರೂ ಅಲ್ಲ) ದೈಹಿಕವಾಗಿ ಹಾಗೂ ಮಾನಸಿಕವಾಗಿ ಬಳಲುತ್ತಾರೆ. ಆರೋಗ್ಯವನ್ನು ಕೆಡಸಿಕೊಳ್ಳುತ್ತಾರೆ. ಅದಕ್ಕೆ ಕಾರಣ ತಾವಲ್ಲ, ತಮ್ಮ ಏರುತ್ತಿರುವ ವಯಸ್ಸು ಎಂಬ ಸಬೂಬು ಬೇರೆ ಕೊಟ್ಟುಕೊಳ್ಳುತ್ತಾರೆ. ಹಿರಿಯ ನಾಗರಿಕರು ನೆಮ್ಮದಿಯಿಂದ ಜೀವಿಸಲು ಏನು ಮಾಡಬಹುದು?

1 ನಿವೃತ್ತಿ ಎಂಬುದು ಎಲ್ಲರ ಜೀವವನದಲ್ಲಿ ಬಂದೇ ಬರುತ್ತದೆ. ಅದು ಮುಕ್ತಿಯ ಮೊದಲ ಹೆಜ್ಜೆ. ನೆನಪಿರಲಿ, ಇದೇ ಕೊನೆಯ ಹೆಜ್ಜೆ ಅಲ್ಲ.

2 ನಿವೃತ್ತರು ತಮ್ಮ ಒಂದೊಂದೇ ಜವಾಬ್ದಾರಿಗಳನ್ನು ಬೇರೆಯ ವರಿಗೆ ಹಸ್ತಾಂತರಿಸುತ್ತ, ಮುಕ್ತಿಯ ವ್ಯಾಪ್ತಿಯನ್ನು ಹೆಚ್ಚಿಸುತ್ತ ಹೋಗಬೇಕು.

3 ಹಾಗೆಂದು ಎಲ್ಲವನ್ನು ಬಿಟ್ಟುಕೊಟ್ಟು ಪರಾಧೀನ ಬದುಕು ಹೊಂದಬೇಕೆಂದೇನಿಲ್ಲ.

4 ನಿಮಗೆ ಅವಶ್ಯವಿರುವ ಆಸ್ತಿ-ಪಾಸ್ತಿ-ಹಣ ನಿಮ್ಮ ಬಳಿಯೇ ಇಟ್ಟುಕೊಳ್ಳಿ. ಅದನ್ನು ವ್ಯವಸ್ಥಿತವಾಗಿ ನಿರ್ವ ಹಿಸಲು ಸಾಧ್ಯವಾಗದ ಕಾಲ ಮುಂದೊಮ್ಮೆ ಬರ ಬಹುದು. ಅದಕ್ಕಾಗಿ ಕೆಲವರ (ಉದಾ ಮನೆಯವರ) ನಂಬಿಕೆಯನ್ನು ಈಗಲೇ ಸಂಪಾದಿಸಿಕೊಳ್ಳಿ. ಅದಕ್ಕಾಗಿ ಒಂದಿಷ್ಟು ಉದಾರತೆಯನ್ನು ತೋರಿಸಿ. ನಿಮ್ಮ ಅವಶ್ಯ ಕ್ಕಿಂತ ಹೆಚ್ಚು ಸಂಪನ್ಮೂಲಗಳು ಇದ್ದರೆ, ಬಂಧುಗಳಿಗೆ, ಅವಶ್ಯಕತೆ ಇರುವವರಿಗೆ, ಸಮಾಜಕ್ಕೆ ಕೊಟ್ಟು, ಮರೆತು ಬಿಡಿ. ಕೊಟ್ಟು, ನಾನು ಕೊಟ್ಟೆ ಎಂದು ಹೇಳಿದರೆ, ಅದರ ಸತ್ ಪರಿಣಾಮ ಕ್ಷೀಣಿಸುತ್ತದೆ. ಕೊಡುವದರಿಂದಾಗಿ ಗೌರವಾದರಗಳನ್ನು ಗಳಿಸಿಕೊಳ್ಳುತ್ತೀರಿ.

5 ನಿಮ್ಮ ಮಕ್ಕಳು; ಇಂದಿನ ಯುವ ಪೀಳಿಗೆಗೆ, ನಿಮ್ಮ ಅನುಭವ, ವ್ಯವಹಾರ ಜ್ಞಾನಗಳ ಕುರಿತು, ಅವರು ಬಯಸಿದರೆ ಹೇಳಿ; ಆದರೆ ಹೇರಬೇಡಿ. ಅವರು ಅದನ್ನು ಬಳಸಿಕೊಂಡರೆ ಸಂತೋಷಪಡಿ. ಬಳಸಿಕೊಳ್ಳದಿದ್ದರೆ ಬೇಸರಿಸಬೇಡಿ. ನಿಮ್ಮ ಕಾಲವೇ ಬೇರೆ ಅವರ ಕಾಲವೇ ಬೇರೆ ಎಂಬುದು ನಿಮಗೆ ಗೊತ್ತಿರಲಿ.

6 ನಿಮ್ಮ ಸುದೀರ್ಘ ಜೀವನದ ಅನುಭವ, ನಿಮ್ಮ ಮಿಕ್ಕುಳಿದ ಜೀವನಕ್ಕೆ ಬಳಕೆಯಾಗಲಿ. ನಿಮ್ಮ ಬಾಲ್ಯದಲ್ಲಿ ಹಾಗೂ ಯೌವನದಲ್ಲಿ ಆದ ತಪ್ಪುಗಳು ನಿವೃತ್ತಿ ಜೀವನದಲ್ಲಿ ಮರುಕಳಿಸದಿರಲಿ. ನಿಮ್ಮೆಲ್ಲ ಒಪ್ಪುಗಳು ಮುಪ್ಪುರಿಗೊಂಡು ನಿಮಗೆ ಪಕ್ವ ಫಲಗಳನ್ನು ನೀಡಲಿ.

7 ಸಂಧ್ಯಾಕಾಲದ ವಾಯುವಿಹಾರ, ಉಲ್ಲಾಸದ ತಿರುಗಾಟ, ಲಘು-ವ್ಯಾಯಾಮ ನಿಮ್ಮ ಮೈ-ಮನಗಳನ್ನು ಹದಗೊಳಿಸಿ ಮುದ ನೀಡುತ್ತವೆ.

8 ವಯಸ್ಸಾದಂತೆ ಆಹಾರ ಜೀರ್ಣಿಸುವ ಶಕ್ತಿ ಕಡಿಮೆ ಯಾಗುತ್ತ ಹೋಗುತ್ತದೆ. ಎಷ್ಟು ಬೇಕೋ ಅಷ್ಟು ಹಿತ-ಮಿತವಾಗಿ ಊಟ-ಉಪಹಾರಗಳನ್ನು ಮಾಡಿ. ಅದಕ್ಕಾಗಿಯೇ ನಿಗದಿತ ಸಮಯವನ್ನು ಹೊಂದಿಸಿಕೊಳ್ಳಿ. ಹಣ್ಣು ಹಂಪಲು ತರಕಾರಿಗಳನ್ನು ಉಪಯೋಗಿಸಿ. ಪ್ರತಿ ತುತ್ತನ್ನು ಸಂತೋಷವಗಿ ಸೇವಿಸಿ; ಹೊಟ್ಟೆಯಲ್ಲಿ ತುಸು ಜಾಗವಿರುವಂತೆ, ಒಂದು ತುತ್ತು ಕಡಿಮೆಯೇ ತಿನ್ನಿ! ಇದು ಆರೋಗ್ಯಕ್ಕೆ ಉತ್ತಮ.

9 ಸಾಧ್ಯವಾದರೆ ಕೆಲವು ಸಮಯವಾದರೂ ಮಾನಸಿಕ ಉಪವಾಸ ಮಾಡಿ. ದೇಹ, ಪ್ರತಿದಿನ ನಿದ್ರಿಸಿ ವಿಶ್ರಾಮ ಪಡಿಯುತ್ತಿದೆ. ಆ ಭಾಗ್ಯ ದೇಹದ ಇನ್ನೊಂದು ಭಾಗ ವಾದ ಮನಸ್ಸಿಗೆ ಇಲ್ಲ. ಅದನ್ನು ಧ್ಯಾನ ಮಾಡುವದರ ಮೂಲಕ ನಾವೇ ಕಲ್ಪಿಸಿಕೊಡಬೇಕು.

10 ಏನನ್ನೂ ಮಾಡದೇ ಇರುವ ಧ್ಯಾನ. ಏನನ್ನೂ ಮಾಡದಿರುವದು ಸುಲಭವಲ್ಲ.

11 ಹಾಗೇ ಏನೂ ಮಾಡದೇ ಇರುವ ಸ್ಥಿತಿಗೆ ಧ್ಯಾನ ಎನ್ನುತ್ತಾರೆ. ಸುಮ್ಮನೇ ಕಣ್ಣು ಮುಚ್ಚಿಕೊಂಡು ಕುಳಿತರೆ ಧ್ಯಾನ ಆಗುವದಿಲ್ಲ. ಗಾಢವಾದ ನಿದ್ರೆಯಲ್ಲೂ ಮನಸ್ಸು ಸುಮ್ಮನಿರುವದಿಲ್ಲ. ಏನೇನೋ ಯೋಚಿಸಿ ಕನಸು ಕಾಣು ತ್ತಿರುತ್ತದೆ. ಇನ್ನು ಅದು ಎಚ್ಚರವಿದ್ದಾಗ ಸುಮ್ಮನಿ ರುತ್ತದೆಯೇ?

12 ಏಕಾಏಕಿ ಸಾಧ್ಯವಾಗುವದಿಲ್ಲ; ಅಭ್ಯಾಸ ಬೇಕಾಗುತ್ತದೆ. ಪರಿಣಿತ ಧ್ಯಾನಿಗಳ ಮಾರ್ಗದರ್ಶನದ ಅವಶ್ಯಕತೆ ಇರುತ್ತದೆ. ಇದನ್ನು ಪಡೆಯಲು ಪ್ರಯತ್ನಿಸಿ; ಮನಸ್ಸನ್ನು ಶಾಂತಗೊಳಿಸಿ. ವೃತ್ತಿಯಿಂದ ಎಲ್ಲರೂ ನಿವೃತ್ತರಾಗುತ್ತಾರೆ. ನಮ್ಮ ಎಲ್ಲ ಬೇಕು-ಬೇಡ-ಬಯಕೆಗಳಿಂದ ನಿವೃತ್ತರಾಗುವದೇ ನಿಜವಾದ ನಿವೃತ್ತಿ. ಪ್ರಾಮಾಣಿಕ ಧ್ಯಾನಿ ಸುಖ-ದುಃಖಗಳನ್ನು ಮೀರಿರುತ್ತಾನೆ. ಅವನು ನಿತ್ಯ ಮುಕ್ತನಾಗಿರುತ್ತಾನೆ. ಬಯಕೆಗಳಿಲ್ಲದ ಜೀವನವೇ ನಿಜವಾದ ಮುಕ್ತ ಜೀವನ. ಬಯಕೆಗಳ ಬೆಟ್ಟವೇ ನಮ್ಮ ಮನಸ್ಸಿನಲ್ಲಿರುತ್ತದೆ. ಧ್ಯಾನದಿಂದ ಅದನ್ನು ನಾವು ಕರಗಿಸುತ್ತ ಹೋಗಬೇಕು. ಇದೇ ಸುಖ ಜೀವನದ ಕಡೆಗೆ ಸಾಗುವ ಸುಮಧುರ ಪಯಣ.

ಚಿತ್ತವಿಹಾರ

ಯಾವ ಉಪ್ಪು ತಿನ್ನಬೇಕು?

ಉಪ್ಪಿಗಿಂತ ರುಚಿ ಬೇರೆ ಇಲ್ಲಾ ಅತ ನಟ ಉಪ್ಪಿಯವರು ಹಾಡಿ ಬಿಟ್ಟಿದ್ದಾರೆ. ಇನ್ನು ನಮ್ಮಲ್ಲಿ ಯಾವುದೇ ಅಡುಗೆ ಇರಲಿ ಲವಣ 'ಮಾತ್ರ' ಯಾದರೂ ಅದು ಒಳ ಇಳಿಯುವುದೇ ಇಲ್ಲ. ಉಪ್ಪಿಟ್ಟಾಗಲಿ ಉಪ್ಪಿನಕಾಯಿಯಾಗಲಿ ಉಪ್ಪಿಲ್ಲದಿದ್ದರೆ ಅದು ಸಪ್ಪೆಯೇ!

ಈ ಉಪ್ಪಿಗಾಗಿ ದೇಶದಲ್ಲಿ ಶಾಂತಿದೂತ ಮಾಡಿದ ಉಪ್ಪಿನ ಸತ್ಯಾಗ್ರಹ ದೇಶದೆಲ್ಲೆಡೆ ಸತ್ಯವಾಗಿ ಈಗ ಚರಿತ್ರೆಯ ಭಾಗವಾಗಿದೆ. ಅದೊಂದು ಕಾಲದಲ್ಲಿ ಉಪ್ಪಿನ ದೊಡ್ಡ ಅಚ್ಚುಗಳು ಹಣದ ರೂಪದಲ್ಲಿ ಸಾಮಗ್ರಿಗಳು ಕೊಡು ಕೊಳ್ಳುವಿಕೆಗೆ ಝಣ ಝಣವೆನ್ನುತ್ತಿದ್ದವಂತೆ. ಇದನ್ನೇ ವಿದೇಶಿ ಅಪರಾಧಿಗಳು ಜುಲ್ಮಾನೆಯಾಗಿ ಕಟ್ಟಿದರೆ ಅವರ ಶಿಕ್ಷೆಯಲ್ಲಿ ಕಡಿತ ಮಾಡುತ್ತಿದ್ದರಂತೆ. ಲ್ಯಾಟಿನ್‌ನ ಸಾಲ್ಟ್ ಎಂಬ ಪದಕ್ಕೂ, ಸೋಲ್ಜರ್ ಮತ್ತು ಸ್ಯಾಲರಿ ಪದಗಳಿಗೆ ಸಾಮ್ಯತೆ ಇದೆಯೆನ್ನುತ್ತಾರೆ.

ಈ ಉಪ್ಪಿಗೆ ಇತ್ತೀಚಿಗೆ ಹೊಸತೊಂದು ಆಯಾಮ ಬಂದಿದೆ. ಟಿವಿ ಧಾರಾವಾಹಿಗಳಲ್ಲಿ ಮನೆಯ ಕುಹಕಿಯರು ಕಾಫಿಗೆ ಸಕ್ಕರೆಯ ಬದಲಿಗೆ ಉಪ್ಪು ಬೆರೆಸುತ್ತಾರೆ! ಆ ಆಲೋಚನೆ ಮಾಡಿದ ಧಾರಾವಾಹಿ ಕಥೆಗಾರರಿಗೆ ಕಾಫಿಯನ್ನು ಕಾಪಿ ಮಾಡೇ ತಿಳಿದಿಲ್ಲ. ಏಕೆಂದರೆ ಸಕ್ಕರೆಯ ಬದಲು ತೃಣ ಮಾತ್ರ ಲವಣ ಬಿದ್ದರೂ ಆ ಹಾಲು ಬೆರೆಸಿದ ಕಾಫಿ ಒಡೆದು ಹೋಗುತ್ತದೆ!

ಕೆಲ ವರ್ಷ ಗಳಿಂದ ನಮ್ಮ ಟೂತ್ ಪೇಸ್ಟಿಗೆ ಉಪ್ಪಿನ ಕಡಿತ ಶುರುವಾ ಗಿದೆ. ಮೊದಲೆಲ್ಲ ಅದ್ಯಾವುದೋ ಹಲ್ಲು ಪುಡಿಗಳು ನಮ್ಮ ಹಲ್ಲನ್ನು ತಿಕ್ಕಿ ಕಣ್ಣು ಕೋರೈಸುವಂತೆ ಮಾಡುತ್ತಿದ್ದವು. ಅದಾದ ಮೇಲೆ ಫ್ಲೋರೈಡ್ ಅದರಲ್ಲಿ ಸೇರಿತು. ಈಗಂತೂ ಅವುಗಳ ಜಾಹೀರಾ ತಿನ ಪತಾಕೆಯಲ್ಲಿ ಅದೊಬ್ಬ ಆಹ್ ಎಂದು ಹಲ್ಲು ಹಿಡಿದರೆ ಸಾಕು ಅದೆಲ್ಲಿಂದಲೋ ಬ್ರೇಕಿಂಗ್ ನ್ಯೂಸ್‌ಗೆ ಕಾದಿರುವ ಲಲನಾ ಮಣಿ 'ನಿಮ್ಮ ಟೂತ್ ಪೇಸ್ಟಿನಲ್ಲಿ ಉಪ್ಪು ಇದೆಯೇ?' ಅಂತ ಪ್ರತ್ಯಕ್ಷಳಾಗುತ್ತಾಳೆ.

ಇದರ ಮುಂದುವರಿದ ಭಾಗವಾಗಿ 'ನಿಮ್ಮ ಉಪ್ಪಿನಲ್ಲಿ ಐಯೋಡಿನ್ ಇದೆಯೇ?' ಪ್ರಶ್ನೆ ಹುಟ್ಟಿಕೊಂಡಿದೆ. ಮೊದಲೆಲ್ಲ ಹರಳುಪ್ಪು, ಪುಡಿ ಉಪ್ಪು ಎರಡೇ ಇದ್ದವು. ಅದೇ ನಮ್ಮಗಳ ಅಡುಗೆ ಕೋಣೆಯ ಘನತೆವೆತ್ತ ಲವಣವಾಗಿತ್ತು. ಈಗ ಅದಕ್ಕೆ ಇಷ್ಟೊಂದು ವ್ಯಂಜನಗಳು. ಇನ್ನು ಉಪ್ಪೇರಿ ಅಂದರೆ ಸ್ಟೈಲಾಗಿ ಚಿಪ್ಸ್ ಎನ್ನುವರು! ಇದರ ಹೆಸರಲ್ಲೇ ಉಪ್ಪು ಇದೆ; ಅದು ಚಿಪ್ಸ್ ತಯಾರಕರಿಗೆ ತಿಳಿದಿಲ್ಲ. ಇಷ್ಟೆಲ್ಲ ಲವಣ ಪುರಾಣ ಕೇಳಿದ ಮೇಲೆ ನಾವು ಗಳು ಉಪ್ಪು ತಿಂದ ಮೇಲೆ ನೀರನು ಕುಡಿಯಲೇ ಬೇಕು ಅಥವಾ ಉಪ್ಪು ತಿಂದ ಮನೆಗೆ ಎರಡು ಬಗೆಯಬಾರದು; ಅವೆರಡೂ ಆದ ಮೇಲೆ ಉಪ್ಪಿನ ಋಣ ತೀರಿಸಲೇ ಬೇಕು ಎಂದಾದಲ್ಲಿ ತಿನ್ನ ಬೇಕಾದ ಉಪ್ಪು ಯಾವುದು ಎಂಬ ಪ್ರಶ್ನೆ (?) ಯಾಗಿಯೇ ಉಳಿದು ಬಿಟ್ಟಿದೆ!

• ಕೆ.ಎಸ್.ಸೋಮೇಶ್ವರ

ಬಯಕೆ

ಊಟ ಹಾಗೂ ನೀರಿಗಿಂತಲೂ
ನಿನಗಾಗಿ ನಾ
ಹಂಬಲಿಸಿದ್ದೇನೆ।।
ನಿನ್ನ ಸವಿಯಲು
ನನ್ನ ಶರೀರ
ನನ್ನ ಮನ
ನನ್ನ ಇಂದ್ರಿಯಗಳೆಲ್ಲವೂ ಹಸಿದಿರುವುದು।।
ನೀನು ಜಗತ್ತಿಗೇ ಸೇರಿರುವೆಯೆಂದು
ಗೊತ್ತಿದ್ದರೂ
ನಿನ್ನ ಇರುವಿಕೆ
ನನ್ನ ಹೃದಯಕ್ಕೆ ತಿಳಿದಿದೆ।।
ನಿನ್ನ ಒಂದು ಸನ್ನೆ
ಕಣ್ನೋಟಕ್ಕಾಗಿ
ನಾನು ಮೌನ ಭಾವೋದ್ವೇಗದಿಂದ
ಕಾಯುತ್ತಿರುವೆ
(ರೂಮಿಯ ಅನುವಾದಿತ ಪ್ರೇಮ ಕವಿತೆ)

• ಧಾರಿಣಿ ಮಾಯ



ಮೌನದ ಮಹಿಮೆ!

• ಡಾ. ಎನ್. ಜಯರಾಮ ಶೆಟ್ಟಿ

ನಮ್ಮೆಲ್ಲ ಶಕ್ತಿ ಸಾಮರ್ಥ್ಯದ ಮೂಲಾಧಾರವೇ ಮೌನವಂತೆ. ದಿನನಿತ್ಯದ ಬದುಕಿನಲ್ಲಿ ಒಂದಷ್ಟು ಸಮಯವನ್ನು ಮೌನಾಚರಣೆಗೆ ಮೀಸಲಿಡುವುದು ಅತೀ ಅಗತ್ಯವಾದುದು. ಇದು ಅನಿವಾರ್ಯವಾಗಿ ಕಾಣಿಸಿಕೊಳ್ಳುವುದಕ್ಕಿಂತ, ಆಚರಣೆ ಸ್ವರೂಪದಲ್ಲಿದ್ದರೆ ಚೆನ್ನ. ಆಚರಣೆಯಲ್ಲಿ ಉತ್ಸಾಹ, ಆತ್ಮ ತೃಪ್ತಿ, ಆಪ್ತತೆ ಇದ್ದೇ ಇರುತ್ತದೆ ನೋಡಿ. ಹಿಂಸೆಯ ರೂಪದ ಮೌನ, ಅಸಹಾಯಕತೆಯಲ್ಲಿ ಮೂಡುವ ಮೌನ, ಗೊಂದಲ-ಗೋಜಲುಗಳ ನಡುವಿನ ಮೌನ ಮಾನಸಿಕ-ದೈಹಿಕ ಆರೋಗ್ಯಕ್ಕೆ ಪೂರಕವಾಗಿರುವುದಿಲ್ಲ. ಅದು ಹೊಗೆಯಲ್ಲಿ ಅಡಗಿದ ಬೆಂಕಿಯಂತೆ ಉರಿದು ಬೂದಿಯಾಗಬಹುದು.

ಮೌನ ಧಾರಣೆ ನಮ್ಮ ಸತ್ವಯುತ, ಸಾತ್ವಿಕ ದೋರಣೆಯಾಗಿರಬೇಕು. ಮಾತು ಸಮಯದ ಒಂದು ಭಾಗವಾಗಿದ್ದರೆ, ಮೌನ ಅನಂತತೆಯ ರೂಪವನ್ನು ಹೊಂದಬಹುದು. ಮಾತು ರಭಸವಾಗಿ ಹರಿಯುನ ನೀರಾದರೆ ಮೌನ ಸುರಿಯಲ್ಪಡುವ ಎಣ್ಣೆ. ಐನ್‌ಸ್ಟೀನ್ ಮತ್ತು ಅವರ ಮಿತ್ರ ಅದೆಷ್ಟೋ ಹೊತ್ತಿನಿಂದ ಮಾತನಾಡುತ್ತಲೇ ನಡೆದಿದ್ದರು. ಏಕಾಏಕಿ ಇಬ್ಬರೂ ಮೌನಕ್ಕೆ ಶರಣು ಹೋಗುತ್ತಾರೆ. ಮಿತ್ರ ನಕ್ಕು ಕೇಳುತ್ತಾರೆ, 'ಐನ್‌ಸ್ಟೀನ್ ನಾವೇನು ಮಾಡುತ್ತಿದ್ದೇವೆ ಈಗ?' 'ಈಗ ನಾವು ಯೋಚಿಸುತ್ತಿದ್ದೇವೆ!' ಎನ್ನುವ ಐನ್‌ಸ್ಟೀನ್ ರ ಉತ್ತರ ಮೌನ ಕಂಡುಕೊಳ್ಳುವ ಮಾರ್ಗ ಮತ್ತು ಅದರ ಪ್ರಸ್ತುತತೆಯನ್ನು ಸೂಚಿಸುತ್ತದೆ ನೋಡಿ.

ಎಲ್ಲಿ ಮತ್ತು ಎಷ್ಟು ಮಾತು/ಮೌನ ಎನ್ನುವ ನಿಷ್ಕರ್ಷೆ ನಮ್ಮೊಳಗೇ ಆಗುವುದು ಮತ್ತು ಅದು ಬದುಕಿನ ಉಳಿದೆಲ್ಲ ಆಗು-ಹೋಗುಗಳನ್ನು ನಿಯಂತ್ರಿಸುವುದು ಅತ್ಯಂತ ಸೋಜಿಗದ ಸಂಗತಿಯೂ ಹೌದು. ದೇಹಕ್ಕೆ ನಿದ್ದೆ ಎಷ್ಟು ಅಗತ್ಯವೊ, ಮನಸ್ಸಿನ ಆರೋಗ್ಯಕ್ಕೆ ಮೌನ ಅಷ್ಟೇ ಮುಖ್ಯವಾದುದು. ಮೌನ ನಮ್ಮ ಒಟ್ಟಾರೆ ಬದುಕಿಗೆ ಸಲ್ಲಿಸುವ ಸೇವೆ ಬಹುರೂಪಿಯಾದುದು. ಮನಸ್ಸು ಗೊಂದಲ ಮತ್ತು ಗುಲ್ಲಿಗೆ ಸುಲಭವಾಗಿ ಬಲಿಬೀಳುವಂಥಾದ್ದು. ಮೌನ ಮನಸ್ಸಿಗೆ ಸ್ಪಷ್ಟ ಚಿತ್ರಣ ಕೊಟ್ಟು ಸಹಕರಿಸುತ್ತದೆ. ನಾನೇನು ಮಾಡಲಿಲ್ಲ, ಅದರ ಪಾಡಿಗೆ ಸರಿ ಹೋಯಿತು, ಎಂದು, ನಾವು ಮೌನಕ್ಕೆ 'ಬೆಲೆ' ತೆರದೆ ನುಣುಚಿ ಕೊಳ್ಳುವವರು!

- ಮೌನ ಮತ್ತು ಅದರ ಮೂಲಕ ನಾವು ನಡೆಸುವ ಕೆಲವು ಉಸಿರಾಟ ಪ್ರಕ್ರಿಯೆಗಳು ಒತ್ತಡಕ್ಕೆ ರಾಮ ಬಾಣವಿದ್ದಂತೆ.
- ಸೃಜನ ಶೀಲತೆಯ ಉದ್ದೀಪನ ಮತ್ತು ಮೌನದ ನಡೆ-ನುಡಿ ಒಂದಕ್ಕೊಂದು ಹೊಂದಿದೆಯೆಂದು ಸಂಶೋಧನ ಮೂಲಗಳು ತಿಳಿಸುತ್ತವೆ.
- ಸಾಕಷ್ಟು ಮತ್ತು ಸಮರ್ಪಕ ನಿದ್ರೆಗೆ ಮೌನದ ಮಾರ್ಗ ನೇರ ಕಾರಣವೆಂದು ಅನುಭವಿಸಿದವರಿಗೆ ಗೊತ್ತೇ ಇದೆ.
- ಸ್ವ-ಪ್ರಜ್ಞೆ ಮತ್ತು ಮೌನ ಒಂದನ್ನೊಂದು ಬಿಟ್ಟೇ ಇಲ್ಲ.
- ಪಂಚೇಂದ್ರಿಯಗಳ ಗ್ರಹಣ ಶಕ್ತಿ ಮತ್ತು ಮೌನಕ್ಕೆ ಆಪ್ತ ತಳುಕು ಇದೆ.
- ನಮ್ಮ ಸಂವಹನ ಸಾಮರ್ಥ್ಯ ಮತ್ತು ಮೌನ ಒಂದಕ್ಕೊಂದು ಕೊಂಡಿ.
- ಮೈಂಡ್‌ಫುಲ್‌ನೆಸ್ ಎನ್ನುವ ಮಾನಸಿಕ ಎಚ್ಚರಿಕೆ ಮತ್ತು 'ಈಗ', 'ಇಲ್ಲಿ' ಬದುಕುವ ಪ್ರಜ್ಞೆ ಇಂದು ವಿಶ್ವಾದ್ಯಂತ ಪ್ರಚಲಿತವಾಗಿದೆ. ಇದರ ಜೀವಾಳ ಕೂಡಾ ಮೌನವೇ.

ಭಾವನಾತ್ಮಕ ಬುದ್ಧಿವಂತಿಕೆ ಎನ್ನುವ ಬಹು ಚರ್ಚಿತ ಸ್ಪಂದನಾ ವಿಧಾನ ಸಂಬಂಧ ವರ್ಧನೆಗೆ ಅತಿ ಮುಖ್ಯವೆಂದು ತೋರಿಸಿಕೊಟ್ಟವರು ಡೇನಿಯಲ್ ಗೋಲ್ಮನ್ ಅವರು. ಇಲ್ಲಿಯೂ ಮೌನ ತನ್ನ ಸ್ಥಾನ ಉಳಿಸಿಕೊಂಡಿದೆ!

ಜೀವಜಾಲದ ಒಂದು ತುಣುಕು!

• ಹೊಸ್ಮನೆ ಮುತ್ತು

ಬಿಳಿಯ ಗೋಡೆಯ ಮೇಲೆ ಜೀವಂತ ಕಲಾಕೃತಿ ಯಂತೆ ಮೂಡಿಬಂದಿರುವ ಈ ದೃಶ್ಯ, ಪ್ರಕೃತಿಯ ಸೂಕ್ಷ್ಮ ಮತ್ತು ಸಮ್ಮೋಹಕವಾದ ಕ್ಷಣವೊಂದನ್ನು ಅನಾವರಣಗೊಳಿಸುತ್ತದೆ. ಕಪ್ಪು ರೆಕ್ಕೆಗಳ ಮೇಲೆ ಅರಳಿದ ಬಿಳಿಯ ಚುಕ್ಕೆಗಳು, ಕೆಂಪು-ಕಿತ್ತಳೆ ಪಟ್ಟೆಗಳ ದೇಹ ರಚನೆಗಳು ಈ ಪತಂಗಗಳಿಗೆ ಒಂದು ಅಪೂರ್ವ ಸೌಂದರ್ಯವನ್ನು ನೀಡಿವೆ. ಈ ಎರಡು 'ವ್ಯಾಘ್ರ ಪತಂಗಗಳು' (ಟೈಗರ್ ಮಾತ್) ಪ್ರಣಯ ದಲ್ಲಿ ತಲ್ಲೀನವಾಗಿ, ಒಂದಕ್ಕೊಂದು ಬೆಸೆದುಕೊಂಡು ಕುಳಿತಿವೆ. ಇದು ಕೇವಲ ಎರಡು ಕೀಟಗಳ ಕೂಡುವಿಕೆಯಲ್ಲ, ಬದಲಿಗೆ ಜೀವಚಕ್ರದ ಮುಂದುವರಿಕೆಗೆ, ಹೊಸ ಜೀವದ ಸೃಷ್ಟಿಗೆ ಹೆಜ್ಜೆ ಇಡುತ್ತಿರುವ ಅಪೂರ್ವ ಕ್ಷಣ.

ಈ ಪತಂಗಗಳ ದೇಹದ ಮೇಲಿನ ಪ್ರಖರ ಬಣ್ಣಗಳು, ಅನೇಕ ಬಾರಿ ತಮ್ಮನ್ನು ಪರಭಕ್ಷಕಗಳಿಂದ ರಕ್ಷಿಸಿಕೊಳ್ಳಲು ಬಳಸುವ ಸಂಕೇತಗಳು. ಆದರೆ ಇಲ್ಲಿ, ಆ ವರ್ಣಗಳು ಪ್ರಕೃತಿಯ ಸೌಂದರ್ಯದ ಜೊತೆಗೆ, ಸಂಗಾತಿಯನ್ನು ಆಕರ್ಷಿಸುವ ರಹಸ್ಯ ಸಂಕೇತಗಳಾಗಿ ಮತ್ತು ಪ್ರೇಮದ ಕಲೆಯ ಒಂದು ಭಾಗವಾಗಿ ಕಣ್ಮನ ಸೆಳೆಯುತ್ತವೆ.

ಒಟ್ಟಾರೆ, ಈ ಚಿತ್ರವು ಕೇವಲ ಒಂದು ದೃಶ್ಯವಲ್ಲ, ಅದೊಂದು ಜೀವನ ಪಾಠ. ಪ್ರಕೃತಿಯ ಸೂಕ್ಷ್ಮತೆ, ಸೌಂದರ್ಯ ಮತ್ತು ಜೀವಸಂಕುಲದ ಅಸ್ತಿತ್ವದ ನಡುವಿನ ಸರಪಣಿಯನ್ನು ಇದು ಸೊಗಸಾಗಿ ಬಿಂಬಿಸುತ್ತದೆ. ಇದು ಜೀವ ಜಗತ್ತಿನ ನಿರಂತರ ಹರಿವಿಗೆ ಸಾಕ್ಷಿಯಾದ ಒಂದು ಮಧುರ ಕ್ಷಣ. ಪ್ರಕೃತಿಯಲ್ಲಿ ಪ್ರತಿಯೊಂದು ಜೀವಿಗೂ ತನ್ನದೇ ಆದ ಪಾತ್ರವಿದೆ.

ಅವು ನಮ್ಮ ಗಮನಕ್ಕೆ ಬರದಿದ್ದರೂ, ನಮ್ಮ ಗಾಳಿಗೆ, ಮಣ್ಣಿಗೆ, ಜೀವವೈವಿಧ್ಯಕ್ಕೆ ಅವು ಆಧಾರವಾದ ಅವಿಭಾಜ್ಯ ಅಂಗಗಳು. ಇವು ಜೀವಜಾಲದ ಒಂದು ಸಣ್ಣ ತುಣುಕೇ ಇರಬಹುದು; ಆದರೆ ಆ ತುಣುಕು ಕಡಿದರೆ ಸಮತೋಲನವೇ ತಪ್ಪಿಹೋಗಬಹುದು!

ವಿಧಿಬರಹ ತಪ್ಪಿಸಲು ಸಾಧ್ಯವಿಲ್ಲ

ಒಮ್ಮೆ ಕೈಲಾಸದಲ್ಲಿ ಒಂದು ಸಭೆ ಸೇರಿತ್ತು. ಆ ಸಭೆಗೆ ದೇವಾನು- ದೇವತೆಗಳು ಸೇರಿದ್ದರು. ಯಮ ದೇವ ತನ್ನ ವಾಹನ ಕೋಣನ ಮೇಲೆ ಸಭೆಗೆ ಬಂದನು. ಸಭಾ ಭವನದ ಒಳಗೆ ಹೋಗುವ ಮೊದಲು ಕೋಣವನ್ನು ಒಂದೆಡೆ ನಿಲ್ಲಿಸಿ ಇಳಿದು ಆ ಕಡೆ ಈ ಕಡೆ ನೋಡಿದ. ಒಂದು ಮರದ ಮೇಲೆ ಪುಟ್ಟ ಗುಬ್ಬಚ್ಚಿ ಕುಳಿತಿತ್ತು. ಯಮ ಅದರ ಕಡೆಗೆ ದೃಷ್ಟಿ ಇಟ್ಟು ಕ್ಷಣ ನೋಡಿ ಸಭಾ ಭವನದ ಒಳಗೆ ಹೋದನು.

ಗುಬ್ಬಿಗೆ ಭಯವಾಯಿತು; ಯಮದೇವ ಯಾಕೆ ತನ್ನ ಮೇಲೆ ದೃಷ್ಟಿ ಬೀರಿದ. ಇನ್ನು ತನ್ನ ಕಥೆ ಮುಗಿಯಿತು. ತನ್ನ ಸಾವು ಹತ್ತಿರ ಬಂದಿದೆ ಎಂದುಕೊಂಡ ಗುಬ್ಬಿ ಹೆದರಿಕೆಯಿಂದ ನಡುಗುತ್ತಿತ್ತು. ಸ್ವಲ್ಪ ಹೊತ್ತಿಗೆ ಮಹಾವಿಷ್ಣು ತನ್ನ ವಾಹನ ಗರುಡರಾಜನ ಮೇಲೆ ಬಂದು ಇಳಿದು ಸಭೆಯ ಕಲಾಪಕ್ಕೆ ಒಳಗೆ ಹೋದನು. ಅಲ್ಲೇ ನಿಂತಿದ್ದ ಗರುಡ ಸುತ್ತ ಮುತ್ತ ತಿರುಗಿದಾಗ ಪುಟ್ಟ ಗುಬ್ಬಿ ಹೆದರಿ ನಡುಗುವುದನ್ನು ನೋಡಿದ. ಗರುಡನಿಗೆ ಪುಟ್ಟ ಗುಬ್ಬಿಯ ಮೇಲೆ ಕನಿಕರ ಬಂದಿತು. ಪಾಪ ಇವನು ನನ್ನ ಜಾತಿಯ ಪುಟ್ಟ ಪಕ್ಷಿ ಅವನು ಯಾಕೆ ನಡುಗುತ್ತಿದ್ದಾನೆ ಸಮಾಧಾನ ಮಾಡಬೇಕು ಎಂದು ಅದರ ಬಳಿ ಹೋಗಿ, ಗುಬ್ಬಿ ನೀನು ಯಾಕೆ ನಡುಗುತ್ತಿರುವೆ ಎಂದು ಕೇಳಿದ. ಗುಬ್ಬಿ ಹೇಳಿತು.

'ಈಗ ತಾನೆ ಯಮರಾಜನನ್ನು ನೋಡಿದೆ, ಅವನ ಕಣ್ಣಿನಲ್ಲಿ ನನ್ನ ಚಿತ್ರ ಕಾಣುತ್ತಿತ್ತು. ನನ್ನ ಜೀವಿತಾವಧಿ ಮುಗಿದಿದೆ, ಯಮ ನನ್ನನ್ನು ಕರೆದೊಯ್ಯಲು ಬಂದಿದ್ದಾನೆ ನನಗೆ ತುಂಬಾ ಭಯವಾಗಿದೆ' ಎಂದಿತು. ಗರುಡ ಅದನ್ನು ಸಮಾಧಾನ ಪಡಿಸಿ ನೀನು ಹೆದರಬೇಡ. ನೀನು ಯಮನ ಕಣ್ಣಿಗೆ ಬೀಳದಂತೆ ನಿನ್ನನ್ನು ಸುರಕ್ಷಿತವಾಗಿ ದೂರದ ಹಿಮಾಲಯದ ತಪ್ಪಲಿನ ಪರ್ವತ ಪ್ರದೇಶಕ್ಕೆ ಕರೆದುಕೊಂಡು ಹೋಗಿ ಯಾರಿಗೂ ಕಾಣದಂತೆ ಅಲ್ಲಿ ಭದ್ರವಾದ ಜಾಗದಲ್ಲಿ ಇಡುವೆ ಎಂದು ಗುಬ್ಬಚ್ಚಿ ಯನ್ನು ತನ್ನ ಮೇಲೆ ಕೂರಿಸಿಕೊಂಡು ಹಾರಿ ಪರ್ವತದ ಬಳಿ ಬಂದು ಅಲ್ಲಿದ್ದ ಒಂದು ಗುಹೆಯೊಳಗೆ ಗುಬ್ಬಚ್ಚಿಯನ್ನು ಬಿಟ್ಟು ಗರುಡ ಬಂದನು.

ಇಷ್ಟು ಸಮಯ ಆಗುವುದರೊಳಗೆ ಒಳಗೆ ಸಭೆ ಮುಗಿದಿತ್ತು. ಸಭೆಯ ಕಲಾಪ ಮುಗಿಸಿ ಯಮ ಹೊರಗೆ ಬಂದು ಗರುಡನನ್ನು ನೋಡಿ ನಕ್ಕನು. ಗರುಡನಿಗೆ ಯಮನ ನಗು ಹಿಡಿಸಲಿಲ್ಲ, ಹೇಳಿದ ನೀನು ಗುಬ್ಬಚ್ಚಿಯನ್ನು ನೋಡಿದಂತೆ ನನ್ನ ನೋಡಿ ನಕ್ಕ ಮಾತ್ರಕ್ಕೆ ನಾನೇನು ಹೆದರುವುದಿಲ್ಲ, ನನ್ನ ಮೇಲೆ ಮಹಾವಿಷ್ಣು ಕುಳಿತುಕೊಳ್ಳುತ್ತಾನೆ ನಿನಗೂ ಗೊತ್ತಿರಬೇಕಲ್ಲ ಎಂದ. ಯಮರಾಜ ಮತ್ತೂ ಜೋರಾಗಿ ನಗುತ್ತಾ ನಾನು ನಕ್ಕಿದ್ದು ಅದಕ್ಕಲ್ಲ, ನೀನು ನನ್ನ ಹತ್ತಿರವೇ ನಾಟಕ ಆಡುವೆಯಲ್ಲ ಎಂದಾಗ, ಏನೀಗ ಆ ಪುಟ್ಟ ಪಕ್ಷಿಯ ಮೇಲೆ ನಿನ್ನ ದೃಷ್ಟಿ ನೆಟ್ಟು ಹೆದರಿಸಿದಿಯಲ್ಲ ಅದನ್ನು ನಾನು ಜೋಪಾನ ಮಾಡಿ ಬಂದಿರುವೆ, ಇನ್ನು ಗುಬ್ಬಚ್ಚಿಗೆ ನಿನ್ನ ಭಯವಿಲ್ಲ ಎಂದಿತು.

ಯಮ ಇನ್ನಷ್ಟು ಜೋರಾಗಿ ನಕ್ಕ, ಗರುಡನಿಗೆ ಮತ್ತೂ ಆಶ್ಚರ್ಯವಾಯಿತು. ಯಮ ಹೇಳಿದ ನಾನು ಆ ಗುಬ್ಬಿಯನ್ನು ಮೊದಲು ನೋಡಿದಾಗ ನನಗನ್ನಿಸಿತು, ಇದಕ್ಕೆ ಸಾವು ಇನ್ನು ಸ್ವಲ್ಪ ಹೊತ್ತಿಗೆ ಬರುವುದು. ಅದೂ ಸಹ ಹಿಮಾಲಯ ಪರ್ವತದ ಗುಹೆಯೊಳಗೆ ಒಂದು ಹಾವಿನ ಬಾಯಲ್ಲಿ ಎಂದು ಲಿಖಿತವಿತ್ತು ಎಂಬುದನ್ನು ತಿಳಿದು ಆಶ್ಚರ್ಯವಾಯಿತು. ಈ ಪುಟ್ಟ ಗುಬ್ಬಿ ಹಿಮಾಲಯ ಪರ್ವತಕ್ಕೆ ಇಷ್ಟೇ ಸಮಯದಲ್ಲಿ ಹೋಗುವುದು ಹೇಗೆ? ಅದರ ಸಾವು ಅಲ್ಲಿರುವ ಹಾವಿನ ಬಾಯಲ್ಲಿ ಎಂದರೇನು? ಎಂದು ನನಗೇ ಆಶ್ಚರ್ಯವಾಗಿತ್ತು.

ಇನ್ನೂ ಆಶ್ಚರ್ಯವಾದ ಸಂಗತಿ ಎಂದರೆ, ಕೇಳು ಗರುಡ ರಾಜ, ಆ ಪುಟ್ಟ ಪಕ್ಷಿ ಯನ್ನು ಹಾವಿನ ಬಾಯಿಗೆ ಹಾಕಲು ಆ ವಿಧಿಯು ನಿನ್ನನ್ನೇ ಬಳಸಿಕೊಂಡಿತಲ್ಲ, ಅದನ್ನು ಕಂಡು ನನಗೆ ಆಶ್ಚರ್ಯವಾಗಿದ್ದು ಎಂದ ಯಮರಾಜ. ವಿಧಿ ಬರಹವನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ, ಆದ್ದರಿಂದಲೇ ಬದುಕಿರುವಷ್ಟು ದಿನ ನೆಮ್ಮದಿಯಿಂದ ನಾಲ್ಕು ಜನರಿಗೆ ಉಪಯೋಗವಾಗುವ ಹಾಗೆ ಬದುಕಿಬಿಡಿ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಎಷ್ಟು ಗಳಿಸಿದರೂ ಸಿಗುವುದು ಅಷ್ಟೇ!

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

**ಎಷ್ಟು ನೀನುಂಡರೇಂ? ಪುಷ್ಟಿ ಮೈಗಾಗುವುದು
ಹೊಟ್ಟೆ ಜೀರ್ಣಿಸುವಷ್ಟೆ; ಮಿಕ್ಕುದೆಲ್ಲ ಕಸ
ಎಷ್ಟು ಗಳಿಸಿಟ್ಟೊಡಂ ನಿನಗೆ ದಕ್ಕುವುದೆಷ್ಟು
ಮುಷ್ಟಿ ಪಿಷ್ಟವು ತಾನೆ ? - ಮಂಕುತಿಮ್ಮ ॥**

ಎಷ್ಟೇ ಊಟ ಮಾಡಿದರೂ, ಅದು ಜೀರ್ಣಗೊಂಡು ಅದರಿಂದ ಬರುವ ಪಿಷ್ಟವು ಶಕ್ತಿಯ ರೂಪದಲ್ಲಿ ನಮ್ಮ ದೇಹಕ್ಕೆ ನೆರವಾಗುವುದು. ಉಳಿದದ್ದು, ಮಲರೂಪದಲ್ಲಿ ಹೊರಗೆ ಬರುತ್ತದೆ. ಹಾಗೆಯೇ ನಾವೆಷ್ಟೇ ಗಳಿಸಿ ಇಟ್ಟುಕೊಂಡರೂ ಅದರಲ್ಲಿ ನಮಗೆ ದಕ್ಕುವುದು ಎಷ್ಟು? ಕೊನೆಗೆ ನಮಗೆ ದಕ್ಕುವುದು ನಾವುಂಡ ಊಟ ಮತ್ತು ಆ ಊಟದಲ್ಲಿ ದೊರಕುವ ಪಿಷ್ಟ ಮಾತ್ರ ಎನ್ನುವ ಸತ್ಯ ಈ ಮುಕ್ತಕದಲ್ಲಿದೆ.

'ಮಿತಿ ಇದ್ದರೆ ಎಲ್ಲವೂ ಹಿತ ಹಾಗೂ ಅತಿಯೆಂಬುದು ಎಲ್ಲಿಯೂ ಬೇಡ' ಎನ್ನುವ ತತ್ವ ಈ ಮುಕ್ತಕದಲ್ಲಿ ಕಾಣುತ್ತದೆ; ಅದನ್ನು ಊಟದ ಮುಖಾಂತರವಾಗಿ ಈ ಮುಕ್ತಕದಲ್ಲಿ ಕಾಣಿಸಿದ್ದಾರೆ. ನಾವು ಬದುಕಲು ಅನ್ನ ತಿನ್ನಬೇಕು, ಆದರೆ ಬದುಕಿರುವುದೇ ಅನ್ನ ತಿನ್ನಲು ಎನ್ನುವ ಮನೋಭಾವ ಬಿಡಬೇಕಾಗು ತ್ತದೆ. ಎಷ್ಟೇ ಅನ್ನವನ್ನು ತಿಂದರೂ ಅದು ಜೀರ್ಣಗೊಂಡು, ಉಂಡ ಊಟದಲ್ಲಿ ಬರುವ ಪಿಷ್ಟವು ಮಾತ್ರವೇ ನಮ್ಮ ದೇಹಕ್ಕೆ ಶಕ್ತಿಯಾಗಿ ದೊರಕುತ್ತದೆ. ಅಗತ್ಯವಿಲ್ಲದ ಆಹಾರವು, ಕಸವಾಗಿ ದೇಹದಿಂದ ಆಚೆಗೆ ಬರುತ್ತದೆ. ಹಾಗೆಯೇ ಈ ಜೀವನದಲ್ಲಿ ಅದ್ಯಾವ ಮಾರ್ಗ ಹಿಡಿದು ನೀನೆಷ್ಟೇ ಸಂಪಾದನೆ ಮಾಡಿದರೂ ಸಹ ಸಂಪಾದಿಸಿದರಲ್ಲಿ ನಿನಗಾಗಿ ಸಿಗುವುದು ಎಷ್ಟಿ? ನೀನು ದುಡಿದದ್ದೆಲ್ಲವನ್ನೂ ನೀನೇ ಉಪಯೋಗಿಸಲು ಸಾಧ್ಯವೇ? ಸಾಧ್ಯವಿಲ್ಲದ ಮಾತು. ಗಳಿಸಿದ ಸಂಪತ್ತಿನಿಂದ ಸ್ವಲ್ಪ ಐಶಾರಾಮಿತ್ವದ ಜೀವನವನ್ನು ನಡೆಸಬಹುದಷ್ಟೆ! ಎಷ್ಟೇ ಗಳಿಸಿದರೂ, ಬದುಕಲು ನಮಗೆ ಅನ್ನವೇ ಬೇಕು, ಅನ್ನದೊಳಗಿನ ಪಿಷ್ಟವೇ ಬೇಕಲ್ಲದೆ ಸಂಪತ್ತನ್ನು ಸೇವಿಸಿಕೊಳ್ಳಲಾದೀತೆ? ಈ ಬದುಕಿನಲ್ಲಿ ಆಶೆಗಳು ಇದ್ದರೆ ಮಾತ್ರವೇ ಸಾಧನೆಗೆ ಮೂಲವಾಗುತ್ತದೆ, ಆದರೆ ದುರಾಸೆಗಳು ಪ್ರಪಾತಕ್ಕೆ ತಳ್ಳುತ್ತವೆ ಎಂಬ ಅರಿವಿನಪ್ರಜ್ಞೆ ನಮಗಿರ ಬೇಕಾಗುತ್ತದೆ. ಅತಿ ಎಂಬುದಕ್ಕೆ ಕಡಿವಾಣ ಹಾಕಿ, ಮಿತಿ ಎಂಬುದನ್ನು ರೂಢಿಸಿಕೊಂಡರೆ, ಬದುಕು ಹಿತ ಎಂಬುದನ್ನು ಅರಿಯಲೇಬೇಕಾಗುತ್ತದೆ.

'ಇತರರು ಹೇಗಿದ್ದಾರೆ ಎಂಬ ಕರುಬುವಿಕೆಗೆ ಬದಲಾಗಿ ನಾನು ಹೇಗಿದ್ದೇನೆ! ಇರುವುದರಲ್ಲೇ ನಾನು ಸಂತೋಷಿಯಾಗಿದ್ದೇನೆ' ಎನ್ನುವ ಮನೋಭಾವವು ಶ್ರೇಷ್ಠ. ಆದುದರಿಂದ ಈ ಬದುಕಿನಲ್ಲಿ ನಮಗೆಷ್ಟು ಬೇಕೋ ಅಷ್ಟನ್ನು ಗಳಿಸಿಕೊಂಡು, ಇತರರೊಂದಿಗೆ ಪೈಪೋಟಿಗೆ ಇಳಿಯದೆ, ವಾಮಮಾರ್ಗ ಅನುಸರಿಸದೆ, ಅಡ್ಡದಾರಿಗಳನ್ನು ಬಿಸುಟು, ಧರ್ಮಾಧಾರಿಯಾಗಿ ಜೀವನ ನಡೆಸುವುದು ಒಳಿತು ಎಂಬುದು ಈ ಪದ್ಯದ ಹೂರಣವಾಗಿದೆ.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ದೃಷ್ಟಾಂತ (4)
3. ಕೆಟ್ಟ ಹೆಸರು (4)
4. ಸೂರ್ಯ (2)
5. ನೀರು ನಿಂತಿರುವ ನೆಲ (3)
7. ಆರಂಭದಿಂದ ಅಂತ್ಯದವರೆಗೆ ಅಥವಾ ಸಮಗ್ರ (4)
9. ಮೋಸದ ಬಲೆಯಿದು (4)
11. ಮಹಿಳೆಗೆ ಮತ್ತೊಂದು ಹೆಸರು (3)
12. ವಿದಾಯವಲ್ಲ, ವರಮಾನ (3)
13. ನಾಶವಿಲ್ಲದ್ದು (4)
14. ನಡುರಾತ್ರಿ (4)
15. ಹೋಮ ಯಾಕೋ ವಿರಳವಾಗಿದೆ (3)
17. ರುಂಡದ ವಿರುದ್ಧ ಪದ (2)
18. ಚಿನ್ನದ ತೂಕಕ್ಕೆ ಈ ಬೀಜ (4)
19. ನಿರಂತರದ ನಡುವೆ ತಿರುಗಿದ ಸೂರ್ಯ (4)

ಮೇಲಿಂದ ಕೆಳಕ್ಕೆ

2. ಧಣಿಗೆ ಸುಸ್ತಾಗಿದೆ! (3)
3. ಸೌಕರ್ಯ, ಸಹಾಯ (4)
6. ಗುಮ್ಮನಿಗೆ ಬಂದ ಸಂಶಯ (3)
8. ವಿಚಾರ ಅಸ್ತವ್ಯಸ್ತವಾಗಿದೆ (3)
10. ಜುಹುನು ಮುನಿಯ ಮಗಳು (3)
11. ಅಳೆಯುವಿಕೆ (3)
13. ಇವಳಿಗೆ ಸದಾ ಕಣ್ಣೀರು! (4)
16. ಶಿಥಿಲವಾದ (3)

ಸರಿಯುತ್ತರಗಳು

ಎಡದಿಂದ ಬಲಕ್ಕೆ
1. ನಿದರ್ಶನ 3. ಅಪಕೀರ್ತಿ 4. ಭಾನು 5. ಜವುಗು 7. ಕೂಲಂಕಷ 9. ಮಾಯಾ ಜಾಲ 11. ಮಾನಿನಿ 12. ಆದಾಯ 13. ಅವಿನಾಶ 14. ನಟ್ಟಿರುಳು 15. ಯಜನ 17. ಮುಂಡ 18. ಗುಲಗುಂಜಿ 19. ಅವಿರತ

ಮೇಲಿಂದ ಕೆಳಕ್ಕೆ
2. ದಣಿವು 3. ಅನುಕೂಲ 6. ಗುಮಾನಿ 8. ಷವಿಯ 10. ಜಾಹ್ನವಿ 11. ಮಾಪನ 13. ಅಳುಮುಂಜಿ 16. ಜರ್ಜರ

ನೀವೂ ಬರೆಯಬಹುದು
ನಮ್ಮ ವಿಳಾಸ
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
e-mail: vishwavanimagazine@gmail.com

ಲಾರ್ಡ್ಸ್‌ನಲ್ಲಿ ಐಸಿಸಿ ವಿಶ್ವ ಕ್ರಿಕೆಟ್ ಟೆಸ್ಟ್ ಚಾಂಪಿಯನ್‌ಶಿಪ್ ಹಣಾಹಣಿ

ಇಂದಿನಿಂದ ಆಸೀಸ್-ದ. ಆಫ್ರಿಕಾ ಫೈನಲ್

ಲಂಡನ್: ಮೂರನೇ ಆವೃತ್ತಿಯ ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪಂದ್ಯಕ್ಕೆ ಕ್ರಿಕೆಟ್ ಕಾಶಿ ಎಂದೆನಿಸಿರುವ ಲಾರ್ಡ್ಸ್ ಮೈದಾನ ಅಣಿಗೊಂಡಿದ್ದು, ಬುಧವಾರದಿಂದ ದಕ್ಷಿಣ ಆಫ್ರಿಕಾ-ಆಸ್ಟ್ರೇಲಿಯ ತಂಡಗಳ ನಡುವಿನ ಹಣಾಹಣಿ ಇಲ್ಲಿ ನಡೆಯಲಿದೆ. ಈ ಹಿಂದಿನ ಎರಡು ಆವೃತ್ತಿ ಕೂಡ ಇಂಗ್ಲೆಂಡ್‌ನಲ್ಲಿಯೇ ನಡೆದಿತ್ತು. ಮೊದಲ ಆವೃತ್ತಿಯ ಫೈನಲ್ (2021) ಸೌತ್‌ಹ್ಯಾಂಪ್ಟನ್‌ನಲ್ಲಿ ಮತ್ತು ಎರಡನೇ ಆವೃತ್ತಿಯ ಫೈನಲ್ (2023) ಓವಲ್‌ನಲ್ಲಿ ನಡೆದಿತ್ತು. ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ಕ್ರಮವಾಗಿ ಮೊದಲೆರಡು ಬಾರಿ ಚಾಂಪಿಯನ್ ಆಗಿ ಮೂಡಿಬಂದಿದ್ದವು. ಎರಡು ಬಾರಿಯೂ ರನ್ನರ್ ಅಪ್ ಆಗಿದ್ದ ಭಾರತ ಈ ಬಾರಿ ಫೈನಲ್‌ಗೇರಲು ವಿಫಲವಾಗಿತ್ತು.

ಆಸ್ಟ್ರೇಲಿಯ ಸಶಕ್ತ ತಂಡ: ಫೈನಲ್ ಪಂದ್ಯಗಳನ್ನು ಹೇಗೆ ಗೆಲ್ಲಬೇಕು, ಏನೆಲ್ಲ ರಣತಂತ್ರವನ್ನು ರೂಪಿಸ ಬೇಕು, ಎದುರಾಳಿಯ ಯಾವ ಆಟಗಾರನನ್ನು ಟಾರ್ಗೆಟ್ ಮಾಡಬೇಕು ಎಂಬೆಲ್ಲಾ ಗೆಲುವಿನ ಸೂತ್ರಗಳನ್ನು ಆಸ್ಟ್ರೇಲಿಯಕ್ಕಿಂತ ಚೆನ್ನಾಗಿ ಬಲ್ಲ ಇನ್ನೊಂದು ತಂಡ ಇಲ್ಲ ಎಂದರೂ ತಪ್ಪಾಗಲಾರದು. ಪ್ಯಾಟ್ ಕಮಿನ್ಸ್ ನಾಯಕತ್ವದ ಕಂಗಾರೂ ಪಡೆಯು ಈ ಬಾರಿಯೂ ಸಮರ್ಥ ಬ್ಯಾಟರ್‌ಗಳ ಟೆಸ್ಟ್ ಆಟಗಾರರನ್ನು ಹೊಂದಿದೆ. ಉಸ್ಮಾನ್ ಖ್ವಾಜಾ, ಲಬುಶೇನ್, ಸ್ಮಿತ್ ಆ ಪೈಕಿ ಪ್ರಮುಖರು. ಹೆಡ್, ಗ್ರೀನ್, ಕ್ಯಾರಿ ಕೂಡ ಕ್ರೀಸ್‌ನಲ್ಲಿ ಮಿಂಚಬಲ್ಲವರು. ಕಳೆದ ಸಲ ಭಾರತ ವಿರುದ್ಧದ ಫೈನಲ್‌ನಲ್ಲಿ ಶತಕ ಸಿಡಿಸಿದ ಟ್ರಾವಿಸ್ ಹೆಡ್ ಪಂದ್ಯದ ಗೆಲುವಿನ ರುವಾರಿ ಎನ್ನಿಸಿದ್ದರು. ಹೀಗಾಗಿ ಈ ಬಾರಿಯೂ ಅವರ ಬ್ಯಾಟಿಂಗ್ ಮೇಲೆ ತಂಡ ಹೆಚ್ಚು ನಂಬಿಕೆ ಇಟ್ಟಿದೆ. ಇನ್ನೊಂಡೆದೆ ತಂಡದ ಬೌಲಿಂಗ್ ಕೂಡ ಸಮರ್ಥವಾಗಿದ್ದು, ಜೋಶ್ ಹೇಜಲ್‌ವುಡ್, ಮಿಚೆಲ್ ಸ್ಟಾರ್ಕ್, ನಾಯಕ ಪ್ಯಾಟ್ ಕಮಿನ್ಸ್ ಉತ್ತಮ ಲಯದಲ್ಲಿದ್ದಾರೆ.

ದಕ್ಷಿಣ ಆಫ್ರಿಕಾಕ್ಕೆ ಚೊಚ್ಚಲ ಟೆಸ್ಟ್ ವಿಶ್ವಕಪ್ ಫೈನಲ್: ಚೋಕರ್ಸ್ ಎಂಬ ಹಣೆಪಟ್ಟಿ ಹೊಂದಿರುವ ದಕ್ಷಿಣ



ಟೆಸ್ಟ್ ಮುಖಾಮುಖಿ

ಎರಡೂ ತಂಡಗಳು ಇದುವರೆಗೆ ಟೆಸ್ಟ್ ಕ್ರಿಕೆಟ್‌ನಲ್ಲಿ ಒಟ್ಟು 101 ಪಂದ್ಯಗಳನ್ನು ಆಡಿದೆ. ಈ ಪೈಕಿ ಆಸ್ಟ್ರೇಲಿಯಾ 54 ಪಂದ್ಯ ಗೆದ್ದಿದ್ದರೆ, ದಕ್ಷಿಣ ಆಫ್ರಿಕಾ 26 ಪಂದ್ಯ ಜಯಿಸಿದೆ. 21 ಪಂದ್ಯ ಡ್ರಾಗೊಂಡಿದೆ.

ಆಫ್ರಿಕಾ 1998ರಲ್ಲಿ ನಡೆದ ಚಾಂಪಿಯನ್ಸ್ ಟ್ರೋಫಿಯ ಮೊದಲ ಆವೃತ್ತಿಯಲ್ಲಿ ಯಶಸ್ಸು ಪಡೆದದ್ದು ಬಿಟ್ಟರೆ ಇದುವರೆಗೆ ಈ ತಂಡಕ್ಕೆ ವಿಶ್ವಕಪ್ ಪ್ರಶಸ್ತಿ ಗಗನಕುಸುಮವಾಗಿದೆ. ಕಳೆದ ವರ್ಷ ನಡೆದಿದ್ದ ಟಿ20 ವಿಶ್ವಕಪ್ ಫೈನಲ್ ಪ್ರವೇಶಿಸಿದ್ದ ಹರಿಣ ಪಡೆಯು ಭಾರತ ವಿರುದ್ಧ ಸೋಲು ಕಂಡಿತ್ತು. ಟೆಂಬಾ ಬವುಮಾ ನಾಯಕತ್ವದ ದಕ್ಷಿಣ ಆಫ್ರಿಕಾ ತಂಡದ ಪ್ರದರ್ಶನ ನೋಡುವಾಗ ಈ ಬಾರಿ ಚೊಚ್ಚಲ ವಿಶ್ವಕಪ್ ಮುಡಿಗೇರಿಸಿಕೊಳ್ಳುವ ಸಾಧ್ಯತೆ ಅಲ್ಲಗಳೆಯುವಂತಿಲ್ಲ. ಯಾರೂ ನಿರೀಕ್ಷಿಸದ ರೀತಿಯಲ್ಲಿ ಕೊನೆಯ ಏಳು ಟೆಸ್ಟ್‌ಗಳನ್ನು ಗೆದ್ದು ಫೈನಲ್‌ಗೆ ಮೊದಲ ತಂಡವಾಗಿ ಅರ್ಹತೆ ಪಡೆದಿತ್ತು.

ನೆಚ್ಚಿನ ಮೈದಾನ ಎಂಬ ಹೆಗ್ಗಳಿಕೆ: ಐತಿಹಾಸಿಕ ಲಾರ್ಡ್ಸ್ ಕ್ರೀಡಾಂಗಣವು ಎರಡೂ ತಂಡಗಳಿಗೂ ನೆಚ್ಚಿನ ಮೈದಾನವಾಗಿದೆ. ವರ್ಣಭೇದ ನೀತಿ ತೊರೆದು 1992ರಲ್ಲಿ ಕ್ರಿಕೆಟ್‌ಗೆ ಹರಿಣಗಳ ಪಡೆ ಪುನರಾಗಮನವಾದ ಬಳಿಕ ಅಲ್ಲಿ ಆಡಿರುವ ಏಳು ಟೆಸ್ಟ್‌ಗಳಲ್ಲಿ ಒಮ್ಮೆ ಮಾತ್ರ ಸೋತಿದೆ. ಇನ್ನೊಂದೆಡೆ ಕಳೆದ 10 ವರ್ಷಗಳಲ್ಲಿ ಆಸ್ಟ್ರೇಲಿಯಾ ಲಾರ್ಡ್ಸ್‌ನಲ್ಲಿ ಒಮ್ಮೆಯೂ ಸೋತಿಲ್ಲ. ಹೀಗಾಗಿ ಈ ಬಾರಿ ಲಾರ್ಡ್ಸ್ ಯಾವ ತಂಡದ ಕೈ ಹಿಡಿಯುತ್ತದೆ ಎಂದು ಕಾದು ನೋಡಬೇಕಿದೆ.

ಆಸ್ಟ್ರೇಲಿಯಾ ತಂಡ: ಪ್ಯಾಟ್ ಕಮ್ಮಿನ್ಸ್ (ನಾಯಕ), ಉಸ್ಮಾನ್ ಖವಾಜಾ, ಮಾರ್ನಸ್ ಲಬುಶೇನ್, ಕ್ಯಾಮರೂನ್ ಗ್ರೀನ್, ಸ್ಟೀವನ್ ಸ್ಮಿತ್, ಟ್ರಾವಿಸ್ ಹೆಡ್, ಅಲೆಕ್ಸ್ ಕ್ಯಾರಿ (ಕೀಪರ್), ಬ್ಯೂ ವೆಬ್‌ಸ್ಟರ್, ಮಿಚೆಲ್ ಸ್ಟಾರ್ಕ್, ಜೋಶ್ ಹೇಜಲ್‌ವುಡ್, ನಾಥನ್ ಲಿಯಾನ್.

ದ. ಆಫ್ರಿಕಾ ತಂಡ: ಟೆಂಬಾ ಬವುಮಾ (ನಾಯಕ), ಏಡೆನ್ ಮಾರ್ಕ್ರಮ್, ರಿಯಾನ್ ರಿಕೆಲ್ಟನ್, ಟೋನಿ ಡಿ ಜೋರ್ಜಿ, ಟ್ರಿಸ್ಟಾನ್ ಸ್ಟಬ್ಸ್, ಕೈಲ್ ವೆರ್ರೆನ್ನೆ (ಕೀಪರ್), ವಿಯಾನ್ ಮುಲ್ಡರ್, ಮಾರ್ಕೊ ಜಾನ್ಸೆನ್, ಕೇಶವ್ ಮಹಾರಾಜ್, ಕಗಿಸೊ ರಬಾಡ, ಲುಂಗಿ ಎನ್‌ಗಿಡಿ.

ನಗದು ಬಹುಮಾನದಲ್ಲಿ ಭಾರೀ ಏರಿಕೆ

ಈ ಹಿಂದಿನ ಎರಡೂ ಆವೃತ್ತಿಗಿಂತ ಈ ಬಾರಿ ಚಾಂಪಿಯನ್ ಮತ್ತು ರನ್ನರ್ ಅಪ್ ಆದ ತಂಡಗಳು ಭಾರೀ ನಗದು ಬಹುಮಾನ ಪಡೆಯಲಿದೆ. ಫೈನಲ್‌ನಲ್ಲಿ ಗೆಲುವು ಸಾಧಿಸುವ ತಂಡಕ್ಕೆ ರು.30.88 ಕೋಟಿ (3.6 ಮಿಲಿಯನ್ ಡಾಲರ್) ಬಹುಮಾನ ಸಿಗಲಿದೆ. ರನ್ನರ್ ಅಪ್ ತಂಡವು 18.50 ಕೋಟಿ ರು. (2.1 ಮಿಲಿಯನ್ ಡಾಲರ್) ಪಡೆದುಕೊಳ್ಳಲಿದೆ. ಹಿಂದಿನ ಎರಡು ಆವೃತ್ತಿಗಳಲ್ಲಿ, ಒಟ್ಟು ಬಹುಮಾನದ ಮೊತ್ತ 1.6 ಮಿಲಿಯನ್ ಡಾಲರ್ ಆಗಿತ್ತು. ಆದರೆ ಈ ಬಾರಿ ರನ್ನರ್ ಅಪ್ ತಂಡಕ್ಕೇ ಅದಕ್ಕಿಂತ ಅಧಿಕ ಮೊತ್ತದ ನಗದು ಸಿಗಲಿದೆ. ಪ್ರಶಸ್ತಿ ಮೊತ್ತವನ್ನು ಐಸಿಸಿ ಅಧ್ಯಕ್ಷ ಜಯ್ ಶಾ ತಮ್ಮ ಅಧಿಕೃತ ಟ್ವಿಟರ್ ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ.

29 ವರ್ಷಕ್ಕೇ ಕ್ರಿಕೆಟ್‌ಗೆ ನಿವೃತ್ತಿ ಪಡೆದ ವಿಂಡೀಸ್‌ನ ಮಾಜಿ ನಾಯಕ

ನಿಕೋಲಸ್ ಪೂರನ್ ಡಿಢೀರ್ ನಿವೃತ್ತಿ ಘೋಷಣೆ

ಬಾರ್ಬಡೋಸ್: ವೆಸ್ಟ್ ಇಂಡೀಸ್‌ನ ಯುವ ಸ್ಫೋಟಕ ಬ್ಯಾಟರ್ ನಿಕೋಲಸ್ ಪೂರನ್ ದಿಢೀರ್ ಆಗಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಪ್ರಕಟಿಸಿದ್ದಾರೆ. ಈ ಹಿಂದೆ ವೆಸ್ಟ್ ಇಂಡೀಸ್ ತಂಡದ ಟಿ20 ನಾಯಕತ್ವ ವಹಿಸಿದ್ದ ಪೂರನ್, ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಆಯೋಜಿಸಲಿರುವ ಮುಂದಿನ ಟಿ20 ವಿಶ್ವಕಪ್‌ಗೆ ಕೇವಲ ಎಂಟು ತಿಂಗಳು ಬಾಕಿ ಇರುವಾಗ ನಿವೃತ್ತಿ ಘೋಷಿಸಿದ್ದು ನಿಜಕ್ಕೂ ಅಚ್ಚರಿ ಮೂಡಿಸಿದೆ.

29 ವರ್ಷದ ಪೂರನ್, ವೆಸ್ಟ್ ಇಂಡೀಸ್ ತಂಡದ ಪರವಾಗಿ 61 ಟಿ20 ಮತ್ತು 106 ಏಕದಿನ ಪಂದ್ಯಗಳಲ್ಲಿ 4,000ಕ್ಕೂ ಹೆಚ್ಚು ರನ್ ಗಳಿಸಿದ್ದರು. ಮಂಗಳವಾರ ಬೆಳಗ್ಗೆ ತಮ್ಮ ನಿವೃತ್ತಿ ಪ್ರಕಟಿಸಿದ ಪೂರನ್, 'ಇದು ತುಂಬಾ ಕಠಿಣ ನಿರ್ಧಾರ, ಆದರೆ ಬಹಳಷ್ಟು ಚಿಂತನೆಯ ನಂತರ, ನಾನು ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ನನ್ನ ನಿವೃತ್ತಿಯನ್ನು ಘೋಷಿಸಲು ನಿರ್ಧರಿಸಿದ್ದೇನೆ' ಎಂದು ಇನ್‌ಸ್ಟಾಗ್ರಾಮ್‌ನ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಇತ್ತೀಚೆಗಷ್ಟೇ ಮುಗಿದಿದ್ದ ಹದಿನೆಂಟನೇ ಐಪಿಎಲ್ ಪಂದ್ಯಾವಳಿಯಲ್ಲಿ ಲಖನೌ ಸೂಪರ್ ಜೈಂಟ್ಸ್ ಪರ

ಆಡಿದ್ದ ಪೂರನ್, ಆ ಬಳಿಕ ಇಂಗ್ಲೆಂಡ್‌ನಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ ವೈಟ್‌ಬಾಲ್ ಸರಣಿಯಿಂದ ವಿಶ್ರಾಂತಿ ಕೋರಿದ್ದರು. ಐಪಿಎಲ್‌ನಲ್ಲಿ 14 ಪಂದ್ಯಗಳಲ್ಲಿ ಸುಮಾರು 200 ಸ್ಟ್ರೈಕ್ ರೇಟ್‌ನಲ್ಲಿ 524 ರನ್ ಗಳಿಸಿದ್ದರು.

'ನಾನು ಪ್ರೀತಿಸುವ ಕ್ರಿಕೆಟ್ ಆಟವು ನನಗೆ ಬಹಳಷ್ಟು ನೆನಪುಗಳನ್ನು ನೀಡಿದೆ ಮತ್ತು ನೀಡುತ್ತಲೇ ಇರುತ್ತದೆ. ಸಂತೋಷ, ಉದ್ದೇಶ, ಮರೆಯಲಾಗದ ನೆನಪುಗಳು ಮತ್ತು ವೆಸ್ಟ್ ಇಂಡೀಸ್ ತಂಡವನ್ನು ಪ್ರತಿನಿಧಿಸುವ ಅವಕಾಶ ಮುಂತಾದವು ನಿಜಕ್ಕೂ ಸಂತೋಷ. ರಾಷ್ಟ್ರಗೀತೆಗಾಗಿ ನಿಂತಾಗ ಮತ್ತು ನಾನು ಪ್ರತೀ ಬಾರಿ ಮೈದಾನಕ್ಕೆ ಕಾಲಿಟ್ಟಾಗಲೂ ನನ್ನಲ್ಲಿದ್ದ ಎಲ್ಲವೂ ನನಗೆ ಸಿಗುತ್ತಿತ್ತು. ಅದು ನನಗೆ ನಿಜವಾಗಿಯೂ ಏನನ್ನು ಕೊಟ್ಟಿತು ಎಂಬುದನ್ನು ಪದಗಳಲ್ಲಿ ಹೇಳುವುದು ಕಷ್ಟ. ನಾಯಕನಾಗಿ ತಂಡವನ್ನು ಮುನ್ನಡೆಸಿದ್ದು ನನಗೆ ಸಿಕ್ಕ ಸೌಭಾಗ್ಯ. ನನ್ನ ಕ್ರಿಕೆಟ್ ಪ್ರಯಾಣದಲ್ಲಿ ನನ್ನೊಂದಿಗೆ ಸಹಕರಿಸಿದ ಎಲ್ಲ ಸಹ ಆಟಗಾರರಿಗೂ, ಕೋಚಿಂಗ್ ಸಿಬ್ಬಂದಿಗಳು, ಕುಟುಂಬ ಸದಸ್ಯರಿಗೆ ಧನ್ಯವಾದಗಳು' ಎಂದು ಪೂರನ್ ಬರೆದುಕೊಂಡಿದ್ದಾರೆ.

ನಿಕೋಲಸ್ ಪೂರನ್ 2016ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಕೊನೆಯ ಬಾರಿಗೆ ಜುಲೈ 2023ರಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ಏಕದಿನ ಪಂದ್ಯದಲ್ಲಿ ಅವರು ಪ್ರತಿನಿಧಿಸಿದ್ದರು.

ಇಂಗ್ಲಿಷ್ ಕೌಂಟಿ ಜತೆ ಋತುರಾಜ್ ಒಪ್ಪಂದ | ಕ್ಲಬ್‌ನಿಂದ ಅಧಿಕೃತ ಪ್ರಕಟಣೆ

ಯಾರ್ಕ್‌ಷೈರ್ ಸೇರಿದ ಗಾಯಕ್ವಾಡ್

ಲಂಡನ್: ಭಾರತದ ಆರಂಭಿಕ ಬ್ಯಾಟರ್ ಋತುರಾಜ್ ಗಾಯಕ್ವಾಡ್ ಇದೇ ಮೊದಲ ಬಾರಿ ಇಂಗ್ಲಿಷ್ ಕೌಂಟಿಯಲ್ಲಿ ಆಡಲಿದ್ದು, ಯಾರ್ಕ್‌ಷೈರ್ ಕೌಂಟಿಯನ್ನು ಪ್ರತಿನಿಧಿಸಲಿದ್ದಾರೆ. ಕೌಂಟಿ ಚಾಂಪಿಯನ್‌ಶಿಪ್ ಮತ್ತು ಏಕದಿನ ಕಪ್ ಪಂದ್ಯಗಳಲ್ಲಿ ಆಡಲಿದ್ದಾರೆ. ಜುಲೈನಲ್ಲಿ ಕೌಂಟಿ ಚಾಂಪಿಯನ್‌ಶಿಪ್‌ನಲ್ಲಿ ಸರ್ರೆ ವಿರುದ್ಧದ ಪಂದ್ಯಕ್ಕಾಗಿ ಗಾಯಕ್ವಾಡ್ ಯಾರ್ಕ್‌ಷೈರ್ ತಂಡದೊಂದಿಗೆ ಸೇರಿಕೊಳ್ಳಲಿದ್ದಾರೆ ಮತ್ತು ಋತುವಿನ ಅಂತ್ಯದವರೆಗೆ ತಂಡದೊಂದಿಗೆ ಇರಲಿದ್ದಾರೆ ಎಂದು ಯಾರ್ಕ್‌ಷೈರ್ ಮಂಗಳವಾರ ತನ್ನ ಪ್ರಕಟನೆಯಲ್ಲಿ ತಿಳಿಸಿದೆ.



'ಯಾರ್ಕ್‌ಷೈರ್ ಕೌಂಟಿ ಕ್ರಿಕೆಟ್ ಕ್ಲಬ್, ಋತುರಾಜ್ ಗಾಯಕ್ವಾಡ್ ಜತೆ ಒಪ್ಪಂದ ಮಾಡಿದ ವಿಚಾರ ಘೋಷಿಸಲು ಸಂತೋಷಪಡುತ್ತಿದೆ. 28 ವರ್ಷದ ಭಾರತೀಯ ಬ್ಯಾಟ್ಸ್‌ಮನ್ ಜುಲೈನಲ್ಲಿ ಸ್ಕಾರ್ಬರೋದಲ್ಲಿ ಸರ್ರೆ ವಿರುದ್ಧದ ರೋಥೆಸೆ ಕೌಂಟಿ ಚಾಂಪಿಯನ್‌ಶಿಪ್ ಪಂದ್ಯಕ್ಕೂ ಮೊದಲು ಯಾರ್ಕ್‌ಷೈರ್ ತಂಡದೊಂದಿಗೆ ಸೇರಿಕೊಳ್ಳಲಿದ್ದಾರೆ. ಪ್ರಸ್ತುತ ಇಂಗ್ಲೆಂಡ್ ಪ್ರವಾಸಕ್ಕಾಗಿ ಭಾರತ-ಎ ತಂಡದಲ್ಲಿದ್ದ ಗಾಯಕ್ವಾಡ್, ಮೆಟ್ರೋ ಬ್ಯಾಂಕ್ ಏಕದಿನ ಕಪ್‌ನಲ್ಲಿ ಆಯ್ಕೆಗೆ ಲಭ್ಯವಿರುತ್ತಾರೆ' ಎಂದು ಯಾರ್ಕ್‌ಷೈರ್ ಕೌಂಟಿ ಕ್ಲಬ್ ತನ್ನ ಪ್ರಕಟನೆಯಲ್ಲಿ ತಿಳಿಸಿದೆ.

ಯಾರ್ಕ್‌ಷೈರ್‌ಗೆ ಸೇರಿದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಋತುರಾಜ್ ಗಾಯಕ್ವಾಡ್, 'ಇಂಗ್ಲಿಷ್ ದೇಶೀಯ ಋತುವಿನ ಉಳಿದ ಭಾಗಕ್ಕೆ ಯಾರ್ಕ್‌ಷೈರ್ ಜತೆ ಸೇರಲು ನಾನು ಉತ್ಸುಕನಾಗಿದ್ದೇನೆ. ಇಂಗ್ಲೆಂಡ್‌ನಲ್ಲಿ ಕ್ರಿಕೆಟ್ ಅನುಭವಿಸುವುದು ಯಾವಾಗಲೂ ನನ್ನ ಗುರಿಯಾಗಿತ್ತು ಮತ್ತು ಅಲ್ಲಿ ಯಾರ್ಕ್‌ಷೈರ್‌ಗಿಂತ ದೊಡ್ಡ ಕ್ಲಬ್ ಇನ್ನೊಂದಿಲ್ಲ. ಋತುವಿನ ನಿರ್ಣಾಯಕ ಭಾಗವಾಗಿರುವ ಪಂದ್ಯದಲ್ಲಿ ಉತ್ತಮ ಪ್ರದರ್ಶನ ತೋರುವುದು ಎಷ್ಟು ಮುಖ್ಯ ಎಂದು ನನಗೆ ತಿಳಿದಿದೆ. ಕೌಂಟಿ ಚಾಂಪಿಯನ್‌ಶಿಪ್‌ನಲ್ಲಿ ನಮಗೆ ಕೆಲವು ಪ್ರಮುಖ ಪಂದ್ಯಗಳಿವೆ ಮತ್ತು ಏಕದಿನ ಕಪ್ ಪಂದ್ಯದಲ್ಲಿಯೂ ಗೆಲ್ಲಲು ಉತ್ತಮ ಅವಕಾಶ ಇದೆ' ಎಂದು ಋತುರಾಜ್ ಹೇಳಿದರು.

ಋತುರಾಜ್ ಗಾಯಕ್ವಾಡ್ ಇದುವರೆಗೆ ಭಾರತ ಪರ ಏಕದಿನ ಮತ್ತು ಟಿ20 ಪಂದ್ಯಗಳಲ್ಲಿ 29 ಪಂದ್ಯಗಳನ್ನು ಆಡಿದ್ದಾರೆ. ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕನಾಗಿ 18ನೇ ಆವೃತ್ತಿಯಲ್ಲಿ ಗಾಯಗೊಂಡು ಅರ್ಧದಲ್ಲೇ ಟೂರ್ನಿಯಿಂದ ಹೊರಬಿದ್ದಿದ್ದರು, ಹೀಗಾಗಿ ಎಂ.ಎಸ್.ಧೋನಿ ಉಳಿದ ಪಂದ್ಯಗಳಲ್ಲಿ ಚೆನ್ನೈ ತಂಡವನ್ನು ಮುನ್ನಡೆಸಿದ್ದರು.

ಡ್ರಾದಲ್ಲಿ ಟೆಸ್ಟ್ ಪಂದ್ಯ ಅಂತ್ಯ

ನಾರ್ಥಂಪ್ಟನ್: ಇಲ್ಲಿನ ಕೌಂಟಿ ಗ್ರೌಂಡ್‌ನಲ್ಲಿ ನಡೆದ ಇಂಗ್ಲೆಂಡ್ ಲಯನ್ಸ್ ವಿರುದ್ಧದ 2ನೇ ಟೆಸ್ಟ್ ಪಂದ್ಯದಲ್ಲಿ ಭಾರತ-ಎ ತಂಡ ಭರ್ಜರಿ ಪ್ರದರ್ಶನ ನೀಡಿದ್ದು, ಪಂದ್ಯವು ಡ್ರಾದಲ್ಲಿ ಅಂತ್ಯವಾಗಿದೆ.

ಟಾಸ್ ಗೆದ್ದ ಇಂಗ್ಲೆಂಡ್ ಲಯನ್ಸ್ ತಂಡವು ಮೊದಲಿಗೆ ಬೌಲಿಂಗ್ ಆಯ್ದುಕೊಂಡಿತ್ತು. ಬ್ಯಾಟ್ ಮಾಡಿದ ಭಾರತ-ಎ ಪರ ಕೆ.ಎಲ್ ರಾಹುಲ್ 116 ರನ್ ಬಾರಿಸಿ ಮಿಂಚಿದ್ದರು.

ಮಧ್ಯಮ ಕ್ರಮಾಂಕದಲ್ಲಿ ಧ್ರುವ್ ಜುರೇಲ್ 52 ರನ್‌ಗಳ ಕೊಡುಗೆ ನೀಡಿದ್ದರು. ಭಾರತ-ಎ ತಂಡವು ಮೊದಲ ಇನಿಂಗ್ಸ್‌ನಲ್ಲಿ 348 ರನ್ ಕಲೆ ಹಾಕಿತ್ತು. ಇದಕ್ಕುತ್ತರವಾಗಿ ಮೊದಲ ಇನಿಂಗ್ಸ್ ಆರಂಭಿಸಿದ ಇಂಗ್ಲೆಂಡ್ ಲಯನ್ಸ್ ತಂಡವು 327 ರನ್ ಕಲೆ ಹಾಕಿ ಅಲ್ಪ ಹಿನ್ನಡೆ ಅನುಭವಿಸಿತು.

268 ರನ್ ಕಲೆ ಹಾಕುವಷ್ಟರಲ್ಲಿ ಭಾರತ-ಎ ತಂಡವು 7 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಆ ಹಂತದಲ್ಲಿ ಜತೆಗೂಡಿದ ತನುಷ್ ಕೋಟ್ಯಾನ್ ಹಾಗೂ ಅನ್ಶುಲ್ ಕಂಬೋಜ್ ಭರ್ಜರಿ ಬ್ಯಾಟಿಂಗ್ ಪ್ರದರ್ಶಿಸಿದರು.

ಸ್ಮರಣೀಯ ವೃತ್ತಿಜೀವನ ಮತ್ತು ಕ್ರಿಕೆಟ್‌ಗೆ ನೀಡಿದ ಕೊಡುಗೆಗಾಗಿ ಮನ್ನಣೆ

ಧೋನಿಗೆ ಐಸಿಸಿ ಹಾಲ್ ಆಫ್ ಫೇಮ್ ಗೌರವ

ರಾಂಚಿ: ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಎಂ.ಎಸ್ ಧೋನಿ ಸೇರಿದಂತೆ 7 ಮಂದಿಗೆ ಐಸಿಸಿ ಪ್ರತಿಷ್ಠಿತ ಹಾಲ್ ಆಫ್ ಫೇಮ್ ನೀಡಿ ಗೌರವಿಸಿದೆ. ಈ ಬಗ್ಗೆ ಧೋನಿ ಪ್ರತಿಕ್ರಿಯಿಸಿದ್ದು, ಈ ಗೌರವವನ್ನು ನಾನು ಶಾಶ್ವತವಾಗಿ ಪಾಲಿಸುತ್ತೇನೆ ಎಂದು ಹೇಳಿದ್ದಾರೆ. ಧೋನಿ 'ಐಸಿಸಿ ಹಾಲ್ ಆಫ್ ಫೇಮ್' ಸೇರ್ಪಡೆಗೊಂಡ ಭಾರತದ 11ನೇ ಕ್ರಿಕೆಟಿಗ. ಧೋನಿ ಅವರ ಅದ್ಭುತ ನಾಯಕತ್ವ, ಸ್ಮರಣೀಯ ವೃತ್ತಿಜೀವನ ಮತ್ತು ಕ್ರಿಕೆಟ್‌ಗೆ ನೀಡಿದ ಕೊಡುಗೆಗಾಗಿ ಈ ಗೌರವವನ್ನು ನೀಡಲಾಗಿದೆ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

'ಐಸಿಸಿ ಹಾಲ್ ಆಫ್ ಫೇಮ್‌ನಲ್ಲಿ ಹೆಸರಿಸಲ್ಪಟ್ಟಿರುವುದು ಗೌರವದ ಸಂಗತಿ. ಇದು ತಲೆಮಾರುಗಳಾದ್ಯಂತ ಮತ್ತು ಪ್ರಪಂಚದಾದ್ಯಂತದ ಕ್ರಿಕೆಟಿಗರ ಕೊಡುಗೆಗಳನ್ನು ಗುರುತಿಸುತ್ತದೆ. ಅಂತಹ ಸಾರ್ವಕಾಲಿಕ ಶ್ರೇಷ್ಠರೊಂದಿಗೆ ಹೆಸರನ್ನು ನೆನಪಿಸಿಕೊಳ್ಳುವುದು ಅದ್ಭುತ ಭಾವನೆ. ಇದು ನಾನು ಶಾಶ್ವತವಾಗಿ ಪಾಲಿಸುವ ವಿಷಯ' ಎಂದು ಧೋನಿ ಐಸಿಸಿಯ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೋಮವಾರ ಲಂಡನ್‌ನಲ್ಲಿ ನಡೆದ ವಿಶೇಷ ಕಾರ್ಯಕ್ರಮದಲ್ಲಿ ಐವರು ಪುರುಷರು ಮತ್ತು ಇಬ್ಬರು ಮಹಿಳಾ ಕ್ರಿಕೆಟಿಗರು ಸೇರಿ ಒಟ್ಟು ಏಳು ಮಂದಿಯನ್ನು 'ಐಸಿಸಿ 2025-ಹಾಲ್ ಆಫ್ ಫೇಮ್'ಗೆ ಸೇರಿಸಲಾಯಿತು. 2019ರ ಏಕದಿನ ವಿಶ್ವಕಪ್‌ನ

ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಕೊನೆ ಬಾರಿ ಭಾರತವನ್ನು ಪ್ರತಿನಿಧಿಸಿದ್ದ ಧೋನಿ, 2020ರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು.

2004ರಲ್ಲಿ ಭಾರತ ಪರ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಧೋನಿ, ತಮ್ಮ ನಾಯಕತ್ವದಲ್ಲಿ ಭಾರತಕ್ಕೆ 2007ರ ಟಿ20 ವಿಶ್ವಕಪ್, 2011ರ ಏಕದಿನ ವಿಶ್ವಕಪ್ ಮತ್ತು 2013ರ ಚಾಂಪಿಯನ್ಸ್ ಟ್ರೋಫಿಯನ್ನು ತಂದು ಕೊಟ್ಟಿದ್ದರು. 90 ಟೆಸ್ಟ್ ಪಂದ್ಯಗಳಲ್ಲಿ 4876 ರನ್, 350 ಏಕದಿನ ಪಂದ್ಯಗಳಲ್ಲಿ 10,773 ರನ್(10 ಶತಕ, 73 ಅರ್ಧಶತಕ) ಮತ್ತು 98 ಟಿ-20 ಪಂದ್ಯಗಳಲ್ಲಿ 1,617 ರನ್‌ಗಳನ್ನು ಅವರು ಕಲೆ ಹಾಕಿದ್ದಲ್ಲದೆ, ವಿಕೆಟ್ ಕೀಪರ್ ಆಗಿ 824 ವಿಕೆಟ್ ಬಲಿ ಪಡೆದಿದ್ದಾರೆ. 2009ರಲ್ಲಿ ಐಸಿಸಿ ಆರಂಭಿಸಿದ 'ಹಾಲ್ ಆಫ್ ಫೇಮ್ ಗೌರವ'ಕ್ಕೆ ಈವರೆಗೆ ಒಟ್ಟು 122 ಮಂದಿ ಸೇರ್ಪಡೆಗೊಂಡಿದ್ದಾರೆ, ಅದರಲ್ಲಿ 11 ಮಂದಿ ಭಾರತೀಯ ಆಟಗಾರರಿದ್ದಾರೆ.

2025ರ ಹಾಲ್ ಆಫ್ ಫೇಮ್ ಗೌರವಕ್ಕೆ ಪಾತ್ರರಾದವರು

- ಎಂ.ಎಸ್.ಧೋನಿ (ಭಾರತ)
- ಮ್ಯಾಥ್ಯೂ ಹೇಡನ್ (ಆಸ್ಟ್ರೇಲಿಯಾ)
- ಹಾಶಿಂ ಆಮ್ಲ (ದ. ಆಫ್ರಿಕಾ)
- ಗ್ರೇಮ್ ಸ್ಮಿತ್ (ದ. ಆಫ್ರಿಕಾ)
- ಡೇನಿಯಲ್ ವೆಟೋರಿ (ನ್ಯೂಜಿಲೆಂಡ್)
- ಸನಾ ಮೀರ್ (ಪಾಕಿಸ್ತಾನ)
- ಸಾರಾ ಟೇಲರ್(ಇಂಗ್ಲೆಂಡ್)

ಪುರುಷರ ಜೂನಿಯರ್ ಹಾಕಿ ತಂಡ: ಅರಿಜಿತ್ ಸಿಂಗ್ ಹುಂಡಲ್ ನಾಯಕ

ದೆಹಲಿ: ಅನುಭವಿ ಡ್ರ್ಯಾಗ್ ಫ್ಲಿಕ್ಕರ್ ಅರಿಜಿತ್ ಸಿಂಗ್ ಹುಂಡಲ್ ಅವರು ನಾಲ್ಕು ರಾಷ್ಟ್ರಗಳ ಪುರುಷರ ಜೂನಿಯರ್ ಹಾಕಿ ಟೂರ್ನಿಯಲ್ಲಿ ಪಾಲ್ಗೊಳ್ಳುವ ಭಾರತ ತಂಡಕ್ಕೆ ನಾಯಕರಾಗಿದ್ದಾರೆ. ರಕ್ಷಣೆ ಆಟಗಾರ ಅಮೀರ್ ಅಲಿ ಉಪ-ನಾಯಕರಾಗಿದ್ದಾರೆ. ಟೂರ್ನಿಯು ಬರ್ಲಿನ್‌ನಲ್ಲಿ ಜೂನ್ 21ರಂದು ಆರಂಭವಾಗಲಿದೆ. ವರ್ಷದ ಕೊನೆಗೆ ಚೆನ್ನೈ ಮತ್ತು ಮಧುರೈನಲ್ಲಿ ನಡೆಯಲಿರುವ ಜೂನಿಯರ್ ವಿಶ್ವ ಕಪ್‌ಗೆ ಅಭ್ಯಾಸದ ಭಾಗವಾಗಿ ಈ ಟೂರ್ನಿಯು ನಡೆಯಲಿದೆ. ಭಾರತದ ಜೊತೆಗೆ ಆತಿಥೇಯ ಜರ್ಮನಿ, ಸ್ಪೇನ್ ಮತ್ತು ಆಸ್ಟ್ರೇಲಿಯಾ ಭಾಗವಹಿಸುವ ಇತರ ಮೂರು ತಂಡಗಳಾಗಿವೆ. ವಿಕ್ರಮಜಿತ್ ಸಿಂಗ್, ವಿವೇಕ್ ಲಾಕ್ರಾ, ಗೋಲ್‌ಕೀಪರ್‌ಗಳಾಗಿದ್ದಾರೆ.



+91 9449478944
Email: care@adigasyatra.com
Website: www.adigasyatra.com

ಕೆ ನಾಗರಾಜ ಅಡಿಗ, ಸಂಸ್ಥಾಪಕರು

KAILASH MANSAROVAR YATRA | 9 DAYS
Places to visit: Kailash Parvat, Manasa Sarovar, Nepalgunj
Dates: AUG 2, 21, 31
Contact: 7022259008



RUSSIA | 7 DAYS
Places to visit: Kremlin, Red Square, Cathedral of Christ the Saviour, Sparrow Hills, Boat ride along Moskva river (1 hr), Peterhof Palace, Sapsan train, Vasilievsky Island, Anichkov Bridge, Peter & Paul's Fortress, Palace Square, Alexander's Column Monument, Pushkin.
Dates: AUG 7, 21. SEP 4, 18. OCT 16, 30.
Contact: 7022259008

GEORGIA | 8 DAYS
Places to visit: Tbilisi, Mtskheta, Ananuri, Gudauri, Kazbegi, Rabati, Borjomi, Prometheus, Martvili, Batumi
Dates: AUG 7, 21. SEP 4, 18. OCT 16, 30.
Contact: 7022259007

ENGLAND AND EUROPE | 13 / 16 DAYS
Countries to visit: England, France, Belgium, Netherlands, Luxembourg, Germany, Switzerland, Liechtenstein, Austria, Vatican, Italy.
Dates: AUG 6, 13, 20. SEP 3, 10, 24. OCT 1, 8, 22. NOV 5, 12.
Contact: 7022259008

UNITED KINGDOM | 10 DAYS
Places to visit: London, Oxford, Manchester, Lake Windermere, Glasgow, Edinburgh, Belfast, Dublin
Dates: AUG 6, 13, 20. SEP 3, 10, 24. OCT 1, 8, 22. NOV 5, 12.
Contact: 9364104373

AUSTRALIA | 13 DAYS
Places to visit: Sydney: Blue Mountain, Wollongong.
Melbourne: Penguin Parade, Great Ocean Road.
Cairns : Kuranda, Great Barrier Reef.
Gold coast : Seaworld, Crystal Castle & Shambhala Gardens.
Brisbane
Dates: SEP 14, 28. OCT 5, 19. NOV 2, 16, 23. DEC 7.
Contact: 9364104366

SINGAPORE - MALAYSIA - THAILAND
4 / 5 / 7 / 8 / 11 / 15 DAYS
Places to visit: Singapore : Universal Studios, Sentosa Island, Wings Of Time, Cable Car, Singapore City Tour, Gardens by the Bay, Sea Aquarium.
Malaysia : Kuala Lumpur City Tour, Putrajaya, Genting Highland.
Thailand: Pattaya, Coral Island, Alcazar Show, Nong Nooch Village, Bangkok City Tour, Safari World & Marine Park.
Dates: JUL 11, 25. AUG 8, 15, 22. SEP 5, 19, 26. OCT 3, 17, 24. NOV 7, 21, 28. DEC 5, 12.
Contact: 7483366378

CAMBODIA VIETNAM | 6 / 7 / 10 / 12 DAYS
Cambodia: Phnom Penh, Siem Reap, Angkor Wat, Tonle Sap, Thousand Lingas River.
Vietnam : Hanoi, Ninh Binh, Halong bay, Da Nang, Hoi An, Ba Na Hills, Mekong Delta, Ho Chi Minh City, Cu Chi Tunnels.
Dates: JUL 10, 24. AUG 7, 14, 21. SEP 11, 18, 25. OCT 2, 16, 30. NOV 6, 20, 27. DEC 4, 11.
Contact: 7022259008

NEPAL MUKTHINATH | 5 / 9 DAYS
Places to visit: Lumbini, Pokhara, Jomsom, Muktinath, Phewa Lake, Manokamana, Kathmandu, Bhaktapur, Doleshwar Mahadev, Janakpur etc.
Dates: JUN 19, 26. JUL 10, 17, 24. AUG 7, 14, 28. SEP 11, 18. OCT 7, 16, 30. NOV 6, 20, 27.
Contact: 7022259007

BHUTAN - THE LAND OF HAPPINESS | 8 DAYS
Places to visit: Phuentsholing, Punakha, Paro, Thimphu
Dates: JUL 10, 24. AUG 14, 28. SEP 11, 18. OCT 7, 16, 30. NOV 6, 20, 27. DEC 4, 11, 18.
Contact: 9364104373

BALI - THE LAND OF GODS | 5 / 7 / 9 DAYS
Places to visit: Denpasar, Nusa Penida Island, Kintamani, Ubud, Garuda Wisnu Cultural Park, Tanah Lot, Beratan Lake, Ulun Danu, Taman Ayun, Tanjung Benoa Beach, Uluwatu, Besakih, Tirta Empul, Lempuyang Temple, Tirta Gangga, Kings Palace, Bat Caves Temple.
Dates: JUL 7, 21. AUG 4, 18. SEP 1, 15, 22. OCT 6, 20, 27. NOV 3, 17, 24. DEC 1, 15.
Contact: 9364104366